ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ ಪಠ್ಯಪುಸ್ತಕ)

## ಭಾಗ – 1

© KTBS
Not to be published

## 10

## ಹತ್ತನೆಯ ತರಗತಿ

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–560 085.

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**2005 ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

© KTBS Not to be republished

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ಪೌರನೀತಿ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ. ಹತ್ತನೇ ತರಗತಿಯ ಪಠ್ಯಪುಸ್ತಕಗಳು ಒಂದು ದೃಷ್ಟಿಯಲ್ಲಿ ವೈಶಿಷ್ಟ್ಯಪೂರ್ಣವಾಗಿವೆ. ಇತರ ಪಠ್ಯಪುಸ್ತಕಗಳಂತೆಯೇ ಈ ಪಠ್ಯಪುಸ್ತಕಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಸಹಾಯ ಮಾಡುತ್ತವೆ. ಇದರೊಂದಿಗೆ 10ನೇ ತರಗತಿ ಶಿಕ್ಷಣದ ಒಂದು ಹಂತದ ಅಂತ್ಯದಾಣವಾಗಿರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಬ್ಲಿಕ್ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಡಾ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.),
ಬೆಂಗಳೂರು

## ಅಧ್ಯಕ್ಷರ ನಿವೇದನೆ

ಎಳೆಯರ ಶಿಕ್ಷಣದ ಒಂದು ನಿರ್ದಿಷ್ಟ ಹಾಗೂ ಪ್ರಮುಖ ಹಂತ ಹತ್ತನೆಯ ತರಗತಿಯಾಗಿದೆ. ಅದೇ ರೀತಿ ಕಡ್ಡಾಯ ಹಾಗೂ ಉಚಿತ ಸಾರ್ವತ್ರಿಕ ಶಿಕ್ಷಣದ ಸಾಂವಿಧಾನಿಕ ಹಕ್ಕಿನ ಸೌಲಭ್ಯದ ಪರಿಪೂರ್ಣತೆ ಒದಗಿ ಬರುವುದೂ ಈ ಮಹತ್ತರ ಘಟ್ಟದಲ್ಲಿ. ನಮ್ಮ ನಾಡಿನ ಮಕ್ಕಳು ಮನೆಯಂಗಳದಿಂದ ಹೊರಟು ಪಾಠಶಾಲೆಗೆ ಅಡಿಯಿಡುತ್ತಾ ಹತ್ತು ಸಂವತ್ಸರಗಳನ್ನು ಕಳೆಯುವಲ್ಲಿ ಸಮಾಜದ ಒಳಹೊರಗುಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಹತ್ತನೆಯ ತರಗತಿಯ ಸಮಾಜ ವಿಜ್ಞಾನ ಪುಸ್ತಕವನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರ ಹಿನ್ನೆಲೆಯಲ್ಲಿ ವಿಸ್ತೃತ ಹಾಗೂ ಸರಳವಾಗಿ ರಚಿಸಲು ಯತ್ನಿಸಿದ್ದೇವೆ. ಈ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳು ಕೃಷಿ, ಸ್ವ ಉದ್ಯೋಗ, ವ್ಯಾಪಾರ ಮುಂತಾದ ಹತ್ತು ಹಲವು ಔದ್ಯೋಗಿಕ ಕವಲುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅದೇ ರೀತಿ ವಿಜ್ಞಾನ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಇಂತಹ ಕ್ಷೇತ್ರಗಳಲ್ಲಿ ಪರಿಣತಿಗಾಗಿಯೂ ತೆರಳಲು ಸಾಕಷ್ಟು ವಿದ್ಯಾರ್ಥಿಗಳು ಮುಂದಾಗುತ್ತಾರೆ. ಇವರೆಲ್ಲರಿಗೂ ಸಮಾಜ ವಿಜ್ಞಾನದ ಪರಿಚಯವನ್ನು ಸಾಕಷ್ಟು ಪರಿಣಾಮಕಾರಿಯಾಗಿ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಈ ಪಠ್ಯಪುಸ್ತಕದಲ್ಲಿ ಮಾಡಲಾಗಿದೆ. ಅದೇ ರೀತಿ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳ, ಸಮಾಜಶಾಸ್ತ್ರ, ಹಾಗೂ ವ್ಯವಹಾರ ಅಧ್ಯಯನದ ಬಗೆಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಹತ್ವದ ಅಂಶಗಳನ್ನು ಸಮಕಾಲೀನ ವಿಚಾರಧಾರೆಯೊಂದಿಗೆ ಸಂಗ್ರಾಹ್ಯವಾಗಿ ವಿದ್ಯಾರ್ಥಿಗಳಿಗೆ ನೀಡಲು ಯತ್ನಿಸಿದ್ದೇವೆ. ಸರಳ ನಿರೂಪಣೆ, ಅಚ್ಚುಕಟ್ಟಾದ ಒಕ್ಕಣೆ, ವಿಶೇಷ ಮಾಹಿತಿಗಳ ಜೋಡಣೆ, ಅವಶ್ಯಕ ಭೂಪಟ, ಸೂಕ್ತ ಕೋಷ್ಠಕ ಮತ್ತು ಚಿತ್ರಗಳೊಂದಿಗೆ ಪಠ್ಯವನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಈ ಪಠ್ಯಪುಸ್ತಕವನ್ನು ಕ್ರಮಬದ್ಧವಾಗಿ ಹೊರತರಲು ಸಹಕರಿಸಿದ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ, ಪರಿಶೀಲನಾ ಸಮಿತಿ, ಸಂಪಾದಕ ಮಂಡಳಿ, ಅನುವಾದಕರಿಗೆ ಹಾಗೂ ಸಲಹೆಗಾರರಿಗೆ ನಮ್ಮ ಕೃತಜ್ಞತೆಗಳು.

ಅದೇ ರೀತಿ ಈ ಪಠ್ಯಪುಸ್ತಕ ರಚನೆಗೆ ಆರಂಭದಿಂದಲೂ ಮಾರ್ಗದರ್ಶನವಿತ್ತ ಮುಖ್ಯಸಂಯೋಜಕರಾದ ಡಾ.ಜಿ.ಎಸ್. ಮುಡಂಬಡಿತ್ತಾಯರಿಗೆ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ ನಮ್ಮ ಕೃತಜ್ಞತೆಗಳು.

© KTBS Not to be published

**ಡಾ. ಎಂ. ಶಶಿಧರ್**
**ಡಾ. ಪಿ. ಅನಂತಕೃಷ್ಣ ಭಟ್**
**ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.**

# ರಚನಾ ಸಮಿತಿ

**ಅಧ್ಯಕ್ಷರು**

**ಡಾ. ಎಂ. ಶಶಿಧರ್,** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಪಿ. ಅನಂತಕೃಷ್ಣ ಭಟ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕೆನರಾ ಕಾಲೇಜು, ಮಂಗಳೂರು.

**ಸದಸ್ಯರು**

**ಶ್ರೀ ರಾಮ್‌ಪ್ರಸಾದ್,** ನಿವೃತ್ತ ಪ್ರಾಂಶುಪಾಲರು, ಶ್ರೀ ಎ.ಆರ್.ಎಸ್. ಪ.ಪೂರ್ವ ಕಾಲೇಜು, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ

**ಶ್ರೀ ಎನ್. ಸತ್ಯಪ್ರಕಾಶ್,** ನಿ॥ ಮುಖ್ಯಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ, 1ನೇ ಬ್ಲಾಕ್ ಬೆಂಗಳೂರು.

**ಶ್ರೀಮತಿ ಸರಸ್ವತಿ ಹೆಗಡೆ,** ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಪೀಣ್ಯ, ಬೆಂಗಳೂರು.

**ಶ್ರೀ ಬಿ.ಎಚ್. ಹನುಮಂತಯ್ಯ,** ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ, ಚನ್ನರಾಯಪಟ್ಟಣ ತಾ॥ ಹಾಸನ ಜಿಲ್ಲೆ.

**ಡಾ. ಮಲ್ಲಿಕಾರ್ಜುನ.ಎಸ್.ಬಾಗೇವಾಡಿ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ತರು, ಭೂಗೋಳಶಾಸ್ತ್ರ ವಿಭಾಗ, ಎ.ಜಿ.ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಮುನವಳ್ಳಿ, ಸವದತ್ತಿ ತಾ॥ ಬೆಳಗಾವಿ ಜಿಲ್ಲೆ.

**ಶ್ರೀ ಜಿ.ಎನ್. ಕೆಂಪಯ್ಯ,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಮಸ್ಕಲ್ ತುಮಕೂರು ತಾಲ್ಲೂಕು.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು.

**ಪ್ರೊ. ದೊರೈರಾಜ್ ಎಸ್.ಎನ್,** ಪ್ರಾಂಶುಪಾಲರು, ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು.

**ಶ್ರೀ ಪಿ. ಪ್ರಸಾದ್,** ಚಿತ್ರಕಲಾ ಶಿಕ್ಷಕರು, ಶ್ರೀ ಭೈರವೇಶ್ವರ ಪ್ರೌಢಶಾಲೆ, ತುಮಕೂರು.

**ಪರಿಶೀಲಕರು**

**ಡಾ. ವಿಜಯ್ ಪೂಣಚ್ಚ ತಂಬಂಡ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ.

**ಡಾ. ಟಿ.ಡಿ. ದೇವೇಗೌಡ,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಡೀನ್ (ಅಧ್ಯಯನ ಕೇಂದ್ರಗಳು), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**ಶ್ರೀ ಚ.ನ. ಶಂಕರ್‌ರಾವ್,** ನಿವೃತ್ತ ಉಪನ್ಯಾಸಕರು, ಕೆನರಾ ಪದವಿ ಪೂರ್ವ ಕಾಲೇಜು, ಮಂಗಳೂರು.

**ಡಾ. ರಂಗನಾಥ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

**ಡಾ. ಎಸ್.ಆರ್. ಕೇಶವ,** ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ನೂರ್ ಅಫ್ಜ್,** ಪ್ರಾಧ್ಯಾಪಕರು, ವಾಣಿಜ್ಯ ಮತ್ತು ವ್ಯವಹಾರ ಅಧ್ಯಯನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಸಂಪಾದಕ ಮಂಡಳಿ**

**ಡಾ. ಎಂ.ವಿ. ಶ್ರೀನಿವಾಸ್,** ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಈಶ್ವರಪ್ಪ,** ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಮುಖ್ಯ ಸಂಯೋಜಕರು**

**ಡಾ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಮುಖ್ಯಸಲಹೆಗಾರರು**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಶ್ರೀ ಪಾಂಡುರಂಗ,** ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.),ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಎ.ಟಿ. ರಂಗದಾಸಪ್ಪ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.),ಬೆಂಗಳೂರು.

© KTBS Not to be published

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ, ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" – ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (NCERT) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

© KTBS Not to be published

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಮತ್ತು ಪರಿಷ್ಕೃತ ಪಾಠಗಳ ರಚನೆ ಮಾಡಿದ ತಜ್ಞರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ಶ್ರೀ ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–85

© KTBS
Not to be published

## ಪಠ್ಯಪುಸ್ತಕಗಳ ಪರಿಷ್ಕರಣ ಸಮಿತಿ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ,** ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಅಧ್ಯಕ್ಷರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು.

**ಸದಸ್ಯರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಜೆ. ಸೋಮಶೇಖರ್,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.

**ಡಾ. ಎಚ್.ಡಿ. ಪ್ರಶಾಂತ್,** ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಬಿ. ಶೇಖರ್,** ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಶ್ರೀ ಈರಣ್ಣ. ಎಂ. ಅಂಬಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತಡಕೊಡು, ಧಾರವಾಡ ತಾ. ಮತ್ತು ಜಿಲ್ಲೆ.

**ಶ್ರೀ ಡಿ.ಎನ್. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರಕಸಲಗೆರೆ, ಮಂಡ್ಯ ತಾ. ಮತ್ತು ಜಿಲ್ಲೆ.

**ಉನ್ನತ ಪರಿಶೀಲನಾ ಸಮಿತಿ**

**ಶ್ರೀ ಅಶೋಕ ಶೆಟ್ಟರ್,** ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಎಂ.ಎಸ್. ತಳವಾರ್,** ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ದಶರಥ್ ನಾಯಕ್,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ.

**ಡಾ. ಹಸೀನ್ ತಾಜ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಸಲಹೆಗಾರರು**

ಶ್ರೀ **ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

ಶ್ರೀ **ಕೆ. ಜಿ. ರಂಗಯ್ಯ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

**ಡಾ. ಎಂ.ವಿ. ಕೃಷ್ಣಮೂರ್ತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

© KTBS Not to be published

I7Y2X3

## ಪರಿವಿಡಿ


| ಅಧ್ಯಾಯ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1. | ಭಾರತಕ್ಕೆ ಯುರೋಪಿಯನ್ನರ ಆಗಮನ | 1 |
| 2. | ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | 11 |
| 3. | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 16 |
| 4. | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು | 28 |
| 5. | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು | 40 |
| 6. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857 | 52 |
| | **ರಾಜ್ಯಶಾಸ್ತ್ರ** | |
| 1. | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | 56 |
| 2. | ಭಾರತದ ವಿದೇಶಾಂಗ ನೀತಿ | 63 |
| 3. | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 68 |
| | **ಸಮಾಜಶಾಸ್ತ್ರ** | |
| 1. | ಸಾಮಾಜಿಕ ಸ್ತರ ವಿನ್ಯಾಸ | 71 |
| 2. | ದುಡಿಮೆ | 77 |
| | **ಭೂಗೋಳ** | |
| 1. | ಭಾರತದ ಸ್ಥಾನ ಮತ್ತು ವಿಸ್ತೀರ್ಣ | 85 |
| 2. | ಭಾರತದ ಮೇಲ್ಮೈ ಲಕ್ಷಣಗಳು | 89 |
| 3. | ಭಾರತದ ವಾಯುಗುಣ | 97 |
| 4. | ಭಾರತದ ಮಣ್ಣುಗಳು | 101 |
| 5. | ಭಾರತದ ಅರಣ್ಯ ಸಂಪತ್ತು | 105 |
| 6. | ಭಾರತದ ಜಲಸಂಪನ್ಮೂಲಗಳು | 110 |
| 7. | ಭಾರತದ ಭೂ ಸಂಪನ್ಮೂಲಗಳು | 118 |
| | **ಅರ್ಥಶಾಸ್ತ್ರ** | |
| 1. | ಅಭಿವೃದ್ಧಿ | 127 |
| 2. | ಗ್ರಾಮೀಣ ಅಭಿವೃದ್ಧಿ | 135 |
| | **ವ್ಯವಹಾರ ಅಧ್ಯಯನ** | |
| 1. | ಬ್ಯಾಂಕಿನ ವ್ಯವಹಾರಗಳು | 141 |
| 2. | ಉದ್ಯಮಗಾರಿಕೆ | 149 |


© KTBS Not to be published

# ಇತಿಹಾಸ

## ಅಧ್ಯಾಯ-1

# ಭಾರತಕ್ಕೆ ಯುರೋಪಿಯನ್ನರ ಆಗಮನ

Q8D2N5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತವು ಯುರೋಪಿಯನ್ನರೊಂದಿಗೆ ಹೊಂದಿದ್ದ ವ್ಯಾಪಾರ ಸಂಬಂಧ.
- ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು.
- ಯುರೋಪಿಯನ್ನರ ರಾಜಕೀಯ ಏಳಿಗೆಯ ಹಿನ್ನೆಲೆ ಕರ್ನಾಟಿಕ್ ಯುದ್ಧಗಳು.
- ಪ್ಲಾಸಿಕದನ, ಬಕ್ಸಾರ್ ಕದನ, ದ್ವಿ-ಪ್ರಭುತ್ವ ಪದ್ಧತಿ.
- ಬ್ರಿಟಿಷರ ಆಕ್ರಮಣ ನೀತಿ.

© KTBS Not to be published

ಭಾರತ ಮತ್ತು ಯುರೋಪಿನ ನಡುವೆ ಪ್ರಾಚೀನ ಕಾಲದಿಂದಲೂ ವಾಣಿಜ್ಯ ಸಂಬಂಧಗಳು ಏರ್ಪಟ್ಟಿದ್ದವು. ಪ್ರಮುಖವಾಗಿ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು. ಮಧ್ಯಕಾಲದಲ್ಲಿಯೂ ಯುರೋಪ್, ಭಾರತ ಮತ್ತು ಇತರ ಏಷ್ಯಾದ ದೇಶಗಳ ನಡುವೆ ವ್ಯಾಪಾರ ಮುಂದುವರೆಯಿತು. ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು. ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರೆ, ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಇಟಲಿಯ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು. ಏಷ್ಯಾದ ಸರಕುಗಳು ಇಟಲಿಯ ವರ್ತಕರಿಗೆ ಒಳ್ಳೆಯ ಲಾಭವನ್ನು ತಂದು ಕೊಡುತ್ತಿದ್ದವು.

**ಕಾನ್‌ಸ್ಟಾಂಟಿನೋಪಲ್ ನಗರದ ವಶ :** ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಪರಿಣಾಮವಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು. ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು.

**ಭಾರತಕ್ಕೆ ಹೊಸ ಜಲಮಾರ್ಗ :** ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪದ 'ಕಾಪ್ಪಡ್' ಎಂಬಲ್ಲಿಗೆ ಬಂದು ತಲುಪಿದನು. ಆ ಮೂಲಕ ಭಾರತ ಹಾಗೂ ಯುರೋಪ್ ನಡುವೆ ಹೊಸ ಜಲಮಾರ್ಗವನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾದನು. ವಾಸ್ಕೋಡಗಾಮನು ಕಂಡುಹಿಡಿದ ಈ ಜಲಮಾರ್ಗವು ಸುಮಾರು ವರ್ಷಗಳ ಕಾಲ ಭಾರತ ಮತ್ತು ಯುರೋಪ್ ನಡುವಿನ ವ್ಯಾಪಾರ ಮಾರ್ಗವಾಗಿ ಮಾರ್ಪಟ್ಟಿತು. ಹೀಗೆ ಭಾರತದೊಂದಿಗೆ ಮರುವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರಾದರು.

> ***ನಿಮಗಿದು ತಿಳಿದಿರಲಿ:*** *1869ರಲ್ಲಿ ಕೆಂಪುಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರಗಳನ್ನು ಸಂಪರ್ಕಿಸುವಂತೆ ಭೂಮಿ ಅಗೆದು ಹಡಗುಗಳ ಸಂಚಾರಕ್ಕೆ ಅನುಕೂಲವಾಗುವಂತೆ ಭಾರೀ ಕಾಲುವೆಯೊಂದನ್ನು ಈಜಿಪ್ಟ್ ಭೂ ಪ್ರದೇಶದಲ್ಲಿ ನಿರ್ಮಿಸಲಾಯಿತು. ಇದೇ ಪ್ರಸಿದ್ಧ ಸೂಯಜ್ ಕಾಲುವೆ. ಸೂಯಜ್ ಕಾಲುವೆ ನಿರ್ಮಾಣಗೊಳ್ಳುವವರೆಗೂ ವಾಸ್ಕೊಡಗಾಮ ಕಂಡುಹಿಡಿದ ಜಲಮಾರ್ಗವೇ ಭಾರತ ಮತ್ತು ಯುರೋಪ್ ನಡುವಿನ ವ್ಯಾಪಾರ ಮಾರ್ಗವಾಗಿತ್ತು. ಏಕೆಂದರೆ ವಾಸ್ಕೊಡಗಾಮನ ಮಾರ್ಗವಾಗಿ ಹೋಗುವ ನೌಕೆಗಳು ಆಫ್ರಿಕಾದ ದಕ್ಷಿಣ ತುದಿ ಕೇಪ್ ಆಫ್ ಗುಡ್‌ಹೋಪನ್ನು ಬಳಸಿ ಹೋಗಬೇಕಾಗಿತ್ತು. ಈ ಮಾರ್ಗವನ್ನು ಕೇಫ್ ಮಾರ್ಗವೆಂದು ಕರೆಯುತ್ತಾರೆ. ಮುಂಬೈಯಿಂದ ಲಂಡನ್‌ಗೆ ಕೇಪ್ ಮಾರ್ಗವಾಗಿ 10800 ನಾಟಿಕಲ್ ಮೈಲು (1 ನಾಟಿಕಲ್ ಮೈಲು = 1.85ಕಿ.ಮೀ.) ದೂರವಾದರೆ, ಸೂಯಜ್ ಮಾರ್ಗವಾಗಿ 6200 ನಾಟಿಕಲ್ ಮೈಲುಗಳಾಗಿತ್ತು. ಅಂದರೆ ಇದರಿಂದ ಸುಮಾರು ಅರ್ಧದಷ್ಟು ಪ್ರಯಾಣದ ದೂರ ಕಡಿಮೆಯಾಯಿತು.*

© KTBS
Not to be published

## ಯುರೋಪಿನ ವ್ಯಾಪಾರಿ ಕಂಪನಿಗಳು

ಪೋರ್ಚುಗೀಸರ ಯಶಸ್ವಿ ಪ್ರಯತ್ನಗಳಿಂದ ಪ್ರೇರಣೆಗೊಂಡ ಯುರೋಪಿನ ಡಚ್ಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದರು. ಈ ಬೆಳವಣಿಗೆಯು ವಸಾಹತುರಾಷ್ಟ್ರವಾಗಿ ಪರಿವರ್ತನೆಗೊಂಡ ಭಾರತವಲ್ಲದೆ ಅದನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯನ್ನು ನಿರ್ಣಾಯಕವಾಗಿ ಬದಲಿಸಿತು.

**ಪೋರ್ಚುಗೀಸರು:** ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಪೋರ್ಚುಗೀಸರೇ ಮತ್ತು ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಕೂಡ ಪೋರ್ಚುಗೀಸರೇ ಆಗಿದ್ದಾರೆ. ವಾಸ್ಕೊಡಗಾಮನ ನಂತರ ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಫ್ರಾನ್ಸಿಸ್ಕೊ ಡಿ ಆಲ್ಮೇಡ ಭಾರತಕ್ಕೆ ಬಂದನು. ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಜಾರಿಗೆ ತಂದನು. ಆಲ್ಮೇಡನ ನಂತರ ಬಂದ ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ. ಇವನು ಸಾಮಾನ್ಯ ಶಕ (ಸಾ.ಶ.) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದನು. ಮುಂದೆ ಒಂದು ಶತಮಾನ ಕಾಲ ಭಾರತದ ವ್ಯಾಪಾರದ ಮೇಲೆ ಪ್ರಶ್ನಾತೀತ ಏಕಸ್ವಾಮ್ಯವನ್ನು ಹೊಂದಿದ್ದ ಪೋರ್ಚುಗೀಸರು ಡಚ್ ಮತ್ತು ಇಂಗ್ಲಿಷರ ಆಗಮನದ ನಂತರ ರಾಜಕೀಯವಾಗಿ ಕಳೆಗುಂದಿದರು.

**ಡಚ್ಚರು :** ಡಚ್ಚರು ಹಾಲೆಂಡ್ ಅಥವಾ ನೆದರ್‌ಲ್ಯಾಂಡ್ ದೇಶದವರು. ಇವರು ಪೂರ್ವದೇಶಗಳಲ್ಲಿ ವ್ಯಾಪಾರ ನಡೆಸುವ ಉದ್ದೇಶದಿಂದ ಸಾ.ಶ. 1602ರಲ್ಲಿ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು


ಸ್ಥಾಪಿಸಿಕೊಂಡು ಭಾರತ ಮತ್ತು ಜಾವ, ಸುಮಾತ್ರ, ಇಂಡೋನೇಷಿಯ ಮೊದಲಾದ ಸಾಂಬಾರು ಪ್ರಸಿದ್ಧ ದ್ವೀಪಗಳಿಗೆ ಪ್ರವೇಶಿಸಿದರು. ಭಾರತದಲ್ಲಿ ಸೂರತ್, ಬ್ರೋಚ್, ಕ್ಯಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲೀಪಟ್ಟಣ, ಚಿನ್ಸೂರ್ ಮೊದಲಾದ ಕಡೆಗಳಲ್ಲಿ ತಮ್ಮ ಕೋಠಿಗಳನ್ನು ಸ್ಥಾಪಿಸಿಕೊಂಡರು. ಆ ಮೂಲಕ ಪೋರ್ಚುಗೀಸರ ಏಕಸ್ವಾಮ್ಯವನ್ನು ಮುರಿದರು. ಮುಂದೆ ಭಾರತಕ್ಕೆ ಬಂದ ಇಂಗ್ಲಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಹೆದರಿಸಲಾರದೆ ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತಗೊಂಡರು.

> ***ನಿಮಗಿದು ತಿಳಿದಿರಲಿ :*** *ಕೋಠಿಗಳು ವ್ಯಾಪಾರಿ ವಸ್ತುಗಳ ದಾಸ್ತಾನುಗಳು ಅಥವಾ ಮಳಿಗೆಗಳಾಗಿದ್ದವು. ಕೋಠಿಯ ಸುತ್ತ ತಮ್ಮ ರಕ್ಷಣೆಗಾಗಿ ಎತ್ತರದ ತಡೆಗೋಡೆಗಳನ್ನು ಕಟ್ಟಿಕೊಂಡರು.*

**ಇಂಗ್ಲಿಷರು :** ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ.ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು. ಈ ಕಂಪನಿಯು 1613ರಲ್ಲಿ ಔಪಚಾರಿಕವಾಗಿ ವ್ಯಾಪಾರವನ್ನು ಆರಂಭಿಸಿತು. ಕಂಪನಿಗೆ ಮೊಗಲ್ ಸಾಮ್ರಾಟನಾದ ಜಹಾಂಗೀರನು ಸೂರತ್‌ನಲ್ಲಿ ಮೊದಲ ಫ್ಯಾಕ್ಟರಿ ಅಥವಾ ದಾಸ್ತಾನು ಮಳಿಗೆ (Factory or Warehouses) ಯನ್ನು ತೆರೆಯಲು ಫರ್ಮಾನ್ ನೀಡಿದನು. 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಸರ್. ಥಾಮಸ್ ರೋ ಬಂದನು. ಇವನು ಜಹಾಂಗೀರನಿಂದ ಮೊಘಲ್ ಸಾಮ್ರಾಜ್ಯದ ಕೆಲವೆಡೆಗಳಲ್ಲಿ ಫ್ಯಾಕ್ಟರಿಗಳನ್ನು ಸ್ಥಾಪಿಸಲು ಅನುಮತಿ ಪಡೆದನು. ಅದರಂತೆ ಇಂಗ್ಲಿಷರು ಆಗ್ರಾ, ಅಹಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ಫ್ಯಾಕ್ಟರಿಗಳನ್ನು ನಿರ್ಮಿಸಿದರು. ಇಂಗ್ಲಿಷರು 1639ರಲ್ಲಿ ಚಂದ್ರಗಿರಿಯ ರಾಜನಿಂದ ಮದ್ರಾಸ್‌ನಲ್ಲಿ ಭೂಮಿಯನ್ನು ಪಡೆದು ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು. ಮುಂದೆ ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು. ಬ್ರಿಟಿಷರು 1690ರ ದಶಕದಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ಗೋವಿಂದಪುರ ಎಂಬ ಮೂರು ಹಳ್ಳಿಗಳನ್ನು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು. 17ನೆಯ ಶತಮಾನದ ಅಂತ್ಯದ ವೇಳೆಗೆ ಇಂಗ್ಲಿಷರು ಮದ್ರಾಸ್, ಬಾಂಬೆ ಮತ್ತು ಕಲ್ಕತ್ತಗಳನ್ನು ತಮ್ಮ ಪ್ರೆಸಿಡೆನ್ಸಿ ಕೇಂದ್ರಗಳನ್ನು ಮಾಡಿಕೊಂಡರು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಷರು ಕಲ್ಕತ್ತಾವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ತಮ್ಮ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ತಮ್ಮದೇ ನಾಗರಿಕ ಮತ್ತು ಅಪರಾಧ ಕಾನೂನುಗಳನ್ನು (Civil and Criminal Proceduse Codes) ಜಾರಿಗೆ ತಂದರು.

**ಫ್ರೆಂಚರು :** ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು 1664ರಲ್ಲಿ ಸರ್ಕಾರಿ ಒಡೆತನದ ಕಂಪನಿಯಾಗಿ ಆರಂಭವಾಯಿತು. ಇದು 1668ರಲ್ಲಿ ತನ್ನ ಪ್ರಪ್ರಥಮ ದಾಸ್ತನುಮಳಿಗೆ(ಕೋಠಿ)ಯನ್ನು ಸೂರತ್‌ನಲ್ಲಿ ಆರಂಭಿಸಿತು. ನಂತರ ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂಬಜಾರ್, ಬಾಲಸೂರ್‌ಗಳನ್ನು ತಮ್ಮ ಕೇಂದ್ರಗಳಾಗಿ ಮಾಡಿಕೊಂಡರು. ಫ್ರೆಂಚರು 1674ರಲ್ಲಿ ವಾಲಿಕೊಂಡಪುರಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಒಂದು ಹಳ್ಳಿಯನ್ನು ಪಡೆದರು. ಕ್ರಮೇಣ ಇದನ್ನೇ ದೊಡ್ಡ ವ್ಯಾಪಾರ ಕೇಂದ್ರವಾಗಿ ಮಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಅದೇ ಪುದುಚೇರಿ ಅಥವಾ ಪಾಂಡಿಚೇರಿ. ಇದು ಫ್ರೆಂಚರು ಭಾರತ ತೊರೆದು ಹೋಗುವವರೆಗೆ ಅವರ ರಾಜಧಾನಿಯಾಗಿತ್ತು. 1746ರಲ್ಲಿ ಪಾಂಡಿಚೇರಿಯ ಗವರ್ನರ್ ಆಗಿ ಬಂದ ಡೂಪ್ಲೆ ಎಂಬ ಮಹತ್ವಾಕಾಂಕ್ಷಿ ಅಧಿಕಾರಿಯು ದಕ್ಷಿಣ ಭಾರತದಲ್ಲಿ ಫ್ರೆಂಚರ ಅಧಿಪತ್ಯವನ್ನು ಸ್ಥಾಪಿಸಲು ಹವಣಿಸಿದನು. ಇದು ಇಂಗ್ಲಿಷರೊಡನೆ ಸಂಘರ್ಷಕ್ಕಿಳಿದು ಕಾರ್ನಾಟಿಕ್ ಯುದ್ಧಗಳಿಗೆ ಕಾರಣವಾಯಿತು.

© KTBS Not to be republished




© KTBS Not to be published

## ಬ್ರಿಟಿಷರು ಮತ್ತು ಫ್ರೆಂಚರ ನಡುವೆ ಪ್ರತಿಸ್ಪರ್ಧೆ

ಪೋರ್ಚುಗೀಸರು ಮತ್ತು ಡಚ್ಚರು 18ನೆಯ ಶತಮಾನದ ಮಧ್ಯಂತರದ ಹೊತ್ತಿಗೆ ಬ್ರಿಟಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಎದುರಿಸಲಾಗದೆ ಭಾರತದ ರಾಜಕೀಯ ರಂಗದಿಂದ ಹಿಂದೆ ಸರಿದರು. ಅಂತಿಮವಾಗಿ ಕಣದಲ್ಲಿ ಉಳಿದ ಬ್ರಿಟಿಷರು ಮತ್ತು ಫ್ರೆಂಚರು ದಕ್ಷಿಣ ಭಾರತದಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ಉಳಿಸಿಕೊಳ್ಳುವ ಸಲುವಾಗಿ ಶಕ್ತಿ ಪ್ರದರ್ಶನಕ್ಕೆ ಮುಂದಾದರು. ಇದೇ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನ ಮತ್ತು ಕಾರ್ನಾಟಿಕ್ (ತಮಿಳುನಾಡಿನ ಪೂರ್ವಭಾಗ) ಪ್ರಾಂತ್ಯದಲ್ಲಿನ ರಾಜಕೀಯ ಅಸ್ಥಿರತೆಯ ಲಾಭ ಪಡೆಯಲು ಫ್ರೆಂಚರು ಮತ್ತು ಬ್ರಿಟಿಷರು ಯತ್ನಿಸಿದರು. ಅದರ ಪರಿಣಾಮವಾಗಿಯೇ ಮೂರು ಕಾರ್ನಾಟಿಕ್ ಯುದ್ಧಗಳು ನಡೆದವು.

*ನಿಮಗಿದು ತಿಳಿದಿರಲಿ: 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು 'ಅಸಫ್ ಜಾ' ಸ್ಥಾಪಿಸಿದನು. ಇವನ ಅಧೀನದಲ್ಲಿ ಕಾರ್ನಾಟಿಕ್ ಪ್ರಾಂತ್ಯವನ್ನು ಆಳುತ್ತಿದ್ದ 'ದೋಸ್ತ್ ಅಲಿ' ಎಂಬಾತನು 'ಅಸಫ್ ಜಾ'ಗೆ ನಿಷ್ಠನಾಗಿಯೇನು ಇರಲಿಲ್ಲ. 1740ರಲ್ಲಿ ಮರಾಠರು ಕಾರ್ನಾಟಿಕ್ ಪ್ರಾಂತ್ಯವನ್ನು ಲೂಟಿ ಮಾಡಿ ದೋಸ್ತ್ ಅಲಿಯನ್ನು ಕೊಂದು, ಅವನ ಅಳಿಯ ಚಂದಾಸಾಹೇಬನನ್ನು ಸತಾರದಲ್ಲಿ ಸೆರೆಯಲ್ಲಿಟ್ಟರು. ಆಗ ಅಸಫ್ ಜಾ ತನ್ನ ನಂಬಿಕಸ್ಥ ವ್ಯಕ್ತಿಯಾದ ಅನ್ವರುದ್ದೀನನನ್ನು ಕಾರ್ನಾಟಿಕದ ನವಾಬನನ್ನಾಗಿ ನೇಮಿಸಿದನು.*

**ಮೊದಲ ಕಾರ್ನಾಟಿಕ್ ಯುದ್ಧ (1746–48) :** ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು. ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು. ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು. ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟುಹೋದನು. ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು. ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೇಂಡಿನ ನಡುವೆ ಆದ 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು.

© KTBS Not to be published

*ನಿಮಗಿದು ತಿಳಿದಿರಲಿ : ಹೈದರಾಬಾದ್ ಸಂಸ್ಥಾನದ ನಿಜಾಮನಾದ ಅಸಫ್ ಜಾ 1748ರಲ್ಲಿ ಮರಣ ಹೊಂದಿದನು. ಸಿಂಹಾಸನಕ್ಕಾಗಿ ಅವನ ಮಗನಾದ ನಾಸೀರ್‌ಜಂಗ್ ಮತ್ತು ಅವನ ಮಗಳ ಮಗನಾದ ಮುಜಾಫರ್ ಜಂಗ್ ನಡುವೆ ಕಲಹ ಆರಂಭವಾಯಿತು. ಅತ್ತ ಕಾರ್ನಾಟಿಕದಲ್ಲಿ (ಮರಾಠರ ಸೆರೆಯಿಂದ ಬಿಡುಗಡೆಗೊಂಡ) ಚಂದಾಸಾಹೇಬ್ ಮತ್ತು ಅನ್ವರುದ್ದೀನನ ನಡುವೆ ಸಿಂಹಾಸನಕ್ಕಾಗಿ ಕಿತ್ತಾಟ ಆರಂಭವಾಯಿತು. ಆಗ ಫ್ರೆಂಚರು ಹೈದರಾಬಾದಿನಲ್ಲಿ ಮುಜಾಫರ್ ಜಂಗನಿಗೂ, ಕಾರ್ನಾಟಿಕ್‌ನಲ್ಲಿ ಚಂದಾಸಾಹೇಬನಿಗೂ ಬೆಂಬಲ ನೀಡಿದರು. ಇದಕ್ಕೆ ಪ್ರತಿಯಾಗಿ ಬ್ರಿಟಿಷರು ನಾಸಿರ್‌ಜಂಗ್ ಮತ್ತು ಅನ್ವರುದ್ದೀನನ ಬೆಂಬಲಕ್ಕೆ ನಿಂತರು.*

*1749ರಲ್ಲಿ ಚಂದಾಸಾಹೇಬ, ಮುಜಾಫರ್‌ಜಂಗ್ ಮತ್ತು ಫ್ರೆಂಚರ ಪಡೆಗಳು ಒಂದಾಗಿ ಅನ್ವರುದ್ದೀನನನ್ನು ಆಂಬೂರ್ ಕದನದಲ್ಲಿ ಕೊಂದರು. ಪರಿಣಾಮವಾಗಿ ಚಂದಾಸಾಹೇಬ ಕಾರ್ನಾಟಿಕ್‌ನ ನವಾಬನಾದನು. ಅನ್ವರುದ್ದೀನನ ಮಗನಾದ 'ಮಹಮದ್ ಅಲಿ'ಯು ಬ್ರಿಟಿಷರ ನೆರವಿನಿಂದ ತಿರುಚನಾಪಳ್ಳಿಯಲ್ಲಿ ನೆಲೆನಿಂತನು. ಅತ್ತ ಹೈದರಾಬಾದಿನಲ್ಲಿ ಮುಜಾಫರ್‌ಜಂಗನು ಚಂದಾಸಾಹೇಬ ಮತ್ತು ಫ್ರೆಂಚರ ಸಹಾಯದಿಂದ ನಾಸಿರ್‌ಜಂಗನನ್ನು ಕೊಂದು ನಿಜಾಮನಾದರೂ, ಸ್ವಲ್ಪದಿನಗಳಲ್ಲಿಯೇ ಹತ್ಯೆಗೀಡಾದನು. ಅವನ ಸ್ಥಾನಕ್ಕೆ ಫ್ರೆಂಚರು ಅಸಫ್‌ಜಾನ ಇನ್ನೊಬ್ಬ ಮಗನಾದ ಸಲಾಬತ್‌ಜಂಗನನ್ನು ನಿಜಾಮನಾಗಿ ಮಾಡಿದರು.*

**ಎರಡನೆಯ ಕಾರ್ನಾಟಿಕ್ ಯುದ್ಧ (1749–1754) :** ಬದಲಾದ ಸನ್ನಿವೇಶದಲ್ಲಿ ಫ್ರೆಂಚರು ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್‌ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು. ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು. ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು. ಆದರೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್ ಕ್ಲೈವನು ಕಾರ್ನಾಟಿಕದ ರಾಜಧಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು. ಅಂತಿಮವಾಗಿ ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು. ಅವನ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು. ಕೊನೆಗೆ ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು. ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು. ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

**ಮೂರನೆಯ ಕಾರ್ನಾಟಿಕ್ ಯುದ್ಧ (1756–1763):** ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು. ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್. ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು. ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು. ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು.

ಕಾರ್ನಾಟಿಕ್ ಯುದ್ಧಗಳ ಪರಿಣಾಮವಾಗಿ ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು. ಅದಾಗ್ಯೂ 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು. ಈ ಬೆಳವಣಿಗೆಗಳೊಂದಿಗೆ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು. ಹೀಗೆ ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನಮಾಡಿ ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

**ನಿಮಗಿದು ತಿಳಿದಿರಲಿ :**

***ರಾಬರ್ಟ್‌ಕ್ಲೈವ್ :*** *ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು. ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒರಿಸ್ಸಾ ಪ್ರಾಂತ್ಯಗಳ ಮೇಲೆ ದಿವಾನಿ ಹಕ್ಕನ್ನು ಕಂಪನಿಗೆ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಂಡು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.*

***ಡೂಪ್ಲೆ :*** *ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗೌರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ರಾಜಕೀಯ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯ ರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶೀ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಬ್ರಿಟಿಷರಿಗೆ ಡೂಪ್ಲೆಯು ತಮ್ಮ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಕಂಡಿದ್ದನು. ಹೀಗೆ ಕರ್ನಾಟಿಕ್ ಮತ್ತು ದಖನ್ ಮೇಲಿನ ಅಧಿಪತ್ಯ ಸ್ಥಾಪನೆಗಾಗಿ ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ಸಂಘರ್ಷವನ್ನು ಕಾಣುತ್ತೇವೆ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.*

## ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ

ದಕ್ಷಿಣ ಭಾರತದಲ್ಲಿ ರಾಜಕೀಯ ನಿಯಂತ್ರಣ ಸಾಧಿಸಿದ ಬ್ರಿಟಿಷರು 18ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಸಂಪದ್ಭರಿತ ಬಂಗಾಳ ಪ್ರಾಂತ್ಯದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಲು ಮುಂದಾದರು.

© KTBS Not to be published

ಕೃಷಿ, ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಬಂಗಾಳ ಪ್ರಾಂತ್ಯವು ಸಮೃದ್ಧ ಬೆಳವಣಿಗೆ ಹೊಂದಿತ್ತು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಈ ಪ್ರಾಂತ್ಯದಿಂದ ಅಪಾರ ಲಾಭವನ್ನೂ ಗಳಿಸುತ್ತಿತ್ತು. 1717ರಲ್ಲಿ ಮೊಗಲ್ ದೊರೆ ಫಾರೂಕ್ ಶಿಯಾರನು ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ನೀಡಿದ 'ದಸ್ತಕ್'ಗಳೇ (ಪರವಾನಿಗೆ) ಅವರ ಲಾಭಕ್ಕೆ ಕಾರಣವಾಗಿತ್ತು. ಆದರೆ ಕಂಪನಿಗೆ ಸೀಮಿತವಾಗಿದ್ದ ಈ ದಸ್ತಕ್‌ಗಳನ್ನು ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗ ಪಡಿಸಿಕೊಳ್ಳತೊಡಗಿದರು. ಇದರಿಂದ ಬಂಗಾಳ ಸರ್ಕಾರಕ್ಕೆ ಅಪಾರ ನಷ್ಟ ಉಂಟಾಗುತ್ತಿತ್ತು. ಆದ್ದರಿಂದ ಮುರ್ಷಿದ್ ಅಲಿ ಖಾನ್‌ನಿಂದ ಅಲಿವರ್ದಿ‌ಖಾನ್‌ವರೆಗಿನ ಎಲ್ಲ ನವಾಬರೂ ದಸ್ತಕ್‌ನ ದುರುಪಯೋಗವನ್ನು ವಿರೋಧಿಸುತ್ತಿದ್ದರು. ಮುಂದೆ ಇದೇ ವಿಚಾರವು ನವಾಬ ಮತ್ತು ಕಂಪನಿಯ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿತು. ಇದರ ಪರಿಣಾಮವಾಗಿಯೇ ಭಾರತದ ಇತಿಹಾಸಕ್ಕೆ ಹೊಸ ತಿರುವನ್ನು ಕೊಟ್ಟ ಅತ್ಯಂತ ಮಹತ್ವಪೂರ್ಣವಾದ ಎರಡು ಯುದ್ಧಗಳು ನಡೆದವು. ಅವುಗಳೇ ಪ್ಲಾಸಿ ಮತ್ತು ಬಕ್ಸಾರ್ ಕದನಗಳು.

> ***ನಿಮಗಿದು ತಿಳಿದಿರಲಿ : ದಸ್ತಕ್:*** *ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರ.*

**ಪ್ಲಾಸಿ ಕದನ (1757) :** ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್–ಉದ್–ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

©KTBS Not to be republished

**ಕಾರಣಗಳು :**

1. **ದಸ್ತಕ್‌ಗಳ ದುರುಪಯೋಗ :** ಕಂಪನಿಯ ವ್ಯಾಪಾರಕ್ಕಾಗಿ ನೀಡಿದ 'ದಸ್ತಕ್'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಳ್ಳುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿದ್ದದ್ದು ಸಿರಾಜನನ್ನು ಕೆರಳಿಸಿತು.
2. **ಅನುಮತಿ ಇಲ್ಲದೆ ಕೋಟೆಯ ದುರಸ್ಥಿ :** ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾದ ಕೋಟೆಯನ್ನು ಬಲಪಡಿಸಿ, ಫಿರಂಗಿಗಳನ್ನು ಇಟ್ಟರು. ಅನುಮತಿ ಪಡೆಯದೆ ಕೋಟೆಯನ್ನು ದುರಸ್ಥಿ ಮಾಡಿಸಿದ್ದರಿಂದ ಫಿರಂಗಿಗಳನ್ನು ತೆಗೆದು ಹಾಕಲು ಸಿರಾಜ್ ಸೂಚಿಸಿದನಾದರೂ ಅವರು ಪಾಲಿಸಲಿಲ್ಲ. ಇದರಿಂದ ಸಿರಾಜನು ಆಕ್ರೋಶಗೊಂಡನು.
3. **ಕಪ್ಪುಕೋಣೆ ದುರಂತ :** ಆಗ ಸಿರಾಜನು ಪೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು ಎಂಬುದಾಗಿತ್ತು. ಇದನ್ನು ಕಪ್ಪುಕೋಣೆಯ ದುರಂತ ಎಂದು ಕರೆಯಲಾಗಿದೆ. ಈ ಸುದ್ದಿ ಕೇಳಿ ರಾಬರ್ಟ್ ಕ್ಲೈವ್ ಉಗ್ರ ಕೋಪದಲ್ಲಿ ಬಲಿಷ್ಠ ಸೇನೆಯೊಂದಿಗೆ ಬಂಗಾಳಕ್ಕೆ ಬಂದನು.

ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ಓಮೀಚಾಂದಾ, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23 ರಂದು ಸಿರಾಜ್–ಉದ್–ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್–ಉದ್–ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

**ಪರಿಣಾಮಗಳು :**

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

**ಬಕ್ಸಾರ್ ಕದನ (1764) :** ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು. ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು. ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು. ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು. ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು. ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು. ಬ್ರಿಟಿಷರಿಗೆ ನವಾಬನನ್ನು ವಿರೋಧಿಸಲು ಇದಿಷ್ಟೇ ಸಾಕಿತ್ತು. ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು. ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು. ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು. ಈ ನಿಟ್ಟಿನಲ್ಲಿ ಮುಂದುವರೆದ ಮೀರ್ ಖಾಸಿಮನು ಮೊಗಲ್ ದೊರೆ 'ಎರಡನೇ ಷಾ ಆಲಂ' ಮತ್ತು ಔದ್‌ನ ನವಾಬ 'ಷುಜ್–ಉದ್–ದೌಲ'ರೊಂದಿಗೆ ಒಪ್ಪಂದ ಮಾಡಿಕೊಂಡನು. ಪರಿಣಾಮವಾಗಿ, 'ಮೀರ್ ಖಾಸಿಂ' ನೇತೃತ್ವದ ಮೂರೂ ಸಂಯುಕ್ತ ಸೇನೆಗಳು 'ಹೆಕ್ಟರ್ ಮನ್ರೋ' ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ 'ಬಕ್ಸರ್' ಎಂಬಲ್ಲಿ ಮುಖಾಮುಖಿಯಾದವು. ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು. ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು.

**ಪರಿಣಾಮಗಳು :**

1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.
3. ಔದ್‌ನ ನವಾಬನಾದ ಷುಜ್–ಉದ್–ದೌಲನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.

© KTBS Not to be published

4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು.

> **ನಿಮಗಿದು ತಿಳಿದಿರಲಿ :**
> **ದಿವಾನಿ ಹಕ್ಕು:** ಭೂಕಂದಾಯ ವಸೂಲಿ ಮಾಡುವ ಹಕ್ಕು.

ಅಂತಿಮವಾಗಿ ಬಕ್ಸರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು. ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಆದರೆ. ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಹೀಗೆ ಬ್ರಿಟಿಷರು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಭಾರತದಲ್ಲಿ ರಾಜಕೀಯ ಪರಮಾಧಿಕಾರವನ್ನು ಸ್ಥಾಪಿಸಿದರು.

> **ನಿಮಗಿದು ತಿಳಿದಿರಲಿ :**
>
> *1600*ರಲ್ಲಿ ಈಸ್ಟ್ ಇಂಡಿಯಾ ಕಂಪನಿಯನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಲಾಯಿತು.
>
> *1602*ರಲ್ಲಿ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ನೆದರ್‌ಲ್ಯಾಂಡ್‌ನಲ್ಲಿ ಸ್ಥಾಪಿಸಲಾಯಿತು.
>
> *1619*ರಲ್ಲಿ ಮೊಘಲ್ ಚಕ್ರವರ್ತಿ ಜಹಂಗೀರನು ಈಸ್ಟ್ ಇಂಡಿಯಾ ಕಂಪನಿಗೆ ಪಶ್ಚಿಮ ಕರಾವಳಿಯ ಸೂರತ್ತಿನಲ್ಲಿ ಹಾಗೂ ಪೂರ್ವ ಕರಾವಳಿಯ ಹೂಗ್ಲಿಯಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನು ನೀಡಿದನು.
>
> *1639*ರಲ್ಲಿ ಇಂಗ್ಲಿಷರು ತಮ್ಮ ಮೊದಲ ಸರಕು ಕೋಠಿಯನ್ನು ಮದ್ರಾಸಿನಲ್ಲಿ ಸ್ಥಾಪಿಸಿದರು.
>
> *1664*ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಫ್ರಾನ್ಸ್‌ನಲ್ಲಿ ಸ್ಥಾಪನೆಗೊಂಡಿತು.

© KTBS Not to be published

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. 1453ರಲ್ಲಿ ಆಟೋಮಾನ್ ಟರ್ಕರು ________ ನಗರವನ್ನು ವಶಪಡಿಸಿಕೊಂಡರು.
2. ಭಾರತ ಹಾಗೂ ಯುರೋಪ್ ನಡುವೆ ಹೊಸ ಜಲಮಾರ್ಗವನ್ನು ________ ಕಂಡುಹಿಡಿದನು.
3. ಭಾರತದಲ್ಲಿದ್ದ ಫ್ರೆಂಚರ ರಾಜಧಾನಿ________ .
4. ರಾಬರ್ಟ್ ಕ್ಲೈವನು 1757ರಲ್ಲಿ ಸಿರಾಜ್-ಉದ್-ದೌಲನ ಮೇಲೆ ________ ಕದನ ಸಾರಿದನು.
5. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ 'ದಿವಾನಿ' ಹಕ್ಕನ್ನು ________ ನೀಡಿದನು.
6. ಬಂಗಾಳದಲ್ಲಿ 'ದ್ವಿ ಪ್ರಭುತ್ವ'ವನ್ನು ಜಾರಿಗೆ ತಂದವನು________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?
2. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.
3. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರುಗಳನ್ನು ಪಟ್ಟಿ ಮಾಡಿ.
4. ಎರಡನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.
5. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.
6. ಬಕ್ಸಾರ್ ಕದನದ ಪರಿಣಾಮಗಳಾವುವು?

**III. ಚಟುವಟಿಕೆ :**

ಬ್ರಿಟಿಷರು ಕಟ್ಟಿದ ಪ್ರೆಸಿಡೆನ್ಸಿ ನಗರಗಳನ್ನು ಕುರಿತು ಮಾಹಿತಿ ಸಂಗ್ರಹಿಸಿ.

© KTBS Not to be published

* * * *

ಅಧ್ಯಾಯ–2

# ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

T7I9U4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಆಂಗ್ಲೋ–ಮರಾಠ ಯುದ್ಧಗಳು
- ಸಹಾಯಕ ಸೈನ್ಯ ಪದ್ಧತಿ
- ಬ್ರಿಟಿಷ್ ಅಧಿಕಾರದ ಕ್ರೋಢೀಕರಣ
- ಆಂಗ್ಲೋ ಸಿಖ್ ಯುದ್ಧಗಳು
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

ಬ್ರಿಟಿಷರು ಕಾರ್ನಾಟಿಕ್ ಯುದ್ಧಗಳ ಮೂಲಕ ಭಾರತದಲ್ಲಿ ಯಾವುದೇ ಯುರೋಪ್ ದೇಶಗಳು ತಮ್ಮ ಎದುರಾಳಿಗಳಾಗಿ ನಿಲ್ಲದಂತೆ ಮಾಡಿದರು. ಪ್ಲಾಸಿ ಮತ್ತು ಬಕ್ಸರ್ ಕದನಗಳ ಮೂಲಕ ಬಂಗಾಳ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು. 1765ರ ಹೊತ್ತಿಗೆ ಬಹುತೇಕ ಪೂರ್ವಭಾಗದ ಭಾರತದ ಮೇಲೆ ಪ್ರಭುತ್ವ ಸ್ಥಾಪಿಸಿದರು. ಆದರೆ ಭಾರತದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಮೈಸೂರು ಮತ್ತು ಮರಾಠ ರಾಜ್ಯಗಳು ಪ್ರಬಲರಾಗಿದ್ದ ಕಾರಣ ಅವರ ಆಟಾಟೋಪ ಬಂಗಾಳ ಮತ್ತು ಬೊಂಬಾಯಿಗೆ ಸೀಮಿತಗೊಂಡಿತ್ತು.

ಬ್ರಿಟಿಷರ ಮುಂದಿನ ವಿಸ್ತರಣಾ ನೀತಿಗೆ ಅಡ್ಡಿಯಾಗಿದ್ದವರು ಮರಾಠ ಪೇಶ್ವೆಗಳು ಮತ್ತು ಮೈಸೂರು ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದ ಹೈದರಾಲಿ ಮತ್ತು ಅವನ ಮಗ ಟೀಪ್ಪುಸುಲ್ತಾನ್. ಇವರ ನಂತರ ವಾಯವ್ಯ ಭಾರತದಲ್ಲಿ ಸಿಖ್ಖರು ಪ್ರಬಲ ವಿರೋಧಿಗಳಾದರು. ಹತ್ತೊಂಬತ್ತನೇ ಶತಮಾನದ ಆರಂಭದ ದಶಕಗಳಲ್ಲಿ ಪ್ರವರ್ಧಮಾನಕ್ಕೆ ಬಂದ ರಣಜಿತ್ ಸಿಂಗನು ಸಿಖ್ಖರನ್ನು ಸಂಘಟಿಸುವಲ್ಲಿ ಯಶಸ್ವಿಯಾದನು.

ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಗಾಗಿ ಹದಿನೆಂಟನೇ ಶತಮಾನದ ಮಧ್ಯಭಾಗದಿಂದ ಹತ್ತೊಂಬತ್ತನೇ ಶತಮಾನದ ಮಧ್ಯಂತರದವರೆಗೂ ಮೇಲಿಂದ ಮೇಲೆ ಅನೇಕ ಯುದ್ಧಗಳನ್ನು ಕೈಗೊಂಡರು. ಅಂತೆಯೇ 'ಸಹಾಯಕ ಸೈನ್ಯ ಪದ್ಧತಿ' ಮತ್ತು 'ದತ್ತು ಮಕ್ಕಳಿಗೆ ಹಕ್ಕಿಲ್ಲ'ದಂತಹ ನೀತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉಪಾಯವಾಗಿಯೂ ಭಾರತೀಯ ರಾಜ್ಯಗಳನ್ನು ಕಬಳಿಸಿದರು. ಈ ಅವಧಿಯಲ್ಲಿ ಬ್ರಿಟಿಷರು ಭಾರತದ ದಕ್ಷಿಣ, ಪಶ್ಚಿಮ ಮತ್ತು ವಾಯವ್ಯ ಭಾಗಗಳಲ್ಲಿ ನಡೆಸಿದ ಯುದ್ಧಗಳಲ್ಲಿ ಮೂರು ಆಂಗ್ಲೋ–ಮರಾಠ ಯುದ್ಧಗಳು, ನಾಲ್ಕು ಆಂಗ್ಲೋ–ಮೈಸೂರು ಯುದ್ಧಗಳು ಮತ್ತು ಎರಡು ಆಂಗ್ಲೋ–ಸಿಖ್‌ಯುದ್ಧಗಳೂ ಸೇರಿವೆ. ಮೈಸೂರು ಯುದ್ಧಗಳನ್ನು ನಾಲ್ಕನೇ ಪಾಠದಲ್ಲಿ ಚರ್ಚಿಸಲಾಗುವುದರಿಂದ ಇಲ್ಲಿ ಬ್ರಿಟಿಷರು ನಡೆಸಿದ ಮರಾಠ ಮತ್ತು ಸಿಖ್ ಯುದ್ಧಗಳನ್ನು ಕುರಿತು ತಿಳಿಯೋಣ.

## ಆಂಗ್ಲೋ–ಮರಾಠ ಯುದ್ಧಗಳು

**ಮೊದಲ ಆಂಗ್ಲೋ–ಮರಾಠ ಯುದ್ಧ (1775–1782):** ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ(ರಘುನಾಥರಾವ್)ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ

© KTBS Not to be published

ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775–1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್‌ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೆ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು.

**ಲಾರ್ಡ್ ವೆಲ್ಲೆಸ್ಲಿ (1798–1805) ಮತ್ತು ಸಹಾಯಕ ಸೈನ್ಯ ಪದ್ಧತಿ:** ಲಾರ್ಡ್ ವೆಲ್ಲೆಸ್ಲಿಯು ಗವರ್ನರ್ ಜನರಲ್ ಆಗಿ ಬಂದ ನಂತರ ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಯು ದೊಡ್ಡ ಪ್ರಮಾಣದಲ್ಲಾಯಿತು. ಇವನ ಆಗಮನದ ಹೊತ್ತಿಗೆ ಬಲಿಷ್ಠ ಮರಾಠ ಮತ್ತು ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದು ವಿಸ್ತರಣಾ ನೀತಿಗೆ ಅನುಕೂಲಕರವಾಗಿತ್ತು. ಈ ಗುರಿಯನ್ನು ಸಾಧಿಸಲು ಅವನು ಮೂರು ವಿಧಾನಗಳನ್ನು ಅನುಸರಿಸಿದನು. ಅವುಗಳೆಂದರೆ: ಸಹಾಯಕ ಸೈನ್ಯ ಪದ್ಧತಿ, ಹೊಸ ರಾಜ್ಯಗಳ ಮೇಲೆ ಯುದ್ಧಗಳು ಮತ್ತು ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು.

© KTBS
Not to be published

**ಸಹಾಯಕ ಸೈನ್ಯ ಪದ್ಧತಿ:** ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ.

**ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:**

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

ಈ ನೀತಿಯಿಂದ ಬ್ರಿಟಿಷರ ಸೈನಿಕ ನಿರ್ವಹಣೆ ಸುಲಭವಾಯಿತು ಮತ್ತು ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಯಿತು. ಭಾರತೀಯ ರಾಜ್ಯಗಳನ್ನು ಆರ್ಥಿಕವಾಗಿ ತೀವ್ರ ಶೋಷಣೆಗೆ ಗುರಿಪಡಿಸಲಾಯಿತು. ಈ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ. ಅನಂತರ ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು.

**ಎರಡನೇ ಆಂಗ್ಲೋ–ಮರಾಠ ಯುದ್ಧ (1803–1805):** ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು. 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು. ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು. 1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು. ಆದರೆ ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದನು. ಇದರಿಂದ ಆ ಪ್ರದೇಶದಲ್ಲಿ ತಾತ್ಕಾಲಿಕ ಶಾಂತಿ ನೆಲೆಸಿತು.

**ಮೂರನೇ ಆಂಗ್ಲೋ–ಮರಾಠ ಯುದ್ಧ (1817–1818):** ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು. 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು. ನಾಗಪುರದ ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು. ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು. ಬದಲಿಗೆ ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ, ಮರಾಠರ ಸಾಂಪ್ರದಾಯಕ ಮುಖಂಡನಾಗಿಸುವ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.

© KTBS Not to be published

**ಬ್ರಿಟಿಷ್ ಅಧಿಕಾರದ ಕ್ರೋಡೀಕರಣ (1818–1857):** ಬ್ರಿಟಿಷರು 1818 ರಿಂದ 1857ರವರೆಗೆ ಅಖಂಡ ಭಾರತವನ್ನು ಗೆಲ್ಲುವ ಕಾರ್ಯವನ್ನು ಪೂರ್ಣಗೊಳಿಸಿದರು. ಈ ಅವಧಿಯಲ್ಲಿ ಪಂಜಾಬ್, ಸಿಂಧ್, ಔಧ್ ಮೊದಲಾದ ಪ್ರಮುಖ ರಾಜ್ಯಗಳನ್ನಲ್ಲದೆ ಅನೇಕ ಸಣ್ಣಪುಟ್ಟ ರಾಜ್ಯಗಳನ್ನೂ ಆಕ್ರಮಿಸಿದರು.

**ಆಂಗ್ಲೋ–ಸಿಖ್ ಯುದ್ಧಗಳು:** 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು. 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು. ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಒಂದಾಗಿ ಶೌರ್ಯವನ್ನು ಮೆರೆದರು. ಆದರೆ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು. ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು. ಅಂದಿನಿಂದ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು. ಹೀಗೆ ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು.

1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಪಂಜಾಬಿಗಳು ಪ್ರತಿಭಟಿಸಿದರು. ಈ ಪ್ರತಿಭಟನೆಗಳ ನೇತೃತ್ವವನ್ನು 'ಚಟ್ಟಾರ್ ಸಿಂಗ್ ಅಟ್ಟಾರಿವಾಲ' ಮತ್ತು 'ಮೂಲರಾಜ್' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಮತ್ತೆ ಪಂಜಾಬಿಗಳಿಗೆ ಸೋಲಾಯಿತು. ಅಂತಿಮವಾಗಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

**ಡಾಲ್ ಹೌಸಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ :** 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು. ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗೌರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು.

ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ಮಲೆತು ನಿಂತಿತು. ಮಡುಗಟ್ಟಿದ ಆಕ್ರೋಶ ಮತ್ತು ರಾಜಾಭಿಮಾನದ ಕಿಚ್ಚು ಬ್ರಿಟಿಷ್ ಪ್ರಭುತ್ವದ ವಿರುದ್ಧ ಬಂಡೇಳುವಂತೆ ಮಾಡಿತು. ಇದರ ಪರಿಣಾಮವಾಗಿಯೇ 1857ರ ಸಿಪಾಯಿ ದಂಗೆ ಸ್ಫೋಟಗೊಂಡಿತ್ತು.

© KTBS Not to be published

**ನಿಮಗಿದು ತಿಳಿದಿರಲಿ :**

***ರಣಜಿತ್ ಸಿಂಗ್ :*** *1780ರಲ್ಲಿ ಜನಿಸಿದ ರಣಜಿತ್ ಸಿಂಗನು ಸಿಖ್‌ರ 12 ಮಿಸ್ಲ್(ಒಕ್ಕೂಟ)ಗಳಲ್ಲಿ ಒಂದಾದ ಸುಖರ್‌ಚಾಕೀಯಾ ಮಿಸ್ಲ್‌ನ ನಾಯಕ ಮಹಾಸಿಂಗ್‌ನ ಮಗ. ಹತ್ತನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡನು. ಅವನು ಸಣ್ಣ ಪ್ರದೇಶದ ಒಕ್ಕೂಟದ ನಾಯಕನಾಗಿದ್ದನು. ಕಾಬೂಲಿನ ಜಮಾನ್ ಷಾ ಭಾರತದ ಮೇಲೆ ದಂಡಯಾತ್ರೆ ಕೈಗೊಂಡಾಗ ರಣಜಿತನು ಅವನಿಗೆ ಸಲ್ಲಿಸಿದ ಸೇವೆಗೆ ಮೆಚ್ಚಿ 'ರಾಜಾ' ಎಂಬ ಪದವಿಯೊಂದಿಗೆ ಲಾಹೋರಿನ ರಾಜ್ಯಪಾಲನಾಗಿ ನೇಮಕಗೊಂಡನು. ಆಗ ಅವನಿಗೆ ಹತ್ತೊಂಬತ್ತು ವರ್ಷ. ನಂತರ ವಿಸ್ಮಯಕಾರಿ ರೀತಿಯಲ್ಲಿ ಪ್ರಬಲನಾಗಿ ಬೆಳೆದ. ಸಿಖ್‌ಸಮುದಾಯದ ಮೇಲೆ ಸಂಪೂರ್ಣ ಪರಮಾಧಿಕಾರ ಪಡೆಯುವುದೇ ಅವನ ಪರಮ ಧ್ಯೇಯವಾಗಿತ್ತು. ಸಟ್ಲೇಜ್ ನದಿಯ ಪಶ್ಚಿಮ ಭಾಗಗಳ ಎಲ್ಲ ಸಿಖ್ ಪ್ರಮುಖರನ್ನೂ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಪಂಜಾಬಿನಲ್ಲಿ ತನ್ನದೇ ಸ್ವಂತ ರಾಜ್ಯ ಸ್ಥಾಪಿಸಿದ. 1809ರಲ್ಲಿ ಅಮೃತಸರದಲ್ಲಿ ಇಂಗ್ಲಿಷರೊಡನೆ 'ನಿರಂತರ ಮೈತ್ರಿ' ಒಪ್ಪಂದಕ್ಕೆ ಸಹಿಹಾಕಿದನು. ಯುರೋಪಿಯನ್ ಮಾದರಿಯಲ್ಲಿ ಸೈನ್ಯವನ್ನು ಸಂಘಟಿಸಿ ತರಬೇತುಗೊಳಿಸಿದನು. ಇವನ ಸೈನ್ಯವು ಕೇವಲ ಸಿಖ್‌ರಿಗೆ ಸೀಮಿತಗೊಂಡಿರದೆ ಗೂರ್ಖಾಗಳು, ಬಿಹಾರಿಗಳು, ಪಠಾಣರು, ಮುಸಲ್ಮಾನರಿಂದ ಕೂಡಿತ್ತು. ಲಾಹೋರಿನಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು. ಅಂದಿನ ಕಾಲದಲ್ಲಿದ್ದ ಭಾರತೀಯ ರಾಜರ ಸೈನ್ಯಗಳಲ್ಲಿಯೇ ರಣಜಿತ್ ಸಿಂಗನ ಸೈನ್ಯ ಅತ್ಯುತ್ತಮವಾಗಿತ್ತು. ಜಾತ್ಯತೀತ ಮನೋಭಾವದವನೂ, ಉದಾರ ಹೃದಯಿಯೂ ಆದ ರಣಜಿತ್ ಸಿಂಗನು ಸಿಖ್ ಗುರುಗಳನ್ನಲ್ಲದೆ ಹಿಂದೂ ಮತ್ತು ಮುಸಲ್ಮಾನ ಗುರುಗಳನ್ನೂ ಪೋಷಿಸುತ್ತಿದ್ದನು. ಎಲ್ಲ ಧರ್ಮಿಯರೂ ಅವನ ಆಡಳಿತದ ಉನ್ನತ ಸ್ಥಾನದಲ್ಲಿದ್ದರು. ಬ್ರಿಟಿಷರನ್ನು ಎದುರು ಹಾಕಿಕೊಳ್ಳದೆ ಸಿಖ್ ರಾಜ್ಯವನ್ನು ರಕ್ಷಿಸುವಲ್ಲಿ ಯಶಸ್ವಿಯಾದನು. ಅದೇ ರೀತಿ ಬ್ರಿಟಿಷರು ವಾಯುವ್ಯದ ಭಾಗದಿಂದ ನಡೆಯಬಹುದಾದ ಸಂಭಾವ್ಯ ದಾಳಿಗಳನ್ನು ತಡೆಯಲು ರಣಜಿತ್ ಸಿಂಗನ ರಾಜ್ಯದಂತಹ ರಕ್ಷಣಾ ರಾಜ್ಯವೊಂದರ (ಬಫರ್ ಸ್ಟೇಟ್) ಅವಶ್ಯಕತೆ ಇತ್ತು. ಒಟ್ಟಾರೆ, ಸ್ವತಂತ್ರ ರಾಜ್ಯವೊಂದನ್ನು ಕಟ್ಟಿ ಕೊನೆಯವರೆಗೂ ಸ್ವತಂತ್ರವಾಗಿಯೇ ಆಳಿ 1839ರಲ್ಲಿ ರಣಜಿತ್ ಸಿಂಗ್ ನಿಧನ ಹೊಂದಿದನು.*

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಮೊದಲನೇ ಆಂಗ್ಲೋ ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ ________________ ಒಪ್ಪಂದ ಆಯಿತು.
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ______________ .
3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ________________ ರಲ್ಲಿ ಜಾರಿಗೆ ತರಲಾಯಿತು.
4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು ________________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಮೊದಲನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.
2. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು? ವಿವರಿಸಿ.
3. ಮೂರನೇ ಆಂಗ್ಲೋ ಮರಾಠ ಯುದ್ಧವನ್ನು ವಿವರಿಸಿ.
4. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?
5. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು?

**III. ಚಟುವಟಿಕೆ :**

1. ಬ್ರಿಟಿಷರು ಸಾಮ್ರಾಜ್ಯ ವಿಸ್ತರಣೆ ಮಾಡುವಲ್ಲಿ ಅನುಸರಿಸಿದ ತಂತ್ರಗಾರಿಕೆಯ (Strategy) ಬಗ್ಗೆ ವಿಶ್ಲೇಷಿಸಿ ಪ್ರಬಂಧ ಬರೆಯಿರಿ.

© KTBS
Not to be published

* * * *

J6E9M5

## ಅಧ್ಯಾಯ – 3

# ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆ – ನಾಗರಿಕ ಸೇವೆಗಳು, ನ್ಯಾಯಾಂಗ ವ್ಯವಸ್ಥೆ, ಪೊಲೀಸ್ ವ್ಯವಸ್ಥೆ, ಸೈನ್ಯ ವ್ಯವಸ್ಥೆ.*
- *ಭೂ ಕಂದಾಯ ನೀತಿಗಳು – ಖಾಯಂ ಜಮೀನ್ದಾರಿ ಪದ್ಧತಿ, ಮಹಲ್‌ವಾರಿ ಪದ್ಧತಿ, ರೈತವಾರಿ ಪದ್ಧತಿ.*
- *ಆಧುನಿಕ ಶಿಕ್ಷಣ – ಲಾರ್ಡ್ ಮೆಖಾಲೆ, ವುಡ್ಸನ ಆಯೋಗ (1854).*
- *ಬ್ರಿಟಿಷ್ ಆಳ್ವಿಕೆ ಕಾಲದ ಕಾಯ್ದೆಗಳು – ರೆಗ್ಯುಲೆಂಟಿಂಗ್ ಕಾಯ್ದೆ, ಪಿಟ್ಸ್ ಇಂಡಿಯಾ ಕಾಯ್ದೆ, ಚಾರ್ಟರ್ ಕಾಯ್ದೆಗಳು.*

© KTBS Not to be published

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಆರಂಭದಲ್ಲಿ ಕೇವಲ ವ್ಯಾಪಾರಿ ಕಂಪನಿಯಾಗಿ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ಮಾತ್ರ ಪೂರೈಸಿಕೊಳ್ಳುವ ಕೆಲಸ ಮಾಡಿತು. ನೂರಾರು ರಾಜಮನೆತನಗಳಲ್ಲಿ ಹಂಚಿಹೋಗಿದ್ದ ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದ ಬ್ರಿಟಿಷರು ಆ ಪರಿಸ್ಥಿತಿಯನ್ನು ತಮ್ಮ ರಾಜಕೀಯ ಏಳಿಗೆಗೆ ಬಳಸಿಕೊಂಡರು. ಪರಸ್ಪರ ಕಚ್ಚಾಡುತ್ತಿದ್ದ ರಾಜರ ನಡುವೆ ಒಡೆದು ಆಳುವ ನೀತಿಯನ್ನು ಬಳಸಿಕೊಂಡು ಅವರೆಲ್ಲರನ್ನೂ ಕ್ರಮೇಣ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಅಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ 'ಸಂಧಾನ' ಮತ್ತು 'ಯುದ್ಧ'ಗಳ ಮಾರ್ಗಗಳನ್ನು ಸಮರ್ಥವಾಗಿ ಬಳಸಿಕೊಂಡರು.

ವಿವಿಧ ಉಪಾಯಗಳನ್ನು ಬಳಸಿ ಭಾರತವನ್ನು ರಾಜಕೀಯವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡ ನಂತರ ಅದನ್ನು ಶಾಶ್ವತವಾಗಿ ತಮ್ಮಲ್ಲಿ ಹೇಗೆ ಉಳಿಸಿಕೊಳ್ಳಬೇಕೆನ್ನುವುದನ್ನು ಆಲೋಚಿಸತೊಡಗಿದರು. ಭಾರತ ಒಂದು ದೇಶವೆಂಬ ಸಾಮೂಹಿಕ ಕಲ್ಪನೆಯು ಇಲ್ಲದಿದ್ದ ಆ ಸಂದರ್ಭದಲ್ಲಿ ಅದು ವಿವಿಧ ರಾಜ್ಯಾಡಳಿತಗಳಲ್ಲಿ ಹರಿದು ಹಂಚಿಹೋಗಿತ್ತು. ಅನೇಕ ರಾಜ್ಯಗಳನ್ನು ವಿವಿಧ ಕಾರಣಗಳಿಂದ ಒಂದುಗೂಡಿಸಿ ಬ್ರಿಟಿಷರು ಏಕರೂಪ ರಾಜಕೀಯ ವ್ಯವಸ್ಥೆಗೆ ಮತ್ತು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು. ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂ ಕಂದಾಯ, ವ್ಯಾಪಾರ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಅವರು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಸಫಲರಾದರು. ಈ ಬಗೆಯ ಆಡಳಿತವನ್ನು ರೂಪಿಸುವಾಗ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳುವುದನ್ನು ಮರೆಯಲಿಲ್ಲ. ಈ ನಿಟ್ಟಿನಲ್ಲಿ ಕಂಪನಿಯು ಆಡಳಿತದ ಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳನ್ನು ಜಾರಿಗೊಳಿಸಿತು.

### ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆ

**ನಾಗರೀಕ ಸೇವೆಗಳು :** ಲಾರ್ಡ್ ಕಾರ್ನ್‌ವಾಲೀಸನು ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆತಂದನು. ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರ ನಡೆಸುವ ಸಲುವಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವ ಪದ್ಧತಿಯನ್ನು ಮೊದಲಿನಿಂದಲೂ ಪಾಲಿಸಿಕೊಂಡು ಬಂದಿತ್ತು. ಕಂಪನಿಯು ಈ ನೌಕರರಿಗೆ ಖಾಸಗಿಯಾಗಿ ವ್ಯಾಪಾರ ಮಾಡಿಕೊಳ್ಳಲು ಅನುಮತಿ ನೀಡಿತ್ತು. ಈ ಅವಕಾಶವನ್ನು ಬಳಸಿಕೊಂಡ ನೌಕರರು ಅನೈತಿಕ ಮಾರ್ಗಗಳಲ್ಲಿ ಹಣ ಸಂಪಾದಿಸಿ ಕಡುಭ್ರಷ್ಟರಾದರು. ಇದನ್ನು ತಡೆಯುವ ಸಲುವಾಗಿ 1773ರಲ್ಲಿ ಇಂಗ್ಲೆಂಡಿನ ಸರಕಾರವು ರೆಗ್ಯುಲೇಟಿಂಗ್ ಕಾಯ್ದೆಯನ್ನು ಭಾರತದಲ್ಲಿ ಜಾರಿಗೊಳಿಸಿತು. ಕಾಯ್ದೆಯ ಹೆಸರೇ ಸೂಚಿಸುವಂತೆ ಅದರ ಉದ್ದೇಶ ನಿಯಂತ್ರಣವನ್ನು ಹೇರುವುದು.

1800ರಲ್ಲಿ ನಾಗರೀಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು. ಆದರೆ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಇದಕ್ಕೆ ಬೆಂಬಲ ನೀಡಲಿಲ್ಲ. ಇದರ ಪರಿಣಾಮವೆಂದರೆ 1853ರವರೆಗೆ ನಾಗರೀಕ ಸೇವೆಯ ಎಲ್ಲಾ ನೇಮಕಾತಿಗಳನ್ನು ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರೇ ಮಾಡಿದರು. 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು. ಇದರಿಂದ ಭಾರತೀಯರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ಜೊತೆಗೆ ಬ್ರಿಟಿಷರು ಭಾರತೀಯರ ಸಾಮರ್ಥ್ಯವನ್ನು ಅನುಮಾನಿಸಿ ನೋಡಿದರು. ಕಾರ್ನ್‌ವಾಲೀಸನು "ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ" ಎಂದು ಪ್ರತಿಪಾದಿಸಿದನು. ಇದರಿಂದಾಗಿ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ಭಾರತೀಯರಿಗೆ ನೀಡಲಾಯಿತು.

**ನ್ಯಾಯಾಂಗ ವ್ಯವಸ್ಥೆ :** ಮೊಘಲರಿಂದ ಬ್ರಿಟಿಷರಿಗೆ ಹಂತಹಂತವಾಗಿ ಅಧಿಕಾರ ಹಸ್ತಾಂತರದ ಸಂಕ್ರಮಣ ಕಾಲದಲ್ಲಿ ಹೊಸ ನ್ಯಾಯಂಗ ವ್ಯವಸ್ಥೆಯು ಭಾರತದಲ್ಲಿ ಬೇರು ಬಿಡಲು ಆರಂಭಿಸಿತು. 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು. ಬಂಗಾಳದ ಪ್ರಾಂತ್ಯದಲ್ಲಿ ದ್ವಿ ಆಡಳಿತ ಜಾರಿಗೆ ಬಂದಿತು. ಇದನ್ನು ದ್ವಿ ಸರ್ಕಾರ ಎಂತಲೂ ಕರೆಯುತ್ತಾರೆ. ಇದರ ಪ್ರಕಾರ ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು. ಕ್ರಮೇಣ ಬ್ರಿಟಿಷರು ಹೆಚ್ಚು ಕೇಂದ್ರೀಕೃತ ನ್ಯಾಯಾಂಗ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಿರ್ಧರಿಸಿದರು. ಈ ಹೆಜ್ಜೆಯಿಂದ ಬ್ರಿಟಿಷರು ಮೊಘಲರ ಅಧಿಕಾರವನ್ನು ಹಿಂದಕ್ಕೆ ಸರಿಸಿ ತಾವೇ ಸಾರ್ವಭೌಮರಾಗತೊಡಗಿದರು. ಇದನ್ನು ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಸಾಧಿಸಿದರು.

© KTBS Not to be published

1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; 'ದಿವಾನಿ ಅದಾಲತ್' ಎಂಬ ನಾಗರೀಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು. ಇಲ್ಲಿ ನಾಗರೀಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ಮತ್ತು ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು. ಅಪರಾಧ ಪ್ರಕರಣಗಳಿಗೆ ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು. ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು. ನಾಗರಿಕ ನ್ಯಾಯಾಲಯಗಳು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಪರಾಧ ನ್ಯಾಯಾಲಯಗಳು 'ಕಾಜಿ'ಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿಯೇ ಕಾರ್ಯನಿರ್ವಹಿಸಬೇಕಾಗಿತ್ತು.

**ಪೊಲೀಸ್ ವ್ಯವಸ್ಥೆ :** ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೆ ಪೊಲೀಸರು. ಲಾರ್ಡ್ ಕಾರ್ನ್‌ವಾಲೀಸನು ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು 'ಸೂಪರಿಡೆಂಟೆಂಟ್ ಆಫ್ ಪೊಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು. 1793ರಲ್ಲಿ ಪ್ರತಿ ಜಿಲ್ಲೆಯನ್ನು 'ಠಾಣೆ'ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನದಲ್ಲೂ, ಹಳ್ಳಿಗಳು 'ಚೌಕಿದಾರ'ರ ಅಧೀನದಲ್ಲೂ ಇರುವಂತೆ ಮಾಡಿದನು. ಕೊತ್ವಾಲರುಗಳು ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು.

1770ರ ದಶಕದಲ್ಲಿ ಭೀಕರ ಕ್ಷಾಮಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಇದರ ಪರಿಣಾಮವಾಗಿ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು.

1781ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೊಳಪಟ್ಟರು. ಪೊಲೀಸ್ ವ್ಯವಸ್ಥೆಯು ನಿರಂತರ ಬದಲಾವಣೆಗೆ ಒಳಗಾಯಿತು. 1861ರಲ್ಲಿ 'ಪೊಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೆ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯ. ಆದರೆ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ. 1902ರ ಪೊಲೀಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು. ಇಷ್ಟಾದರೂ ಭಾರತೀಯರ ಬಗೆಗೆ ಇದ್ದ ತಾರತಮ್ಯ ಕಡಿಮೆಯಾಗಲಿಲ್ಲ.

**ಸೈನ್ಯ ವ್ಯವಸ್ಥೆ:** ಬ್ರಿಟಿಷರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯವು ಆಧಾರಸ್ತಂಭವಾಗಿತ್ತು. ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡು ಅವರ ನೆರವಿನಿಂದಲೇ ಬ್ರಿಟಿಷರು ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಸೈನ್ಯದ ಶಕ್ತಿಯನ್ನು ಬಳಸಿಕೊಂಡು ಭಾರತದ ಒಳಗಡೆಯ ತಮ್ಮ ವಿರೋಧ ಶಕ್ತಿಗಳಿಂದ ಮತ್ತು ವಿದೇಶಿ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು. ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು. ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಸುಬೇದಾರ್ ಸ್ಥಾನ. ಬಹುತೇಕ ಭಾರತೀಯ ಸೈನಿಕರು ಕೂಲಿ ಸೈನಿಕರಾಗಿದ್ದರು. 1857ರ ಘಟನೆಯ ನಂತರ ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಶಿಫಾರಸ್ಸುಗಳನ್ನು ಬ್ರಿಟಿಷ್ ಸರಕಾರ ಪಡೆಯಿತು. ಈ ಶಿಫಾರಸ್ಸುಗಳ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು.

### ಭೂಕಂದಾಯ ನೀತಿಗಳು

ಬ್ರಿಟಿಷರು ಬಂಗಾಳ ಪ್ರಾಂತ್ಯವನ್ನು ತಮ್ಮ ಕೇಂದ್ರವಾಗಿಟ್ಟುಕೊಂಡರು. ಈಸ್ಟ್ ಇಂಡಿಯಾ ಕಂಪೆನಿಯು ಬ್ರಿಟಿಷ್ ಸರ್ಕಾರಕ್ಕೆ ವಾರ್ಷಿಕವಾಗಿ ನಾಲ್ಕು ಲಕ್ಷ ಪೌಂಡ್‌ಗಳನ್ನು ಪಾವತಿಸಬೇಕಿತ್ತು. ಈ ಹಿನ್ನೆಲೆಯಲ್ಲಿ ಕಂಪೆನಿಯು ತನ್ನ ಆರ್ಥಿಕ ಹಿತಸಾಕ್ತಿಗಳನ್ನು ಸುಸ್ಥಿರಗೊಳಿಸಿಕೊಳ್ಳಬೇಕಿತ್ತು. ಇದರಿಂದಾಗಿ ಹೊಸ ಬಗೆಯ ಕಂದಾಯ ನೀತಿಗಳನ್ನು ಜಾರಿಗೊಳಿಸಿದರು.

**ಖಾಯಂ ಜಮೀನ್ದಾರಿ ಪದ್ಧತಿ :** ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು. ಈ ಪದ್ಧತಿಯಲ್ಲಿ ಜಮೀನ್ದಾರನು ಭೂಮಾಲೀಕನಾದನು. ಈ ಹೊಸ ಯೋಜನೆಯ ಪ್ರಕಾರ ಜಮೀನ್ದಾರನು ಪ್ರತಿವರ್ಷವೂ ನಿರ್ದಿಷ್ಟ ದಿನಕ್ಕೆ ಮೊದಲೇ ಅವನು ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು. ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು. ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ಅವನೇ ಇಟ್ಟುಕೊಳ್ಳಬಹುದಾಗಿತ್ತು. ಬರಗಾಲ (ಅನಾವೃಷ್ಟಿ) ಅಥವಾ ವಿಪರೀತ ಮಳೆ ಅತಿವೃಷ್ಟಿಯ ಕಾರಣದಿಂದ ಕಂದಾಯವನ್ನು ವಸೂಲಿ ಮಾಡಲು ಸಾಧ್ಯವಾಗದೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತವನ್ನು ಸಲ್ಲಿಸಲಾಗದಿದ್ದರೆ, ಬ್ರಿಟಿಷ್ ಸರಕಾರವೂ ಭೂಮಿಯ ಒಡೆತನವನ್ನು ಅವನಿಂದ ಕಸಿದುಕೊಳ್ಳುತ್ತಿತ್ತು. ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ. ಬ್ರಿಟಿಷರು ತಮಗೆ ನೆರವಾಗುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರರನ್ನು ಸೃಷ್ಟಿ ಮಾಡಿದರು. ರೈತರು, ರೈತ ಕೂಲಿಕಾರ್ಮಿಕರು ಜಮೀನ್ದಾರರ ಭೂಮಿಯಲ್ಲಿ ಕೆಲಸ ಮಾಡಲು ನಿರಂತರ ಅವಕಾಶಗಳೂ ಸಿಗದೆ ಬಹುಮುಖಿ ಶೋಷಣೆಗೆ ಒಳಗಾದರು ಅತಂತ್ರ ಸ್ಥಿತಿಯಲ್ಲೇ ಬದುಕನ್ನು ಕಳೆಯತೊಡಗಿದರು. ಈ ಪದ್ಧತಿಯು ಕ್ರಮೇಣ ಒರಿಸ್ಸಾ, ಆಂಧ್ರ ಮತ್ತು ವಾರಣಾಸಿ ಪ್ರಾಂತ್ಯಗಳಿಗೆ ವಿಸ್ತರಣೆಯಾಯಿತು. ಚಾರ್ಲ್ಸ್ ಮೆಟಕಾಫ್ ಹೇಳುವಂತೆ ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು".

© KTBS Not to be published

**ಮಹಲ್ವಾರಿ ಪದ್ಧತಿ :** ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. 'ಮಹಲ್' ಎಂದರೆ ತಾಲ್ಲೂಕು ಎಂದರ್ಥ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು. ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು. ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿ ಕತ್ವವನ್ನು ಕಳೆದುಕೊಂಡರು. ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

**ರೈತವಾರಿ ಪದ್ಧತಿ :** ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು. ಈ ಪದ್ಧತಿಯನ್ನು ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು. ಈ ಕಾಲಘಟ್ಟದಲ್ಲಿಯೇ ಈ ಪ್ರಾಂತ್ಯಗಳ ಬಹುತೇಕ ಭಾಗಗಳು ಕಂಪನಿಯ ಆಡಳಿತಕ್ಕೆ ಒಳಪಟ್ಟಿದ್ದು ಮುಖ್ಯ ಕಾರಣವಾಗಿತ್ತು. ಈ ಪದ್ಧತಿಯ ಪ್ರಕಾರ ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು. ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು. ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು. ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು.

ಸಣ್ಣ ರೈತರಿಗೆ ತಮ್ಮ ಅಧೀನದಲ್ಲಿದ್ದ ಭೂಮಿ ಮೇಲಿನ ಹಕ್ಕನ್ನು ನೀಡಿತ್ತಾದರೂ, ಭೂಕಂದಾಯವನ್ನು ಈ ಪದ್ಧತಿಯು ಹೆಚ್ಚಿನ ವಾರ್ಷಿಕ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು. ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತಿದ್ದರು. ಬೆಳೆಗಳು ಸರಿಯಾಗಿ ಫಸಲು ನೀಡದ ಸಂದರ್ಭದಲ್ಲಿ ರೈತರು ಹಣದ ಲೇವಾದೇವಿಗಾರರಿಂದ (Money Lend) ಸಾಲ ತೆಗೆದುಕೊಂಡು, ಮರುಪಾವತಿಸಲಾಗದೆ ಅವರಿಗಿದ್ದ ಸಣ್ಣ ಪುಟ್ಟ ಜಮೀನನ್ನು ಮಾರಾಟಮಾಡುವಂತಾಯಿತು. ರೈತರ ಒಳಿತಿಗಾಗಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ ಎನ್ನುವುದು ವಿಪರ್ಯಾಸ.

**ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:**

1. ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
2. ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
3. ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ (Mortgage) ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
4. ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
5. ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
6. ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

© KTBS Not to be published

### ಆಧುನಿಕ ಶಿಕ್ಷಣದ ಆರಂಭ

ಭಾರತೀಯರ ಸಾಂಪ್ರದಾಯಿಕ ಶಿಕ್ಷಣವು ನಿರಂತರವಾಗಿ ಚಾಲ್ತಿಯಲ್ಲಿತ್ತು. ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ರಾಜ್ಯವ್ಯವಸ್ಥೆ ನೆಲೆಗೊಂಡ ನಂತರ ಶಿಕ್ಷಣವನ್ನು ನೀಡುವುದರಲ್ಲಿ ಪಾರಂಪರಿಕ ವಿಧಾನದ ಜೊತೆಗೆ ಕೆಲವು ಬದಲಾವಣೆಗಳು ಉಂಟಾದವು. ಮುಂದೆ ಈ ಕ್ರಮದಲ್ಲಿ ಬದಲಾವಣೆ ಉಂಟಾದದ್ದು 18ನೇ ಶತಮಾನದ ಹೊಸ ಬ್ರಿಟಿಷ್ ಆಡಳಿತದ ಕಾಲಘಟ್ಟದಲ್ಲಿ. ಭಾರತದಲ್ಲಿದ್ದ ಐರೋಪ್ಯ ಮತ್ತು ಆಂಗ್ಲೋ–ಇಂಡಿಯನ್ ಸಮುದಾಯಗಳ ಮಕ್ಕಳಿಗೆ ಹೊಸ ಶಾಲೆಗಳು ಪ್ರಾರಂಭವಾದವು. ಆದರೆ ಈ ಶಿಕ್ಷಣ ಕ್ರಮವು ವಿಸ್ತರಣೆ ಆಗದಿದ್ದುದರಿಂದ ಸ್ಥಳೀಯ ಮಕ್ಕಳಿಗೆ ಯಾವುದೇ ಪ್ರಯೋಜನವಾಗಲಿಲ್ಲ. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿಯೆಂದರೆ ವಾರನ್ ಹೇಸ್ಟಿಂಗ್ಸ್. 1781ರಲ್ಲಿ ಅವನು 'ಕಲ್ಕತ್ತಾ ಮದರಸಾ'ವನ್ನು ಪ್ರಾರಂಭಿಸಿದನು. ಜೊನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು. ಆದರೆ ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್.

1828ರಲ್ಲಿ ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ವಿಶೇಷ ಪ್ರೋತ್ಸಾಹ ದೊರೆಯಿತು. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಮೆಕಾಲೆಯನ್ನು ಕಾನೂನು ಸದಸ್ಯನನ್ನಾಗಿ ಬೆಂಟಿಂಕ್‌ನು ನೇಮಕ ಮಾಡಿದನು. ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು. 1835 ರಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.ಅವನ ಯೋಜನೆಯ ಪ್ರಮುಖ ಅಂಶವೆಂದರೆ; "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು. ಭಾರತದ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲಿಷ್ ಭಾಷೆಯು ಮಾಧ್ಯಮವಾಗಿ ಬಳಕೆಯಾಗಲು ಪ್ರಾರಂಭವಾದದ್ದೇ 1830ರ ದಶಕದ ನಂತರ.

© KTBS Not to be published

ನಂತರದ ಪ್ರಮುಖ ಬೆಳವಣಿಗೆಯೆಂದರೆ ಸರ್ ಚಾರ್ಲ್ಸ್ ವುಡ್ಸ್‌ನ (1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು. ಇಲ್ಲಿಂದ ನಂತರ ಶಿಕ್ಷಣವು ಸಾರ್ವತ್ರೀಕರಣಗೊಳ್ಳತೊಡಗಿತ್ತು.

### ಬ್ರಿಟಿಷ್ ಶಿಕ್ಷಣದ ಪರಿಣಾಮಗಳು

1. ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
2. ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣುತ್ತೇವೆ.
3. ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.

7. ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

ಹೀಗೆ ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

## ಸಂವಿಧಾನಾತ್ಮಕ ಬೆಳವಣಿಗೆ

ಭಾರತದಲ್ಲಿ ಬ್ರಿಟಿಷ್ ಆಡಳಿತ ಬೆಳೆದಂತೆ ಸಮಸ್ಯೆಗಳೂ ಕೂಡ ಬೆಳೆದವು. ಸಮಸ್ಯೆಗಳ ನಿವಾರಣೆಗಾಗಿ ಆಡಳಿತ ಕ್ಷೇತ್ರದಲ್ಲಿ ಸುಧಾರಣೆ ತರುವ ಅಗತ್ಯತೆಯೂ ಇತ್ತು. ಈ ಸುಧಾರಣೆಗಳು ಭಾರತೀಯರ ಬೇಡಿಕೆಗಳಿಗೆ ಸ್ಪಂದಿಸುವಂತಿರಬೇಕಿತ್ತು. ಆಗ ಬ್ರಿಟಿಷರು ಕಾಲಕಾಲಕ್ಕೆ ವಿವಿಧ ನಿಯಮಗಳನ್ನು ಕಾಯ್ದೆಯ ರೂಪದಲ್ಲಿ ಜಾರಿಗೆ ತರುವ ಪ್ರಯತ್ನ ನಡೆಸಿದರು. ಈ ರೀತಿಯ ಕಾಯ್ದೆಗಳು ಭಾರತದ ಸಾಂವಿಧಾನಿಕ ಬೆಳವಣಿಗೆಗೆ ಸಹಕಾರಿಯಾದವು. ಈ ಕಾಯ್ದೆಗಳಲ್ಲಿ ಕೆಲವನ್ನು ತಿಳಿಯೋಣ.

### ಈಸ್ಟ್ ಇಂಡಿಯಾ ಕಂಪನಿ ಆಳ್ವಿಕೆಯ ಅವಧಿಯಲ್ಲಿ ಜಾರಿಗೊಂಡ ಕಾಯ್ದೆಗಳು (1773–1858)

### 1773ರ ರೆಗ್ಯುಲೇಟಿಂಗ್ ಕಾಯ್ದೆ

1765ರಲ್ಲಿ ಜಾರಿಗೊಂಡ ದಿವಾನಿ ಹಕ್ಕಿನ ನಂತರ ಕಂಪನಿ ಅಧಿಕಾರಿಗಳು ಅಪರಿಮಿತ ದುರಾಸೆಗೆ ಒಳಗಾಗಿ ಅಧಿಕಾರವನ್ನು ತಮ್ಮ ವೈಯಕ್ತಿಕ ಶ್ರೀಮಂತಿಕೆಯನ್ನು ಹೆಚ್ಚುಪಡಿಸಿಕೊಳ್ಳಲು ಬಳಸಿಕೊಂಡರು. ಭ್ರಷ್ಟಾಚಾರ ವಿಪರೀತವಾಯಿತು. ಇಂಗ್ಲೆಂಡಿನ ಶಾಸನ ಸಭೆಯ ಸದಸ್ಯನಾದ ಎಡ್ಮಂಡ್ ಬರ್ಕ್‌ನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು. ಕಂಪನಿ ಅಧಿಕಾರಿಗಳು ಭಾರತದಲ್ಲಿ ನಡೆಸುತ್ತಿರುವ ಅನೈತಿಕ ವ್ಯವಹಾರಗಳು ಗೊತ್ತಿದ್ದರೂ ಯಾವುದೇ ಕ್ರಮವನ್ನು ಜರುಗಿಸದೇ ಸುಮ್ಮನಿದ್ದುದೇ ಅವನು ಹೀಗೆ ಹೇಳಲು ಕಾರಣವಾಗಿತ್ತು. ಇವರು ಸಂಪಾದಿಸಿದ ಹಣದ ಪ್ರಮಾಣ ಎಷ್ಟಿತ್ತೆಂದರೆ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯನ್ನು ಬಡುಮೇಲು ಮಾಡಬಹುದೆನ್ನುವ ಆತಂಕ ಇಂಗ್ಲೆಂಡಿನಲ್ಲಿ ಅನೇಕರಿಗಿತ್ತು. ಈ ಹಿನ್ನೆಲೆಯಲ್ಲಿ ರೆಗ್ಯುಲೇಟಿಂಗ್ ಕಾಯ್ದೆ 1773ರಲ್ಲಿ ಜಾರಿಗೊಂಡಿತು.

### ಕಾಯ್ದೆಯ ಪ್ರಮುಖ ಲಕ್ಷಣಗಳು

1. ಈ ಕಾಯ್ದೆಯು ಜಾರಿಗೆ ಬರುವ ಪೂರ್ವದಲ್ಲಿ ಬ್ರಿಟಿಷರ ಅಧೀನದಲ್ಲಿದ್ದ ಪ್ರಾಂತ್ಯಗಳನ್ನು ಮೂರು ಪ್ರೆಸಿಡೆನ್ಸಿಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಅವುಗಳು ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಈ ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
2. ಬಂಗಾಳದ ಗವರ್ನರ್‌ರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.
3. ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಈ ಕಾನೂನು ನೀಡಿತು.
4 ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ (Court of Directors) ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ. ತೀರ ತುರ್ತಾದ ಸಂದರ್ಭಗಳಲ್ಲಿ ಮಾತ್ರ ಇಂತಹ ನಿಬಂಧನೆಗಳಿಂದ ವಿನಾಯಿತಿ ಇತ್ತು.

© KTBS Not to be republished

5. ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ "ಸುಪ್ರೀಂಕೋರ್ಟ್" ಅನ್ನು ಸ್ಥಾಪಿಸಲಾಯಿತು. ಈ ಕೇಂದ್ರ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು ಮೂರು ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದರು.

ಹೀಗೆ ರೆಗ್ಯುಲೇಟಿಂಗ್ ಕಾಯ್ದೆ, ತನ್ನ ಹೆಸರೇ ಸೂಚಿಸುವಂತೆ ಕಂಪನಿಯನ್ನು ಒಳಗೊಂಡಂತೆ ಒಟ್ಟಾರೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯವಾಗಿತ್ತು.

### 1784ರ ಪಿಟ್ಸ್ ಇಂಡಿಯಾ ಕಾಯ್ದೆ:

1773ರ ರೆಗ್ಯುಲೇಟಿಂಗ್ ಕಾಯ್ದೆಯಲ್ಲಿ ಕೆಲವು ಅನಿಶ್ಚಿತತೆಗಳು ಇದ್ದವು, ಇವುಗಳನ್ನು ನಿವಾರಿಸುವುದರ ಜೊತೆಗೆ ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಮತ್ತು ಕಂಪನಿ ಸರ್ಕಾರಕ್ಕಿದ್ದ ಅಧಿಕಾರದ ಮಿತಿಗಳನ್ನು ಸ್ಪಷ್ಟಪಡಿಸುವುದೇ ಈ ಕಾಯ್ದೆಯ ಪ್ರಮುಖ ಉದ್ದೇಶ. ಇಂಗ್ಲೆಂಡ್‌ನ ಸರ್ಕಾರ ಈ ಕಾಯ್ದೆಯಲ್ಲಿ ಹೊಸ ನಿಬಂಧನೆಗಳನ್ನು ಹೇರುವುದರ ಮೂಲಕ ಭಾರತದಲ್ಲಿ ಕಂಪನಿ ಸರ್ಕಾರವನ್ನು ನಿರ್ಣಾಯಕವಾಗಿ ನಿಯಂತ್ರಿಸಿತು.

ಮತ್ತೊಂದು ಪ್ರಮುಖ ಅಂಶವೆಂದರೆ 'ನಿಯಂತ್ರಣ ಮಂಡಳಿ' (Board of Control) ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಹಿಂದೆ ಇದ್ದ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು.

ಈ ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಪಡೆದಿತ್ತು. ಇಂಗ್ಲೆಂಡಿನಲ್ಲಿ ನಿರ್ದೇಶಕ ಮಂಡಳಿ (Court of Directors) ಮತ್ತು ನಿಯಂತ್ರಣ ಮಂಡಳಿ (Board of Control) ಎರಡೂ ಜಾರಿಯಲ್ಲಿದ್ದವು.

"ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಃ ಅವರದೇ ಸ್ವಂತ ಹಕ್ಕಲ್ಲ" ಎಂದು ಈ ಕಾಯ್ದೆಯಲ್ಲಿ ಹೇಳುವ ಮೂಲಕ ಭಾರತೀಯರ ರಾಜಕೀಯ ಹಕ್ಕುಗಳನ್ನು ನಿರ್ಣಾಯಕವಾಗಿ ಮೊಟಕುಗೊಳಿಸಿತು. ಈ ಕಾಯ್ದೆಯು ಭಾರತದಲ್ಲಿದ್ದ ಕಂಪನಿಯ ಅಧೀನದ ಪ್ರದೇಶ (The British Possessions)ಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

## ಚಾರ್ಟರ್ ಕಾಯ್ದೆಗಳು

ಚಾರ್ಟರ್ ಕಾಯ್ದೆಗಳ ಪ್ರಮುಖ ಉದ್ದೇಶ ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿ (permit)ಯನ್ನು ವಿಸ್ತರಿಸುವುದು. 1793, 1813, 1833 ಮತ್ತು 1853ರಲ್ಲಿ ಚಾರ್ಟರ್ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಪ್ರತೀ 20 ವರ್ಷಕ್ಕೊಮ್ಮೆ ಕಂಪನಿಗೆ ಪರವಾನಗಿಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಇಂಗ್ಲೆಂಡಿನ ಸರ್ಕಾರ ತೆಗೆದುಕೊಂಡ ಹೊಸ ನೀತಿಗಳನ್ನು ಈ ಕಾಯ್ದೆಗಳಲ್ಲಿ ಸೇರಿಸಲಾಯಿತು. ಈ ನಾಲ್ಕು ಕಾಯ್ದೆಗಳಲ್ಲಿ 1813ರ ಮತ್ತು 1833ರ ಕಾಯ್ದೆಗಳು ವಿವಿಧ ಕಾರಣಗಳಿಂದ ಪ್ರಮುಖವಾದವು.

### 1813ರ ಚಾರ್ಟರ್ ಕಾಯ್ದೆ:

1. ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು. ಈ ಕಾಯ್ದೆಯು ಜಾರಿಗೊಳ್ಳುವ ಪೂರ್ವದಲ್ಲಿ ಭಾರತದಲ್ಲಿ ವ್ಯಾಪಾರ ಮಾಡುವ ಅಧಿಕಾರವನ್ನು ಕಂಪನಿಗೆ ಮಾತ್ರವಲ್ಲದೆ ಇಚ್ಛೆಯುಳ್ಳವರೆಲ್ಲರಿಗೂ ನೀಡಬೇಕೆಂದು ದೊಡ್ಡ

© KTBS Not to be published

ಹೋರಾಟ ನಡೆಯಿತು. ಈ ಹಿನ್ನೆಲೆಯಲ್ಲಿ ಇಚ್ಛೆಯಿದ್ದವರೆಲ್ಲರಿಗೂ ಈ ಕಾಯ್ದೆಯು ಅವಕಾಶವನ್ನು ಮುಕ್ತವಾಗಿಸಿತು. ಇದರ ಪರಿಣಾಮವಾಗಿ ಮುಕ್ತ ವ್ಯಾಪಾರದ ಹೊಸ ಶಕೆ ಆರಂಭಗೊಂಡಿತು.

2. ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು.
3. ಇನ್ನು ಮುಂದೆ ಗವರ್ನರ್ ಜನರಲ್ ಮತ್ತು ಸೇನೆಯ ಮಹಾಮುಖ್ಯಸ್ಥರನ್ನು (commander-in-chief) ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.
4. ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು. ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು ನೀಡಲಾಯಿತು. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬರತೊಡಗಿದರು. ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

ಈ ಮೇಲಿನ ಕಾರಣಗಳಿಂದ 1813ರ ಚಾರ್ಟರ್ ಕಾಯ್ದೆಯು ಚಾರಿತ್ರಿಕವಾದದ್ದು.

**1833ರ ಚಾರ್ಟರ್ ಕಾಯ್ದೆ:**

ಈ ಕಾಯ್ದೆಯು ಅನುಷ್ಠಾನಕ್ಕೆ ಬರುವ ಪೂರ್ವದಲ್ಲಿ ಭಾರತದ ಒಟ್ಟು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವ ಉದ್ದೇಶವೂ ಈ ಕಾಯ್ದೆಯ ಅನುಷ್ಠಾನದ ಹಿನ್ನೆಲೆಯಾಗಿತ್ತು. ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷದ ಪರವಾನಿಗೆಯನ್ನು ನೀಡಲಾಯಿತು. ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ;

1. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು.
2. ಭಾರತದ ಎಲ್ಲ ವ್ಯಾಪಾರಿ ಸರಕುಗಳನ್ನು "ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ" ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
3. ದೇಶಿ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತ್ತು.
4. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಯಲ್ಲಿ ಉಳಿದ ಸದಸ್ಯರ ಜೊತೆ ಗವರ್ನರ್ ಜನರಲ್‌ನಿಗೆ ಯಾವುದಾದರೂ ವಿಷಯದ ಮೇಲೆ ಒಮ್ಮತ ಮೂಡದಿದ್ದಾಗ ಅವನು ಬಹುಮತದ ನಿರ್ಣಯವನ್ನು ತಿರಸ್ಕರಿಸಲು ಇದ್ದ ಕಾರಣಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕಾಯಿತು.
5. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು ಈ ಕಾಯ್ದೆಯು ನಿರ್ದೇಶಿಸಿತು.
6. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬೇಕಾಯಿತು.
7. ಎಲ್ಲ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು.

ಈ ಕಾಯ್ದೆಯು 1830ರ ದಶಕದ ಭಾರತದ ಆಂತರಿಕ ಮತ್ತು ಇಂಗ್ಲೆಂಡಿನಲ್ಲಿದ್ದ ವಿವಿಧ ರಾಜಕೀಯ ವಿದ್ಯಮಾನಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

**ಬ) ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಯಲ್ಲಿ ಜಾರಿಗೊಂಡ ಕಾಯ್ದೆಗಳು (1858–1947)**

ಈಸ್ಟ್ ಇಂಡಿಯಾ ಕಂಪನಿಯ ದುರಾಡಳಿತ ಹಾಗೂ ಭಾರತ ವಿರೋಧಿ ಕಾಯ್ದೆಗಳಿಂದಾಗಿ 1857ರಲ್ಲಿ ಸಿಪಾಯಿ ದಂಗೆ ಸಂಭವಿಸಿತು. ಇದರಿಂದಾಗಿ ಕಂಪನಿಯ ಆಡಳಿತವು ಬ್ರಿಟನ್ ರಾಣಿಗೆ ಹಸ್ತಾಂತರವಾಯಿತು.

© KTBS Not to be published

ಈ ಅವಧಿಯಲ್ಲಿ ಜಾರಿಗೆ ಬಂದ ಪ್ರಮುಖ ಕಾಯ್ದೆಗಳೆಂದರೆ ಭಾರತ ಸರ್ಕಾರದ ಕಾಯ್ದೆ 1858, 1861, 1892, 1909, 1919 ಮತ್ತು 1935ರ ಕಾಯ್ದೆಗಳು. ಭಾರತದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ರೂಪುತಾಳಿದ ರಾಜಕೀಯ ಬೆಳವಣಿಗೆಗಳ ಹಿನ್ನಲೆಯಲ್ಲಿ ಮೇಲೆ ತಿಳಿಸಿದ ಪ್ರತಿ ಕಾಯ್ದೆಯ ಚಾರಿತ್ರಿಕ ಪ್ರಾಮುಖ್ಯತೆಯನ್ನು ಅರ್ಥೈಸಿಕೊಳ್ಳಬೇಕು.

**ಭಾರತ ಸರ್ಕಾರದ ಕಾಯ್ದೆ – 1858**

ಈ ಕಾಯ್ದೆಯನ್ನು 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕು. ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು. ನವಂಬರ್ 1, 1858ರಂದು ಬ್ರಿಟಿಷ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು. ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ,

1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.

2. ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ "ಲಾರ್ಡ್ ಕ್ಯಾನಿಂಗ್" ನೇಮಕಗೊಂಡರು.

3. "ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.

4. ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ (ಕೌನ್ಸಿಲ್ ಆಫ್ ಇಂಡಿಯಾ) ಅಸ್ತಿತ್ವಕ್ಕೆ ಬಂದಿತು.

**1861ರ ಭಾರತೀಯ ಪರಿಷತ್ ಕಾಯ್ದೆ (1861)**

ಈ ಕಾಯ್ದೆಯು 1857ರ ಘಟನೆಯ ನಂತರ ಜಾರಿಗೊಂಡ ಪ್ರಮುಖ ಕಾಯ್ದೆಯಾಗಿದೆ. ಈ ಕಾಯ್ದೆಯ ಮೂಲಕ ಭಾರತೀಯರಿಗೆ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಾನವನ್ನು ಕಲ್ಪಿಸಲಾಯಿತು. ಭಾರತೀಯರು ಬ್ರಿಟಿಷರ ಬಗೆಗೆ ತಿಳಿದಿರುವ ಅಭಿಪ್ರಾಯಗಳನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ ನೀಡಲಾಯಿತು. ಇದನ್ನು ಇಂಗ್ಲೀಷಿನಲ್ಲಿ 'Policy of Assertion' ಎಂದು ಕರೆಯುತ್ತಾರೆ.

**ಈ ಕಾಯ್ದೆಯ ಪ್ರಮುಖ ಅಂಶಗಳು**

1. ವೈಸರಾಯ್ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ ಮಾಡಲಾಯಿತು.

2. ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರವನ್ನು ಗವರ್ನರ್ ಜನರಲ್‌ಗೆ ನೀಡಲಾಯಿತು.

**1892 ರ ಭಾರತೀಯ ಪರಿಷತ್ ಕಾಯ್ದೆ**

ಈ ಕಾಯ್ದೆಯು 1861 ಕಾಯ್ದೆಯ ಮುಂದುವರಿದ ಕಾಯ್ದೆಯಾಗಿದೆ. 1892ರ ಕಾಯ್ದೆಯು ಭಾರತೀಯರಿಗಿದ್ದ ಶಾಸನ ಸಭೆಗಳ ಪ್ರಾತಿನಿಧ್ಯವನ್ನು ಮತ್ತಷ್ಟು ವಿಸ್ತರಿಸಿತು. ಕಾಂಗ್ರೆಸ್ ಸಂಘಟನೆಯು ಬ್ರಿಟಿಷರ ಆಡಳಿತದ ಬಗ್ಗೆ ತಳೆದ ವಿಮರ್ಶಾತ್ಮಕ ನಿಲುವಿನ ಹಿನ್ನಲೆಯಲ್ಲಿ ಭಾರತೀಯರ ಪ್ರಾತಿನಿಧ್ಯವನ್ನು ಹೆಚ್ಚಿಸಲಾಯಿತು.

© KTBS Not to be published

**ಈ ಕಾಯ್ದೆಯ ಪ್ರಮುಖ ಅಂಶಗಳು**

1. ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಹೆಚ್ಚುವರಿ ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಲಾಯಿತು.

2. ಶಾಸನ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಅಧಿಕಾರವನ್ನು ಹೆಚ್ಚಿಸಿ ಅವುಗಳಲ್ಲಿ ಬಜೆಟ್ ಬಗ್ಗೆ ಚರ್ಚಿಸುವ ಅಧಿಕಾರವನ್ನು ನೀಡಲಾಯಿತು.

3. ಆರು ದಿನಗಳ ಮುಂಚೆ ಮುನ್ಸೂಚನೆ ನೀಡಿ ಸಾರ್ವಜನಿಕ ಆಸಕ್ತಿಯ ವಿಷಯಗಳ ಬಗ್ಗೆ ಸರಕಾರವನ್ನು ಪ್ರಶ್ನಿಸುವ ಹಕ್ಕನ್ನು ನೀಡಲಾಯಿತು.

**1909 ಭಾರತೀಯ ಪರಿಷತ್ ಕಾಯ್ದೆ**

ಈ ಕಾಯ್ದೆಯನ್ನು 'ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ' ಎಂತಲೂ ಕರೆಯುವರು. ಏಕೆಂದರೆ, ಲಾರ್ಡ್ ಮಿಂಟೋ ಭಾರತದ ವೈಸ್‌ರಾಯ್ ಆಗಿದ್ದರು. ಲಾರ್ಡ್ ಮಾರ್ಲೆ ಭಾರತದ ಸಕ್ರೆಟರಿ ಆಫ್ ಸ್ಟೇಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಈ ಕಾಯ್ದೆಯನ್ನು ಬಳಸಿಕೊಂಡರು.

© KTBS Not to be published

**ಈ ಕಾಯ್ದೆಯ ಪ್ರಮುಖ ಅಂಶಗಳು**

1. ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.

2. ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.

3. ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.

4. ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

**ಭಾರತ ಸರ್ಕಾರದ ಕಾಯ್ದೆ – 1919**

ಈ ಕಾಯ್ದೆಯನ್ನು ಮಾಂಟೆಗೋ – ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆ ಎಂತಲೂ ಕರೆಯುವರು. ಮೊದಲನೆಯ ಮಹಾಯುದ್ಧ (1914–1918) ದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನಲೆಯಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು. ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋ ಅವರು ಬ್ರಿಟನ್ನಿನ ಸಂಸತ್ತಿನಲ್ಲಿ 20.8.1917 ರಂದು ಮಾಡಿದ ಘೋಷಣೆಯ ಹಿನ್ನಲೆಯಲ್ಲಿ ಈ ಕಾಯ್ದೆ ರೂಪುಗೊಂಡಿತು. ಮಾಂಟೆಗೋ ಅವರು 'ಭಾರತೀಯರಿಗೆ ಹಂತ ಹಂತವಾಗಿ ಜವಾಬ್ದಾರಿ ಸರಕಾರವನ್ನು ನೀಡುವುದೇ ಬ್ರಿಟಿಷ್ ಸರಕಾರದ ಗುರಿ' ಎಂದು ಘೋಷಿಸಿದರು. ಭಾರತದ ವೈಸರಾಯ್ ಆಗಿದ್ದ ಚೆಮ್ಸ್‌ಫರ್ಡ್ ಅವರೂ ರಾಜಕೀಯ ಸುಧಾರಣೆಗಳಿಗೆ ಧ್ವನಿಗೂಡಿಸಿದರು. ಪರಿಣಾಮವಾಗಿ 1919ರಲ್ಲಿ ಭಾರತೀಯ ಪರಿಷತ್ ಕಾಯ್ದೆ ಜಾರಿಗೆ ಬಂದಿತು.

**ಈ ಕಾಯ್ದೆಯ ಪ್ರಮುಖ ಅಂಶಗಳು**

1. ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ (Bi-Cameral) ರಚನೆಗೆ ಅವಕಾಶ ನೀಡಲಾಯಿತು. ಅವುಗಳೆಂದರೆ, ಶಾಸಕಾಂಗ ಸಭೆ (ಕೆಳಮನೆ) ಮತ್ತು ರಾಜ್ಯಗಳ ಪರಿಷತ್ತು (ಮೇಲ್ಮನೆ) ರಚಿಸಲಾಯಿತು.

2. ಪ್ರಾಂತ್ಯಗಳಲ್ಲಿ "ದ್ವಿಸರಕಾರ" (Dyarchy) ಪದ್ಧತಿಗೆ ಅವಕಾಶ ನೀಡಲಾಯಿತು.

3. ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.

4. ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.

5. ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.

6. "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್‌ರಿಗೆ ವಿಸ್ತರಿಸಲಾಯಿತು.

## 1935ರ ಭಾರತ ಸರ್ಕಾರದ ಕಾಯ್ದೆ

ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

### ಈ ಕಾಯ್ದೆಯ ಪ್ರಮುಖ ಅಂಶಗಳು

1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.

2. ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು (Dyarchy) ಸ್ಥಾಪಿಸಲಾಯಿತು.

3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.

4. ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.

5. ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

ಭಾರತದ ಸಂವಿಧಾನ ಬೆಳವಣಿಗೆಯ ಚರಿತ್ರೆಯನ್ನು ಗುರುತಿಸುವಾಗ ವಿವಿಧ ಕಾಲಘಟ್ಟಗಳಲ್ಲಿ ಆದ ರಾಜಕೀಯ ಬೆಳವಣಿಗೆಗಳು ಕಾಯ್ದೆಯ ರೂಪಗಳಲ್ಲಿ ಪ್ರಕಟವಾಗಿರುವುದನ್ನು ನಾವು ಗ್ರಹಿಸಬೇಕು. ಬ್ರಿಟಿಷ್ ವಸಾಹತುಶಾಹಿ ಭಾರತದಲ್ಲಿ ಆಡಳಿತವನ್ನು ನಡೆಸುತ್ತಿದ್ದ ಸಂದರ್ಭದಲ್ಲಿಯೇ ಈ ಕಾಯ್ದೆಗಳು ಜಾರಿಗೆ ಬಂದದ್ದರಿಂದ ಬ್ರಿಟಿಷರ ಹಿತಾಸಕ್ತಿಗಳು ಈ ಕಾಯ್ದೆಗಳಲ್ಲಿ ಸೇರಿಕೊಂಡಿರುವಂತೆಯೆ ಭಾರತೀಯರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟದ ಆಶೋತ್ತರಗಳ ಸಂಘರ್ಷದ ಫಲಿತಗಳು ಇವುಗಳಲ್ಲಿವೆ ಎಂಬುದನ್ನು ನಾವು ಗಮನಿಸಲೇಬೇಕಾದ ಸಂಗತಿಯಾಗಿದೆ.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವನು ____________ .

2. ಸೂಪರಿಡೆಂಟೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವನು ____________ .

3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ____________ ರಲ್ಲಿ ಜಾರಿಗೆ ತರಲಾಯಿತು.

© KTBS Not to be published

4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ ____________ .

5. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ _________ .

6. ರೆಗ್ಯುಲೇಟಿಂಗ್ ಕಾಯ್ದೆ ___________ ರಲ್ಲಿ ಜಾರಿಗೆ ಬಂದಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.
2. ಬ್ರಿಟಿಷ್‌ರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?
3. ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು. ಹೇಗೆ? ವಿಮರ್ಶಿಸಿ.
4. ರೈತವಾರಿ ಪದ್ಧತಿಯು ಒಳಗೊಂಡಿದ್ದ ಪ್ರಮುಖಾಂಶಗಳು ಯಾವುವು?
5. ಬ್ರಿಟಿಷರ ಕಂದಾಯ ನೀತಿಗಳಿಂದ ಉಂಟಾದ ಪರಿಣಾಮಗಳಾವುವು?
6. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳ ಪಟ್ಟಿ ಮಾಡಿ.
7. ರೆಗ್ಯುಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?
8. 1858ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?
9. 1935ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ.
10. 1919ರ ಕಾಯ್ದೆಯ ಪ್ರಮುಖಾಂಶಗಳು ಯಾವುವು?

**III. ಚಟುವಟಿಕೆಗಳು :**

1. ಬ್ರಿಟಿಷರು ಆಡಳಿತದಲ್ಲಿ ಸುಧಾರಣೆ ತರುವ ಮೂಲಕ ತಮಗೆ ಪೂರಕವಾದ ವಾತಾವರಣ ಸೃಷ್ಟಿಸಿಕೊಂಡರು. ಈ ವಿಷಯದ ಬಗ್ಗೆ ಚರ್ಚಾ ಸ್ಪರ್ಧೆ ನಡೆಸಿ.
2. ಶಿಕ್ಷಕರ ನೆರವಿನೊಂದಿಗೆ ಈ ಪಾಠದಲ್ಲಿ ಪ್ರಸ್ತಾಪಿಸಿರುವ ಕಾಯ್ದೆಗಳಲ್ಲದೆ ಇನ್ನೂ ಬ್ರಿಟಿಷರು ಜಾರಿಗೆ ತಂದ ಕಾಯ್ದೆಗಳು ಒಳಗೊಂಡಿರುವ ಮಾಹಿತಿಗಳನ್ನು ಸಂಗ್ರಹಿಸಿ.

* * * *

© KTBS Not to be published

M3Z6I8

ಅಧ್ಯಾಯ–4

# ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಹೈದರಾಲಿ ಮತ್ತು ಟಿಪ್ಪುಸುಲ್ತಾನ್
- ಆಂಗ್ಲೋ–ಮೈಸೂರು ಯುದ್ಧಗಳು
- ದೊಂಡಿಯಾವಾಘ್
- ಕಿತ್ತೂರಿನ ಬಂಡಾಯ – ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ
- ಅಮರ ಸುಳ್ಯ ಬಂಡಾಯ
- ಸುರಪುರ ಬಂಡಾಯ
- ಹಲಗಲಿ ಬೇಡರ ದಂಗೆ


© KTBS Not to be published

ಇಂದಿನ ಕರ್ನಾಟಕವು ಏಕೀಕರಣದ ಪೂರ್ವದಲ್ಲಿ ವಿವಿಧ ರಾಜಕೀಯ ಅಧಿಕಾರಶಾಹಿಗಳಲ್ಲಿ ಹಂಚಿ ಹೋಗಿತ್ತು. 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯವನ್ನು ಸಾಧಿಸುವ ಜೊತೆಜೊತೆಯಲ್ಲಿ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜನರನ್ನು ತಮ್ಮ ಹಿತಾಸಕ್ತಿಗಳಿಗಾಗಿ ಶೋಷಿಸಲು ತೊಡಗಿದರು. ಈ ಶೋಷಣೆಗಳು ಕರ್ನಾಟಕವೂ ಸೇರಿದಂತೆ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು. ದೇಶೀ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸತೊಡಗಿದರು. ಇದರಿಂದ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು. ಹೀಗಾಗಿ ಆರಂಭದಲ್ಲಿ ಜಮೀನ್ದಾರರು, ಸಂಸ್ಥಾನದ ರಾಜರು ಮುಂತಾದವರು ತಮ್ಮಲ್ಲಿಯ ಯಾವುದೇ ಐಕ್ಯತೆಯನ್ನು ಸಾಧಿಸಲು ಪ್ರಯತ್ನಿಸದೆ ಒಬ್ಬೊಬ್ಬರಾಗಿಯೆ ವಿಘಟಿತ ರೂಪದಲ್ಲಿ ಬ್ರಿಟಿಷರ ವಿರುದ್ಧ ಬಂಡೇಳುವ ಪ್ರಯತ್ನ ಮಾಡಿದರು. ಈ ಹಿನ್ನೆಲೆಯಲ್ಲಿ ಮೈಸೂರು ರಾಜ್ಯದ ರಾಜಕೀಯ ಸಂಕ್ರಮಣವನ್ನು ಬಳಸಿಕೊಂಡ ಹೈದರಾಲಿ ಮತ್ತು ಅವನ ಮಗ ಟೀಪ್ಪುಸುಲ್ತಾನರು ಬ್ರಿಟಿಷರ ವಿರುದ್ಧ ದಕ್ಷಿಣ ಭಾರತದಲ್ಲಿ ಆರಂಭಿಕವಾದ ಬಹುದೊಡ್ಡ ಪ್ರತಿರೋಧವನ್ನು ಒಡ್ಡಿದರು. ರಾಜಕೀಯವಾಗಿ ಸೃಷ್ಟಿಯಾದ 1761 – 1799ರ ನಡುವಿನ ಕಾಲಘಟ್ಟದ ಇವರ ಪ್ರಯತ್ನ ಚರಿತ್ರೆಯಲ್ಲಿ ಒಂದು ವಿಶೇಷವಾದ ಪರ್ವ. ಇವರ ಪ್ರಯತ್ನ ಬ್ರಿಟಿಷ್ ವಿರೋಧಿ ಬಂಡಾಯದ ಆರಂಭಿಕ ಅಧ್ಯಾಯ.

## ಹೈದರಾಲಿ ಮತ್ತು ಟಿಪ್ಪುಸುಲ್ತಾನ

ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಅನೇಕ ಕಾರಣಗಳಿವೆ. ಮೊಘಲ್ ಚಕ್ರವರ್ತಿ ಔರಂಗಜೇಬ್‌ನ ಮರಣ 1707ರಲ್ಲಿ ಸಂಭವಿಸಿದ್ದು ಇದಕ್ಕೆ ಪ್ರಮುಖ ಕಾರಣವಾಗಿದೆ. ಆತನ ಮರಣ ಮೊಘಲರ ರಾಜಕೀಯ ಸಾರ್ವಭೌಮತ್ವವನ್ನು ಕುಗ್ಗಿಸಿತು. ಇದರಿಂದಾಗಿ ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿತು. ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು ಆರಂಭವಾದವು. ಇದಕ್ಕೂ ಮುನ್ನ 1704ರಲ್ಲಿ ಸಂಭವಿಸಿದ ಚಿಕ್ಕದೇವರಾಜ ಒಡೆಯರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿತು. ಈತನ ಮರಣದಿಂದಾಗಿ ಉತ್ತರಾಧಿಕಾರತ್ವ ಸಮಸ್ಯೆ ಕಂಡುಬಂದಿದ್ದರ ಜೊತೆಗೆ ಆಡಳಿತವೂ ಕುಸಿಯಿತು. ಈ ಬೆಳವಣಿಗೆಗಳು ಆ ಕಾಲದ ಮೈಸೂರಿನ ರಾಜಕೀಯವನ್ನು ಮುಸುಕುಗೊಳಿಸಿದವು. ಈ ರೀತಿಯ ಅತಂತ್ರ ಸನ್ನಿವೇಶಗಳ ಹಿನ್ನೆಲೆಯಲ್ಲಿದ್ದ ಮೈಸೂರು ಮತ್ತು ಕರ್ನಾಟಕ ರಾಜ್ಯಗಳ ಭೂ ಪ್ರದೇಶದಲ್ಲಿ ಹೈದರಾಲಿ ರಾಜಕೀಯ ಪ್ರಮುಖ್ಯತೆಯನ್ನು ಗಳಿಸಿದನು.

## ಹೈದರಾಲಿ


ಹೈದರಾಲಿ

ಇವನು ಒಬ್ಬ ಸಾಮಾನ್ಯ ಸೈನಿಕನಾಗಿ ಮೈಸೂರು ರಾಜ್ಯದ ಸೇವೆಗೆ ಸೇರಿದ ವ್ಯಕ್ತಿ ತನ್ನ ಚಾಣಾಕ್ಷ ರಾಜಕೀಯ ನಡೆಗೆ ಹೆಸರಾಗಿದ್ದನು. ಮೈಸೂರಿನ ರಾಜಕೀಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಇವನು ದೇವನಹಳ್ಳಿ ಮುತ್ತಿಗೆ ಸಂದರ್ಭ ಮತ್ತು ಅರ್ಕಾಟಿನ ನಿಜಾಮನ ವಿಷಯಕ್ಕೆ ಸಂಬಂಧಿಸಿದ ಸೈನಿಕ ಕಾರ್ಯಾಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು. ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು. ಬಹುಬೇಗನೆ ನವಾಬ್ ಹೈದರಾಲಿಖಾನ್ ಎಂದೂ ಹೆಸರಾದನು. ಶಸ್ತ್ರಗಳ ಉಪಯೋಗ ಮತ್ತು ಪ್ರಯೋಗಗಳಲ್ಲಿ ಖ್ಯಾತಿಗಳಿಸಿದನು. ಮಾತ್ರವಲ್ಲದೆ ಚುರುಕಿನ ಸೈನಿಕ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು ಮತ್ತು ಅರಸರಾಗಿದ್ದ ಎರಡನೇ ಕೃಷ್ಣರಾಜ ಒಡೆಯರವರನ್ನು ಮೂಲೆಗುಂಪಾಗಿಸಿ ಅಧಿಕಾರದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿದನು. ಮರಾಠರು, ಹೈದರಾಬಾದಿನ ನಿಜಾಮ ಮತ್ತು ಅರ್ಕಾಟಿನ ನವಾಬರು ತಮ್ಮ ರಾಜಕೀಯ ಅಸ್ತಿತ್ವ ಮತ್ತು ಮೇಲ್ಮೈ ಸಾಧನೆಗಾಗಿ ಹೋರಾಟಗಳಲ್ಲಿ ನಿರತರಾಗಿದ್ದರು. ಈ ಸಂಕ್ರಮಣದ ಸಂದರ್ಭವನ್ನು ತಮ್ಮ ರಾಜಕೀಯ ಪ್ರಾಬಲ್ಯಕ್ಕಾಗಿ ಬ್ರಿಟಿಷರು ಮತ್ತು ಫ್ರೆಂಚರು ಬಳಸಿಕೊಳ್ಳತೊಡಗಿದರು. ಈ ಹಿನ್ನೆಲೆಯಲ್ಲಿ, ಹೈದರಾಲಿ ಮತ್ತು ಟೀಪ್ಪು ಅವರ ಅವಧಿಯಲ್ಲಿ ಸಂಭವಿಸಿದ ಆಂಗ್ಲೋ–ಮೈಸೂರು ಯುದ್ಧಗಳು ಮತ್ತು ಅದಕ್ಕೆ ಪ್ರೇರಣೆ ಒದಗಿಸಿದ ರಾಜಕೀಯ ಬೆಳವಣಿಗೆಗಳನ್ನು ನಾವು ತಿಳಿಯೋಣ.

© KTBS Not to be republished

**ಮೊದಲನೆಯ ಆಂಗ್ಲೋ ಮೈಸೂರು ಯುದ್ಧ:** ಕ್ರಿ.ಶ.1767ರಲ್ಲಿ ಪ್ರಾರಂಭವಾದ ಇದು 1769ರಲ್ಲಿ ಅಂತ್ಯಗೊಂಡಿತು. ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಬಲ್ಯ ಬ್ರಿಟಿಷರು, ಹೈದರಾಬಾದಿನ ನಿಜಾಮ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು. ಹೀಗಾಗಿ ಬ್ರಿಟಿಷರು ತಮ್ಮ ಸಾಮ್ರಾಜ್ಯಷಾಹಿ ಧೋರಣೆಗೆ ಮುಳ್ಳಾಗಿ ಪರಿಣಮಿಸಿದ್ದ ಹೈದರಾಲಿಯನ್ನು ರಾಜಕೀಯವಾಗಿ ಹಣಿಯಲು ತಂತ್ರಗಳನ್ನು ಮಾಡಲಾರಂಭಿಸಿದರು. ಮರಾಠರ ದಾಳಿಯಿಂದ ರಾಜಕೀಯ ಮತ್ತು ಆರ್ಥಿಕ ನಷ್ಟವನ್ನು ಅನುಭವಿಸಿದ ಹೈದರಾಲಿ ಮರಾಠರು ಮತ್ತು ನಿಜಾಮನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಯತ್ನಿಸಿದನಾದರೂ ಈ ಪ್ರಯತ್ನದಲ್ಲಿ ವಿಫಲನಾದನು.

ಹೈದರ್ ಆಲಿಯ ವಿರುದ್ಧ ಬ್ರಿಟಿಷರು, ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು. ಇದರನ್ವಯ ತ್ರಿಪಕ್ಷ ಒಕ್ಕೂಟ ರಚಿಸಲ್ಪಟ್ಟಿತು. ಆದರೆ ಹೈದರಾಲಿ ತನ್ನ ಚಾಣಾಕ್ಷ್ಯ ರಾಜಕೀಯ ತಂತ್ರಗಳನ್ನು ಪ್ರಯೋಗಿಸುವ ಮೂಲಕ ತನ್ನ ವಿರುದ್ಧ ರಚನೆಯಾಗಿದ್ದ ಮಿತ್ರಕೂಟವನ್ನು ಒಡೆದು ಮರಾಠರು ಮತ್ತು ನಿಜಾಮನನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾದನು.

ಈ ನಡುವೆ ಆರ್ಕಾಟ್‌ನಲ್ಲಿ ರಾಜಕೀಯ ಸಮಸ್ಯೆಗಳು ಕಂಡುಬಂದವು. 1767ರಲ್ಲಿ ಹೈದರಾಲಿ ಮತ್ತು ನಿಜಾಮ, ಬ್ರಿಟಿಷರ ಆಶ್ರಿತ ದೇಶೀಯ ರಾಜ್ಯವಾಗಿದ್ದ ಆರ್ಕಾಟಿಗೆ ಮುತ್ತಿಗೆ ಹಾಕಿದರು. ಇದರಿಂದಾಗಿ ಯುದ್ಧ ಪ್ರಾರಂಭವಾಯಿತು. ತಿರುಚನಾಪಳ್ಳಿ, ತಿರುವಣ್ಣಾಮಲೈ, ಅಂಬೂರು ಮೊದಲಾದ ಸ್ಥಳಗಳಲ್ಲಿ ಕದನಗಳು ಸಂಭವಿಸಿದವು. ಈ ಸಂದರ್ಭದಲ್ಲಿ ಹೈದರಾಲಿ ಮಿಂಚಿನ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದನು. ಬ್ರಿಟಿಷ್ ಸೈನ್ಯ ಅನೇಕ ಸ್ಥಳಗಳನ್ನು ವಶಪಡಿಸಿಕೊಂಡಿತು. ಹೈದರ್ ತಾತ್ಕಾಲಿಕ ಹಿನ್ನೆಡೆ ಅನುಭವಿಸಿದನು. ಮುಂಬಯಿಯ ಬ್ರಿಟಿಷ್ ಸೈನ್ಯ ರಂಗವನ್ನು ಪ್ರವೇಶಿಸಿತು. ಹೈದರ್ ಈ ಯುದ್ಧವನ್ನು ತನ್ನ ಪ್ರತಿಷ್ಠೆಯ ಸಂಕೇತವೆಂದು ಭಾವಿಸಿ ಕಾರ್ಯಾಚರಣೆಯನ್ನು ಮುಂದುವರಿಸಿದನು. 1769ರ ವೇಳೆಗೆ ಆತನ ಸೈನ್ಯ ಮದರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು. ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ ಚರ್ಚೆ ಮತ್ತು ಸಂಧಾನಗಳ ಮೂಲಕ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು. ಮೊದಲನೇ ಆಂಗ್ಲೋ–ಮೈಸೂರು ಯುದ್ಧ 1769ರಲ್ಲಿ ಸಹಿ ಹಾಕಲ್ಪಟ್ಟ 'ಮದ್ರಾಸ್ ಒಪ್ಪಂದ'ದೊಂದಿಗೆ ಕೊನೆಯಾಯಿತು.

**ಎರಡನೆಯ ಆಂಗ್ಲೋ–ಮೈಸೂರು ಯುದ್ಧ ( 1780– 1784 ) :** ಮದರಾಸು ಒಪ್ಪಂದ ದಕ್ಷಿಣ ಭಾರತದಲ್ಲಿ ತಾತ್ಕಾಲಿಕವಾಗಿ ರಾಜಕೀಯ ಬೆಳವಣಿಗೆಗಳನ್ನು ತಡೆಹಿಡಿದಿತ್ತು. ಆದರೆ ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಲು ಯತ್ನಿಸಿದರು. ಮರಾಠರು ಮಾಧವರಾಯನ ನೇತೃತ್ವದಲ್ಲಿ ಸೈನ್ಯವನ್ನು ಮುನ್ನಡೆಸಿ ಶ್ರೀರಂಗಪಟ್ಟಣದ ಕಡೆ ನುಗ್ಗಿದಾಗ ಹೈದರ್ ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದನು. ಆದರೆ ಬ್ರಿಟಿಷರು ಇದನ್ನು ತಿರಸ್ಕರಿಸಿ ಮದರಾಸು ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಂಡರು. ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು. ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು.

1780ರಲ್ಲಿ ಎರಡನೆಯ ಮೈಸೂರು ಯುದ್ಧ ಪ್ರಾರಂಭವಾಯಿತು. ಯುದ್ಧದ ಪ್ರಾರಂಭದಲ್ಲಿ ಹೈದರ್ ಮುನ್ನಡೆ ಸಾಧಿಸಿದನು. ಕರ್ನಾಟಕ ಪ್ರಾಂತ್ಯದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ಕಾಂಚೀಪುರಂ ವಶವಾಯಿತು. ಕೋರಮಂಡಲ ತೀರದವರೆವಿಗೂ ತನ್ನ ಸೈನ್ಯವನ್ನು ಮುನ್ನುಗ್ಗಿಸಿದನು. ಇದು ಮದರಾಸಿನ ಬ್ರಿಟಿಷ್ ಸೈನ್ಯಾಧಿಕಾರಿಗಳಲ್ಲಿ ನಡುಕವನ್ನು ತಂದಿತು. ಹೈದರ್ ಆರ್ಕಾಟಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಸರ್ ಐರ್‌ಕೂಟ್‌ನ ನೇತೃತ್ವದಲ್ಲಿ ಬ್ರಿಟಿಷರ ಸೈನ್ಯ ಸಜ್ಜುಗೊಂಡಿತು. ಹೈದರ್ ಈ ಅವಧಿಯಲ್ಲಿ ವೆಲ್ಲೂರು ಮತ್ತು ವಾಂಡಿವಾಶ್‌ಗಳನ್ನು ಮುತ್ತುವುದಾಗಿ ಬೆದರಿಸಿದನು. ಹೈದರನ ಸೈನ್ಯವನ್ನು ಸರ್ ಐರ್‌ಕೂಟ್ ಪಾಂಡಿಚೇರಿಯವರೆವಿಗೂ ಹಿಂಬಾಲಿಸಿದನು. ಫ್ರೆಂಚರು ಹೈದರನಿಗೆ ಬ್ರಿಟಿಷರ ವಿರುದ್ಧ ಸಹಕರಿಸಲು ನಿರಾಕರಿಸಿದರು. ಹೈದರ್, ಇದರಿಂದಾಗಿ ಯುದ್ಧಗತಿಯನ್ನು ಬದಲಿಸಿದನು. ಹೈದರ್ ಬ್ರಿಟಿಷರ ಹತೋಟಿಯಲ್ಲಿನ ಪ್ರದೇಶಗಳಿಗೆ ಮುತ್ತಿಗೆ ಹಾಕಿ ಕೊಳ್ಳೆಹೊಡೆದು ಅಪಾರ ಸಂಪತ್ತು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದನು.

1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು ಮತ್ತು ಬ್ರಿಟಿಷರಲ್ಲಿ ಸ್ಥೈರ್ಯವನ್ನು ಹೆಚ್ಚಿಸಿತು. ತರುವಾಯ ಪೊಲೆಲೂರ್ ಮತ್ತು ಸೋಲಿಂಗೂರ್‌ಗಳ ಕದನದಲ್ಲಿಯೂ ಆರ್ಥಿಕ ಹಾನಿ ಅನುಭವಿಸಿದನು. ಈ ವೇಳೆಗೆ ಬ್ರಿಟಿಷರು ಸಾಲ್ಬಾಯ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಹೈದರನ ಒಕ್ಕೂಟದಿಂದ ಮರಾಠರು ಹಾಗೂ ನಿಜಾಮನನ್ನು ಸೆಳೆಯುವಲ್ಲಿ ಸಫಲರಾದರು. ಯುದ್ಧದ ಮಧ್ಯದಲ್ಲಿ ಹೈದರಾಲಿ 1782ರಲ್ಲಿ ಅನಾರೋಗ್ಯದಿಂದ ಮೃತನಾದನು. ಆತನ ಮಗ ಟಿಪ್ಪು ಯುದ್ಧವನ್ನು ಮುನ್ನಡೆಸಿದನು.

ಹೈದರನ ಮರಣ ಸಂದರ್ಭದಲ್ಲಿ ಮಲಬಾರ್ ಪ್ರಾಂತ್ಯದಲ್ಲಿ ನಡೆದ ಯುದ್ಧದಲ್ಲಿ ಟಿಪ್ಪು ತೊಡಗಿದ್ದನು. ಟಿಪ್ಪುವಿನ ಅನುಪಸ್ಥಿತಿಯ ಲಾಭ ಪಡೆದ ಬ್ರಿಟಿಷರು ಬಿದನೂರು ಮತ್ತು ಮಂಗಳೂರನ್ನು ವಶಪಡಿಸಿಕೊಳ್ಳಲು ಹವಣಿಸಿದರು. ತಿರುವಾಂಕೂರು, ಕಲ್ಲಿಕೋಟೆ ಮತ್ತು ಮಲಬಾರಿನ ಅನೇಕ ರಾಜರುಗಳನ್ನು ಟಿಪ್ಪುವಿನ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳನ್ನು ಅವರು ನಡೆಸಿದರು. ಹೀಗಾಗಿ ಟಿಪ್ಪು ಮಂಗಳೂರು ಮತ್ತು ಕರಾವಳಿ ತೀರಪ್ರದೇಶದ ಮೇಲೆ ಹತೋಟಿ ಸಾಧಿಸುವುದು ಸೂಕ್ತವೆಂದು ಯೋಚಿಸಿ ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು. ಕೊನೆಗೆ 1784ರ 'ಮಂಗಳೂರು ಒಪ್ಪಂದ'ದ ಮೂಲಕ ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು.

© KTBS Not to be published

## ಟಿಪ್ಪು ಸುಲ್ತಾನ


ಟಿಪ್ಪು ಸುಲ್ತಾನ

ಬ್ರಿಟಿಷರನ್ನು ತನ್ನ ರಾಜ್ಯ ವಿಸ್ತರಣೆಯ ನೀತಿಗೆ ಅಡ್ಡಪಡಿಸುತ್ತಿರುವ ಶತ್ರುಗಳು ಎಂದು ಭಾವಿಸಿ ಅವರನ್ನು ಓಡಿಸುವ ಗಂಭೀರ ಪ್ರಯತ್ನಗಳನ್ನು ಮಾಡಿದನು. ತಮ್ಮ ಕುಟೀಲ ನೀತಿಯಿಂದ ಭಾರತೀಯ ರಾಜ್ಯಗಳನ್ನು ಕಬಳಿಸುತ್ತಿದ್ದ ಬ್ರಿಟಿಷರನ್ನು ಪರಮ ವೈರಿಗಳು ಎಂದು ತಿಳಿದ ಅವನು ಅವರನ್ನು ಭಾರತದಿಂದ ಓಡಿಸುವುದು ತನ್ನ ಆದ್ಯ ಕರ್ತವ್ಯವೆಂದು ತಿಳಿದಿದ್ದನು. ತನ್ನ 17 ವರ್ಷಗಳ ಆಳ್ವಿಕೆಯಲ್ಲಿ ನಿರಂತರವಾಗಿ ಬ್ರಿಟಿಷರೊಂದಿಗೆ ಹೋರಾಡಿದನು. ಅವನು ಬ್ರಿಟಿಷರ ಸಾಮರ್ಥ್ಯ, ತಂತ್ರ, ಕುತಂತ್ರ ಮತ್ತು ಚಾಣಾಕ್ಷ ನೀತಿಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದನು. ಬ್ರಿಟಿಷರಿಗೆ ವ್ಯಾಪಾರದಲ್ಲಿ ನಷ್ಟವಾದಲ್ಲಿ ಅದು ಅವರ ರಾಜಕೀಯ ಸ್ವಾಮ್ಯವನ್ನು ಕುಂದಿಸುತ್ತದೆ ಎಂದೂ ಅರಿತಿದ್ದ ಅವನು ಬ್ರಿಟಿಷರನ್ನು ವಿರೋಧಿಸುತ್ತಿದ್ದವರನ್ನು ಸಂಘಟಿಸುವ ಮತ್ತು ಅವರ ನೆರವನ್ನು ಅಪೇಕ್ಷಿಸಲು ಪ್ರಯತ್ನಿಸಿದನು. ಅವರಿಗೆ ವ್ಯಾಪಾರದಲ್ಲಿ ಲಾಭವಾಗದಂತೆ ನೋಡಿಕೊಳ್ಳುವ ಮೂಲಕ ವ್ಯಾಪಾರದ ಮೇಲೆ ಅವರು ಸಾಧಿಸಿದ್ದ ಏಕಸ್ವಾಮ್ಯವನ್ನು ಮುರಿಯುವ ಪ್ರಯತ್ನಗಳನ್ನು ನಡೆಸಿದನು. ಇವು ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ಮತ್ತಷ್ಟು ದ್ವೇಷ ಭಾವನೆಗಳನ್ನು ಮೂಡಿಸಿದವು.

© KTBS
Not to be published

**ನಿಮಗಿದು ತಿಳಿದಿರಲಿ :**

*18ನೇ ಶತಮಾನದಲ್ಲಿ ಬ್ರಿಟಿಷ್ ಆಳ್ವಿಕೆಯ ವಿಸ್ತರಣೆಯನ್ನು ತಡೆಯಲು ಮಾಡಿದ ಪ್ರಯತ್ನಗಳಿಂದ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ವಿಭಿನ್ನವಾಗಿ ಕಾಣುತ್ತಾರೆ. ಇವರಿಗೆ ಐರೋಪ್ಯರನ್ನು ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳಿಂದ ಮಣಿಸಲಾಗುತ್ತದೆಂಬ ಅರಿವಿತ್ತು. ಫ್ರೆಂಚರ ಸಹಾಯದಿಂದ ಹೈದರಾಲಿ ಸೈನ್ಯವನ್ನು ಆಧುನೀಕರಿಸಲು ಯತ್ನಿಸಿದ್ದ. ಐರೋಪ್ಯ ಸೈನ್ಯದಂತೆ ಶಿಸ್ತಾಗಿ ಕವಾಯತು ಮಾಡುವ ಮತ್ತು ಬಂದೂಕನ್ನು ಬಳಸುವ ಪಡೆಗಳು ಮೈಸೂರಿನ ಸೈನ್ಯದಲ್ಲಿದ್ದವು. ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಭಾರತದಲ್ಲಿ ಮೊದಲಬಾರಿಗೆ ಯುದ್ಧದಲ್ಲಿ ರಾಕೆಟ್‌ನ್ನು ಬಳಸಿದರು. ಸೈನ್ಯದ ಆಧುನೀಕರಣದ ಜೊತೆಗೆ ತುಂಬಿದ ರಾಜ್ಯದ ಬೊಕ್ಕಸ ಕೂಡಾ ಬ್ರಿಟಿಷರ ಆಕ್ರಮಣದ ತಡೆಗೆ ಅಗತ್ಯವೆನ್ನುವುದನ್ನು ಹೈದರಾಲಿ ಮತ್ತು ಟಿಪ್ಪು ಮನಗಂಡಿದ್ದರು. ಹೈದರಾಲಿಯ ಕಣ್ಣೆದುರಿಗೆ ಕರ್ನಾಟಕ ಪ್ರದೇಶದಲ್ಲಿದ್ದ ನವಾಬರು ದಿವಾಳಿಗಳಾಗಿದ್ದರು. ಅದುದರಿಂದ ಹೈದರಾಲಿ ಮತ್ತು ಟಿಪ್ಪು ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಅನೇಕ ನೀತಿ–ನಿಯಮಗಳನ್ನು ರೂಪಿಸಿದ್ದರು. ಶ್ರೀಗಂಧ ಮತ್ತು ತಂಬಾಕು ಮತ್ತಿತರ ಪದಾರ್ಥಗಳನ್ನು ರಾಜ್ಯದ ಏಕಸ್ವಾಮ್ಯದಡಿಗೆ ತಂದಿದ್ದರು. ಫ್ರೆಂಚ್ ತಂತ್ರಜ್ಞರನ್ನು ಕರೆಯಿಸಿ ಮೈಸೂರಿನ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸುವ ಯೋಜನೆಯಲ್ಲಿದ್ದರು.*

**ಮೂರನೆಯ ಆಂಗ್ಲೋ–ಮೈಸೂರು ಯುದ್ಧ :** ಈ ಯುದ್ಧಕ್ಕೆ ನೇರ ಕಾರಣ ಯಾವುದೆಂದರೆ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ. ಆ ರಾಜ್ಯದ ರಾಜ ನೆರೆಯ ಕೊಚ್ಚಿ ಸಂಸ್ಥಾನದಲ್ಲಿ ಬ್ರಿಟಿಷರ ಬೆಂಬಲದಿಂದ ಕೋಟೆಯನ್ನು ನಿರ್ಮಿಸಿದನು ಮತ್ತು ಆತನು ಡಚ್ಚರಿಂದ ಆಯಕೋಟಾ ಮತ್ತು ಕಾಂಗನೂರು ಕೋಟೆಗಳನ್ನು ಪಡೆದುಕೊಂಡಿದ್ದನು. ಇದು ಮಂಗಳೂರು ಒಪ್ಪಂದದ ಷರತ್ತುಗಳ ಉಲ್ಲಂಘನೆಯಾಗಿತ್ತು.

ಬ್ರಿಟಿಷರು ಜನರಲ್ ಮೆಡೋಸನ ನಾಯಕತ್ವದಲ್ಲಿ ಕಾರವಾರ, ಕೊಯಮತ್ತೂರು, ದಿಂಡಿಗಲ್ ಮೊದಲಾದವುಗಳನ್ನು ವಶಪಡಿಸಿಕೊಂಡರು. ಇದಕ್ಕೆ ವಿರುದ್ಧವಾಗಿ ಟಿಪ್ಪು ಬಾರಾಮಹಲ್ ಪ್ರಾಂತ್ಯವನ್ನು

ಮುತ್ತಿ ಸತ್ಯಮಂಗಲವನ್ನು ವಶಪಡಿಸಿಕೊಂಡನು. ತಿರುಚನಾಪಳ್ಳಿಯನ್ನು ಮುತ್ತಿ ಅದನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಆತನು ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದನಾದರೂ ಅದು ಫಲ ನೀಡಲಿಲ್ಲ. ಈ ಸಮಯದಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು.

ಬ್ರಿಟಿಷ್ ಸೈನ್ಯ ಕಾರ್ನ್‌ವಾಲೀಸನ ನೇತೃತ್ವದಲ್ಲಿ ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡು ಬೆಂಗಳೂರಿನತ್ತ ಮುನ್ನುಗ್ಗಿತು. ಬೆಂಗಳೂರನ್ನು ವಶಪಡಿಸಿಕೊಂಡು ಕೋಟೆಯನ್ನು ಹಾಳುಗೆಡವಿತು. ಬೆಂಗಳೂರನ್ನು ವಶಪಡಿಸಿಕೊಂಡ ಕಾರ್ನ್‌ವಾಲೀಸ್ ಟಿಪ್ಪುವಿನ ನಿರ್ನಾಮಕ್ಕಾಗಿ ನಿಜಾಮ ಮತ್ತು ಮರಾಠರ ನೆರವನ್ನು ಕೋರಿದನು. ನಿಜಾಮ ಮತ್ತು ಮರಾಠರ ಸಂಘಟಿತ ಸೈನ್ಯ ಬ್ರಿಟಿಷರೊಂದಿಗೆ ಸೇರುವುದರೊಂದಿಗೆ ಯುದ್ಧ ತಿರುವನ್ನು ಪಡೆದುಕೊಂಡಿತು. ಮರಾಠರು ಸವಣೂರು, ಗಜೇಂದ್ರಗಡ, ಲಕ್ಷ್ಮೇಶ್ವರ, ಹುಬ್ಬಳ್ಳಿ ಮೊದಲಾದವುಗಳನ್ನು ವಶಪಡಿಸಿಕೊಂಡರು.

1792ರಲ್ಲಿ ಸಂಘಟಿತ ಸೈನ್ಯ ಒಂದೊಂದಾಗಿ ಕೋಟೆಗಳನ್ನು ವಶಪಡಿಸಿಕೊಂಡು ಶ್ರೀರಂಗಪಟ್ಟಣದ ಕಡೆ ಸಾಗಿತು. ರಾತ್ರಿ ವೇಳೆಯಲ್ಲಿ ಕೋಟೆಯನ್ನು ಹಾಳುಗೆಡವಲಾಯಿತು. ಇದರಿಂದ ವಿಚಲಿತಗೊಂಡ ಟಿಪ್ಪು ಬ್ರಿಟಿಷರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ನಿರ್ಧರಿಸಿದನು. ಇದು ಆತನಿಗೆ ಅನಿವಾರ್ಯವೂ ಆಗಿತ್ತು. 1792ರಲ್ಲಿ ಅಸಮಾನ ಷರತ್ತುಗಳನ್ನು ಹೊಂದಿದ್ದ 'ಶ್ರೀರಂಗಪಟ್ಟಣ ಒಪ್ಪಂದ'ಕ್ಕೆ ಟಿಪ್ಪು ಸಹಿಹಾಕುವ ಮೂಲಕ ಯುದ್ಧಕ್ಕೆ ತೆರೆಯಾಯಿತು. ಈ ಒಪ್ಪಂದದನ್ವಯ ಮೂರನೆ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು.

ಟಿಪ್ಪುವನ್ನು ಮಣಿಸಲು ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಅಸಮಾನ ಷರತ್ತುಗಳು ಇರುವಂತೆ ನೋಡಿಕೊಂಡರು. ಆ ಷರತ್ತುಗಳು ಯಾವುವೆಂದರೆ; ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು, ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಭರ್ತಿಯಾಗಿ ಕೊಡುವುದು, ಯುದ್ಧನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು, ಮತ್ತು ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು. ಇದರನ್ವಯ ಶ್ರೀರಂಗಪಟ್ಟಣದಿಂದ ಬ್ರಿಟಿಷರ ನೇತೃತ್ವದಲ್ಲಿನ ಸಂಘಟಿತ ಸೈನ್ಯ ಹಿಂತೆಗೆಯಿತು.

© KTBS Not to be published


**ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧ :** ಟಿಪ್ಪು ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿನ ಸೋಲನ್ನು ವೈಯಕ್ತಿಕವಾಗಿ ಸ್ವೀಕರಿಸಿ ಅದನ್ನು ಒಂದು ಪ್ರಮುಖ ಸವಾಲೆಂದೇ ಪರಿಗಣಿಸಿದನು. ಒಪ್ಪಂದದನ್ವಯ ಬ್ರಿಟಿಷರ ನೇತೃತ್ವದಲ್ಲಿನ ಮಿತ್ರಕೂಟಕ್ಕೆ ನೀಡಬೇಕಾದ ಭೂಪ್ರದೇಶಗಳು ಮತ್ತು ಹಣವನ್ನು ಚಾಚೂ ತಪ್ಪದೆ ಸಲ್ಲಿಸಿ ಒತ್ತೆಯಾಳಾಗಿ ಕಳುಹಿಸಿಕೊಟ್ಟಿದ್ದ ತನ್ನ ಇಬ್ಬರು ಮಕ್ಕಳನ್ನು ಹಿಂದಕ್ಕೆ ಕರೆಯಿಸಿಕೊಂಡನು ಟಿಪ್ಪು ಬ್ರಿಟಿಷರ ಅಧೀನದಲ್ಲಿದ್ದ ಮಲೆಯಾಳಂ ಮಾತನಾಡುವ ಭೂಪ್ರದೇಶಗಳು ನ್ಯಾಯಯುತವಾಗಿ ತನಗೇ ಸೇರಬೇಕೆಂದು ವಾದಿಸಿದನು. ಆದರೆ ಬ್ರಿಟಿಷರು ಅದನ್ನು ಪುಷ್ಟೀಕರಿಸಲಿಲ್ಲ.

ಲಾರ್ಡ್ ವೆಲ್ಲೆಸ್ಲಿ 1798ರಲ್ಲಿ ಭಾರತದ ಗವರ್ನರ್ ಜನರಲ್‌ನಾಗಿ ನೇಮಕಗೊಂಡನು. ಟಿಪ್ಪುವಿನ ವಿರೋಧಿ ರಾಜಕೀಯ ಚಟುವಟಿಕೆಗಳು ಈತನ ಅವಧಿಯಲ್ಲಿ ಚುರುಕುಗೊಂಡವು. ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನಗಳು ಹಾಗೂ ತಮ್ಮ ಬದ್ಧ ವೈರಿಗಳಾದ ಫ್ರೆಂಚರೊಂದಿಗೆ ಟಿಪ್ಪು ಹೊಂದಿದ್ದ ಸಂಬಂಧಗಳು ವೆಲ್ಲೆಸ್ಲಿಯಲ್ಲಿ ಟಿಪ್ಪುವಿನ ವಿಚಾರದಲ್ಲಿ ಮತ್ತಷ್ಟು ದ್ವೇಷ ಭಾವನೆಗಳನ್ನು ಬೆಳೆಸಿದವು. ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಯನ್ನು ಕಳುಹಿಸಿದ್ದನು. ಇದು ಬ್ರಿಟಿಷರಿಗೆ ಅಸಮಾಧಾನವನ್ನು ತಂದಿತು. ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಮುಂದಕ್ಕೆ ತಮ್ಮ ಅಧಿಪತ್ಯಕ್ಕೆ ಮುಳುವಾಗಬಹುದೆಂಬ ಭಾವನೆಗಳು ಬ್ರಿಟಿಷರಲ್ಲಿ ಬೆಳೆಯಿತು.

ಹೊಸ ಷರತ್ತಗಳನ್ನು ಒಳಗೊಂಡಿರುವ ಒಂದು ಒಪ್ಪಂದವನ್ನು ಟಿಪ್ಪುವಿನ ಮೇಲೆ ಹೇರಲಾಯಿತು. ಆದರೆ ಟಿಪ್ಪು ಅಮಾನವೀಯ ಮತ್ತು ಅಸಮಾನ ಷರತ್ತುಗಳನ್ನು ಒಳಗೊಂಡಿದ್ದ ಇದನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ಇದು ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧವನ್ನು ಪ್ರಾರಂಭಿಸಿತು.

1799ರಲ್ಲಿ ಯುದ್ಧ ಆರಂಭವಾಯಿತು. ಅಭೇದ್ಯವಾದ ಕೋಟೆಯನ್ನು ಬ್ರಿಟಿಷರು ಭೇದಿಸಿದರು. ಎರಡೂ ಸೈನ್ಯಗಳು ವೀರಾವೇಶದಿಂದ ಕಾದಾಡಿದವು. ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ ಹೋರಾಡಿ 1799ರಲ್ಲಿ ಹತನಾದನು. ಆತನ ಮರಣ ಬ್ರಿಟಿಷರಿಗೆ ಇಡೀ ಭಾರತವೇ ತಮ್ಮ ಕೈವಶವಾದ ಸಂತೋಷವನ್ನು ತಂದಿತು. ನಂತರ ಬ್ರಿಟಿಷರು ಆತನ ಹತೋಟಿಯಲ್ಲಿದ್ದ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು. ಒಂದು ಸಣ್ಣ ಭೌಗೋಳಿಕ ಪ್ರದೇಶವು ಮೈಸೂರು ಒಡೆಯರ ರಾಜವಂಶದ ಪ್ರತಿನಿಧಿಗೆ ವರ್ಗಾಯಿಸಲ್ಪಟ್ಟಿತ್ತು. ಈ ಪ್ರದೇಶ ತರುವಾಯ ಮೈಸೂರು ಸಂಸ್ಥಾನವೆಂದು ಹೆಸರಾಯಿತು.

**ಟಿಪ್ಪು ನಂತರದ ಮೈಸೂರು**




## ದೋಂಡಿಯಾ ವಾಘ್ (1800)

ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ ಟಿಪ್ಪುವಿನ ನಂತರ ಅದರಲ್ಲಿಯೂ ಮುಖ್ಯವಾಗಿ 19ನೆಯ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಕಂಡುಬಂದ ಪ್ರತಿಭಟನೆಗಳು ಮತ್ತು ಬಂಡಾಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಇವುಗಳು ಸಶಸ್ತ್ರ ಬಂಡಾಯಗಳಾಗಿದ್ದವು. ಈ ಸಶಸ್ತ್ರ ಬಂಡಾಯಗಳಲ್ಲಿ ದೋಂಡಿಯಾ ವಾಘ್‌ನ ನಾಯಕತ್ವದಲ್ಲಿ ಕಂಡುಬಂದಿದ್ದ ಸಶಸ್ತ್ರ ದಂಗೆ ಪ್ರಮುಖವಾಗಿದೆ.

ದೋಂಡಿಯಾ ಚನ್ನಗಿರಿಯ ಮರಾಠ ಕುಟುಂಬದಲ್ಲಿ ಜನಿಸಿದನು. ಅವನ ಶೌರ್ಯ ಪರಾಕ್ರಮಗಳಿಂದ ಜನ ಅವನನ್ನು ವಾಘ್ ಎಂದು ಕರೆದರು. ಮರಾಠಿಯಲ್ಲಿ ವಾಘ್ ಎಂದರೆ ಹುಲಿ. ಕ್ರಿ.ಶ.1789ರ ಸುಮಾರಿಗೆ ಮೈಸೂರಿನ ಹೈದರಾಲಿಯ ಸೈನ್ಯದಲ್ಲಿ ಒಬ್ಬ ಅಶ್ವಾರೋಹಿ ಸೈನಿಕನಾಗಿ ಸೇರಿ ಕಾಲಾನಂತರ ಸೇನಾನಾಯಕನಾದನು. ಖಾಸಗಿಯಾಗಿ ಒಂದು ಸೈನ್ಯವನ್ನು ಸಜ್ಜುಗೊಳಿಸಿದ ಅವನು ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದನು. ಆತನೊಂದಿಗೆ ಮನಸ್ತಾಪದಿಂದಾಗಿ ಅವನು ಸೆರೆಮನೆ ಸೇರುವಂತಾಯಿತು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಶ್ರೀರಂಗಪಟ್ಟಣದ ಪತನಾನಂತರ ಬ್ರಿಟಿಷರು ಈತನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರು. ತರುವಾಯ ಇವನು ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು.

ಆತನ ಸೈನ್ಯ ದೊಡ್ಡದಾಗಿರಲಿಲ್ಲ. ಅವನು ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು.

ದೋಂಡಿಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಿತು. ದೋಂಡಿಯಾ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ದೋಂಡಿಯಾ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿದಾಗ ಅನಿವಾರ್ಯವಿಲ್ಲದೆ ದೋಂಡಿಯಾ ಮರಾಠರ ಪ್ರದೇಶಕ್ಕೆ ಓಡಿಹೋದನು. ಮರಾಠ ಸೈನ್ಯ ಅವನನ್ನು ಸೋಲಿಸಿ ಅವನ ಶಸ್ತ್ರಾಸ್ತ್ರಗಳು, ಒಂಟೆ ಮತ್ತು ಆನೆಗಳನ್ನು ವಶಪಡಿಸಿಕೊಂಡರೂ ಧೃತಿಗೆಡದ ದೋಂಡಿಯಾ ತನ್ನ ಹೋರಾಟವನ್ನು ಮುಂದುವರಿಸಿದನು.

ಅನೇಕ ಅತೃಪ್ತ ಪಾಳೇಯಗಾರರು ದೋಂಡಿಯಾನಿಗೆ ಪ್ರೋತ್ಸಾಹಿಸಿದರು. ಮಲಬಾರಿನ ಮಾಹೆಯಲ್ಲಿದ್ದ ಫ್ರೆಂಚರು ಆತನಿಗೆ ಸಹಾಯ ಹಸ್ತವನ್ನು ನೀಡಿದರು. ಹರಿಹರ, ಚಿತ್ರದುರ್ಗ, ಶಿಕಾರಿಪುರ, ಸವಣೂರು, ರಾಣೆಬೆನ್ನೂರು, ಕಿತ್ತೂರು ಮತ್ತು ಲೋಂಡಾ ಹೀಗೆ ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು. ಶಿರಹಟ್ಟಿಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ಬ್ರಿಟಿಷ್ ಸೈನ್ಯ ದೋಂಡಿಯಾನ ಸೈನ್ಯದ ಅನೇಕ ಸೈನಿಕರನ್ನು ಹತ ಮಾಡಿತು.

**ದೋಂಡಿಯಾ ವಾಘ್‌ನ ಅಂತ್ಯ :** ಲಾರ್ಡ್ ವೆಲ್ಲೆಸ್ಲಿ ಆತನಿಗೆ ಅಂತ್ಯವನ್ನು ಹಾಡಲು ನಿರ್ಧರಿಸಿದನು. ದೇಶಿಯ ಸಂಸ್ಥಾನಗಳ ರಾಜರ ಸಹಾಯವನ್ನು ಬ್ರಿಟಿಷರು ಕೋರಿದರು. ಶಿಕಾರಿಪುರದ ಕೋಟೆಯನ್ನು ಪುನಃ ಗೆದ್ದುಕೊಂಡ ದೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು. ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದ ವಿಶಾಲ ಭೂಪ್ರದೇಶದಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿದ್ದ ದೋಂಡಿಯಾನ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು. ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು. ರಾಯಚೂರಿನಿಂದ ಹೊರಟ ಅವನನ್ನು ಹಿಂಬಾಲಿಸಲಾಯಿತು. ನಿಜಾಮ ಮತ್ತು ಮರಾಠರ ಸೈನ್ಯದ ನಡುವೆ ಸಿಲುಕಿದ ದೋಂಡಿಯಾನ ನೇತೃತ್ವದಲ್ಲಿನ ಸೈನ್ಯದ ಮೇಲೆ ಬ್ರಿಟಿಷರು ಯಾಪಲಪೆರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋನ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು. ತಮ್ಮ ನಾಯಕನ ಹತ್ಯೆಯ ನಂತರ ಅಳಿದುಳಿದ ಸೈನಿಕರು ಚದುರಿದರು. ಬಂಡುಕೋರರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಬ್ರಿಟಿಷರು ವಶಪಡಿಸಿಕೊಂಡರು.

© KTBS Not to be published

## ಕಿತ್ತೂರಿನ ಬಂಡಾಯ – ವೀರರಾಣಿ ಚೆನ್ನಮ್ಮ (1824)



ಚೆನ್ನಮ್ಮ

ಬ್ರಿಟಿಷರು ತಮ್ಮ ಆಳ್ವಿಕೆಗೆ ವಿರುದ್ಧವಾಗಿದ್ದ ಹೈದರಾಲಿ, ಟಿಪ್ಪು ಮತ್ತು ಮರಾಠರ ಬಲಿಷ್ಠ ಪ್ರತಿರೋಧಕಗಳನ್ನು ಅಡಗಿಸಿದ ನಂತರ ತಮ್ಮ ಅಧಿಕಾರದ ಕ್ರೋಡೀಕರಣಕ್ಕಾಗಿ ಕೆಲವು ಕಾನೂನುಗಳನ್ನು ಜಾರಿಗೆ ತಂದರು. ಅವುಗಳಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬುದು ಒಂದು. ಈ ಕಾನೂನಿನ ವಿರುದ್ಧ ಸಂಘಟಿಸಲ್ಪಟ್ಟ ಸಶಸ್ತ್ರ ಬಂಡಾಯಗಳಲ್ಲಿ ಕಿತ್ತೂರಿನ ರಾಣಿ ಚೆನ್ನಮ್ಮನ ಹೋರಾಟ ಖ್ಯಾತಿಯನ್ನು ಗಳಿಸಿದೆ.

ಕಿತ್ತೂರು ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳ ನಡುವೆ ಇರುವ ಊರು ಕಿತ್ತೂರು ಸಂಸ್ಥಾನದ ಮಲ್ಲಸರ್ಜನ ಮರಣಾನಂತರ ಚೆನ್ನಮ್ಮ ಕಿತ್ತೂರಿನ ಆಡಳಿತ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ವಹಿಸಿತೊಡಗಿದಳು.

ಆತನ ಮರಣಾನಂತರ ಹಿರಿಯ ಮಗ ಶಿವಲಿಂಗರುದ್ರ ಸರ್ಜ ಕಿತ್ತೂರಿನ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದನು. ಆದರೆ ಆತನ ದೈಹಿಕ ಪರಿಸ್ಥಿತಿಗಳಿಂದಾಗಿ ಚೆನ್ನಮ್ಮ ನಿಜವಾದ ಆಡಳಿತಗಾರಳಾಗಿ ಜವಾಬ್ದಾರಿಯನ್ನು ನಿರ್ವಹಿಸುವಂತಾಯಿತು. ಶಿವಲಿಂಗರುದ್ರ ಸರ್ಜ ಮರಾಠರ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯವನ್ನು ನೀಡಿದ್ದನು. ಇದರಿಂದಾಗಿ ಬ್ರಿಟಿಷರು ಆ ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಆತನಿಗೆ ನೀಡಿದ್ದು ಪ್ರತಿಯಾಗಿ ವಾರ್ಷಿಕ ಕಾಣಿಕೆಯನ್ನು ಪಡೆದುಕೊಳ್ಳುವಂತಾಯಿತು. ಈ ಒಪ್ಪಂದ ಥಾಮಸ್ ಮನ್ರೋನ ಕಾಲದಲ್ಲಿ ಜಾರಿಗೊಳಿಸಲ್ಪಟ್ಟಿತು.

ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು. ಥ್ಯಾಕರೆ ಆಗ ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದನು. ಅವನು ಬಾಂಬೆಯ ಗವರ್ನರನಿಗೆ ದತ್ತಕದ ಬಗ್ಗೆ ವರದಿಯನ್ನು ಸಲ್ಲಿಸಿ ದತ್ತು ಮಕ್ಕಳಿಗೆ ಹಕ್ಕನ್ನು ನೀಡುವುದನ್ನು ನಿರಾಕರಿಸಿ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಚೆನ್ನಮ್ಮ ಥ್ಯಾಕರೆಯ ಈ ಪ್ರಯತ್ನಗಳನ್ನು ವಿಫಲಗೊಳಿಸಲು ಯುದ್ಧವನ್ನು ಅನಿವಾರ್ಯವೆಂದು ಬಗೆದಳು. ಬ್ರಿಟಿಷರೂ ತಮ್ಮ ಸೈನ್ಯವನ್ನು ಸಿದ್ಧಮಾಡಲು ಆರಂಭಿಸಿದರು. ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿಮಾಡಿತು. ಈ ದಾಳಿಯಲ್ಲಿ ಥ್ಯಾಕರೆ ಗುಂಡೇಟಿಗೆ ಬಲಿಯಾದ. ಅನೇಕ ಬ್ರಿಟಿಷ್ ಸೈನಿಕರನ್ನು ಸೆರೆಮನೆಗೆ ದೂಡಲಾಯಿತು.

ಕಿತ್ತೂರನ್ನು ವಶಪಡಿಸಿಕೊಳ್ಳಲೇಬೇಕೆಂಬ ದೃಢ ನಿರ್ಧಾರದಿಂದ ಬ್ರಿಟಿಷರು ಮತ್ತಷ್ಟು ಸನ್ನದ್ಧರಾದರು. ಲೆಫ್ಟಿನೆಂಟ್ ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು. ಸೈನಿಕರು ವೀರಾವೇಶದಿಂದ ಹೋರಾಡಿದರು. ಬ್ರಿಟಿಷರ ಸೈನ್ಯದಿಂದ ತಪ್ಪಿಸಿಕೊಂಡ ಚೆನ್ನಮ್ಮನನ್ನು ಸೆರೆಹಿಡಿಯಲಾಯಿತು. ಕಿತ್ತೂರು ಬ್ರಿಟಿಷರ ವಶವಾಯಿತು. ಚೆನ್ನಮ್ಮ ಮತ್ತು ಮೊದಲಾದವರನ್ನು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು. ಚೆನ್ನಮ್ಮ ಮರಣ ಹೊಂದಿದರು. ಇಂದಿಗೂ ಕೂಡಾ ನಾಡಿಗೆ ಅವಳು ಆದರ್ಶಪ್ರಾಯಳಾಗಿದ್ದಾಳೆ.

### ಸಂಗೊಳ್ಳಿ ರಾಯಣ್ಣ (1829–30)

ಕಿತ್ತೂರಿನ ಚೆನ್ನಮ್ಮನೊಂದಿಗೆ ಸಂಗೊಳ್ಳಿಯ ರಾಯಣ್ಣನ ಹೆಸರು ಅಜರಾಮರ ಮತ್ತು ಆದರ್ಶಪ್ರಾಯವೆನಿಸಿದೆ. ರಾಯಣ್ಣ ವೀರಯೋಧ. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು. ಈತನ ಮನೆತನದವರು ಪರಂಪರೆಯಿಂದಲೂ ಸೈನಿಕರಾಗಿ ಸೇವೆಯನ್ನು ಸಲ್ಲಿಸಿದ್ದರು. ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು. ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು.


ಸಂಗೊಳ್ಳಿ ರಾಯಣ್ಣ

ಈತನ ಬಗ್ಗೆ ಮೌಖಿಕ ಆಕರಗಳು ಲಭ್ಯವಿವೆ. ಅವನು ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು. ಭೌಗೋಳಿಕವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ತನ್ನ ಮುಂದಿನ ಯೋಜನೆಗಳನ್ನು ರೂಪಿಸಿಕೊಂಡನು. ತಕ್ಷಣದ ಅವನ ಉದ್ದೇಶಗಳು ಯಾವುದೆಂದರೆ ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದು. ಮೊದಲು ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು. ಆತನ ಸೈನ್ಯ ಐನೂರಷ್ಟಿತ್ತು. ಬ್ರಿಟಿಷರ ಸೈನ್ಯಕ್ಕೆ ಸಹಾಯವನ್ನು ನೀಡುತ್ತಿದ್ದ ಹಳ್ಳಿಗರು ಅವನ ಆಕ್ರೋಶಕ್ಕೆ ತುತ್ತಾದರು. ಬ್ರಿಟಿಷರು ರಾಯಣ್ಣನು ರಾಣಿ ಚೆನ್ನಮ್ಮನ ಕುಮ್ಮಕ್ಕಿನಿಂದ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾನೆ ಎಂದು ಭಾವಿಸಿದ್ದರು. ಹೀಗಾಗಿ ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಿದರು.

© KTBS Not to be published

ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು ಒಂದು ಸಂಚನ್ನು ರೂಪಿಸಿದರು. ಕಿತ್ತೂರಿನ ಚೆನ್ನಮ್ಮಳನ್ನು ವಿರೋಧಿಸುತ್ತಿದ್ದ ದೇಸಾಯಿಗಳನ್ನು ಪ್ರಚೋದಿಸಿದರು. ಅಮಲ್ದಾರನಾಗಿದ್ದ ಕೃಷ್ಣರಾಯ ಎಂಬುವವನು ಈ ಸಂಚಿಗೆ ಕೈಜೋಡಿಸಿದನು. ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷ್ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು. ಆತನ ಬಂಧನಾನಂತರ ಆತನ ಸೈನಿಕರು ಶರಣಾಗತರಾದರು. ಮುಖ್ಯ ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು. ಆತನ ಅನೇಕ ಅನುಯಾಯಿಗಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು. ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ದೇಶಪ್ರೇಮವನ್ನು ಆ ಪ್ರದೇಶದ ಲಾವಣಿಗಳು ಇಂದಿಗೂ ಜೀವಂತವಾಗಿಸಿವೆ.

### ಅಮರ ಸುಳ್ಯ ಬಂಡಾಯ

ಇದು ಮೂಲತಃ ರೈತ ಬಂಡಾಯ ಇದರ ಹಿನ್ನೆಲೆಯನ್ನು 1835–37ರ ಅವಧಿಯಲ್ಲಿ ಕರಾವಳಿ ಮತ್ತು ಕೊಡಗು ಪ್ರಾಂತ್ಯದಲ್ಲಿ ಕಂಡುಬಂದಿದ್ದ ದಂಗೆಗಳಲ್ಲಿ ಗುರುತಿಸಬಹುದಾಗಿದೆ. ಕೊಡಗಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಹಾಲೇರಿ ರಾಜವಂಶದ ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಅವನನ್ನು ಬೆಂಗಳೂರಿನ ಮೂಲಕ ವೆಲ್ಲೂರಿಗೆ ತರುವಾಯ ಕಾಶಿಗೆ ಸಾಗಿಸಿದರು. ಆತನ ಪದಚ್ಯುತಿ ಕೊಡಗಿನಲ್ಲಿ ರಾಜಕೀಯ ಅಸಮಾಧಾನವನ್ನು ಸೃಷ್ಟಿಸಿತು. ಈ ಜಿಲ್ಲೆಯಲ್ಲಿ ಕೊಡಗಿನಲ್ಲಿ ಸ್ವಾಮಿ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು. ಇವರು ಮೂವರು ತಾವು ಕೊಡಗಿನ ಪದಚ್ಯುತ ರಾಜನ ವಂಶದವರೆಂದು ಹೇಳಿಕೊಂಡರು. ಸ್ವಾಮಿ ಅಪರಾಂಪರ ಬಂಡಾಯದ ಮುಖಂಡನಾದನು. 1835ರಲ್ಲಿ ಆತನನ್ನು ಬ್ರಿಟಿಷರು ಸೆರೆಹಿಡಿದು ಬೆಂಗಳೂರಿಗೆ ರವಾನಿಸಿದರು. ಕಲ್ಯಾಣಸ್ವಾಮಿ 1837ರಲ್ಲಿ ಬಂಧಿಸಲ್ಪಟ್ಟನು. ಆತನನ್ನು ಮೈಸೂರಿನ ಸೆರೆಮನೆಯಲ್ಲಿ ಇಡಲಾಯಿತು.

**ಪುಟ್ಟಬಸಪ್ಪ:** ಕೆಳಕೊಡಗಿನ ಜನರು ಕಲ್ಯಾಣ ಸ್ವಾಮಿಯ ನಿಧನಾನಂತರ ಬಂಡಾಯವನ್ನು ಮುಂದುವರೆಸಿದರು. ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು. ಸುಳ್ಯದ ರೈತನೋರ್ವ ಕೊಡಗಿನ ಶನಿವಾರಸಂತೆಯ ಪುಟ್ಟಬಸಪ್ಪ ಎಂಬ ರೈತನನ್ನು ಕಲ್ಯಾಣಸ್ವಾಮಿಯನ್ನಾಗಿ ಆರಿಸಿದ್ದು ಇವನು ತನ್ನನ್ನು "ಸ್ವಾಮಿ ಅಪರಾಂಪರ" ಎಂದು ಕರೆದುಕೊಂಡಿದ್ದು ಸ್ವಾರಸ್ಯಕರ ಮಾತ್ರವಲ್ಲ ಬಂಡಾಯದ ಚಲನಶೀಲತೆಯನ್ನು ಪುಷ್ಟೀಕರಿಸುತ್ತದೆ. ಶೀಘ್ರದಲ್ಲಿಯೇ ಇವನು ಬಂಡಾಯದ ನಾಯಕತ್ವವನ್ನು ವಹಿಸಿಕೊಂಡನು.

ಘಟ್ಟ ಪ್ರದೇಶದಲ್ಲಿ ಈ ಬಂಡಾಯ ಪ್ರಾರಂಭವಾಯಿತು. ಪುಟ್ಟಬಸಪ್ಪ ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು. ಬಂಡುಕೋರರ ಸರ್ಕಾರ ಸ್ಥಾಪನೆಯ ನಂತರ ತಂಬಾಕು ಮತ್ತು ಉಪ್ಪಿನ ಮೇಲಿನ ಸುಂಕವನ್ನು ರದ್ದು ಮಾಡಲಾಗುವುದು ಎಂದೂ ಘೋಷಿಸಲಾಯಿತು. ಶ್ರೀಮಂತ ರೈತರು, ಪಾರುಪತ್ತೆಗಾರರು, ಭೂಹಿಡುವಳಿದಾರರಿಗೆ ಆಶ್ವಾಸನೆಗಳನ್ನು ನೀಡಲಾಯಿತು. ಬೆಳ್ಳಾರೆಯಲ್ಲಿದ್ದ ಸರ್ಕಾರಿ ಕಛೇರಿಯನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಗಿದೆ. ಸುಳ್ಯ ಮತ್ತು ಆಸುಪಾಸಿನಲ್ಲಿ ಸಾಮಾನ್ಯ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನೋರ್ವನ ಹತ್ಯೆ ಪುಟ್ಟಬಸಪ್ಪನ ಜನಪ್ರಿಯತೆಯನ್ನು ಹೆಚ್ಚಿಸಿತ್ತು. ಇದರಿಂದಾಗಿ ಬಂಡಾಯ ವ್ಯಾಪಕ ಪ್ರಚಾರ ಮತ್ತು ಬೆಂಬಲವನ್ನು ಪಡೆದುಕೊಂಡಿತು.

ಹೋರಾಟಗಾರರು ಪುತ್ತೂರಿನಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿದ್ದರು. ಇವರ ಉದ್ದೇಶ ಮಂಗಳೂರನ್ನು ವಶಪಡಿಸಿಕೊಳ್ಳುವುದಾದುದರಿಂದ ಬ್ರಿಟಿಷರು ಮಂಗಳೂರನ್ನು ರಕ್ಷಿಸುವ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪುತ್ತೂರಿನಿಂದ ಮಂಗಳೂರಿನ ಕಡೆಗೆ ತೆರಳಿದ ಅವರು ಪಾಣೆಮಂಗಳೂರು ಮತ್ತು ಬಂಟ್ವಾಳದಲ್ಲಿ ಕಾರ್ಯಾಚರಣೆಗಳನ್ನು ನಡೆಸಿದರು. ಬಂಟ್ವಾಳದ ಜೈಲು ಮತ್ತು ಖಜಾನೆ ಲೂಟಿಗೈಯ್ಯಲ್ಪಟ್ಟವು

© KTBS Not to be republished

ಇದನ್ನು ಹತ್ತಿಕ್ಕಲು ಬ್ರಿಟಿಷರು ಕಣ್ಣಾನೂರು, ತಲ್ಲಿಚೇರಿ ಮತ್ತು ಬಾಂಬೆಯ ಸೈನ್ಯವನ್ನು ಅಪೇಕ್ಷಿಸಿದರು. ಇದನ್ನು ಅರಿತ ಪುಟ್ಟಬಸಪ್ಪ ಮತ್ತು ಆತನ ಸಂಗಡಿಗರು ಸುಳ್ಯಕ್ಕೆ ಪಲಾಯನ ಮಾಡಿದರು. ಬ್ರಿಟಷ್ ಸೈನ್ಯ ಕೊಡಗಿನಲ್ಲಿ ಸ್ಥಳೀಯರ ಸಹಕಾರದಿಂದ ಆತನನ್ನು ಮತ್ತು ಆತನ ಸಹಚರರನ್ನು ಸೆರೆಹಿಡಿಯಿತು. ಸೆರೆಸಿಕ್ಕಿದ ಪುಟ್ಟಬಸಪ್ಪ, ಲಕ್ಷ್ಮಪ್ಪ, ಬಂಗರಸ, ಕೆದಂಬಾಡಿ ರಾಮಯ್ಯಗೌಡರು ಮತ್ತು ಗುಡ್ಡೆಮನೆ ಅಪ್ಪಯ್ಯ ಇವರುಗಳನ್ನು ಗಲ್ಲಿಗೇರಿಸಲಾಯಿತು. ದಂಗೆ ವಿಫಲವಾದರೂ, ಸಮಕಾಲೀನವಾಗಿ ಪ್ರಾಮುಖ್ಯತೆ ಹೊಂದಿತ್ತು ಮತ್ತು ಅದು ಬ್ರಿಟಿಷ್ ವಿರೋಧಿಯಾಗಿತ್ತು ಎಂದು ಹೇಳಬಹುದಾಗಿದೆ.

## ಸುರಪುರ ಮತ್ತು ಕೊಪ್ಪಳ ಬಂಡಾಯ

### ಸುರಪುರ

ಸುರಪುರ ಈಗಿನ ಯಾದಗಿರಿ ಜಿಲ್ಲಾ ಕೇಂದ್ರದಿಂದ ಸುಮಾರು 50 ಕಿ.ಮೀ. ದೂರದಲ್ಲಿದೆ. ಮೊಘಲರ ಚಕ್ರವರ್ತಿ ಔರಂಗಜೇಬನ ಕಾಲದಿಂದಲೂ ಇದು ಪ್ರಾಮುಖ್ಯತೆಯನ್ನು ಪಡೆದಿತ್ತು. ನಿಜಾಮ ಮತ್ತು ಮರಾಠರ ಪೇಶ್ವೆಗಳ ಕಾಲದಲ್ಲಿ ಇದು ಒಂದು ಸಾಮಂತ ರಾಜ್ಯವಾಗಿ ಪರಿಣಮಿಸಿತು. ಕಾಲಾನಂತರ ಭೌಗೋಳಿಕ ಪ್ರದೇಶಗಳ ಮೇಲಿನ ಹತೋಟಿಯು ಕುಸಿದು ಕೇವಲ ಸೀಮಿತ ಭೌಗೋಳಿಕ ಪ್ರದೇಶದ ಮೇಲೆ ತನ್ನ ರಾಜಕೀಯ ಸ್ವಾಮ್ಯವನ್ನು ಇದು ಪಡೆದುಕೊಂಡಿತು. ವೆಂಕಟಪ್ಪ ನಾಯಕನ ಕಾಲದಲ್ಲಿ ಸುರಪುರ ಬ್ರಿಟಿಷ್ ವಿರೋಧಿ ಬಂಡಾಯದ ಕಿಚ್ಚನ್ನು ಗಳಿಸಿಕೊಂಡಿತು.

**ವೆಂಕಟಪ್ಪ ನಾಯಕ:** ತನ್ನ ತಂದೆ ಕೃಷ್ಣಪ್ಪನಾಯಕನ ಮರಣಾನಂತರ ಈತನು ಪಟ್ಟಕ್ಕೆ ಬಂದನು. 1834ರಲ್ಲಿ ಜನಿಸಿದ ಇವನು ತನ್ನ ಅಪ್ರಾಪ್ತ ವಯಸ್ಸಿಗೆ ಪಟ್ಟಕ್ಕೆ ಬಂದನು. ಆದರೆ ಕೃಷ್ಣಪ್ಪನಾಯಕನ ಸೋದರನಾಗಿದ್ದ ಪೆದ್ದನಾಯಕ ಎಂಬುವವನು ತಗಾದೆ ಮಾಡಲಾಗಿ ಸುರಪುರದ ಆಂತರಿಕ ರಾಜಕೀಯ ಚಟುವಟಿಕೆಗಳು ಕ್ಷೋಭೆಗೊಂಡವು. ಬ್ರಿಟಿಷರು ಇದರ ಸಂಬಂಧ ಆಸಕ್ತಿ ವಹಿಸಿದರು. 1842ರಲ್ಲಿ ಬ್ರಿಟಿಷರು ಮೆಡೋಸ್ ಟೇಲರ್ ಎಂಬುವನನ್ನು ಪೊಲಿಟಿಕಲ್ ಏಜೆಂಟನನ್ನಾಗಿ ನೇಮಿಸಿ ಸಂಸ್ಥಾನದ ಮೇಲೆ ತಮ್ಮ ಪರೋಕ್ಷ ಹತೋಟಿಯನ್ನು ಸ್ಥಾಪಿಸಿದರು.

ಟೇಲರ್ ಸುಧಾರಣಾವಾದಿಯೂ ಆಗಿದ್ದನು. ಸುರಪುರ ಸಂಸ್ಥಾನವನ್ನು ಅಭಿವೃದ್ಧಿಪಡಿಸಿದನು. ಪೆದ್ದನಾಯಕನನ್ನು ಸಂಸ್ಥಾನದ ದಿವಾನನನ್ನಾಗಿ ನೇಮಿಸಿದನು. ಸಂಸ್ಥಾನದಾದ್ಯಂತ ಭೂಸಮೀಕ್ಷೆ ಮಾಡಿಸಿದನು. ಸಂಸ್ಥಾನದ ಆದಾಯ ಹೆಚ್ಚಲು ಈತನು ಅನುಸರಿಸಿದ ನೀತಿಗಳೇ ಕಾರಣಗಳಾಗಿವೆ. ವೆಂಕಟಪ್ಪ ನಾಯಕನಿಗೆ ಸೂಕ್ತವಾದ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟನು. 1853ರಲ್ಲಿ ವೆಂಕಟಪ್ಪನಾಯಕ ಅಧಿಕಾರಕ್ಕೆ ಬಂದನು.

**ಸುರಪುರ ದಂಗೆ :** ಬ್ರಿಟಿಷ್ ಸರ್ಕಾರವು ಸುರುಪುರದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿತ್ತು. 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು. ರಾಜನ ಅವಧಿಯಲ್ಲಿನ ಆಡಳಿತದ ಬಗ್ಗೆ ವರದಿ ನೀಡಲು ಬ್ರಿಟಿಷ್ ಸರ್ಕಾರ ಕ್ಯಾಂಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಿತು. ಇವನು ರಾಜನು ಆಡಳಿತ ದುರ್ವ್ಯವಹಾರಗಳಲ್ಲಿ ನಿರತನಾಗಿದ್ದಾನೆ ಎಂಬ ಅಂಶವನ್ನು ವರದಿಯಲ್ಲಿ ಕಾಣಿಸಿ ಹೈದರಾಬಾದ್‌ನ ರೆಸಿಡೆಂಟ್‌ಗೆ ಸಲ್ಲಿಸಿದನು.

ವೆಂಕಟಪ್ಪ ನಾಯಕನನ್ನು ಸಾಮಾನ್ಯವಾಗಿ ಕರ್ನಾಟಕದ ಚರಿತ್ರೆಯಲ್ಲಿ 1857ರ ಕ್ರಾಂತಿಯ ನಾಯಕನೆಂದೂ ಇತಿಹಾಸಕಾರರು ವರ್ಣಿಸಿದ್ದಾರೆ. 1858ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು. ಯುದ್ಧ ಮುಂದುವರಿಯಿತು. ಬ್ರಿಟಿಷರು ಸುರಪುರ ಕೋಟೆಯನ್ನು ವಶಪಡಿಸಿಕೊಂಡರು. ವೆಂಕಟಪ್ಪ ನಾಯಕನ ಅಂತ್ಯಕ್ಕೆ ಸಂಭಂದಿಸಿದಂತೆ ಅನೇಕ ಗೊಂದಲಗಳಿವೆ.

© KTBS Not to be published

**ಕೊಪ್ಪಳದ ವೀರಪ್ಪ :** ಬ್ರಿಟಿಷ್ ವಿರೋಧಿ ಚಳವಳಿ, ಸಶಸ್ತ್ರ ಬಂಡಾಯ ಮತ್ತು ದಂಗೆಗಳಲ್ಲಿ ಕೊಪ್ಪಳದಲ್ಲಿನ ದಂಗೆಯೂ ಸಹ ಪ್ರಮುಖವಾಗಿದೆ. ಕೊಪ್ಪಳ ಮತ್ತು ಸನಿಹದ ಭೌಗೋಳಿಕ ಪ್ರದೇಶಗಳು ಹೈದರಾಬಾದ್ ನಿಜಾಮನ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿದ್ದರೂ ದೌರ್ಜನ್ಯ ಕಂಡುಬಂದಿತ್ತು. ಹೀಗಾಗಿ ಕೊಪ್ಪಳದ ಕೆಲವು ಜಮೀನ್ದಾರರು ಅನಿವಾರ್ಯವಾಗಿ ಬಂಡೆದ್ದರು. ಹೀಗೆ ತಿರುಗಿ ಬಿದ್ದವರಲ್ಲಿ ವೀರಪ್ಪನು ಪ್ರಮುಖನಾದವನು.

ವೀರಪ್ಪ ಜಮೀನ್ದಾರನಾಗಿದ್ದು ಬಂಡೆದ್ದು ಕೊಪ್ಪಳ ಮತ್ತು ಸನಿಹದ ಕೋಟೆಗಳನ್ನು ತನ್ನ ಸುಪರ್ದಿಗೆ ವಹಿಸಿಕೊಂಡನು. ವೀರಪ್ಪನ ಈ ಉದ್ದೇಶದ ಮರ್ಮ ಅರಿತ ಅನೇಕ ರೈತರು ಮತ್ತು ಜಮೀನ್ದಾರರು ಆತನೊಂದಿಗೆ ಕೈ ಜೋಡಿಸಿದರು. ನಿಜಾಮರೊಂದಿಗೆ ಸಂಪರ್ಕವನ್ನು ಸಾಧಿಸಿದ ಬ್ರಿಟಿಷರು ವೀರಪ್ಪನ ನೇತೃತ್ವದಲ್ಲಿನ ಬಂಡಾಯವನ್ನು ಸದೆಬಡಿಯಲು ಸೈನ್ಯವನ್ನು ನಿಯೋಜಿಸಿದರು. ಕಡಿಮೆ ಸೈನಿಕರ ಬೆಂಬಲವನ್ನು ಹೊಂದಿದ್ದ ವೀರಪ್ಪ ಸತತವಾಗಿ ಹೋರಾಟವನ್ನು ನಡೆಸಿ ಮರಣ ಹೊಂದಿದನು. ತರುವಾಯ ಬ್ರಿಟಿಷರು ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಂಡರು. ಈ ದಂಗೆಯ ಪ್ರಭಾವ ಅಲ್ಪಾವಧಿಯದ್ದಾಗಿದ್ದರೂ ಅದಕ್ಕೆ ನಾಯಕತ್ವವನ್ನು ನೀಡಿದ ವೀರಪ್ಪ ಒಬ್ಬ ಸಮರ್ಥ ಸಶಸ್ತ್ರ ಹೋರಾಟಗಾರನೇ ಆಗಿದ್ದಾನೆ.

### ಹಲಗಲಿಯ ಬೇಡರ ದಂಗೆ

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುಧೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು. ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು. ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು. ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು. ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.

© KTBS
Not to be published

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ________ ಮತ್ತು ________ರ ನಡುವೆ ನಡೆಯಿತು.
2. ಎರಡನೆಯ ಆಂಗ್ಲೋ ಮೈಸೂರು ಯುದ್ಧವು ________ ಒಪ್ಪಂದದೊಂದಿಗೆ ಕೊನೆಗೊಂಡಿತು.
3. ಕಿತ್ತೂರು ಚೆನ್ನಮ್ಮ ________ ಎಂಬ ಹುಡುಗನನ್ನು ದತ್ತು ಪಡೆದಿದ್ದಳು.
4. ಕಿತ್ತೂರು ಚೆನ್ನಮ್ಮನ ಸಂಸ್ಥಾನದ ರಾಯಣ್ಣನ ಊರು ________ .
5. ಸುರಪುರವು ಈಗಿನ ________ ಜಿಲ್ಲೆಯಲ್ಲಿದೆ.

6. ಈಗಿನ ಬಾಗಲಕೋಟೆ ಜಿಲ್ಲೆಯ __________ ಬೇಡರು ಬ್ರಿಟಿಷರ ವಿರುದ್ಧ ದಂಗೆಯೆದ್ದಿದ್ದರು.

7. ಅಮರ ಸುಳ್ಯ ಬಂಡಾಯವು ಮೂಲತಃ __________ ಬಂಡಾಯ

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಹೈದರಾಲಿಯು ಹೇಗೆ ಅಧಿಕಾರಕ್ಕೆ ಬಂದನು?
2. ಎರಡನೆಯ ಆಂಗ್ಲೋ–ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳಾವುವು?
3. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳು ಯಾವುವು?
4. ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ವಿಮರ್ಶಿಸಿ.
5. ದೋಂಡಿಯಾ ವಾಘ್ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.
6. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.
7. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ.
8. ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**III. ಚಟುವಟಿಕೆಗಳು :**

1. ಸಂಗೊಳ್ಳಿ ರಾಯಣ್ಣನ ಕುರಿತಾದ ಪುಸ್ತಕಗಳನ್ನು ಓದಿ.
2. ಕಿತ್ತೂರು ಚೆನ್ನಮ್ಮಳ ಕುರಿತಾದ ಹೆಚ್ಚಿನ ವಿಚಾರಗಳನ್ನು ಸಂಗ್ರಹಿಸಿರಿ.

**IV. ಯೋಜನೆ :**

1. ಶೈಕ್ಷಣಿಕ ಪ್ರವಾಸ ಕೈಗೊಂಡು ಸುರಪುರದಲ್ಲಿರುವ ಕೋಟೆಗೆ ಭೇಟಿ ನೀಡಿ ಅಲ್ಲಿರುವ ಬ್ರಿಟಿಷರ ಕಾಲದ ಅತಿಥಿ ಗೃಹದ ವಿಶೇಷತೆಯನ್ನು ಗಮನಿಸಿ.

* * * *

© KTBS Not to be published

U2B3V4

ಅಧ್ಯಾಯ – 5

# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಬ್ರಹ್ಮಸಮಾಜದ ಸ್ಥಾಪನೆ ಮತ್ತು ಸುಧಾರಣೆಗಳು.
- ಆರ್ಯಸಮಾಜದ ಸ್ಥಾಪನೆ ಮತ್ತು ಸುಧಾರಣೆಗಳು.
- ಸತ್ಯಶೋಧಕ ಸಮಾಜದ ಪ್ರತಿಪಾದನೆಗಳು.
- ರಾಮಕೃಷ್ಣ ಮಿಷನ್‌ನ ಪ್ರತಿಪಾದನೆಗಳು.
- ನಾರಾಯಣ ಗುರು ಧರ್ಮಪರಿಪಾಲನ ಯೋಗಂ.
- ಯುವ ಬಂಗಾಳಿ ಚಳವಳಿ.
- ಪ್ರಾರ್ಥನಾ ಸಮಾಜದ ಸುಧಾರಣೆಗಳು.
- ಆಲಿಘರ್ ಚಳುವಳಿ.
- ಥಿಯಾಸಫಿಕಲ್ ಸೊಸೈಟಿ.
- ಪೆರಿಯಾರ್.

ಮಾನವೀಯ ಮೌಲ್ಯಗಳಿಂದ ದೂರವಾಗಿ ಮೇಲು ಕೀಳೆಂಬ ಬೇಧಭಾವಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿ ಮೌಢ್ಯಮುಕ್ತ ಸಮಾಜದ ಕಡೆಗೆ ಕೊಂಡೊಯ್ಯುವ ಪ್ರಯತ್ನವೇ ಸಮಾಜ ಸುಧಾರಣೆ. ಪ್ರತಿ ವ್ಯಕ್ತಿಯ ಘನತೆಯ ಮಹೋನ್ನತಿಯನ್ನು ಸಾರುವುದೇ ಸಮಾಜ ಸುಧಾರಣೆಯ ಮೂಲಭೂತ ಅಂಶವಾಗಿದೆ.

19ನೇ ಶತಮಾನವನ್ನು ಭಾರತದ ಚರಿತ್ರೆಯಲ್ಲಿ ಸಮಾಜ ಸುಧಾರಣಾ ಕಾಲ ಮತ್ತು ಭಾರತೀಯ ನವೋದಯ ಕಾಲವೆಂದು ಸಾಮಾನ್ಯವಾಗಿ ಚಿತ್ರಿಸಲಾಗಿದೆ. ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಜಾರಿಗೊಳಿಸಿದ ನಂತರ ಭಾರತೀಯ ಇಂಗ್ಲಿಷ್ ವಿದ್ಯಾವಂತ ವರ್ಗವೊಂದು ಸೃಷ್ಟಿಯಾಯಿತು. ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಸಮಾನತೆ ಮುಂತಾದ ಯುರೋಪಿಯನ್ ಪರಿಕಲ್ಪನೆಗಳು ಭಾರತೀಯ ಸಮಾಜಕ್ಕೆ ಪರಿಚಯವಾಗಲಾರಂಭಿಸಿದವು. ಈ ಹಿನ್ನೆಲೆಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಅನೇಕ ಭಾರತೀಯರು ತಮ್ಮ ಸಮಾಜವನ್ನು ವಿಶ್ಲೇಷಿಸಲು ಆರಂಭಿಸಿದರು. ಇದರ ಜೊತೆಗೆ ಬ್ರಿಟಿಷರು ಸಮಾಜ ಸುಧಾರಣೆಯಲ್ಲಿ ಆಸಕ್ತಿಯನ್ನು ತಳೆದರು. ತಮ್ಮನ್ನು ನಾಗರಿಕರು ಎಂದು ಚಿತ್ರಿಸಿಕೊಳ್ಳುತ್ತ ತಾವು ಇಲ್ಲಿಗೆ ಬಂದಿರುವುದೇ ಭಾರತೀಯರನ್ನು ನಾಗರಿಕರನ್ನಾಗಿ ಮಾಡಲು ಎನ್ನುವ 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತವನ್ನು ಪ್ರಚುರಪಡಿಸಿದರು. ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಬ್ರಿಟಿಷರು ತಮ್ಮ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಯೋಜನೆಯನ್ನು ಹೊಂದಿದ್ದರು. ಅನೇಕ ಭಾರತೀಯರು ತಮ್ಮ ಪರಂಪರೆಯನ್ನು ಹೊಸ ದೃಷ್ಟಿಕೋನಗಳಲ್ಲಿ ನೋಡಲು ಆರಂಭಿಸಿದರು. ಭಾರತೀಯತೆ ಎಂಬ ಹೊಸ ಅಸ್ಮಿತೆಯು ಹುಟ್ಟಿಕೊಂಡಿತು.

ಭಾರತೀಯ ಸಮಾಜದಲ್ಲಿ ಮಹಿಳೆಯ ಹಾಗೂ ಶೂದ್ರ, ಶೂದ್ರಾತಿ ಸಮುದಾಯಗಳು ಅನೇಕ ಹಕ್ಕುಗಳಿಂದ ವಂಚಿತರಾಗಿದ್ದರು ಇದರ ವಿರುದ್ಧ ವಿವಿಧ ಕಾಲಘಟ್ಟಗಳಲ್ಲಿ ಅನೇಕ ಚಳವಳಿಗಳು ನಡೆದವು, ಪ್ರಾಚೀನ ಮತ್ತು ಮಧ್ಯಕಾಲೀನ ಚಳವಳಿಗಳಿಗಿಂತ ಭಿನ್ನವಾದ ಸುಧಾರಣಾ ಚಳವಳಿಗಳು ಬ್ರಿಟಿಷ್ ವಸಾಹತುಶಾಹಿ ಕಾಲಘಟ್ಟದಲ್ಲಿ ಹುಟ್ಟಿಕೊಂಡವು, ಜಾತಿಪದ್ಧತಿ, ಲಿಂಗ ಅಸಮಾನತೆ, ಸತಿಪದ್ಧತಿ, ವಿಧವಾ ಪುನರ್‌ವಿವಾಹ ನಿರ್ಬಂಧ ಪದ್ಧತಿ, ಶೂದ್ರ ಮತ್ತು ಶೂದ್ರಾತಿಶೂದ್ರರು ಶಿಕ್ಷಣದಿಂದ ವಂಚಿತರಾಗಿದ್ದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಈ ಸುಧಾರಣಾ ಹೋರಾಟವನ್ನು ರೂಪಿಸಿದರು. ರಾಜಾ ರಾಮಮೋಹನ್‌ರಾಯ್, ದಯಾನಂದ ಸರಸ್ವತಿ, ರಾನಡೆ, ಜ್ಯೋತಿಭಾಫುಲೆ, ಸ್ವಾಮಿ ವಿವೇಕಾನಂದ, ಅನಿಬೆಸೆಂಟ್, ಸರ್ ಸಯ್ಯದ್ ಅಹ್ಮದ್ ಖಾನ್, ಪೆರಿಯಾರ್, ನಾರಾಯಣ ಗುರು ಮೊದಲಾದ ಮಹನೀಯರು ಸುಧಾರಣಾ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಕಾಲಘಟ್ಟದ ಸುಧಾರಣೆಯ ಪ್ರಮುಖ ಲಕ್ಷಣವೆಂದರೆ ಸಮಾಜಕ್ಕೆ ಹಾನಿಕಾರಕವಾದ ಪದ್ಧತಿಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಪ್ರಯತ್ನಿಸಲಾಯಿತು.

© KTBS Not to be published

### ಬ್ರಹ್ಮಸಮಾಜ


ರಾಜಾ ರಾಮಮೋಹನ್‌ರಾಯರು

ಆಧುನಿಕ ಕಾಲ ಘಟ್ಟದಲ್ಲಿ ಭಾರತದಲ್ಲಿ ಸಮಾಜ ಸುಧಾರಣೆಗೆ ಚಾಲನೆಯನ್ನು ನೀಡಿದವರು ರಾಜಾ ರಾಮಮೋಹನ್‌ರಾಯರು (1772–1833). ಇವರು ಸಂಸ್ಕೃತ ಸಾಹಿತ್ಯ, ಹಿಂದೂ ತತ್ವ ಮೀಮಾಂಸೆ, ಕುರಾನ್, ಪರ್ಶಿಯನ್ ಮತ್ತು ಅರೆಬಿಕ್ ಸಾಹಿತ್ಯ ಪ್ರಕಾರಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರು. ಇದಲ್ಲದೆ ಭಾರತದ ಇತರ ಧರ್ಮಗಳ ತಾತ್ವಿಕ ಜಿಜ್ಞಾಸೆಗಳನ್ನೂ ಅಧ್ಯಯನ ಮಾಡಿದರು. ಅವರ ಜ್ಞಾನ ಮತ್ತು ಸುಧಾರಣಾ ದಾಹಕ್ಕೆ ಸಾಕ್ಷಿಯೆಂದರೆ ಬೈಬಲನ್ನು ಮೂಲದಲ್ಲಿ ಅರ್ಥಮಾಡಿಕೊಳ್ಳಲು ಹಿಬ್ರೂ ಮತ್ತು ಗ್ರೀಕ್ ಭಾಷೆಗಳನ್ನು ಕಲಿತರು.

ಇವರು ತಮ್ಮ ಸ್ನೇಹಿತರೊಡಗೂಡಿ ಕಲ್ಕತ್ತಾದಲ್ಲಿ **‘ಆತ್ಮೀಯ ಸಭಾ’** ಪ್ರಾರಂಭಿಸಿದರು. ಈ ಸಭೆಯ ಪ್ರಮುಖ ಆಶಯಗಳೆಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗೊಳಿಸುವುದು. 1828ರಲ್ಲಿ ‘ಬ್ರಹ್ಮಸಮಾಜ’ವನ್ನು ಪ್ರಾರಂಭಿಸಿದರು. ಜಾತಿಪದ್ಧತಿ ಮತ್ತು ಮೂಢನಂಬಿಕೆಗಳಿಂದ ಹಿಂದೂ ಧರ್ಮವನ್ನು ಶುದ್ಧಿಗೊಳಿಸುವುದು ಇವರ ಕಾಳಜಿಯಾಗಿತ್ತು. ರಾಜಾ ರಾಮಮೋಹನ್‌ರಾಯರು ಮತ್ತು ಇತರೆ ಬ್ರಹ್ಮ ಸಮಾಜವಾದಿಗಳು ಉಪನಿಷತ್‌ಗಳು ಸಾರುವ ತಾತ್ವಿಕ ತಳಹದಿಯ ಮೇಲೆ ಹಿಂದೂ ಸಮಾಜವನ್ನು ಪುನರ್ ರೂಪಿಸುವ ಪ್ರಯತ್ನವನ್ನು ಮಾಡಿದರು. ಇವರ ಪ್ರಯತ್ನದ ಫಲವಾಗಿ ಮತ್ತು ಅಂದಿನ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು. ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರಯತ್ನಿಸಿದರು. ಬಂಗಾಳಿ ಭಾಷೆಯಲ್ಲಿ ಸಂವಾದ ಕೌಮುದಿ ಎನ್ನುವ ಪತ್ರಿಕೆಯನ್ನು ಆರಂಭಿಸಿದರು.

© KTBS Not to be published

**ಬ್ರಹ್ಮಸಮಾಜದ ಪ್ರಮುಖ ಅಂಶಗಳೆಂದರೆ –**

1. ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.
2. ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು.
3. ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು ಮತ್ತು ಯಾವ ನಿಯಮ ಮತ್ತು ಆಚರಣೆಗಳು ಇದಕ್ಕೆ ಕೇಡುಂಟು ಮಾಡಬಾರದೆನ್ನುವುದು ಅವರ ನಿಲುವಾಗಿತ್ತು.
4. ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸುವ ಮೂಲಕ ಸ್ತ್ರೀಯರಿಗೆ ಸಮಾನತೆ ದೊರಕಬೇಕೆಂದು ಬ್ರಹ್ಮಸಮಾಜವು ಆಶಿಸಿತು. ವಿಶೇಷವಾಗಿ ವಿಧವೆಯರ ದುಸ್ಥಿತಿಯನ್ನು ದೂರ ಮಾಡುವ ಸಲುವಾಗಿ ಅವರಿಗೆ ಆಸ್ತಿಯಲ್ಲಿ ಪಾಲು ಇರಬೇಕೆಂದು ಪ್ರತಿಪಾದಿಸಿತು. ಬ್ರಹ್ಮಸಮಾಜವು ಬಾಲ್ಯವಿವಾಹವನ್ನು ವಿರೋಧಿಸಿತು.
5. ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು ಎಂದು ಬ್ರಹ್ಮಸಮಾಜವು ಸಾರಿತು. ವೇದಾಂತ ಮತ್ತು ಉಪನಿಷತ್ತುಗಳು ಈ ಆಶಯಗಳನ್ನು ಬೋಧಿಸುತ್ತವೆಂದು ಸಾರಿದರು. ಪಶ್ಚಿಮದ ನಾಗರಿಕತೆಯಲ್ಲಿ ಒಳ್ಳೆಯದಿದ್ದರೆ ಅದೂ ಕೂಡ ಸ್ವೀಕಾರಾರ್ಹ ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿ ಇಂಗ್ಲಿಷ್ ಶಿಕ್ಷಣಕ್ಕೆ ಇವರು ಒತ್ತು ನೀಡಿದರು.

ಇವಲ್ಲದೆ ರಾಜಾ ರಾಮಮೋಹನ್‌ರಾಯರು ಪ್ರಗತಿಪರನಾದ ಪಶ್ಚಿಮದ ಆಲೋಚನಾ ಕ್ರಮಗಳನ್ನು ಭಾರತೀಯರು ಸ್ವಾಗತಿಸಬೇಕು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಅನೇಕ ಶಾಲೆಗಳನ್ನು ಮತ್ತು ಕಲ್ಕತ್ತಾದಲ್ಲಿ ವೇದಾಂತ ಕಾಲೇಜನ್ನು ಸ್ಥಾಪಿಸಲು ನೆರವು ನೀಡಿದರು. ರವೀಂದ್ರನಾಥ ಠಾಗೂರರು 'ರಾಜಾ ರಾಮಮೋಹನರಾಯರು ಆಧುನಿಕ ಭಾರತದ ಹರಿಕಾರ, ಭಾರತದ ಪುನರುಜ್ಜೀವನದ ಜನಕ ಮತ್ತು ಭಾರತೀಯ ರಾಷ್ಟ್ರೀಯತೆಯ ಪ್ರವಾದಿ' ಎಂದು ಹೇಳುವ ಮೂಲಕ ರಾಜಾ ರಾಮಮೋಹನ್‌ರಾಯರು ಮತ್ತು ಬ್ರಹ್ಮಸಮಾಜವು ಮಾಡಿದ ಸೇವೆಯನ್ನು ವಿಶ್ಲೇಷಿಸಿದ್ದಾರೆ.

**ಯುವಬಂಗಾಳಿ ಚಳವಳಿ**

ಉತ್ತರ ಭಾರತದಲ್ಲಿ ಆಧುನಿಕತೆಯ ಗಾಳಿಯು ಬೀಸತೊಡಗಿದ್ದು ಹತ್ತೊಂಬತ್ತನೇ ಶತಮಾನದಲ್ಲಿ. ಕಲ್ಕತ್ತಾ ನಗರವು ಹೊಸ ಆಲೋಚನೆಗಳ ಕೇಂದ್ರ ಬಿಂದುವಾಗಿತ್ತು. 1820 ಮತ್ತು 1830ರ ದಶಕದಲ್ಲಿ ಹೊಸ ಚಳವಳಿಗಳು ಹುಟ್ಟಿಕೊಳ್ಳತೊಡಗಿದವು. ಈಗಾಗಲೇ ಬ್ರಹ್ಮಸಮಾಜವನ್ನು ಗಮನಿಸಲಾಗಿದೆ. ಇದೇ ಕಾಲಘಟ್ಟದ ಮತ್ತೊಂದು ಚಳವಳಿಯೆಂದರ 'ಯುವಬಂಗಾಳಿ ಚಳವಳಿ'. ಇದನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೋಜಿಯೋ (1809–1831). ಇವರ ತಂದೆ ಪೋರ್ಚುಗೀಸ್, ತಾಯಿ ಭಾರತೀಯಳು. ಹೀಗಾಗಿ ಡಿರೋಜಿಯೋ ಅವರನ್ನು ಆಂಗ್ಲೋ–ಇಂಡಿಯನ್ ಎಂದು ಕರೆಯುತ್ತಾರೆ.

1826ರಿಂದ 1831ರವರೆಗೆ ಕಲ್ಕತ್ತಾದ ಹಿಂದೂ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದರು. ಇವರ ಬೋಧನೆಯ ಮಾಂತ್ರಿಕ ಶಕ್ತಿಗೆ ಒಳಗಾದ ಅವರ ಅನೇಕ ವಿದ್ಯಾರ್ಥಿಗಳು ಅವರ ನಿಷ್ಠಾವಂತ ಅನುಯಾಯಿಗಳಾದರು. ಯುರೋಪಿನ ಪುನರುಜ್ಜೀವನ ಚಳವಳಿಯ ಆಶಯಗಳಿಂದ ಪ್ರಭಾವಿತಗೊಂಡಿದ್ದ ಇವರು ತಮ್ಮ ವಿದ್ಯಾರ್ಥಿಗಳು ಮತ್ತು ಸಹವರ್ತಿಗಳಲ್ಲಿ ವೈಜ್ಞಾನಿಕ ಆಲೋಚನಾ ಕ್ರಮವನ್ನು ತುಂಬುವ ಪ್ರಯತ್ನವನ್ನು ಮಾಡಿದರು. ಹೊಸ ಶಿಕ್ಷಣ ಕ್ರಮವನ್ನು ಜಾರಿಗೊಳಿಸಲು ಬೇಕಾದ ಪಠ್ಯಪುಸ್ತಕಗಳನ್ನು ರೂಪಿಸುವಲ್ಲಿ ವಿಶೇಷ ಶ್ರಮವಹಿಸಿದರು. ಪ್ರಶ್ನಿಸುವ, ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಳ್ಳಲು ಬೇಕಾದ ಪ್ರೇರಣೆಯನ್ನು ಒದಗಿಸುವ ಪಠ್ಯಗಳನ್ನು ತಂದರು. ಇದರಿಂದ ಅಂದಿನ ಸಂಪ್ರದಾಯವಾದಿಗಳ ಆಕ್ರೋಶಕ್ಕೆ ಗುರಿಯಾದರು. ಆದರೂ ಎದೆಗುಂದದೆ 'ಅಕಾಡೆಮಿಕ್ ಅಸೋಸಿಯೇಷನ್' (1828) ಎನ್ನುವ ಚರ್ಚಾವೇದಿಕೆಯನ್ನು ಕಟ್ಟುವ ಮೂಲಕ ಹೊಸ ಸಂವೇದನೆಗಳನ್ನು ಹುಟ್ಟುಹಾಕಿದರು.

ಯುವಬಂಗಾಳಿ ಚಳವಳಿಯು ಪ್ರಕೃತಿ, ಮಾನವೀಯತೆ, ದೇವರು ಮುಂತಾದ ವಿಷಯಗಳನ್ನು ಕುರಿತು ಚರ್ಚೆ ಮತ್ತು ಸಂವಾದಗಳನ್ನು ನಡೆಸಿತು. ಮೂಢನಂಬಿಕೆಗಳಿಂದ ತುಂಬಿದ್ದ ಸಾಮಾಜಿಕ ಮೌಢ್ಯಾಚಾರಗಳಲ್ಲೇ ಮುಳುಗಿದ್ದ ಸಮಾಜಕ್ಕೆ ಪರಿಹಾರವಿರುವುದು ಎಲ್ಲವನ್ನೂ ಎಲ್ಲರೂ ವೈಜ್ಞಾನಿಕವಾಗಿ ನೋಡುವ ದೃಷ್ಟಿಕೋನವನ್ನು ಬೆಳೆಸಿಕೊಂಡಾಗ ಮಾತ್ರ ಎಂದು ಡಿರೋಜಿಯೋ ಪ್ರಚುರಪಡಿಸುವ ಪ್ರಯತ್ನವನ್ನು ಮಾಡಿದರು. ಮಹಿಳಾ ಹಕ್ಕುಗಳ ಪ್ರತಿಪಾದಕರಾಗಿದ್ದು ಜಾತಿಪ್ರೇರಿತ ಶೋಷಣೆಯ ವಿರೋಧಿಯಾಗಿದ್ದರು. ಸಂಪ್ರದಾಯಸ್ಥ ಕೌಟುಂಬಿಕ ಹಿನ್ನೆಲೆಯಿಂದ ಬಂದ ಅನೇಕ ವಿದ್ಯಾರ್ಥಿಗಳು ಇವರ ಪ್ರಭಾವಕ್ಕೆ ಒಳಗಾಗಿ ಚಳವಳಿಯನ್ನು ಬೆಳೆಸುವಲ್ಲಿ ಕೈಜೋಡಿಸಿದರು. ಹೀಗೆ ಇದೊಂದು ಹೊಸಚಳುವಳಿಯಾಗಿ ಬೆಳೆಯಿತು. ಆದರೆ ಇದರ ಪ್ರಭಾವ ಕಲ್ಕತ್ತಾ ಮತ್ತು ಬಂಗಾಳದ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಹೊಸ ತಲೆಮಾರು ಇವರ ಪ್ರಭಾವಕ್ಕೆ ಒಳಗಾಗಿ ನೈತಿಕವಾಗಿ ಕುಸಿಯುತ್ತಿದೆ ಎನ್ನುವ ಅವರ ಸಹೋದ್ಯೋಗಿಗಳ ಮತ್ತು ಅವರ ಬೆಂಬಲಿಗರ ಒತ್ತಡಕ್ಕೆ ಮಣಿದು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ನೀಡಿದರು. ಡಿರೋಜಿಯಾ ಅವರು ಕೇವಲ 22 ವರ್ಷದವರಾಗಿದ್ದಾಗ 1831ರಲ್ಲಿ ಕಾಲರಾ ರೋಗಕ್ಕೆ ತುತ್ತಾಗಿ ತೀರಿಕೊಂಡರು.

© KTBS Not to be republished

## ಆರ್ಯಸಮಾಜ :



ದಯಾನಂದ ಸರಸ್ವತಿ

1875ರಲ್ಲಿ ದಯಾನಂದ ಸರಸ್ವತಿಯವರು ಆರ್ಯಸಮಾಜವನ್ನು ಆರಂಭಿಸಿದರು. ಇದು ಬಾಂಬೆಯಲ್ಲಿ ಪ್ರಾರಂಭವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿತ್ತು.

ದಯಾನಂದ ಸರಸ್ವತಿಯವರು 1824ರಲ್ಲಿ ಗುಜರಾತಿನ ಕಾಥೇವಾಡದಲ್ಲಿ ಜನಿಸಿದರು. ಇವರ ಆರಂಭಿಕ ಹೆಸರು 'ಮೂಲಶಂಕರ'. ಇವರ ತಂದೆ ಅಂಬಾಶಂಕರ ತಿವಾರಿ ಮತ್ತು ತಾಯಿ ಅಮೃತಾಬಾಯಿ. ಇಂಗ್ಲಿಷ್ ವಿದ್ಯಾಭ್ಯಾಸದ ಕಡೆಗೆ ಆಸಕ್ತಿಯನ್ನು ತೋರದ ದಯಾನಂದರು ಸಂಸ್ಕೃತ ಶಿಕ್ಷಣವನ್ನು ಪಡೆದರು. 21ನೇ ವಯಸ್ಸಿನಲ್ಲಿ ಮನೆಬಿಟ್ಟ ಇವರು ಮುಂದಿನ ಸುಮಾರು 15 ವರ್ಷಗಳ ಕಾಲ ದೇಶಾದ್ಯಂತ ಸಂಚರಿಸಿದರು. ದಯಾನಂದ ಸರಸ್ವತಿಯವರು ತಮ್ಮ ಆಲೋಚನಾ ಕ್ರಮವನ್ನು 'ಸತ್ಯಾರ್ಥ ಪ್ರಕಾಶ' ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ವೇದಗಳ ಅಧ್ಯಯನದಿಂದ ಕಂಡುಕೊಂಡ ಅಂಶವೆಂದರೆ ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಅವರು ಘೋಷಿಸಿದ ವಾಕ್ಯ 'ವೇದಗಳಿಗೆ ಮರಳಿ' ಎಂಬುದಾಗಿತ್ತು. ಆದ್ದರಿಂದ ಇವರು ಸುಧಾರಣಾವಾದಿಯೆಂಬುದಕ್ಕಿಂತ ಬದಲಿಗೆ ಪುನರುತ್ಥಾನ ವಾದಿ ಎಂದೆನಿಸಿಕೊಂಡರು. 1877ರಲ್ಲಿ ಆರ್ಯಸಮಾಜದ ಕೇಂದ್ರ ಕಚೇರಿಯನ್ನು ಲಾಹೋರಿನಲ್ಲಿ ತೆರೆದರು. ವೇದಗಳು ಮಾತ್ರ ಪ್ರಮಾಣೀಕೃತ ಎಂಬುದನ್ನು ಸಾರಿದರು.

© KTBS Not to be published

**ಆರ್ಯ ಸಮಾಜವು ಈ ಕೆಳಗಿನ ಉದ್ದೇಶಗಳನ್ನು ಹೊಂದಿತ್ತು.**

1. ಎಲ್ಲ ಹಿಂದುಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು.
2. ಹುಟ್ಟಿನಿಂದ ಯಾರೂ ಶೂದ್ರರೂ ಅಲ್ಲ ಅಥವಾ ಬ್ರಾಹ್ಮಣರೂ ಅಲ್ಲವೆಂದು ಜಾತಿ ಆಧಾರವನ್ನು ತಿರಸ್ಕರಿಸುವುದು.
3. ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸುವುದು.
4. ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.
5. ಸ್ತ್ರೀ ಮತ್ತು ಪುರುಷರು ಸಮಾನರು.
6. ವೇದಗಳು ಮಾತ್ರ ಶ್ರೇಷ್ಠ. ಪ್ರಾಚೀನ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಬೇಕು ಮತ್ತು ಬೋಧಿಸಬೇಕು.

ಆರ್ಯ ಸಮಾಜದ ಮತ್ತೊಂದು ಪ್ರಮುಖ ಕಾರ್ಯಸೂಚಿ ಎಂದರೆ 'ಶುದ್ಧಿ' ಚಳವಳಿ. ಹಿಂದೂಧರ್ಮ ದಿಂದ ಇಸ್ಲಾಂ ಮತ್ತು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ 'ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು. ಗೋವುಗಳ ರಕ್ಷಣೆಗೆ 'ಗೋ ರಕ್ಷಣಾ ಸಂಘ'ವನ್ನು ಆರಂಭಿಸಿದರು.

ಆರ್ಯ ಸಮಾಜವು 1921ರ ವೇಳೆಗೆ ಸುಮಾರು 5 ಲಕ್ಷ ಅನುಯಾಯಿಗಳನ್ನು ಹೊಂದಿತ್ತು. ದಯಾನಂದ ಸರಸ್ವತಿಯವರ ಮರಣಾನಂತರ ಪ್ರಸಿದ್ಧ 'ದಯಾನಂದ ಆಂಗ್ಲೋ-ವೇದಿಕ್-ಕಾಲೇಜ'ನ್ನು 1886ರಲ್ಲಿ ಪ್ರಾರಂಭಿಸಲಾಯಿತು. ಹಾಗೆಯೆ ಹರಿದ್ವಾರದಲ್ಲಿ 'ಗುರುಕುಲ ವಿಶ್ವವಿದ್ಯಾಲಯ'ವನ್ನು ಆರಂಭಿಸಲಾಯಿತು. ಭಾರತೀಯ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ತೀವ್ರವಾದಿಗಳಾದ ಲಾಲಾ ಲಜಪತ್‌ರಾಯ್ ಅವರು ಆರ್ಯ ಸಮಾಜದ ತತ್ವಗಳಿಂದ ಪ್ರೇರಣೆ ಪಡೆದಿದ್ದರು.

**ಶುದ್ಧಿ ಚಳವಳಿ :** ಹಿಂದೂ ಧರ್ಮದಲ್ಲಿದ್ದ ಜಾತಿವ್ಯವಸ್ಥೆ ಮತ್ತು ಕಂದಾಚಾರಗಳು ಜನರನ್ನು ಅನ್ಯಧರ್ಮದೆಡೆಗೆ ನೂಕಿದ್ದವು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಹಿಂದೂ ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ವೇದಗಳನ್ನು ಮರು ವ್ಯಾಖ್ಯಾನಿಸಿ, ಲಿಂಗ ಮತ್ತು ಜಾತಿ ಸಮಾನತೆಯನ್ನು ದಯಾನಂದರು ಪ್ರತಿಪಾದಿಸಿದರು. ಹಿಂದೂ ಧರ್ಮದಿಂದ ಹೊರಹೋಗುವ ಅವಕಾಶವಿತ್ತೇ ಹೊರತು ಒಳಗೆ ಬರುವ ಅವಕಾಶಗಳೇ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಮತಾಂತರಗೊಂಡಿದ್ದ ಜನರನ್ನು ಮತ್ತೆ ಹಿಂದೂ ಧರ್ಮದ ತೆಕ್ಕೆಗೆ ತಂದುಕೊಳ್ಳಲು ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಪ್ರಾರಂಭಿಸಿದರು.


### ಪ್ರಾರ್ಥನಾ ಸಮಾಜ

ಬ್ರಹ್ಮಸಮಾಜದ ಸುಧಾರಣಾ ಚಳುವಳಿಯು ಬಂಗಾಳದ ಪ್ರದೇಶವನ್ನು ಮೀರಿ ಕ್ರಮೇಣ ಬೇರೆ ಕಡೆಗೆ ಹಬ್ಬಲು ಪ್ರಾರಂಭಿಸಿತು. ಬ್ರಹ್ಮಸಮಾಜದಿಂದ ತಾತ್ವಿಕ ಪ್ರಭಾವದಿಂದ ಈ ಸಮಾಜವು ಸಮಾಜ ಸುಧಾರಣಾ ಚಳವಳಿಯನ್ನು ರೂಪಿಸಿತು, ಪಶ್ಚಿಮ ಭಾರತದಲ್ಲಿ, ವಿಶೇಷವಾಗಿ ಬಾಂಬೆ ಪ್ರೆಸಿಡೆನ್ಸಿ ಭಾಗದಲ್ಲಿ ಸುಧಾರಣಾ ಚಳವಳಿಯು ಬೆಳೆಯತೊಡಗಿತು.

ಮಹಿಳೆಯರ ಸಮಸ್ಯೆಗಳನ್ನಷ್ಟೇ ಅಲ್ಲದೆ ಶೂದ್ರಾತಿಶೂದ್ರ ಸಮುದಾಯಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಡಾ. ಆತ್ಮಾರಾಮ್ ಪಾಂಡುರಂಗ ಅವರ ನೇತೃತ್ವದಲ್ಲಿ ಮುಂಬೈಯಲ್ಲಿ 1867ರಲ್ಲಿ ಪ್ರಾರ್ಥನಾ ಸಮಾಜ ಎಂಬ ಸಂಘಟನೆ ಪ್ರಾರಂಭವಾಯಿತು. ಪಶ್ಚಿಮದ ಆಧುನಿಕ ಆಲೋಚನೆಗಳ ಹಿನ್ನೆಲೆಯಲ್ಲಿ ಹಿಂದೂ ಧರ್ಮವನ್ನು ಪುನರ್ ವಿಮರ್ಶಿಸಿಕೊಳ್ಳುವ ಅಗತ್ಯವಿದೆ ಎಂದು ಈ ಸಂಘಟನೆಯು ಪ್ರತಿಪಾದಿಸಿತು. ಸಮಾಜ ಸುಧಾರಣೆಯೆಂಬುದು ಕೇವಲ ನಂಬಿಕೆಯಾಗಿ ಉಳಿಯದೆ ವಾಸ್ತವದಲ್ಲಿ ಅನುಷ್ಠಾನಗೊಳ್ಳಬೇಕು ಎಂದು ಒತ್ತಾಯಿಸಿತು. ಈ ಸಂಸ್ಥೆಯ ನೇತೃತ್ವದಲ್ಲಿ ಸ್ತ್ರೀಯರ ಶಿಕ್ಷಣ, ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು ಮುಂತಾದ ಕಾರ್ಯಕ್ರಮಗಳು ಅನುಷ್ಠಾನಗೊಂಡವು.

ಪ್ರಾರ್ಥನಾ ಸಮಾಜದ ಇತರೆ ನಾಯಕರೆಂದರೆ ನ್ಯಾಯಮೂರ್ತಿಗಳಾದ ಮಹದೇವ ಗೋವಿಂದ ರಾನಡೆ, ಆರ್.ಜಿ. ಭಂಡಾರ್ಕರ್ ಮತ್ತು ಎನ್.ಜಿ. ಚಂದಾವರ್ಕರ್ ಮುಖ್ಯರಾದವರು. ರಾನಡೆಯವರ ನೇತೃತ್ವದಲ್ಲಿ ಪ್ರಾರ್ಥನಾ ಸಮಾಜದ ಸುಧಾರಣಾ ವ್ಯಾಪ್ತಿಯು ಮತ್ತಷ್ಟು ಹೆಚ್ಚಾಯಿತು. ರಾನಡೆಯವರು ಬಾಲ್ಯವಿವಾಹ, ವಿಧವೆಯರನ್ನು ತಿರಸ್ಕೃತ ಬದುಕಿನಿಂದ ಹೊರತರುವುದು, ಉನ್ನತಜಾತಿಗಳಲ್ಲಿ ವಿಧವಾ ಪುನರ್‌ವಿವಾಹ ನಿಷೇಧಗಳನ್ನು ಸುಧಾರಣೆಗೆ ಕಾನೂನಿನ ಕ್ರಮ ಅತ್ಯವಶ್ಯವೆಂದು ಭಾವಿಸಿದರು, ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರಕಾರದ ನೆರವನ್ನು ಪಡೆಯುವುದು ಸರಿಯಾದ ಕ್ರಮವೆಂದರು.

### ಸತ್ಯಶೋಧಕ ಸಮಾಜ




**ಮಹಾತ್ಮ ಜ್ಯೋತಿಭಾ ಫುಲೆ**

ಭಾರತದ ಉಳಿದ ಭಾಗಗಳಲ್ಲಿ ಇದ್ದಂತೆ ಮಹಾರಾಷ್ಟ್ರದಲ್ಲಿಯೂ ಜಾತಿ ಮತ್ತು ಲಿಂಗ ನೆಲೆಗಳ ಶೋಷಣೆಗಳು ವ್ಯಾಪಕವಾಗಿದ್ದವು. ಬ್ರಿಟಿಷ್ ವಸಾಹತುಶಾಹಿ ಕಾಲಘಟ್ಟದಲ್ಲಿ ಈ ಬಗೆಯ ಶೋಷಣೆಗಳ ವಿರುದ್ಧ ಅನೇಕ ಚಳವಳಿಗಳು ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ 1873ರಲ್ಲಿ ಹುಟ್ಟಿದ ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಚಳವಳಿಯನ್ನು ಪ್ರಾರಂಭಿಸಿತು. ಈ ಸಮಾಜವನ್ನು ಮಹಾತ್ಮ ಜ್ಯೋತಿಭಾ ಫುಲೆಯವರು ಸ್ಥಾಪಿಸಿದರು. ಸೈದ್ಧಾಂತಿಕ ಹೋರಾಟವನ್ನು ಕಟ್ಟುವ ಹಿನ್ನೆಲೆಯಲ್ಲಿ 'ಗುಲಾಮಗಿರಿ' ಶೇಟ್ಕಾರ್ಯಚಾ ಅಸೂದ್ ಎನ್ನುವ ಗ್ರಂಥ ರಚಿಸಿದರು. ಶಾಲೆಗಳನ್ನು ಪ್ರಾರಂಭಿಸಿ ಶೂದ್ರರಿಗೆ ಮತ್ತು ಹೆಣ್ಣುಮಕ್ಕಳಿಗೆ

© KTBS Not to be published

ವಿದ್ಯೆಯನ್ನು ನೀಡಿದರು. ಮಾಲಿ ಸಮುದಾಯಕ್ಕೆ ಸೇರಿದ್ದ ಫುಲೆಯವರು ತಮ್ಮ ಬಾವಿಯಲ್ಲಿ ಅಸ್ಪೃಶ್ಯರು ಮತ್ತು ಎಲ್ಲ ಜಾತಿಯವರಿಗೂ ನೀರು ಸೇದಿಕೊಳ್ಳಲು ಅವಕಾಶವನ್ನು ಕೊಟ್ಟರು. ಫುಲೆಯವರ ಈ ಪ್ರಯತ್ನದಲ್ಲಿ ಅವರ ಪತ್ನಿ ಸಾವಿತ್ರಿಬಾಯಿ ಫುಲೆಯವರು ಒತ್ತಾಸೆಯಾಗಿದ್ದರು. ಇವರ ಪ್ರಯತ್ನದಿಂದ ಹೆಣ್ಣುಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಲಾಯಿತು. ಸಮಾನತೆಯ ಆಶಯದ ತಳಹದಿಯ ಮೇಲೆ ಹೊಸ ಸಮಾಜವನ್ನು ನಿರ್ಮಿಸುವ ಆಧುನಿಕ ಕಾಲಘಟ್ಟದ ಪ್ರಯತ್ನಗಳಲ್ಲಿ ಫುಲೆ ದಂಪತಿಗಳ ಪ್ರಯತ್ನ ಮುಖ್ಯವಾದದ್ದು. ಇವರ ಆಶಯಗಳಿಂದ ಪ್ರೇರಣೆ ಪಡೆದವರಲ್ಲಿ ಬಾಬಾಸಾಹೇಬ ಅಂಬೇಡ್ಕರ್‌ರು ಮುಖ್ಯರು.

**ಆಲಿಘರ್ ಸುಧಾರಣಾ ಚಳವಳಿ**


**ಸರ್ ಸಯ್ಯದ್ ಅಹಮದ್ ಖಾನ್**

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ಮುಸ್ಲಿಂ ಸಮಾಜದಲ್ಲಿ ಹೊಸ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಅಲೆಯು ಪ್ರಾರಂಭವಾಯಿತು. ಬ್ರಿಟಿಷರ ವಿರೋಧಿ ಮನೋಧರ್ಮವು 1857ರ ಘಟನೆಯ ನಂತರ ಮುಸ್ಲಿಂ ಸಮುದಾಯದಲ್ಲಿ ವ್ಯಾಪಕವಾಗಿ ಬೆಳೆಯಲು ಆರಂಭಿಸಿತು. ಇದರ ಪರಿಣಾಮವಾಗಿ ಇಂಗ್ಲಿಷ್ ಶಿಕ್ಷಣದಿಂದ ದೂರಾಗ ತೊಡಗಿ ಶಿಕ್ಷಣದ ಅರ್ಹತೆಯಿಂದ ದೊರೆಯಬಹುದಾದ ಅವಕಾಶಗಳನ್ನು ಕಳೆದುಕೊಂಡರು. ಇಂತಹ ಸಂದರ್ಭವನ್ನು ಗ್ರಹಿಸಿದ ಸರ್ ಸಯ್ಯದ್ ಅಹಮದ್ ಖಾನ್‌ರು ಹೊಸ ಚಳವಳಿಯನ್ನು ರೂಪಿಸಲು ಯತ್ನಿಸಿದರು. 1863ರಲ್ಲಿ ಆರಂಭಗೊಂಡ ಮಹಮದನ್ ಲಿಟರರಿ ಸೊಸೈಟಿಯು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳನ್ನು ಮಾಡತೊಡಗಿತು. ಈ ಚರ್ಚೆಗಳಲ್ಲಿ ಉನ್ನತ ಮತ್ತು ಮಧ್ಯಮ ವರ್ಗದ ಮುಸ್ಲಿಮರು ಭಾಗವಹಿಸುವ ಮೂಲಕ ಇಂಗ್ಲಿಷ್ ಶಿಕ್ಷಣದ ಮಹತ್ವವನ್ನು ಅರಿಯತೊಡಗಿದರು. ಸರ್ ಸಯ್ಯದ್ ಅಹಮದ್ ಖಾನ್‌ರ ಪ್ರಯತ್ನಗಳಿಂದ ಹೊಸ ವಿಚಾರಗಳ ಹುಡುಕಾಟದ ಪ್ರಯತ್ನವು ಆಲಿಘರ್ ಚಳವಳಿಯಾಗಿ ರೂಪುಗೊಂಡಿತು.

ಸರ್ ಸಯ್ಯದ್ ಅಹಮದ್ ಖಾನ್‌ರ ಬದುಕಿನ ಕಾಲಘಟ್ಟ 1817–1898. ಕುರಾನ್ ಗ್ರಂಥವು ಮಾತ್ರ ಪ್ರಮಾಣೀಕೃತ. ಇಸ್ಲಾಂನ್ನು ಕುರಿತಾದ ಇತರ ಬರಹಗಳು ಕೇವಲ ಆನುಷಂಗಿಕವೆಂದು ಘೋಷಿಸಿದರು. ಕಾಲ ಬದಲಾದಂತೆ ಧರ್ಮವನ್ನು ಅರ್ಥೈಸಿಕೊಳ್ಳುವ ಮತ್ತು ಪರಿಭಾವಿಸುವ ರೀತಿಯೂ ಬದಲಾಗಬೇಕು, ಇಲ್ಲದಿದ್ದರೆ ಧರ್ಮವೆಂಬುದು ಜಡವಾಗುತ್ತದೆ ಎಂದು ಹೇಳಿದರು. ಅಹಮದ್ ಖಾನ್‌ರು ತಮ್ಮ ಇಡೀ ಬದುಕಿನ ಉದ್ದಕ್ಕೂ ಸಂಪ್ರದಾಯ, ಮೌಢ್ಯಗಳು, ಅಜ್ಞಾನ ಮತ್ತು ಅವೈಜ್ಞಾನಿಕ ಮನೋಧರ್ಮದ ವಿರುದ್ಧ ಹೋರಾಡಿದರು. ತೆರೆದ ಮನಸ್ಸು ಇಲ್ಲದಿದ್ದರೆ ಯಾವ ಸಾಮಾಜಿಕ ಮತ್ತು ಬೌದ್ಧಿಕ ಪ್ರಗತಿ ಸಾಧ್ಯವಿಲ್ಲವೆಂದರು. ಮುಸ್ಲಿಂ ಸಮುದಾಯದಲ್ಲಿದ್ದ ಪರದಾಪದ್ಧತಿಯನ್ನು ಬೆಂಬಲಿಸಲಿಲ್ಲ. ಮುಸ್ಲಿಂ ಹೆಣ್ಣು ಮಕ್ಕಳು ವಿದ್ಯಾವಂತರಾಗಬೇಕು ಎಂದು ಸಾರಿದರು. ಬಹುಪತ್ನಿತ್ವ ಪದ್ಧತಿಯನ್ನು ಒಪ್ಪಲಿಲ್ಲ. ಈ ಎಲ್ಲ ಅಂಶಗಳು ಅವರ ಹೋರಾಟದ ಭಾಗವಾಗಿದ್ದವು. ತಮ್ಮ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು 1875ರಲ್ಲಿ ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಆಲಿಘರ್‌ನಲ್ಲಿ ಸ್ಥಾಪಿಸಿದರು. ಪಾಶ್ಚಿಮಾತ್ಯ ವಿಜ್ಞಾನ ಮತ್ತು ಸಂಸ್ಕೃತಿ ಕುರಿತು ಚಿಂತನೆಗಳನ್ನು ಹರಡಲು ಈ ಸಂಸ್ಥೆಯನ್ನು ಬಳಸಿದರು. ಈ ಸಂಸ್ಥೆಯೇ ಆನಂತರದಲ್ಲಿ ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಯಿತು.

ಸಯ್ಯದ್ ಅಹಮದ್ ಖಾನ್‌ರವರು ಧಾರ್ಮಿಕ ಸಹಿಷ್ಣುತೆಯನ್ನು ಬೋಧಿಸಿದರು. ಆರಂಭದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಐಕ್ಯತೆಯನ್ನು ಬಯಸಿದರು. ಹಿಂದೂಗಳು, ಪಾರ್ಸಿಗಳು, ಕ್ರಿಶ್ಚಿಯನ್ನರು, ಆಲಿಘರ್ ಕಾಲೇಜನ್ನು ಸ್ಥಾಪಿಸಲು ಉದಾರ ಹಣ ಸಹಾಯ ಮಾಡಿದರು. ಈ ಕಾಲೇಜಿನಲ್ಲಿ

© KTBS Not to be published

ಎಲ್ಲ ಧರ್ಮೀಯರಿಗೂ ಪ್ರವೇಶವಿತ್ತು. ಆಲೀಘರ್ ಅನ್ನು ಕೇಂದ್ರವಾಗಿಟ್ಟುಕೊಂಡು ಸರ್ ಸಯ್ಯದ್ ಅಹಮದ್ ಖಾನ್ ಅವರು ರೂಪಿಸಿದ ಚಳವಳಿಯನ್ನು ಆಲಿಘರ್ ಚಳವಳಿಯೆಂದು ಕರೆಯಲಾಗಿದೆ.

**ರಾಮಕೃಷ್ಣ ಮಿಷನ್ (ರಾಮಕೃಷ್ಣ ಮಠ)**


ರಾಮಕೃಷ್ಣ ಪರಮಹಂಸ

ಆಧುನಿಕ ಭಾರತದ ಆಧ್ಯಾತ್ಮಿಕ ಏಳಿಗೆ, ರಾಷ್ಟ್ರೀಯತೆಯ ಎಚ್ಚರ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ರಾಮಕೃಷ್ಣ ಮಿಷನ್ ವಿಶೇಷ ಕೊಡುಗೆಯನ್ನು ನೀಡಿದೆ. ಸ್ವಾಮಿ ವಿವೇಕಾನಂದರು 1897ರಲ್ಲಿ ಕಲ್ಕತ್ತಾದ ಬಳಿಯ ಬೇಲೂರಿನಲ್ಲಿ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿದರು. ಹಾಗೆಯೇ ಉತ್ತರಾಂಚಲದ ಆಲ್ಮೋರಾ ಬಳಿಯ ಮಾಯಾವತಿಯಲ್ಲಿ ರಾಮಕೃಷ್ಣ ಮಠವನ್ನು ಸ್ಥಾಪಿಸಿದರು.

ರಾಮಕೃಷ್ಣ ಮಠವನ್ನು ಸ್ಥಾಪಿಸಿದ ಉದ್ದೇಶವೆಂದರೆ ಸ್ವಾಮಿ ವಿವೇಕಾನಂದರ ಗುರುಗಳಾದ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು. ರಾಮಕೃಷ್ಣ ಪರಮಹಂಸರು (1836–1886) ಕಾಳಿಮಾತೆಯ ಆರಾಧಕರು ಮತ್ತು ಕಲ್ಕತ್ತಾದ ಕಾಳಿಮಂದಿರದಲ್ಲಿ ಅರ್ಚಕರಾಗಿದ್ದರು. ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಬೇಕೆಂದು ತಮ್ಮ ಬದುಕಿನ ಉದಾಹರಣೆಯ ಮೂಲಕ ತೋರಿಸಿಕೊಟ್ಟರು. ಎಲ್ಲ ಧರ್ಮಗಳ ಆಶಯವು ಇದೇ ಎಂದು ಭಾವಿಸಿದ್ದರು. ದೇವರನ್ನು ಮತ್ತು ಮುಕ್ತಿಯನ್ನು ತಲುಪಲು ಅನೇಕ ಮಾರ್ಗಗಳಿವೆ ಎಂದು ನಂಬಿದ್ದರು. ಜತೆಗೆ ಮೂರ್ತಿಪೂಜೆ ಅವಶ್ಯಕವೆಂದರು.

© KTBS Not to be republished


ಸ್ವಾಮಿ ವಿವೇಕಾನಂದ

ರಾಮಕೃಷ್ಣ ಪರಮಹಂಸರ ಚಿಂತನೆಗಳನ್ನು ಮತ್ತು ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಶಯಗಳನ್ನು ಜನರಿಗೆ ತಲುಪಿಸಲು ಸ್ವಾಮಿ ವಿವೇಕಾನಂದರು ಈ ಸಂಘವನ್ನು ಕಟ್ಟಿದರು. ವಿವೇಕಾನಂದರು (1863–1902) ಕಲ್ಕತ್ತಾದಲ್ಲಿ ಕಾಯಸ್ಥ ಕುಟುಂಬದಲ್ಲಿ ಜನಿಸಿದರು. ಭಾರತ ಮತ್ತು ಪಾಶ್ಚಿಮಾತ್ಯ ಚಿಂತನಧಾರೆಗಳನ್ನು ಅಭ್ಯಸಿಸಿದರು. ಭಾರತದ ದಾರ್ಶನಿಕತೆಯ ವಿವಿಧ ದೃಷ್ಟಿಕೋನಗಳನ್ನು ಆಳವಾಗಿ ಅಧ್ಯಯನ ಮಾಡಿದ ನಂತರ ಅವುಗಳ ಮಹೋನ್ನತಿಯನ್ನು ಭಾರತೀಯರಿಗೆ ಮತ್ತು ಪಾಶ್ಚಿಮಾತ್ಯರಿಗೆ ತಿಳಿಸುವ ಕೆಲಸವನ್ನು ಆರಂಭಿಸಿದರು. ಅವರ ಗುರುಗಳು ತೀರಿಕೊಂಡ ನಂತರ ಸುಮಾರು ಐದುವರ್ಷಗಳ ಕಾಲ ಭಾರತವನ್ನು ಸುತ್ತಾಡಿದರು. ಇದರಿಂದ ಭಾರತದ ಸಾಮಾಜಿಕ ವಾಸ್ತವಿಕ ಅಂಶಗಳನ್ನು ಕಣ್ಣಾರೆ ನೋಡಲು ಸಾಧ್ಯವಾಯಿತು. ಜಾತಿವ್ಯವಸ್ಥೆ ಮತ್ತು ಅದರ ಶೋಷಣೆಯ ಮುಖಗಳು, ಬಡತನ, ಅನಕ್ಷರತೆ, ಅಜ್ಞಾನ ಮುಂತಾದ ಒಡಕುಗಳಿಂದ ತುಂಬಿದ ಭಾರತದ ಸಮಾಜಕ್ಕೆ ಹೊಸ ಶೋಷಣೆ ಮುಕ್ತ ರೂಪವನ್ನು ಕೊಡಬೇಕೆಂದು ತಮ್ಮ ಜೀವಿತಾವಧಿ ಕಾಲದಲ್ಲಿ ಅವಿರತ ಪ್ರಯತ್ನ ಮಾಡಿದರು. ಸಮಾಜ ಸುಧಾರಣೆಗೆ ಸಂಬಂಧಿಸಿದಂತೆ ವಿವೇಕಾನಂದರ ಆಶಯವೆಂದರೆ, ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಮತ್ತು ಆ ಮೂಲಕ ಅವರೇ ಸುಧಾರಣೆಯನ್ನು ಬಯಸುತ್ತಾರೆ. ಶಾಸನ ರೂಪಿಸುವ ಸಂಸ್ಥೆಗಳು ರೂಪುಗೊಳ್ಳಬೇಕು ಮತ್ತು ಅವುಗಳ ಮುಖಾಂತರ ಸಮಾಜ ಸುಧಾರಣಾ ಕಾನೂನುಗಳು ಜಾರಿಗೊಳ್ಳಬೇಕು ಎಂದು ಬಯಸಿದರು. ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು. ಧರ್ಮದ

ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು. ಇಲ್ಲದಿದ್ದರೆ ಅದು ಧರ್ಮವೇ ಅಲ್ಲ ಎಂದರು. ಯಾರ ಆತ್ಮ ಬಡವರಿಗಾಗಿ ಮಿಡಿಯುವುದೋ ಅವನೇ ಮಹಾತ್ಮ. ಇಲ್ಲದಿದ್ದರೆ ಅವನು ದುರಾತ್ಮ ಎಂದರು. ತಮ್ಮ ಜೀವನದುದ್ದಕ್ಕೂ ಅವರು ಜಾತೀಯತೆಯನ್ನು, ಅಸ್ಪೃಶ್ಯತೆಯನ್ನು, ಜಾತಿಮೂಲದಿಂದ ಪ್ರೇರಣೆಗೊಂಡ ಶ್ರೇಷ್ಠತೆಯ ವ್ಯಸನವನ್ನು ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ವಿರೋಧಿಸಿದರು.

> " ನಾವು ಮಾನವ ವರ್ಗವನ್ನು ಎಲ್ಲಿ ವೇದಗಳು, ಬೈಬಲ್, ಕುರಾನ್ ಇಲ್ಲವೇ ಅಲ್ಲಿಗೆ ಕರೆದೊಯ್ಯಬೇಕು, ಆದರೂ ಕೂಡ ವೇದಗಳು, ಬೈಬಲ್, ಕುರಾನ್‌ಗಳ ಐಕ್ಯತೆಯಿಂದ ಇದನ್ನು ಸಾಧಿಸಬೇಕಾಗಿದೆ,....... ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು, ವೇದಾಂತದ ಮಿದುಳು ಇಸ್ಲಾಮಿನ ದೇಹ–ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ 7 – ಸಂಪುಟ 238)

ವಿವೇಕಾನಂದರು 1893ರಲ್ಲಿ ಅಮೆರಿಕದ ಚಿಕಾಗೊ ನಗರದಲ್ಲಿ ನಡೆದ ವಿಶ್ವಧಾರ್ಮಿಕ ಸಮ್ಮೇಳನದ ಸಂದರ್ಭದಲ್ಲಿ ಮಾಡಿದ ಭಾಷಣದಿಂದ ಪಾಶ್ಚಿಮಾತ್ಯರು ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ 1900ರಲ್ಲಿ ಪ್ಯಾರಿಸ್‌ನಲ್ಲಿ ನಡೆದ 'ಕಾಂಗ್ರೆಸ್ ಆಫ್ ರಿಲಿಜಿಯನ್ಸ್' ಸಮ್ಮೇಳನದಲ್ಲೂ ಅಮೆರಿಕಾದಲ್ಲಿ ಮಾತನಾಡಿದ ರೀತಿಯಲ್ಲೇ ಮಾತನಾಡಿ ಜನರನ್ನು ಸಮ್ಮೋಹನಗೊಳಿಸಿದರು. ಅವರ ಭಾಷಣಗಳು ಅವರ ರಾಷ್ಟ್ರೀಯತೆಯ ಆಲೋಚನೆಗಳಿಗೆ ಕೈಗನ್ನಡಿಯಾಗಿವೆ. ಆಸಕ್ತಿದಾಯಕ ವಿಷಯವೆಂದರೆ ಅಮೆರಿಕಾದ ಸಮ್ಮೇಳನಕ್ಕೆ ಹೋಗುವ ಮುನ್ನ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರ ಅತಿಥಿಯಾಗಿ ಮೈಸೂರಿಗೆ ಬಂದಿದ್ದರು. ಇವರ ಸಲಹೆಯಂತೆ ಅಸ್ಪೃಶ್ಯ ವರ್ಗದ ಮಕ್ಕಳಿಗೆ ಮಹಾರಾಜರು ಶಾಲೆಗಳನ್ನು ಪ್ರಾರಂಭಿಸಿದರು. ಇವರು ಜ್ಞಾನಯೋಗ, ರಾಜಯೋಗ, ಕರ್ಮಯೋಗ ಮತ್ತು ಭಕ್ತಿಯೋಗಗಳ ಬಗೆಗೆ ಕೃತಿಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಕ್ಕೆ ಇವರ ಆಲೋಚನೆಗಳು ಶಕ್ತಿಯನ್ನು ತುಂಬಿ, ಸ್ವಾತಂತ್ರ್ಯವೆಂದರೆ ಅದು ಸಾಮಾಜಿಕ ಸಮಾನತೆಯೂ ಹೌದು ಎನ್ನುವುದನ್ನು ಸಾರಿದವು.

© KTBS Not to be published

**ಥಿಯೋಸಾಫಿಕಲ್ ಸೊಸೈಟಿ :** ಮೂಲತಃ ಈ ಸಂಸ್ಥೆಯನ್ನು ಮೇಡಂ ಬ್ಲವಾಟ್‌ಸ್ಕೆ ಮತ್ತು ಅಮೆರಿಕನ್ನರಾದ ಕರ್ನಲ್ ಎಚ್.ಎಸ್.ಅಲ್ಕಾಟ್ ಪ್ರಾರಂಭಿಸಿದರು. ಅನಂತರ ಇವರು ಭಾರತಕ್ಕೆ ಬಂದು ಮದರಾಸಿನ ಹತ್ತಿರವಿರುವ ಅಡ್ಯಾರ್ ಎಂಬಲ್ಲಿ ಇದರ ಕೇಂದ್ರ ಕಚೇರಿಯನ್ನು 1886ರಲ್ಲಿ ಆರಂಭಿಸಿದರು. ಈ ಸಂಸ್ಥೆಯ ಪ್ರಮುಖ ಉದ್ದೇಶವೆಂದರೆ ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು. ಮನುಷ್ಯನ ಆಂತರ್ಯದಲ್ಲಿರುವ ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಇದರ ಮತ್ತೊಂದು ಉದ್ದೇಶವಾಗಿತ್ತು. ಮನುಷ್ಯನಿಗೆ 'ವಿಶ್ವಭ್ರಾತೃತ್ವ' ಪ್ರಜ್ಞೆ ಮುಖ್ಯವಾದದ್ದೆಂದು ಘೋಷಿಸಿತು. ಥಿಯೋಸಾಫಿಕಲ್ ಸೊಸೈಟಿಯು ಹಿಂದು ಧರ್ಮಕ್ಕೆ ಸೇರಿದ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಸಾಂಖ್ಯಯೋಗ ಮತ್ತು ವೇದಾಂತ ತಾತ್ವಿಕ ಚಿಂತನೆಗಳಿಂದ ತನ್ನ ಮೂಲತತ್ವಗಳನ್ನು ಪಡೆದುಕೊಂಡು ಪ್ರಚುರಪಡಿಸಿತು. ಈ ಸೊಸೈಟಿಯು ಭಾರತದ ಧಾರ್ಮಿಕ ಮತ್ತು ತಾತ್ವಿಕ ಅಥವಾ ದಾರ್ಶನಿಕ ಪರಂಪರೆಗಳನ್ನು ಅಧ್ಯಯನ


ಅನಿಬೆಸೆಂಟ್

ಮಾಡುವ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿತು. ಹಾಗಾಗಿಯೇ ಈ ಸೊಸೈಟಿಯು ನಡೆಸಿದ ಪ್ರಯತ್ನಗಳನ್ನು ಹಿಂದೂ ಧರ್ಮದ ಪುನರುತ್ಥಾನ ಚಳವಳಿ ಎಂದು ಕರೆಯಲಾಗಿದೆ. ವಿದೇಶಿಯರೂ ಈ ಚಳವಳಿಯಲ್ಲಿ ಹೆಚ್ಚು ಆಸಕ್ತಿತಳೆದದ್ದನ್ನು ಗಮನಿಸಬಹುದಾಗಿದೆ.

ಐರಿಶ್ ಮಹಿಳೆ ಅನಿಬೆಸೆಂಟರು 1893ರಲ್ಲಿ ಭಾರತಕ್ಕೆ ಬಂದ ನಂತರ ಥಿಯೋಸಾಫಿಕಲ್ ಸೊಸೈಟಿಯ ಚಳವಳಿಯು ಗಮನಾರ್ಹವಾಗಿ ಬೆಳೆಯತೊಡಗಿತು. ಥಿಯೋಸಾಫಿಕಲ್ ಸೊಸೈಟಿಯ ಅನುಯಾಯಿಯಾಗಿ 1893ರಲ್ಲಿ ಈಕೆ ಭಾರತಕ್ಕೆ ಬಂದರು. ಇವರು 1847ರಲ್ಲಿ ಲಂಡನ್ ನಗರದಲ್ಲಿ ಜನಿಸಿದರು. ಆಂಗ್ಲಿಕನ್ ಚರ್ಚ್ ಪಾದ್ರಿಯಾದ ತನ್ನ ಗಂಡನಿಗೆ ವಿಚ್ಛೇದನ ನೀಡಿ 1889ರಲ್ಲಿ ಈ ಸಂಸ್ಥೆಯ ಸಕ್ರಿಯ ಸದಸ್ಯರಾದರು. ಇವರು ವೇದಾಂತ ಶಾಸ್ತ್ರದ ಬಗೆಗೆ ವಿಶೇಷ ಜ್ಞಾನವನ್ನು ಹೊಂದಿದ್ದರು. ಐಹಿಕ ಸಂಪತ್ತಿನ ಮೇಲೆ ನಿಂತಿರುವ ಪಶ್ಚಿಮದ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತ ಸಂಸ್ಕೃತಿ ಶ್ರೇಷ್ಠವಾದದ್ದೆಂದು ಪ್ರತಿಪಾದಿಸಿದರು. ಈ ಅರ್ಥದಲ್ಲಿ ಇವರ ಚಳವಳಿಯು ಹಿಂದೂ ಧರ್ಮದ ಪುನರುತ್ಥಾನ ಚಳವಳಿಯಾಗಿತ್ತು. ಇವರು ಹಿಂದು ಮತ್ತು ಬೌದ್ಧ ಧರ್ಮಗಳ ತುಲನಾತ್ಮಕ ಅಧ್ಯಯನವನ್ನು ಮಾಡಿದ್ದರು.


ಇವರ ಪ್ರಮುಖ ಸಾಧನೆಗಳೆಂದರೆ 'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. ಇದರಿಂದ 'ಶ್ವೇತ ಸರಸ್ವತಿ' ಎನಿಸಿಕೊಂಡರು. ಎಲ್ಲ ವರ್ಗಗಳಿಗೂ ಶಿಕ್ಷಣ ಸಿಗಬೇಕೆಂಬುದು ಅವರ ಆಶಯವಾಗಿತ್ತು. ಇದಕ್ಕೆ ಶಾಲೆಗಳನ್ನು ತೆರೆದರು. 1898ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು. ಮುಂದೆ ಇದೇ ಸಂಸ್ಥೆಯು ಮದನಮೋಹನ ಮಾಳವೀಯ ಅವರ ಪ್ರಯತ್ನದಿಂದ 1916ರಲ್ಲಿ 'ಬನಾರಸ್ ಹಿಂದೂ ವಿಶ್ವವಿದ್ಯಾಲಯ'ವಾಗಿ ಪರಿವರ್ತನೆಯಾಯಿತು. ಸಮಕಾಲೀನ ಸಮಸ್ಯೆಗಳನ್ನು ಚರ್ಚೆ ಮತ್ತು ಸಂವಾದಕ್ಕೆ ಈಡು ಮಾಡಲು 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು. 1916ರಲ್ಲೇ 'ಹೋಮ್ ರೂಲ್‌ಲೀಗ್'ನ್ನು ಪ್ರಾರಂಭಿಸಿ ಮದರಾಸು ಪ್ರಾಂತ್ಯದಲ್ಲಿ 'ಹೋಂರೂಲ್' ಚಳವಳಿಗೆ ಚಾಲನೆಯನ್ನು ನೀಡಿದರು. ಹೀಗೆ 'ಥಿಯೋಸಾಫಿಕಲ್ ಸೊಸೈಟಿ' ಮತ್ತು ಅದರ ಅವಿನಾಭಾಗವಾದ ಅನಿಬೆಸೆಂಟ್‌ರಿಗೆ 20ನೇ ಶತಮಾನದ ಆರಂಭಿಕ ಕಾಲಘಟ್ಟದ ಭಾರತದಲ್ಲಿ ಹೊಸ ಧಾರ್ಮಿಕ ಮತ್ತು ಸಾಮಾಜಿಕ ಸಂವೇದನೆ ರೂಪಿಸಿದ ಕೀರ್ತಿ ಸಲ್ಲಬೇಕು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಸಕ್ರಿಯವಾಗಿದ್ದ ಅನಿಬೆಸೆಂಟ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಕೂಡ ಆಗಿದ್ದರು.

© KTBS Not to be published

**ನಿಮಗಿದು ತಿಳಿದಿರಲಿ :**

***'ಹೋಂರೂಲ್':*** *ಬ್ರಿಟನ್ನಿನ ಹಿಡಿತದಲ್ಲಿದ್ದ ಐರ್ಲೆಂಡ್ ಮತ್ತು ಅಲ್ಲಿನ ಜನ ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುವ ಹಕ್ಕನ್ನು ಸಾಧಿಸಲು ಹೋಂರೂಲ್ ಆಂದೋಲನವನ್ನು ನಡೆಸಿದ್ದರು. ಇದರಿಂದ ಪ್ರಭಾವಿತರಾದ ಅನಿಬೆಸೆಂಟ್ ಭಾರತದಲ್ಲಿಯೂ ಹೋಂರೂಲ್ ಚಳುವಳಿಯನ್ನು ಆರಂಭಿಸಿದರು. 1916ರಲ್ಲಿ ಎರಡು ಹೋಂರೂಲ್ ಲೀಗ್‌ಗಳು ಅಸ್ತಿತ್ವಕ್ಕೆ ಬಂದವು. ಒಂದು ತಿಲಕರ ನೇತೃತ್ವದಲ್ಲಿ ಪೂನಾವನ್ನಯ ಕೇಂದ್ರವನ್ನಾಗಿಸಿಕೊಂಡಿತು. ಅದು ಮಹಾರಾಷ್ಟ್ರ, ಉತ್ತರಕರ್ನಾಟಕ, ಕೇಂದ್ರೀಯ ಪ್ರಾಂತ್ಯಗಳು ಮತ್ತು ಬಿರಾರ್ ಪ್ರದೇಶಗಳಲ್ಲಿ ತನ್ನ ಶಾಖೆಗಳನ್ನು ಹೊಂದಿತ್ತು. ಮತ್ತೊಂದು ಹೋಂರೂಲ್‌ಲೀಗ್ ಆನಿಬೆಸೆಂಟರ ನೇತೃತ್ವದಲ್ಲಿ ಮದ್ರಾಸನ್ನು ಕೇಂದ್ರವನ್ನಾಗಿಸಿಕೊಂಡಿತು. ತಿಲಕರು 'ಮರಾಠ' ಮತ್ತು 'ಕೇಸರಿ' ಪತ್ರಿಕೆಗಳನ್ನು ನಡೆಸಿದರೆ, ಬೆಸೆಂಟರು 'ನ್ಯೂ ಇಂಡಿಯಾ', 'ಕಾಮನ್‌ವೆಲ್ತ್' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು.*

## ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ



ಶ್ರೀ ನಾರಾಯಣಗುರು

ಶ್ರೀ ನಾರಾಯಣಗುರು ಅವರು 1903ರಲ್ಲಿ ಧರ್ಮ ಪರಿಪಾಲನಾ ಯೋಗಂ ಆರಂಭಿಸಿದರು. ಇವರು ಕೇರಳದ ಈಳವು ಎಂಬಲ್ಲಿ ಹುಟ್ಟಿದರು. ಈ ಸಂಘಟನೆಯ ಪ್ರಮುಖ ಉದ್ದೇಶವೆಂದರೆ ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ. ನಾರಾಯಣಗುರು (1854–1928) ಹಾಗೂ ಅವರ ಒಡನಾಡಿಗಳಾದ ಡಾ॥ ಪಲ್ಪು ಮತ್ತು ಕುಮಾರನ್ ಆಸನ್‌ರವರು ಈ ಚಳವಳಿಯನ್ನು ಮುನ್ನಡೆಸಿದರು.

ಕೇರಳದ ಸಮಾಜದಲ್ಲೂ ಅತಿ ಜಾತಿ ಅಂತರಗಳ ಸಮಸ್ಯೆಗಳು ವ್ಯಾಪಕವಾಗಿದ್ದು, ಅನೇಕ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು. ಆ ಕಾಲಘಟ್ಟದಲ್ಲಿ ಈ ಸಮುದಾಯಗಳು ಎಲ್ಲರೂ ಬಳಸಲು ಇದ್ದ ಕೆರೆ ಬಾವಿಗಳಲ್ಲಿ ನೀರನ್ನು ತೆಗೆದುಕೊಳ್ಳಲಾಗುತ್ತಿರಲಿಲ್ಲ. ರಸ್ತೆಗಳ ಮೂಲಕ ಓಡಾಡಲಾಗುತ್ತಿರಲಿಲ್ಲ. ಚಪ್ಪಲಿಗಳನ್ನು ಹಾಕುವಂತಿರಲಿಲ್ಲ. ದೇವಸ್ಥಾನಕ್ಕೆ ಪ್ರವೇಶಿಸುವಂತಿರಲಿಲ್ಲ. ಮಹಿಳೆಯರ ಉಡುಪುಗಳ ಮೇಲೂ ನಿರ್ಬಂಧಗಳನ್ನು ಹೇರಲಾಗಿತ್ತು.ಇಷ್ಟೇ ಅಲ್ಲದೆ ಶಾಲೆಗಳಿಗೂ ಇವರಿಗೆ ಪ್ರವೇಶವಿರಲಿಲ್ಲ. ಕನಿಷ್ಠ ಪ್ರಮಾಣದ ಮಾನವ ಹಕ್ಕುಗಳನ್ನು ಪಡೆಯದ ಈ ಸಮುದಾಯಗಳು ಉಸಿರುಗಟ್ಟಿ ಬದುಕಬೇಕಾದ ಪರಿಸ್ಥಿತಿ ಇತ್ತು. ಈ ವಿಷಯಗಳನ್ನು ಕೈಗೆತ್ತಿಕೊಂಡು ಶ್ರೀ ನಾರಾಯಣಗುರು ಅವರು ತಮ್ಮ ಧರ್ಮ ಪರಿಪಾಲನಾ ಯೋಗಂ ಮೂಲಕ ಸಾಮಾಜಿಕ ಪ್ರತಿರೋಧದ ಚಳುವಳಿಗಳನ್ನು ಪ್ರಾರಂಭಿಸಿದರು. ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣವೇ ಈ ಸಂಘಟನೆಯ ಉದ್ದೇಶವಾಗಿತ್ತು. ನಾರಾಯಣಗುರು ಅವರ ಪ್ರಮುಖ ಆಶಯ ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು (One Caste, One Religion And One God For Man) ಎಂಬುದು. ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು. ಕೆಳಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.


ನಾರಾಯಣಗುರು ಮತ್ತು ಅವರ ಅನುಯಾಯಿಗಳು 1924ರಲ್ಲಿ ವೈಕಂ ಸತ್ಯಾಗ್ರಹವೆಂಬ ಶಿವ ದೇವಾಲಯ ಪ್ರವೇಶ ಚಳವಳಿಯನ್ನು ನಡೆಸಿದರು. ಇದರಲ್ಲಿ ಗಾಂಧೀಜಿಯವರು ಹಾಗೂ ಆತ್ಮಗೌರವ ಚಳವಳಿಯ ರೂವಾರಿಗಳಾದ ಪೆರಿಯಾರರು ಭಾಗವಹಿಸಿದ್ದರು. ಗುರುವಾಯೂರು ದೇವಾಲಯ ಪ್ರವೇಶ ಚಳವಳಿಯು ಮತ್ತೊಂದು ಮಹತ್ವದ ಘಟನೆ.

## ಪೆರಿಯಾರ್

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಇದ್ದ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟವನ್ನು ಆರಂಭಿಸಿದರು. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇದೊಂದು ಪ್ರಮುಖ ಚಳವಳಿಯಾಯಿತು. ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸತೊಡಗಿದರು. ಇದಕ್ಕೆ ಪ್ರಮುಖ ಕಾರಣವಾದದ್ದು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ. ಇದರ ಜೊತೆಗೆ ಬ್ರಿಟಿಷರು 1870ರ ನಂತರ ತಂದ ಜನಗಣತಿ ವರದಿಗಳು, ಬ್ರಾಹ್ಮಣೇತರರಿಗೆ ತಮ್ಮ ಜನಸಂಖ್ಯೆಯ ಅರಿವನ್ನು ತಂದುಕೊಟ್ಟವು. ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟೀಸ್ ಪಾರ್ಟಿ'ಯು ಈ ಚಳವಳಿಯನ್ನು ಮುನ್ನಡೆಸಿತು.

© KTBS Not to be published

ಜಸ್ಟೀಸ್ ಪಾರ್ಟಿಯ ಮೂಲಕ ಬ್ರಾಹ್ಮಣೇತರ ಚಳವಳಿಯು ಹೊಸರೂಪವನ್ನು ಪಡೆಯಿತು. ಇದು ಹೆಚ್ಚು ಕ್ರಾಂತಿಕಾರಕವಾದ ಹೆಜ್ಜೆಯಾಗಿತ್ತು. ಆ ಹೊಸರೂಪವೇ ಇ.ವಿ. ರಾಮಸ್ವಾಮಿ ನಾಯ್ಕರ್ ಅವರ ನೇತೃತ್ವದಲ್ಲಿ ಆರಂಭಗೊಂಡ 'ಆತ್ಮಗೌರವ ಚಳವಳಿ' (Self Respect Movement). 1925ರಲ್ಲಿ ಕಾಂಗ್ರೆಸ್ ಪಕ್ಷದಿಂದ ಹೊರಬಂದ ರಾಮಸ್ವಾಮಿಯವರು 1926ರಲ್ಲಿ ಸೆಲ್ಫ್ ರೆಸ್ಪೆಕ್ಟ್ ಲೀಗ್ ಅನ್ನು ಆರಂಭಿಸಿದರು. ಇವರನ್ನು ಜನರು ಪ್ರೀತಿಯಿಂದ ಪೆರಿಯಾರ್ (ಹಿರಿಯರು) ಎಂದು ಕರೆದರು. ಪೆರಿಯಾರ್ ತಮಿಳುನಾಡಿನ ಈರೋಡಿನಲ್ಲಿ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು. ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು ಅದಕ್ಕೆ ಪರ್ಯಾಯವಾದ ದ್ರಾವಿಡ ಚಳವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳವಳಿ ಯನ್ನು ರೂಪಿಸತೊಡಗಿದರು. ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು. ತಮಿಳುಭಾಷೆಯನ್ನು ದ್ರಾವಿಡರ ಭಾಷೆಯೆಂದರು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು. ಮತ್ತೊಂದು ಪ್ರಮುಖ ಅಂಶವೆಂದರೆ ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ, ರಾಮನನ್ನು ವೈದಿಕ ವರ್ಗದ ದೇವರೆಂದು ತಿರಸ್ಕರಿಸಿದರು. ಬನಾರಸ್ಸಿನಲ್ಲಿ ಆದ ಕಹಿ ಅನುಭವಗಳಿಂದ ಮತ್ತಷ್ಟು ವ್ಯಗ್ರರಾದ ಪೆರಿಯಾರರು ಸಂಸ್ಕೃತ ಭಾಷೆ ಮತ್ತು ರಾಮಾಯಣದ ರಾಮ ಮತ್ತು ರಾವಣರನ್ನು ಸಾಂಸ್ಕೃತಿಕ ಸಂಕೇತಗಳನ್ನಾಗಿ ಪರಿವರ್ತಿಸಿ, ರಾವಣ ಪರಂಪರೆಯನ್ನು ವೈಭವೀಕರಿಸಿದರು. ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು. 1924ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು. 1939ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು. "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. 'ರಿವೋಲ್ಟ್' ಪತ್ರಿಕೆಯನ್ನು ಹುಟ್ಟುಹಾಕಿದರು.


ಪೆರಿಯಾರ್

© KTBS Not to be republished

ಇಂದಿಗೂ ತಮಿಳುನಾಡಿನ ರಾಜಕೀಯ ಕ್ಷೇತ್ರಗಳಲ್ಲಿ ಪೆರಿಯಾರರು ಸೈದ್ಧಾಂತಿಕ ಸಂಕೇತವಾಗಿ ಉಳಿದಿದ್ದಾರೆ. ಅಲ್ಲಿನ ರಾಜಕೀಯ ಪಕ್ಷಗಳು 'ದ್ರಾವಿಡ' ಎನ್ನುವ ಹೆಸರನ್ನು ತಮ್ಮ ಪಕ್ಷಗಳ ಹೆಸರಿನಲ್ಲಿ ಉಳಿಸಿಕೊಂಡಿರುವುದೇ ಇದಕ್ಕೆ ದೊಡ್ಡ ಸಾಕ್ಷಿ. ಸಿ. ಅಯೋಥಿದಾಸ್ ಪಂಡಿತ್, ಟಿ.ಎಂ.ನಾಯರ್ ಮುಂತಾದವರು ಆರಂಭಿಸಿ ಸೈದ್ಧಾಂತಿಕವಾಗಿ ರೂಪಿಸಿದ ಬ್ರಾಹ್ಮಣೇತರ ಚಳವಳಿಯನ್ನು ಪೆರಿಯಾರರು ಸಾಂಸ್ಕೃತಿಕ ಚಳವಳಿಯನ್ನಾಗಿ ಪರಿವರ್ತಿಸಿದರು. ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ, ಜಾತಿ, ಲಿಂಗ ಅಸಮಾನತೆಗಳಿಂದ ಹೊರಬಂದು 'ಸರ್ವಧರ್ಮಸಹಿಷ್ಣತೆಯ' ಸಮಾಜ ರೂಪುಗೊಳ್ಳಬೇಕು ಎನ್ನುವುದೇ ಅವರ ಬದುಕಿನ ಧ್ಯೇಯವಾಗಿತ್ತು.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. 19ನೆಯ ಶತಮಾನವನ್ನು __________ ಕಾಲವೆಂದು ಕರೆಯಲಾಗಿದೆ.
2. ರಾಜಾ ರಾಮ್‌ಮೋಹನರಾಯರು __________ ಪತ್ರಿಕೆಯನ್ನು ಪ್ರಾರಂಭಿಸಿದರು.
3. ಪ್ರಾರ್ಥನಾ ಸಮಾಜದ ಸ್ಥಾಪಕರು__________ .

4. ಯುವಬಂಗಾಳಿ ಚಳವಳಿಯನ್ನು ಪ್ರಾರಂಭಿಸಿದವರು ______________ .

5. ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು ____________ .

6. ಆಂಗ್ಲೋ ಓರಿಯಂಟಲ್ ಕಾಲೇಜನ್ನು __________ ಎಂಬಲ್ಲಿ ಸ್ಥಾಪಿಸಲಾಗಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಬ್ರಹ್ಮಸಮಾಜದ ಬೋಧನೆಗಳಾವುವು?
2. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.
3. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.
4. ಆಲಿಘರ್ ಚಳವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.
5. ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ.
6. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.
7. ಆನಿಬೆಸೆಂಟರ ಸುಧಾರಣಾ ಕ್ರಮಗಳಾವುವು?
8. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.
9. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

© KTBS Not to be published

**III. ಚಟುವಟಿಕೆ :**

1. ಹತ್ತಿರದಲ್ಲಿರುವ ರಾಮಕೃಷ್ಣಾಶ್ರಮಕ್ಕೆ ಭೇಟಿ ನೀಡಿ, ವಿವೇಕಾನಂದರ ದೃಷ್ಟಿಕೋನದ ಬಗ್ಗೆ ಮಾಹಿತಿ ಸಂಗ್ರಹಿಸಿ.

**IV. ಯೋಜನೆಗಳು :**

1. ಗ್ರಂಥಾಲಯಗಳಿಗೆ ಭೇಟಿ ನೀಡಿ ಸಮಾಜ ಸುಧಾರಣೆ ಪುಸ್ತಕಗಳನ್ನು ಓದಿರಿ. ಶಿಕ್ಷಕರ ನೆರವಿನಿಂದ ಅಂತರ್ಜಾಲದಿಂದ ಮಾಹಿತಿ ಸಂಗ್ರಹಿಸಿ.
2. ಸಮಾಜ ಸುಧಾರಣೆಗಾಗಿ ಇಂದು ಶ್ರಮಿಸುತ್ತಿರುವ ಸಂಸ್ಥೆಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ.

* * * *

D9N5K3

## ಅಧ್ಯಾಯ – 6

# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು.*
- *ದಂಗೆಯ ತತ್‌ಕ್ಷಣದ ಕಾರಣ.*
- *ದಂಗೆಯ ವಿಸ್ತರಣೆ ಮತ್ತು ಸ್ವರೂಪ.*
- *ದಂಗೆಯ ವಿಫಲತೆ ಮತ್ತು ಪರಿಣಾಮಗಳು.*

ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು. ಈ ನೀತಿಗಳಿಂದ ಹಲವು ಸಂಸ್ಥಾನಗಳು ಬ್ರಿಟಿಷರ ವಶವಾಗಿದ್ದವು. ಇದರಿಂದಾಗಿ ಭಾರತೀಯರು ಅಸಮಾಧಾನಗೊಂಡರು. ಇವರ ಆಡಳಿತದ ಬಗ್ಗೆಯೂ ಕೂಡಾ ಜನರಲ್ಲಿ ಅಸಮಾಧಾನವಿತ್ತು. ಈ ಅಸಮಾಧಾನವು 1857ರಲ್ಲಿ ಮಹಾಪ್ರತಿಭಟನೆಯ ರೂಪದಲ್ಲಿ ಸ್ಫೋಟಿಸಿತ್ತು. ಇದನ್ನು ಕೆಲವು ಭಾರತೀಯ ಇತಿಹಾಸಕಾರರು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರೆ, ಇಂಗ್ಲಿಷ್ ಇತಿಹಾಸಕಾರರು ಇದೊಂದು 'ಸಿಪಾಯಿ ದಂಗೆ' ಮಾತ್ರ ಎಂದಿದ್ದಾರೆ.

© KTBS Not to be republished

### ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು:

**ರಾಜಕೀಯ ಕಾರಣಗಳು:** ಬ್ರಿಟಿಷರು ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾಗಿ ಹಲವು ದೇಶೀಯ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು. ಡಾಲ್‌ಹೌಸಿಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದುಪಡಿಸಿದನು. ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಇಂಗ್ಲಿಷರು ಅಧಿಕಾರದಿಂದ ಪದಚ್ಯುತಗೊಳಿಸಿದರು. ಪರಿಣಾಮವಾಗಿ ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು. ಇದು ಬ್ರಿಟಿಷರ ವಿರುದ್ಧದ 1857ರ ಪ್ರತಿಭಟನೆಗೆ ಪ್ರೇರಕವಾಯಿತು.

> **ನಿಮಗಿದು ತಿಳಿದಿರಲಿ :**
>
> **ದತ್ತು ಮಕ್ಕಳಿಗೆ ಹಕ್ಕಿಲ್ಲ:** ಈ ನೀತಿಯನ್ನು ಇಂಗ್ಲಿಷರ ಕಾಲದಲ್ಲಿ ಲಾರ್ಡ್ ಡಾಲ್‌ಹೌಸಿಯು ಜಾರಿಗೆ ತಂದಿದ್ದನು. ಯಾವುದೇ ದೇಶೀಯ ಸಂಸ್ಥಾನದ ರಾಜನು ತನಗೆ ಮಕ್ಕಳಿಲ್ಲದಿದ್ದರೆ ರಾಜ್ಯವನ್ನು ದತ್ತು ಮಕ್ಕಳಿಗೆ ನೀಡುವಂತಿರಲಿಲ್ಲ. ಇದರಿಂದಾಗಿ ಆ ಸಂಸ್ಥಾನವು ಸಹಜವಾಗಿ ಇಂಗ್ಲಿಷರ ಆಳ್ವಿಕೆಗೆ ಒಳಪಡುತ್ತಿದ್ದವು.

**ಆರ್ಥಿಕ ಕಾರಣಗಳು:** ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಭಾರತದ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು. ಇಂಗ್ಲೆಂಡ್ ಕೇವಲ ವ್ಯಾಪಾರಿ ರಾಷ್ಟ್ರವಾಗಿರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು. ಭಾರತದಲ್ಲಿದ್ದ ಕರಕುಶಲಗಾರರು ನಿರುದ್ಯೋಗಿಗಳಾದರು. ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು. ಗೃಹಕೈಗಾರಿಕೆಗಳು ಇದೇ ಬಗೆಯ ತೀವ್ರ ಆರ್ಥಿಕನಷ್ಟ ಅನುಭವಿಸಿ ಶಿಥಿಲಗೊಂಡವು. ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಲು ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು. ಜಮೀನ್ದಾರಿ ಪದ್ಧತಿಯಿಂದಾಗಿ ಸರ್ಕಾರ ಮತ್ತು ರೈತನ ಮಧ್ಯೆ ಇದ್ದ ಮಧ್ಯವರ್ತಿ ಜಮೀನ್ದಾರನು ಕೃಷಿಕರನ್ನು ಶೋಷಿಸುತ್ತಿದ್ದನು. ಕಂದಾಯ

ವಸೂಲಿ ಮಾಡಲು ತಾಲ್ಲೂಕುದಾರರಿಗೆ ನೀಡಿದ್ದ ಹಕ್ಕುಗಳನ್ನು ಹಿಂಪಡೆಯಲಾಯಿತು. ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು. ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕಸಂಕಷ್ಟ ಅನುಭವಿಸಿದರು. ಇದೂ ಕೂಡ ರೈತರ ಪ್ರತಿಭಟನೆಗೆ ಕಾರಣವಾಯಿತು.

**ಆಡಳಿತಾತ್ಮಕ ಕಾರಣಗಳು:** ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು. ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು. ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು. ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು. ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**ಸೈನಿಕ ಕಾರಣಗಳು:** ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು. ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

## ದಂಗೆಯ ತಕ್ಷಣದ ಕಾರಣ

ಇಂಗ್ಲಿಷ್ ಸೇನೆಯಲ್ಲಿದ್ದ ಹೆಚ್ಚಿನ ಪ್ರಮಾಣದ ಭಾರತೀಯ ಸಿಪಾಯಿಗಳು ತಾವೆಲ್ಲರೂ ಒಂದಾಗಿ ಹೋರಾಡಿದರೆ ಇಂಗ್ಲಿಷರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದರು. ಈ ಸನ್ನಿವೇಶದಲ್ಲಿ ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು. ಈ ವದಂತಿಯು ದಂಗೆಗೆ ತಕ್ಷಣದ ಕಾರಣವಾಯಿತು.

© KTBS Not to be published

ಬ್ಯಾರಕ್‌ಪುರದಲ್ಲಿನ ಸೈನಿಕ ಪಡೆಯಲ್ಲಿ ಹಬ್ಬಿದ ಈ ವದಂತಿಯು ತೀವ್ರ ಅಸಮಾಧಾನಕ್ಕೆ ಕಾರಣವಾಯಿತು. ಸೈನಿಕರಿಗೆ ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಇಂಗ್ಲಿಷರು ಆದೇಶಿಸಿದಾಗ ಇದನ್ನು ತಿರಸ್ಕರಿಸಿ ಮೇಲಾಧಿಕಾರಿಗಳ ವಿರುದ್ಧ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು. ಇದೇ ಸಂದರ್ಭದಲ್ಲಿ ಮಂಗಲ ಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಅಧಿಕಾರಿಯೊಬ್ಬನನ್ನು ಕೊಂದನು. ಇದರ ಪರಿಣಾಮವಾಗಿ ಮಂಗಲಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.


ತಾತ್ಯಾಟೋಪೆ

**ದಂಗೆಯ ಹರಡುವಿಕೆ :** ಮೀರತ್ ಬ್ರಿಟಿಷರ ಪ್ರಬಲ ಸೇನಾ ನೆಲೆಯಾಗಿತ್ತು. ಇಲ್ಲಿಯೂ ಕೂಡಾ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿಸಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿದರು. ಆಗ ಸಿಪಾಯಿಗಳನ್ನು ಬಂಧಿಸಲಾಯಿತು. ಇದರಿಂದಾಗಿ ಮೀರತ್‌ನಲ್ಲಿ ದಂಗೆ ಉಂಟಾಯಿತು. ಪರಿಣಾಮವಾಗಿ ಸೈನಿಕರು ಸೆರಮನೆಗೆ ನುಗ್ಗಿ ಈಗಾಗಲೇ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು. ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು. ನಂತರ ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿತು. ಅವರು ಕೆಂಪುಕೋಟೆಗೆ ನುಗ್ಗಿ ಮೊಘಲ್ ದೊರೆ ಎರಡನೇ ಬಹದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಹಲವಾರು ಭಾಗಗಳಿಂದ ಪ್ರತಿಭಟನಾ ನಿರತ ಸಿಪಾಯಿಗಳು ದೆಹಲಿಗೆ ತಲುಪಿದರು. ಇದರಿಂದಾಗಿ ಪ್ರತಿಭಟನೆಯು ತೀವ್ರ ಸ್ವರೂಪ ತಾಳಿತು. ಕಾಳ್ಗಿಚ್ಚಿನಂತೆ ಪ್ರತಿಭಟನೆಯು ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.

ಕಾನ್ಪುರದಲ್ಲಿ ನಾನಾ ಸಾಹೇಬನು ಸಿಡಿದೆದ್ದನು. ಈತನಿಗೆ ತಾತ್ಯಾ ಟೋಪೆಯು ಸಹಾಯಕನಾಗಿದ್ದನು. ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿಯ ನಾಯಕತ್ವದಲ್ಲಿ ದಂಗೆ ಉಂಟಾಯಿತು. ಕಾನ್ಪುರ ಬ್ರಿಟಿಷರ ವಶವಾದ ನಂತರ ತಾತ್ಯಾಟೋಪೆಯು ಝಾನ್ಸಿರಾಣಿಯ ಸಹಾಯಕ್ಕೆ ಬಂದನು.



ಝಾನ್ಸಿ ರಾಣಿ ಲಕ್ಷ್ಮಿಬಾಯಿ

ಪ್ರತಿಭಟನೆಯ ಕಾವು ಲಕ್ನೋವಿನಲ್ಲಿಯೂ ಉಂಟಾಯಿತು. ಆದರೆ ಅಂತಿಮವಾಗಿ ಲಕ್ನೋ ಇಂಗ್ಲಿಷರ ವಶವಾಯಿತು. ಇಲ್ಲಿಂದ ಸಂಗ್ರಾಮವು ಯಮುನಾ ನದಿಯ ದಕ್ಷಿಣಕ್ಕೆ ಹಬ್ಬಿತು. ಇದರಿಂದಾಗಿ ಝಾನ್ಸಿಯಲ್ಲಿನ ಸಿಪಾಯಿಗಳು ಪ್ರಭಾವಿತರಾದರು. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಕೆರಳಿದ ಝಾನ್ಸಿರಾಣಿ ಲಕ್ಷ್ಮಿಬಾಯಿಯು ಇಂಗ್ಲಿಷರ ವಿರುದ್ಧ ಯುದ್ದ ಸಾರಿದಳು. ಯುದ್ದ ಮಾಡಿ ಗ್ವಾಲಿಯರ್‌ನ್ನು ವಶಕ್ಕೆ ಪಡೆದಳು. ಮತ್ತೊಮ್ಮೆ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಶೌರ್ಯದಿಂದ ಹೋರಾಡಿ ರಾಣಿಯು ಅಸುನೀಗಿದಳು. ಇಂದಿಗೂ ರಾಣಿಯು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾಳೆ.

**ದಂಗೆಯ ವಿಫಲತೆಗೆ ಕಾರಣಗಳು :**

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು. ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ. ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ರಾಜರ/ರಾಣಿಯರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು. ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು. ಬ್ರಿಟಿಷ್ ಸೈನಿಕರಲ್ಲಿನ ಒಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯು ದಂಗೆಯ ವಿಫಲತೆಗೆ ಕಾರಣವಾಗಿದೆ. ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು. ಹಾಗೆಯೇ ಭಾರತೀಯರಲ್ಲಿ ಯುದ್ಧ ತಂತ್ರ, ಸೈನಿಕ ಪರಿಣತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತು ಮುಂತಾದವುಗಳ ಕೊರತೆ ಇತ್ತು, ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ. ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ. ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**ದಂಗೆಯ ಪರಿಣಾಮಗಳು :**

ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು. ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು. 1858ರಲ್ಲಿ ಬ್ರಿಟನ್ ರಾಣಿಯು ಒಂದು ಘೋಷಣೆ ಹೊರಡಿಸಿದರು. ಅದರಲ್ಲಿ ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿತ್ತು.

1. ಕಂಪನಿಯು ದೇಶೀಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
2. ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
3. ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
4. ಕಾನೂನಿನ ಮುಂದೆ ಸಮಾನತೆ.
5. ಧಾರ್ಮಿಕ ಸಹಿಷ್ಣುತೆಯೊಂದಿಗೆ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

© KTBS Not to be published

ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ನಾವು ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು. ಬ್ರಿಟಿಷರ ಬಗೆಗೆ ಇದ್ದ ಭಾರತೀಯರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಮಾರ್ಗೋಪಾಯಗಳನ್ನು ಸೃಷ್ಟಿಸಿಕೊಳ್ಳದಿದ್ದುದು ಇದಕ್ಕೆ ಕಾರಣವೆಂದು ಬ್ರಿಟಿಷರು ಮನಗಂಡರು, ಹೀಗಾಗಿ ಈ ಘಟನೆಯ ನಂತರ 'ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ' (Policy of assotiation) ನೀತಿಯನ್ನು ಜಾರಿಗೊಳಿಸಿದರು ಇದು ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು. ಭಾರತೀಯರು ಇನ್ನು ಮುಂದೆ ಹೋರಾಟದ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡರು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳವನ್ನು ಸೂಕ್ತ ಉತ್ತರದಿಂದ ತುಂಬಿರಿ.**

1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು ____________ ಎಂದು ಕರೆದಿದ್ದಾರೆ.
2. ಡಾಲ್ ಹೌಸಿಯು ಜಾರಿಗೆ ತಂದ ನೀತಿ ____________ .
3. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ____________ .
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ____________ ನ್ನು ವಶಕ್ಕೆ ಪಡೆದಳು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

1. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.
2. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.
3. 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?
4. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣಗಳಾವುವು?
5. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.
6. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

**III. ಚಟುವಟಿಕೆಗಳು :**

1. ಭಾರತದ ಭೂಪಟದಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಬ್ರಿಟಿಷರ ವಶವಾದ ಸಂಸ್ಥಾನಗಳನ್ನು ಗುರುತಿಸಿ.
2. 1857ರ ದಂಗೆಯು ಭಾರತೀಯರಿಗೆ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' – ಈ ವಿಷಯದ ಬಗ್ಗೆ ತಜ್ಞರಿಂದ ಉಪನ್ಯಾಸ ಏರ್ಪಡಿಸಿ.

* * * *

© KTBS Not to be published

# ರಾಜ್ಯಶಾಸ್ತ್ರ

## ಅಧ್ಯಾಯ – 1

## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

E6J1Z9

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ನಿರುದ್ಯೋಗ
- ತಾರತಮ್ಯ (ಲಿಂಗ, ಜಾತಿ, ಪ್ರಾಂತೀಯ ಅಸಮಾನತೆ)
- ಭಯೋತ್ಪಾದಕತೆ
- ಭ್ರಷ್ಟಾಚಾರ
- ಕೋಮುವಾದ
- ಕಾರ್ಪೋರೇಟ್ ತಂತ್ರಗಾರಿಕೆ

© KTBS Not to be published

ನಾವು 1947ರಿಂದ ಹಲವಾರು ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಆ ಸಮಸ್ಯೆಗಳನ್ನು ಸರಿಯಾದ ಯೋಜನೆ ಹಾಗೂ ಉತ್ತಮ ಆಡಳಿತದ ಮೂಲಕ ಪರಿಹರಿಸಬೇಕಾಗಿದೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟದ ಸರಕಾರಗಳಿಗೆ, ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜನತೆಯ ಸಹಕಾರವೂ ಅತ್ಯಗತ್ಯ.

ಹಾಗಾಗಿ ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳು ಯಾವುವು ಎಂದು ತಿಳಿಯಬೇಕಾದುದು ನಮ್ಮ ಕರ್ತವ್ಯವಲ್ಲವೇ? ಹೌದು, ನಾವು ಈ ಎಲ್ಲಾ ರಾಷ್ಟ್ರೀಯ ವಿಷಯಗಳ ಬಗೆಗೆ ತಿಳಿಯಬೇಕು ಹಾಗೂ ಅವುಗಳಿಗೆ ಸರಿಯಾದ ಪರಿಹಾರಗಳನ್ನೂ ಕಂಡು ಹಿಡಿಯಬೇಕು. ಇವುಗಳಲ್ಲಿ ಬಹುತೇಕ ಮಾನವ ನಿರ್ಮಿತ ಸಮಸ್ಯೆಗಳು ಹಾಗೂ ರಾಷ್ಟ್ರೀಯ ದುರಂತಗಳು. ಹಾಗಾಗಿ ನಾವು ಅವುಗಳಿಗೆ ಸೂಕ್ತ ಎನಿಸುವ ಮಾನವೀಯ ಪರಿಹಾರಗಳನ್ನು ಕಂಡುಕೊಳ್ಳಬೇಕು. ಉತ್ತಮ ಶಾಸನಾತ್ಮಕ, ಸಾಮಾಜಿಕ ಸುಧಾರಣೆಗಳು, ದಕ್ಷ ಆಡಳಿತ, ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ ಹಾಗೂ ಜನತೆಯ ಸಹಕಾರಗಳಿಂದ ಸಮಸ್ಯೆಗಳನ್ನು ನಿಗ್ರಹಿಸುವ ಪ್ರಯತ್ನ ನಡೆಯಬೇಕಿದೆ. ಅಂತಹ ಸಮಸ್ಯೆಗಳ ಬಗ್ಗೆ ತಿಳಿಯೋಣ.

**ನಿರುದ್ಯೋಗ :** ನಿರುದ್ಯೋಗ ಎಂದರೆ ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯಾಗಿದೆ. ಭಾರತ ಇಂದು ದೊಡ್ಡ ಪ್ರಮಾಣದಲ್ಲಿ ಜನಸಂಖ್ಯೆಯನ್ನು ಹೊಂದಿದ್ದು, ನಿರುದ್ಯೋಗ ಸಮಸ್ಯೆ ಒಂದು ಸವಾಲಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಮಿತಿಮೀರಿದ ಜನಸಂಖ್ಯೆ ಮತ್ತು ಹೆಚ್ಚಾದ ತಂತ್ರಜ್ಞಾನದ ಬಳಕೆ ಇವುಗಳನ್ನು ನಿರುದ್ಯೋಗಕ್ಕೆ ಮುಖ್ಯ ಕಾರಣಗಳೆಂದು ಗುರುತಿಸಲಾಗುತ್ತದೆ. ಇವುಗಳಲ್ಲದೇ ನೈಸರ್ಗಿಕ ಸಂಪನ್ಮೂಲಗಳ ಕೊರತೆ, ಕೃಷಿಯ ಮೇಲಿನ ಅಧಿಕ ಅವಲಂಬನೆ, ಗೃಹ ಕೈಗಾರಿಕೆಗಳ ನಾಶ, ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ ಇವುಗಳಿಂದಾಗಿಯೂ ನಿರುದ್ಯೋಗ ಒಂದು ದೊಡ್ಡ ಸಮಸ್ಯೆಯಾಗಿ ಬೆಳೆದಿದೆ. ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಬಡತನದ ದರ ಶೇಕಡಾ 21.9 ಆಗಿದ್ದು ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿರುವುದನ್ನು ಸೂಚಿಸುತ್ತದೆ. ಈ ರೀತಿ ಹೆಚ್ಚುತ್ತಿರುವ ಬಡತನದ ಸಮಸ್ಯೆಯನ್ನು ತಗ್ಗಿಸಲು ಭಾರತ ಸರ್ಕಾರ ಮತ್ತು ರಾಷ್ಟ್ರದಲ್ಲಿನ ಎಲ್ಲಾ ರಾಜ್ಯ ಸರ್ಕಾರಗಳು ಹಲವಾರು ರೀತಿಯ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ. ಇವುಗಳಲ್ಲಿ ಜನತೆಗೆ ಉದ್ಯೋಗ ಮಾಡಲು ಅಗತ್ಯವಿರುವ ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ, ಸ್ವಯಂ ಉದ್ಯೋಗ ಕೈಗೊಳ್ಳಲು ಅಗತ್ಯವಿರುವ ಮೂಲ ಬಂಡವಾಳವನ್ನು ಸಾಲದ ರೂಪದಲ್ಲಿ ನೀಡುವುದು ಹಾಗೂ ಸಾಧ್ಯವಾದಷ್ಟು ಸಹಾಯಧನ ನೀಡುವ ಮೂಲಕ ಸ್ವಯಂ ಉದ್ಯೋಗಗಳನ್ನು ಪ್ರೋತ್ಸಾಹಿಸುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ. ಆದರೆ ವಾಸ್ತವವಾಗಿ ಕರಕುಶಲ ಕಸುಬುಗಳು ಹಾಗೂ ಇತರೆ ಸ್ವಯಂ ಉದ್ಯೋಗಗಳು ಜಾಗತೀಕರಣ ಯುಗದಲ್ಲಿ ಕೈಗಾರಿಕೀಕರಣದಿಂದ ಉತ್ಪಾದನೆಯಾಗುತ್ತಿರುವ ವಸ್ತುಗಳಿಗೆ

ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡುವಲ್ಲಿ ವಿಫಲವಾಗುತ್ತಿರುವುದು ಭಾರತದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಿದೆ. ಆದ್ದರಿಂದ ಭಾರತದಲ್ಲಿನ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಆಧುನಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಿ ಉದ್ಯೋಗ ಪಡೆಯುವಂತಹ ಸಾಮರ್ಥ್ಯವನ್ನು ವೃದ್ಧಿಸಲು ಪೂರಕವಾದ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುವುದು ಅಗತ್ಯವಾಗಿದೆ. ಇನ್ನೊಂದೆಡೆ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲಾ ಒಂದು ವೃತ್ತಿಯಲ್ಲಿ ತೊಡಗುವಂತೆ ಪ್ರೇರೇಪಿಸುವ ಸಾಮಾಜಿಕ ಬದಲಾವಣೆಯನ್ನು ಮಾಡುವ ವೃತ್ತಿ ಶಿಕ್ಷಣವನ್ನು ಕೂಡಾ ನೀಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ.

**ಭ್ರಷ್ಟಾಚಾರ :** ಭಾರತದ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಒಂದು ಮುಖ್ಯ ಪಿಡುಗು ಎನಿಸಿದೆ. ವಾಸ್ತವಿಕವಾಗಿ ಇದು ಸಾರ್ವತ್ರಿಕವಾಗಿ ಹಾಗೂ ಸಮಾಜದ ಎಲ್ಲಾ ಸ್ತರಗಳಲ್ಲಿಯೂ ವ್ಯಾಪಕವಾಗಿ ಹಬ್ಬಿದೆ. ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದು ಅರ್ಥ. ಅದು ಸರಿಯಾದ ಮತ್ತು ನ್ಯಾಯಬದ್ಧವಾದ ಕಾರ್ಯಾಚರಣೆಯಿಂದ ಸ್ಪಷ್ಟವಾಗಿ ದೂರ ಸರಿಯುವಿಕೆಯನ್ನು ಸೂಚಿಸುತ್ತದೆ. ಸಾರ್ವಜನಿಕ ಜೀವನದ ಅಧಿಕಾರ ಹಾಗೂ ವರ್ಚಸ್ಸನ್ನು ಸ್ವಾರ್ಥ ಹಾಗೂ ತಪ್ಪು ವಿಧಾನದ ದುರ್ಬಳಕೆ ಎಂದೂ ಇದನ್ನು ವ್ಯಾಖ್ಯಾನಿಸಬಹುದು. ಎಲ್ಲಾ ವಿಧಿವಿಧಾನಗಳನ್ನು ಬದಿಗೆ ಸರಿಸಿ ಸ್ವಾರ್ಥದ ದೃಷ್ಟಿಯಿಂದ ಸ್ವಂತ ಲಾಭಕ್ಕಾಗಿ ಅಧಿಕಾರ ದುರುಪಯೋಗವನ್ನೇ ಭ್ರಷ್ಟಾಚಾರ ಎಂದು ಕರೆಯಬಹುದು. ಇದು ಸಾಂಕ್ರಾಮಿಕ ರೋಗದಂತೆ ಸಾರ್ವಜನಿಕ ಜೀವನದಲ್ಲಿ ಸರ್ವವ್ಯಾಪಿಯಾಗಿ ಹಬ್ಬುತ್ತಿದೆ.

ಭ್ರಷ್ಟಾಚಾರ ಹಲವಾರು ನಕಾರಾತ್ಮಕ ಪರಿಣಾಮವನ್ನು ಸಾರ್ವಜನಿಕವಾಗಿ ಹಾಗೂ ವ್ಯಕ್ತಿಗತವಾಗಿ ಬೀರುವಂತಹದು. ಅದು ದೇಶದ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದುಷ್ಪರಿಣಾಮಗಳನ್ನು ಬೀರುತ್ತದೆ. ಇನ್ನೊಂದು ವಿಧದಲ್ಲಿ ನಮೂದಿಸುವುದಾದರೆ ಭ್ರಷ್ಟಾಚಾರವು ಸಮಾಜವಿರೋಧಿ ಹಾಗೂ ಆರ್ಥಿಕ ಸುವ್ಯವಸ್ಥೆಯ ವಿರೋಧಿ ಕೂಡಾ ಮಾತ್ರವಲ್ಲ, ಅದು ರಾಜಕೀಯವಾಗಿ ಅಸಮರ್ಪಕ ಹಾಗೂ ನೈತಿಕವಾಗಿ ತಪ್ಪು ಎನಿಸುವಂತಹುದು. ಮೌಲ್ಯಗಳ ಬಗೆಗಿನ ವ್ಯಕ್ತಿಗತ ಚಿಂತನೆ ಸಮಾಜ ಒಪ್ಪುವ ಅಥವಾ ಪರಿಗ್ರಹಿಸುವ ಮೌಲ್ಯಗಳು ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಲಂಚಗುಳಿತನ, ಸ್ವಜನ ಪಕ್ಷಪಾತ, ಜಾತೀಯತೆ, ನಿಧಾನದ್ರೋಹ ಇವೆಲ್ಲವೂ ಈ ಭ್ರಷ್ಟಾಚಾರದ ಪರಿಧಿಯೊಳಗೆ ಬರುವಂತಹ ಸಂಗತಿಗಳು. ಚುನಾವಣಾ ಸಮಯದಲ್ಲಿಯೂ ಇಂತಹ ಅನಪೇಕ್ಷಣೀಯ ಸಂಗತಿಗಳು ಸಾರ್ವಜನಿಕ ಬದುಕಿನ ಒಳಗೆ ನುಸುಳಿಕೊಳ್ಳುತ್ತವೆ.

ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೂ ಎಡೆಮಾಡಿಕೊಡುತ್ತದೆ. ಅದು ಸಾರ್ವಜನಿಕ ಸೇವೆಯ ಕ್ಷೇತ್ರಗಳಲ್ಲಿ ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೂ, ವಂಚನೆಗಳಿಗೂ ಅನುವು ಮಾಡಿಕೊಡುತ್ತದೆ. ತೆರಿಗೆಕಳ್ಳತನ, ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ, ಆರ್ಥಿಕ ವಂಚನೆ, ಮೋಸಗಾರಿಕೆ, ವಿದೇಶೀ ವಿನಿಮಯದ ಕಾನೂನು ಉಲ್ಲಂಘನೆ, ಔದ್ಯೋಗಿಕ ವಂಚನೆ ಈ ಎಲ್ಲವೂ ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿವೆ.

ಭ್ರಷ್ಟಾಚಾರವನ್ನು ಕೇವಲ ಟೀಕಿಸಿ ಅದರೊಂದಿಗೇ ರಾಜಿಮಾಡಿಕೊಂಡು ಬದುಕುವುದರಿಂದ ಅದರ ನಿರ್ಮೂಲನ ಅಸಾಧ್ಯ. ವೈಯಕ್ತಿಕ ಹಾಗೂ ಸಾಮಾಜಿಕ ಭದ್ರತೆ ನೈತಿಕ ತಳಹದಿಯ ಮೂಲಕವಾಗಿ ಮಾತ್ರ ವ್ಯಾಪಕವಾಗಿ ಹಬ್ಬಿನಿಂತ ಭ್ರಷ್ಟಾಚಾರವನ್ನು ತೊಲಗಿಸಬಹುದು. ಅನೇಕ ಬಾರಿ, ಮಾನವ ಸಹಜವಾದ ಸ್ವಾರ್ಥ, ಆಪತ್ತುಗಳ ನಿವಾರಣೆಯ ಲೆಕ್ಕಾಚಾರ, ವೈಯಕ್ತಿಕ ಲಾಭ ಇವೆಲ್ಲಾ ಭ್ರಷ್ಟಾಚಾರಕ್ಕೆ ಮುಂದಾಗಲು ಪ್ರೇರೇಪಿಸುತ್ತವೆ. ಕಟ್ಟುನಿಟ್ಟಾದ ಮೇಲ್ವಿಚಾರಣೆ ಇಲ್ಲದಿರುವುದು ಹಾಗೂ ದುರ್ಬಲ ಕಾನೂನು ವ್ಯವಸ್ಥೆ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುತ್ತದೆ. ಭ್ರಷ್ಟಾಚಾರ ನಿಗ್ರಹಕ್ಕೆ ಪ್ರಬಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ. ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುವುದಾದರೆ, ಒಳ್ಳೆಯ ರಾಜಕೀಯ ನಾಯಕತ್ವ, ಉತ್ತಮ ಅಧಿಕಾರಿ ವರ್ಗ ಹಾಗೂ ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು ಹೊಂದಿದ ಜನತೆ ಜಂಟಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬಹುದಾಗಿದೆ. ಲೋಕಪಾಲ, ಲೋಕಾಯುಕ್ತರಂತಹ

© KTBS Not to be republished

ಸಂಸ್ಥೆಗಳು, ಭ್ರಷ್ಟಾಚಾರ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲವು. ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ನಾಯಕರುಗಳು ಕೂಡಾ ಈ ದಿಸೆಯಲ್ಲಿ ಕಾರ್ಯನಿರ್ವಹಿಸಬಹುದು. ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸುವುದು ಮತ್ತು ಕಛೇರಿಯ ಕಾರ್ಯನಿರ್ವಹಣೆಯ ವೇಗವನ್ನು ಹೆಚ್ಚಿಸುವುದು ಭ್ರಷ್ಟಾಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವುದು. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಸಾಧ್ಯವಾದಷ್ಟು ಬೇಗನೆ ನ್ಯಾಯ ನಿರ್ಣಯ ನೀಡುವುದು ಮುಂತಾದ ಕ್ರಮಗಳ ಮೂಲಕ ಭ್ರಷ್ಟಾಚಾರವನ್ನು ನಿವಾರಿಸಲು ಎಲ್ಲಾ ಸ್ತರಗಳಲ್ಲಿಯೂ ಅತ್ಯಗತ್ಯ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

**ತಾರತಮ್ಯ :** ಭಾರತೀಯ ಸಮಾಜಕ್ಕೆ ಲಿಂಗ, ಜಾತಿ ಮತ್ತು ಪ್ರಾದೇಶಿಕ ಅಸಮಾನತೆಗಳು ಪ್ರಬಲವಾದ ಸವಾಲಾಗಿ ಪರಿಣಮಿಸಿವೆ. ಭಾರತೀಯ ಸಂಪ್ರದಾಯಿಕ ಸಮಾಜ ಲಿಂಗ ಅಸಮಾನತೆಯಿಂದ ಕೂಡಿದ ಪುರುಷ ಪ್ರಧಾನ ಸಮಾಜ ರಚನೆಯನ್ನು ಹೊಂದಿದ್ದು, ಪುರುಷ ಮತ್ತು ಮಹಿಳೆಯರ ನಡುವೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣದಲ್ಲಿ ಭಿನ್ನತೆಗಳಿವೆ. ಭಾರತ ಸರ್ಕಾರ ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಉದ್ದೇಶದಿಂದ ಮಹಿಳೆಯರಿಗೆ ಶಿಕ್ಷಣ, ಉದ್ಯೋಗಗಳಲ್ಲಿ ಮೀಸಲಾತಿ ನೀಡಲಾಗಿದೆ. ಹಾಗೂ ರಾಜಕೀಯವಾಗಿಯೂ ಕೂಡ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧಿತ್ವದಲ್ಲಿ $\frac{1}{3}$ ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳ ಮೀಸಲಾತಿಯನ್ನು ನೀಡಲಾಗಿದೆ. ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿ ಮೀಸಲಿಟ್ಟಿರುವ ಮತ್ತು ಮೀಸಲಿರದ ಒಟ್ಟು ಸ್ಥಾನಗಳಲ್ಲಿ ಪ್ರತಿಶತ 50 ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮೀಸಲು ಇಡಲಾಗಿದೆ. ಈ ಮೂಲಕ ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನ ಕೈಗೊಳ್ಳಲಾಗಿದೆ.

ಲಿಂಗ ತಾರತಮ್ಯದ ರೀತಿಯಲ್ಲಿಯೇ ಜಾತಿ ಆಧಾರಿತ ತಾರತಮ್ಯ ಭಾರತೀಯ ಪುರಾತನ ಸಮಾಜ ರಚನೆಯಿಂದ ಒಂದು ಬಳುವಳಿಯಾಗಿದೆ. ಭಾರತ ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ನೀಡುವ ಮೂಲಕ ಜಾತಿ ಆಧಾರಿತ ತಾರತಮ್ಯವನ್ನು ಗಣನೀಯವಾಗಿ ತಗ್ಗಿಸಲು ಪೂರಕವಾದ ಕ್ರಮಗಳನ್ನು ಅಳವಡಿಸಲಾಗಿದೆ. ಆದರೆ ವಾಸ್ತವವಾಗಿ ಭಾರತೀಯ ಸಮಾಜದಲ್ಲಿ ಜಾತಿವ್ಯವಸ್ಥೆಯ ಆಚರಣೆ ನಿರಂತರವಾಗಿ ಮುಂದುವರೆದಿದ್ದು ಈ ವ್ಯವಸ್ಥೆಯ ನಿರ್ಮೂಲನೆ ಕೇವಲ ಕಾನೂನಿನಿಂದ ಮಾತ್ರ ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ಸಮಾಜದಲ್ಲಿ ಮುಕ್ತ ಮನಸ್ಸಿನಿಂದ ಕೂಡಿದ ಸಮಾಜ ನಿರ್ಮಾಣ ಮಾಡುವ ಇಚ್ಛೆಯನ್ನು ನಾಗರಿಕ ಸಮಾಜ ಅಳವಡಿಸಿಕೊಂಡಾಗ ಮಾತ್ರ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯ.

ಲಿಂಗ ಅಸಮಾನತೆ ಹಾಗೂ ಜಾತಿ ಅಸಮಾನತೆಗಳ ರೀತಿಯಲ್ಲಿಯೇ ಪ್ರಾದೇಶಿಕ ಅಸಮತೋಲನ ಭಾರತೀಯ ಸಮಾಜಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ. ಅಭಿವೃದ್ಧಿಯ ಹೆಸರಿನಲ್ಲಿ ರಾಷ್ಟ್ರದ ಕೆಲವು ಪ್ರದೇಶಗಳು ಸ್ವಾಭಾವಿಕವಾಗಿಯೇ ಮುಂದುವರೆದಿದ್ದರೆ ಕೆಲವು ಪ್ರದೇಶಗಳು ಹಿಂದುಳಿದಿವೆ. ಈ ರೀತಿಯ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಉದ್ದೇಶದಿಂದ ಭಾರತ ಸಂವಿಧಾನದ 371 ನೇ ವಿಧಿಗೆ A ಯಿಂದ J ವರೆಗೆ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಲಾಗಿದೆ. ಈ ಮೂಲಕ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನಗಳನ್ನು ನೀಡಲಾಗಿದೆ. ಆದರೂ ಕೂಡ ಪ್ರಾದೇಶಿಕ ಅಸಮತೋಲನ ಇಂದು ಒಂದು ದೊಡ್ಡ ಸವಾಲಾಗಿ ಬೆಳೆದಿದ್ದು ಕೆಲವು ರಾಜ್ಯಗಳಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಹುಟ್ಟುಹಾಕುವ ಮಟ್ಟಕ್ಕೆ ಬೆಳೆದಿರುವುದನ್ನು ಅವಲೋಕಿಸಿದಾಗ ಪ್ರಾದೇಶಿಕ ಅಸಮತೋಲನವನ್ನು ಸಮಗ್ರವಾಗಿ ಕಡಿಮೆಗೊಳಿಸಬೇಕಾಗಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ 2002ರಲ್ಲಿ ಡಿ.ಎಂ. ನಂಜುಂಡಪ್ಪ ಸಮಿತಿಯು ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಕುರಿತು ವರದಿ ನೀಡಿದೆ. ಇದಕ್ಕೆ ಪೂರಕವಾಗಿ ಸಂವಿಧಾನಕ್ಕೆ ವಿಧಿ 371 (ಜೆ) ಸೇರ್ಪಡೆ ಮಾಡುವುದರ ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

© KTBS Not to be republished

**ಕೋಮುವಾದ :** ಕೋಮುವಾದ ಅಥವಾ ಮತೀಯವಾದ ನಮ್ಮ ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ. ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾರವಣವನ್ನು ಸೃಷ್ಟಿಸುತ್ತದೆ. ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ. ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ, ಅಪಾಯ ತಂದೊಡ್ಡುವ ಶಕ್ತಿಯಾಗಿದೆ. ಅದು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ. ಈ ಮತೀಯವಾದ ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

ಮತೀಯವಾದವು ಮತೀಯ ಗುಂಪುಗಳ ಹಿತಾಸಕ್ತಿಯನ್ನು ರಾಷ್ಟ್ರೀಯ ಹಿತಾಸಕ್ತಿಗಿಂತಲೂ ಹೆಚ್ಚಿನದು ಎಂದು ಪರಿಗಣಿಸುತ್ತದೆ. ದೇಶದಲ್ಲಿ ಮತೀಯತೆಗೆ ಪೂರಕವಾಗಿ ತಮ್ಮ ತಮ್ಮ ಹಿತಾಸಕ್ತಿಗಳನ್ನು ವೃದ್ಧಿಸುವ ಪ್ರಯತ್ನಗಳನ್ನು ಮತೀಯ ಶಕ್ತಿಗಳು ಮಾಡುತ್ತವೆ. ತಮ್ಮ ತಮ್ಮ ಧರ್ಮಗಳನ್ನು ಪ್ರಚಾರ ಪಡಿಸುವ, ಪರಧರ್ಮಗಳನ್ನು ಬೇರೆ ರೀತಿಯಿಂದ ನೋಡುವಂತಹ ಸಂದರ್ಭಗಳು ಉಂಟಾಗುತ್ತವೆ. ಇದರಿಂದಾಗಿ ದೇಶದಲ್ಲಿನ ಏಕತೆಗೆ ದಕ್ಕೆಯಾಗುವಂತಹ ಸಂದರ್ಭಗಳು ಬರುತ್ತವೆ. ದೇಶವು ಆಂತರಿಕವಾದ ಈ ಸಮಸ್ಯೆಯನ್ನು ನಿವಾರಿಸಲು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ.

ಕೋಮುವಾದವನ್ನು ನಿಯಂತ್ರಿಸಲು ಸಾಕಷ್ಟು ಮುನ್ನೆಚ್ಚರಿಕೆ ಅಗತ್ಯ. ಏಕರೂಪ ನಾಗರಿಕ ಸಂಹಿತೆ, ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವಿಕೆ, ಜಾತ್ಯತೀತ ಮನೋಭಾವಕ್ಕೆ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ, ಸಂಕುಚಿತ ವಿಭಾಗೀಯ ಚಿಂತನೆಗಳಿಂದ ಮೇಲುಸ್ತರದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು–ಇವೆಲ್ಲಾ ಕೋಮುವಾದವನ್ನು ಹಿಮ್ಮೆಟ್ಟಿಸುವ ಉಪಾಯಗಳು. ಸಮಾಜವನ್ನು ಧರ್ಮದ ತಳಹದಿಯಲ್ಲಿ ವಿಭಜಿಸುವ ಹಾಗೂ ಸಾಮಾಜಿಕ ಹಾಗೂ ಆರ್ಥಿಕ ತಾರತಮ್ಯ ಧೋರಣೆ ಮತೀಯ ಸಾಮರಸ್ಯದಲ್ಲಿ ಬಿರುಕು ಹೆಚ್ಚಿಸಬಹುದು. ಅದರ ಬದಲಿಗೆ ನಮ್ಮ ಭಾರತದ ಎಲ್ಲಾ ಮತ ಸಂಪ್ರದಾಯಗಳು ಜನರಲ್ಲಿ ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು. ಮತೀಯ ಮೂಲಭೂತವಾದ ಬಹುತ್ವದ ಸಮಗ್ರತೆ, ಸಮಾನತೆ, ಸೋದರತೆ ಮತ್ತು ಸಾಂಸ್ಕೃತಿಕ ಬಹುರೂಪತೆಗೆ ಧಕ್ಕೆಯಾಗದಂತೆ ತಡೆಗಟ್ಟಬೇಕು. ಜಾತ್ಯಾತೀತ ತತ್ವಕ್ಕೆ ಬದ್ಧರಾಗುವ ಮನೋಧರ್ಮ ಬೇಕು.

**ಮಹಿಳೆಯರ ಸ್ಥಾನಮಾನ :** ಸ್ವಾತಂತ್ರ್ಯಪೂರ್ವದಲ್ಲಿಯೂ ಮಹಿಳೆಯ ಸಾಧನೆಗಳನ್ನು ಗುರುತಿಸಬಹುದಾಗಿದೆ. ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರುರಾಣಿ ಚನ್ನಮ್ಮ, ಅನಿಬೆಸೆಂಟ್, ಕಸ್ತೂರಬಾ ಗಾಂಧಿ, ಸಾವಿತ್ರಿ ಬಾಪುಲೆ, ಸರೋಜಿನಿ ನಾಯ್ಡು ಮೊದಲಾದವರನ್ನು ಸ್ಮರಿಸಬಹುದಾಗಿದೆ. ಇಂದು ಮಹಿಳೆಯರು ವೈದ್ಯಕೀಯ, ಅಧ್ಯಾಪಕ, ಇಂಜಿನಿಯರ್, ಪೈಲಟ್, ಗಗನಯಾತ್ರಿ, ಪೋಲೀಸ್, ರಾಜಕೀಯ, ರಕ್ಷಣಾಪಡೆ ಈ ರೀತಿ ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಯಗಳಲ್ಲಿ ತೊಡಗಿದ್ದಾರೆ. ಆದರೂ ಮಹಿಳೆಯರ ಸ್ಥಾನಮಾನ ಇನ್ನೂ ಉತ್ತಮವಾಗಬೇಕಿದೆ. ಸಾಮಾಜಿಕ ಪದ್ಧತಿಗಳು, ಬಡತನ ಮತ್ತು ಅನಕ್ಷರತೆಯಂತಹ ಕಾರಣಗಳಿಂದ ಸ್ತ್ರೀಯರ ಸ್ಥಾನಮಾನವು ಪ್ರಗತಿಯ ಪಥದಲ್ಲಿ ಹಿಂದಿರುತ್ತದೆ. ಇದು ದೇಶದ ಅಭಿವೃದ್ಧಿಗೆ ಸಮಸ್ಯೆಯಾಗಿ ಕಾಡುತ್ತದೆ.

ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮ ಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ. ಇದರ ಮೂಲಕ ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಉತ್ತಮ ಪಡಿಸಲಾಗುತ್ತಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.

© KTBS Not to be published

ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ. ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಹಿಳಾಮಂಡಲಗಳು, ಸ್ತ್ರೀ ಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು ಮಹಿಳಾ ಸಹಕಾರಿ ಸಂಘಗಳು ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು ಮಹಿಳೆಯರ ದೂರು-ದುಮ್ಮಾನಗಳನ್ನು ಇದು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿದೆ. ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವಂತಹ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತದೆ.


ಪ್ರತಿಭಾ ಸಿಂಗ್ ಪಾಟೀಲ್
ಪ್ರಥಮ ಮಹಿಳಾ ರಾಷ್ಟ್ರಪತಿ


ಇಂದಿರಾಗಾಂಧಿ
ಪ್ರಥಮ ಮಹಿಳಾ ಪ್ರಧಾನಿ


ಸರೋಜಿನಿ ನಾಯ್ಡು
ಪ್ರಥಮ ಮಹಿಳಾ ರಾಜ್ಯಪಾಲರು


ಸುಚೇತಾ ಕೃಪಲಾನಿ
ಪ್ರಥಮ ಮಹಿಳಾ ಮುಖ್ಯಮಂತ್ರಿ

© KTBS Not to be published

ಭಾರತದಲ್ಲಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿ, ಪ್ರತಿಭಾಸಿಂಗ್ ಪಾಟೀಲ್‌ರವರು ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಹಲವಾರು ಮಹಿಳೆಯರು, ರಾಜ್ಯಪಾಲರಾಗಿ, ಮುಖ್ಯ ಮಂತ್ರಿಗಳಾಗಿ, ವಿದೇಶಿ ರಾಯಭಾರಿಗಳಾಗಿ ಮತ್ತು ಇನ್ನಿತರ ಉನ್ನತ ಹುದ್ದೆಗಳನ್ನು ಅಲಂಕರಿಸಿ ಪರಿಣಾಮಕಾರಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಇದು ಮಹಿಳೆಯರ ಸಬಲೀಕರಣಕ್ಕೆ ಸ್ಫೂರ್ತಿದಾಯಕವಾಗಿದೆ.

**ಭಯೋತ್ಪಾದಕತೆ :** ಭಯೋತ್ಪಾದಕತೆಯನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದೂ ಕರೆಯಬಹುದು. ಇದು ಒಂದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ. ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಗುರಿಹೊಂದಿದ ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸ್ವತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ. ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಉಗ್ರಗಾಮಿ ಸಂಘಟನೆಗಳ ಉದ್ದೇಶ ಈಡೇರಿಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ ಈ ಭಯೋತ್ಪಾದಕತೆ ಎನ್ನಬಹುದು. ಇಂತಹ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ ಹಾಗೂ ಸಮಾಜದ್ರೋಹಿ ಎನಿಸುವಂತಹವು. 2001ರಲ್ಲಿ ಅಮೆರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ, ಅಂತೆಯೇ ಬ್ರಿಟನ್, ಇರಾನ್, ಭಾರತ ಅಫ್ಘಾನಿಸ್ತಾನ, ಪಾಕಿಸ್ತಾನ, ಇಂಡೋನೇಷಿಯಾ ಮುಂತಾದ ಹಲವಾರು ದೇಶಗಳಲ್ಲಿ ಸರಣಿ ಬಾಂಬು ಸ್ಫೋಟಗಳು ಜಾಗತಿಕ ಮಟ್ಟದಲ್ಲಿಯೂ ಅತ್ಯಂತ ಕಳವಳಕಾರಿ ಸಂಗತಿಗಳಾಗಿವೆ. ಈ ಉಗ್ರಗಾಮಿತ್ವವು ಧಾರ್ಮಿಕ ಮೂಲಭೂತ ಚಿಂತನೆಯಿಂದ, ಪ್ರತ್ಯೇಕವಾದದಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣಭೇದ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ.

ಒಂದು ರಾಷ್ಟ್ರವೇ ಇನ್ನೊಂದು ದೇಶದೊಳಗಿನ ಭಯೋತ್ಪಾದಕತೆಗೆ ಆರ್ಥಿಕ ಹಾಗೂ ಇನ್ನಿತರ ಸಹಕಾರ ನೀಡುವುದೂ ಇದೆ. ಈ ಉಗ್ರಗಾಮಿತ್ವವು ಒಂದು ರಾಷ್ಟ್ರದ ನಾಗರಿಕರ ಮೇಲೆ, ಮಿಲಿಟರಿ ಪಡೆಗಳ ಮೇಲೆ, ಅಂತೆಯೇ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ, ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟು ಮಾಡುವುದಾಗಿದೆ. ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು ಪಡೆಯುವ ಉದ್ದೇಶದಿಂದ ನಡೆಯುತ್ತದೆ, ಮಾತ್ರವಲ್ಲ ಅತ್ಯಧಿಕ ಸಾವುನೋವು ಉಂಟು ಮಾಡಲು ಸ್ಫೋಟಕ ವಸ್ತುಗಳನ್ನು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ. ಇಂತಹ ವಿನಾಶಕಾರಿ ಕೃತ್ಯಗಳು ಸಾಕಷ್ಟು ಪೂರ್ವಯೋಜಿತವಾಗಿಯೇ ರೂಪುಗೊಳ್ಳುತ್ತವೆ. ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತು ಹೊಂದಿದವರ ಜಾಲವನ್ನು ಹೊಂದಿರುತ್ತಾರೆ ಹಾಗೂ ಅವರ ಸಹಾಯದಿಂದ ಹಣವನ್ನೂ ಸಂಗ್ರಹಿಸುತ್ತಾರೆ. ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ. ತಮ್ಮ ನಿರ್ದಿಷ್ಟ ಗುರಿ ಹಾಗೂ ಸಂಘಟನೆಗೆ ಸಾಕಷ್ಟು ಪ್ರಚಾರವನ್ನೂ ಇವರು ಪಡೆದುಕೊಳ್ಳುತ್ತಾರೆ. ರಸ್ತೆ ಸಾರಿಗೆ, ರೈಲ್ವೇ, ವಿಮಾನ, ಪ್ರಮುಖ ಸರ್ಕಾರಿ ಕಚೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದುವುಗಳು ಈ ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾಗಿವೆ. ಪ್ರಚಾರ ಈ ಭಯೋತ್ಪಾದಕತೆಯ ಜತೆ ಜತೆಗೇ ಮುಂದುವರಿಯುತ್ತದೆ. ಆತ್ಮಾಹುತಿ ದಾಳಿ, ವಿಮಾನಕಳ್ಳತನ, ಗುಂಡಿನಕಾಳಗ, ಬಾಂಬುದಾಳಿ, ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

ಭಾರತ ಇಂತಹ ಉಗ್ರಗಾಮಿತ್ವಕ್ಕೆ ಸಾಕಷ್ಟು ತುತ್ತಾದ ರಾಷ್ಟ್ರವಾಗಿದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ ಇಂತಹ ಹಲವಾರು ರಾಜ್ಯಗಳಲ್ಲಿ ಭಯೋತ್ಪಾದಕತೆ ತಲೆ ಎತ್ತುತ್ತಲೇ ಇದೆ. 2008 ನವಂಬರ್ 26 ಮುಂಬೈಯ ತಾಜ್ ಹೋಟೆಲ್ ಮತ್ತು ರೈಲು ನಿಲ್ದಾಣಗಳಲ್ಲಿ ದಾಳಿ, ನವದೆಹಲಿಯ ಸಂಸತ್ತಿನ ಮೇಲೆ ಅಂತೆಯೇ ಹೈದರಾಬಾದ್, ಚೆನ್ನೈ, ಬೆಂಗಳೂರು, ಬುದ್ಧಗಯಾ ಮುಂತಾದ ಕಡೆಗಳಲ್ಲಿ ಇಂತಹ ವಿಧ್ವಂಸಕ ಕೃತ್ಯಗಳು ನಡೆದಿವೆ. ನಕ್ಸಲವಾದಿಗಳು ಭೀಕರವಾದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ನಮ್ಮ ನೆರೆರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೈನಾ ನಮ್ಮಲ್ಲಿನ ಇಂತಹ ಭಯೋತ್ಪಾದಕತೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದಕತೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ, ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ. ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ. ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ. ಶಾಂತಿ ಪ್ರಿಯ ರಾಷ್ಟ್ರವೆನಿಸಿದ ನಾವು ಭಯೋತ್ಪಾದಕತೆಯನ್ನು ವಿರೋಧಿಸುತ್ತೇವೆ.

ಮನುಕುಲದ ಇತಿಹಾಸವನ್ನು ಪರಿಶೀಲಿಸಿದಾಗ ಒಂದು ಸತ್ಯಗೋಚರಿಸುತ್ತದೆ. ಹಿಂಸೆ, ಭಯೋತ್ಪಾದನೆಗಳಿಂದ ಸಾಧನೆ ಮಾಡಿದ್ದು ಕ್ಷುಲ್ಲಕ ಹಾಗೂ ಸತ್ಯ, ಅಹಿಂಸೆ ಪ್ರೇಮ ತ್ಯಾಗಗಳಿಂದ ಸಾಧಿಸಿದ್ದು ಅಪಾರ. ನಮಗೆ ತೀರ ಹತ್ತಿರವಾಗಿ ತಿಳಿಯುವುದೇನೆಂದರೆ ಮಹಾತ್ಮ ಗಾಂಧೀಜಿ, ಇಂದಿರಾಗಾಂಧಿ, ರಾಜೀವ್‌ಗಾಂಧಿಯವರನ್ನು ಹಿಂಸಾಮಾರ್ಗದಿಂದ ಕೊಂದರೂ ಶಾಂತಿಗಾಗಿ ಹೋರಾಡಿದ್ದನ್ನು ಇತಿಹಾಸದಿಂದ ಅಳಿಸಲಾಗಲಿಲ್ಲ. ಆದರೆ ಬುದ್ಧ, ಮಹಾವೀರ, ಜೀಸಸ್, ಮಹಮದ್ ಪೈಗಂಬರ್, ಬಸವ, ಗಾಂಧಿ, ನೆಹರು, ಅಂಬೇಡ್ಕರ್, ಮಾರ್ಟಿನ್ ಲೂಥರ್, ನೆಲ್ಸನ್ ಮಂಡೇಲ ಇಂತಹವರಿಂದ ಮನುಕುಲಕ್ಕೆ ಚೈತನ್ಯ, ಹೊಸ ಬೆಳಕು, ನೆಮ್ಮದಿ ಪ್ರಾಪ್ತವಾಗಿದೆ. ಹಿಂಸೆ–ದ್ವೇಷಗಳಿಗಿಂತ ಶಾಂತಿ–ಪ್ರೇಮಗಳೇ ಮಿಗಿಲಾದವು.

**ಕಾರ್ಪೋರೇಟ್ ತಂತ್ರಗಾರಿಕೆ :** 21 ನೇ ಶತಮಾನದಲ್ಲಿ ಕಾರ್ಪೋರೇಟ್ ತಂತ್ರಗಾರಿಕೆ ಭಾರತೀಯ ನಾಗರೀಕ ಸಮಾಜಕ್ಕೆ ಒಂದು ಸವಾಲಾಗಿದೆ. ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪೆನಿಯು (ಸಂಘಟನೆಯು) ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎಂದು ಕರೆಯಲಾಗುತ್ತದೆ. ಇಂದಿನ ಕಾರ್ಪೋರೇಟ್

© KTBS Not to be published

ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ. ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭವನ್ನು ಪಡೆಯುವುದಾಗಿರುತ್ತದೆ. ಇದರಿಂದ ನಕಾರಾತ್ಮಕವಾದ ಬೆಳವಣಿಗೆಗಳು ವ್ಯಕ್ತಿಯ ಜೀವನ ಸಮಾಜ ಮತ್ತು ರಾಷ್ಟ್ರಗಳ ಮೇಲುಂಟಾಗುತ್ತದೆ. ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲೂ ಕಾರ್ಪೋರೇಟ್ ತಂತ್ರಗಾರಿಕೆ ತನ್ನ ಪ್ರಭಾವಗಳನ್ನು ನಾಗರಿಕ ಸಮಾಜವನ್ನು ಅಭಿವೃದ್ಧಿಗೊಳಿಸಿದಲ್ಲಿ ಕಾರ್ಪೋರೇಟ್ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಬಡತನ ನಿರ್ಮೂಲನೆ, ಉತ್ತಮ ಆರೋಗ್ಯ, ಶಿಕ್ಷಣ, ವಸತಿ, ಆಹಾರ ಇತ್ಯಾದಿ ಮೂಲ ಸೇವೆಗಳನ್ನು ಬದಲಿಸಲು ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ರೀತಿಯ ಕಾರ್ಪೋರೇಟ್ ಸಾಮಾಜಿಕ ಭದ್ರತಾ ಯೋಜನೆಯ ಲಾಭವನ್ನು ಪಡೆಯಲು ಭಾರತೀಯ ಸಮಾಜದಲ್ಲಿ ಸುಸ್ಥಿರ ಜಾಗೃತಿಯನ್ನು ಮೂಡಿಸಿದಾಗ ಮಾತ್ರ ಕಾರ್ಪೋರೇಟ್ ತಂತ್ರಗಾರಿಕೆ ಹೆಚ್ಚು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು __________ ಎನ್ನುತ್ತೇವೆ.
2. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯು __________ ಇಸವಿಯಲ್ಲಿ ಆಯಿತು.
3. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು __________ ಸಂಸ್ಥೆ ಅಸ್ತಿತ್ವದಲ್ಲಿದೆ.
4. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು __________ ಕೋಟಿ ದಾಟಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

© KTBS not to be published

1. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?
2. ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ. ಚರ್ಚಿಸಿ.
3. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?
4. ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?
5. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?
6. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?
7. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?
8. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು? ಮತ್ತು ಅದರ ಪ್ರಸ್ತುತದ ಬೆಳವಣಿಗೆಯನ್ನು ಕುರಿತು ವಿವರಿಸಿ.

**III. ಚಟುವಟಿಕೆಗಳು :**

1. ಸಂವಿಧಾನದ ವಿಧಿ 371ರ ಅನ್ವಯ ವಿಶೇಷ ಸ್ಥಾನಮಾನ ಪಡೆದ ರಾಜ್ಯಗಳ ಪಟ್ಟಿಮಾಡಿ.
2. ಪ್ರಾದೇಶಿಕವಾದವು ದೇಶದಲ್ಲಿ ಭಿನ್ನತೆಯನ್ನು ಸೃಷ್ಟಿಸುವುದರ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಡಿಸಿ.
3. ನಿಮ್ಮ ಸ್ಥಳೀಯ ಸಂಸ್ಥೆಯ ಮಹಿಳಾ ಸದಸ್ಯರೊಂದಿಗೆ ಮಹಿಳಾ ಸ್ಥಾನಮಾನದ ಬಗ್ಗೆ ಸಂದರ್ಶನ ನಡೆಸಿ.

* * * *

A5A9F6

## ಅಧ್ಯಾಯ – 2

# ಭಾರತದ ವಿದೇಶಾಂಗ ನೀತಿ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಭಾರತದ ವಿದೇಶಾಂಗ ನೀತಿಯ ಸ್ವರೂಪ*
- *ಅಲಿಪ್ತನೀತಿ*
- *ವರ್ಣಭೇದ ನೀತಿಗೆ ವಿರೋಧ*
- *ಪಂಚಶೀಲ ತತ್ವಗಳು*
- *ನಿಶ್ಯಸ್ತ್ರೀಕರಣ*

ವಿಶ್ವದ ವಿವಿಧ ರಾಷ್ಟ್ರಗಳು ಅಂತರಾಷ್ಟ್ರೀಯ ರಂಗದಲ್ಲಿ ಹೇಗೆ ವರ್ತಿಸುತ್ತವೆ, ಯಾವ ರೀತಿ ಸಂಬಂಧಗಳನ್ನು ಇಟ್ಟುಕೊಳ್ಳುತ್ತವೆ ಎಂಬುದನ್ನು ನಾವು ಅಧ್ಯಯನ ಮಾಡಬೇಕಾಗಿದೆ. ಹೇಗೆ ಓರ್ವ ವ್ಯಕ್ತಿ ಇತರರೊಡನೆ ಸಂಬಂಧವನ್ನಿರಿಸಿಕೊಳ್ಳದೆ ಸಮಾಜದಲ್ಲಿ ಏಕಾಂಗಿಯಾಗಿರುವುದು ಸಾಧ್ಯವಿಲ್ಲವೋ, ಹಾಗೆಯೇ ಪ್ರತಿಯೊಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ಸಂಬಂಧವನ್ನಿಟ್ಟುಕೊಳ್ಳದೆ ಇರುವುದು ಸಾಧ್ಯವಿಲ್ಲ. ಹಾಗಾಗಿ ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ ಎಂದು ಕರೆಯಲಾಗಿದೆ. ಇಂದು ಪ್ರತಿಯೊಂದು ರಾಷ್ಟ್ರಕ್ಕೆ ತನ್ನದೇ ಆದ ವಿದೇಶಾಂಗ ನೀತಿ ತೀರಾ ಅವಶ್ಯಕ. ವಿಶ್ವದಲ್ಲಿ ಸುಮಾರು 200 ರಾಷ್ಟ್ರಗಳು ಇದ್ದು ಕೆಲವೇ ರಾಷ್ಟ್ರಗಳು ಬಲಿಷ್ಠವಾಗಿದ್ದರೆ ಕೆಲವು ರಾಷ್ಟ್ರಗಳು ದುರ್ಬಲವಾಗಿವೆ. ಆದರೂ ಒಂದಲ್ಲಾ ಒಂದು ರೀತಿಯ ವಿದೇಶಾಂಗ ನೀತಿಯನ್ನು ಅನುಸರಿಸುತ್ತವೆ. ಆದ್ದರಿಂದಲೇ ವಿದ್ವಾಂಸರು ಈ ರೀತಿ ಹೇಳಿದ್ದಾರೆ. ಪ್ರಪಂಚದಲ್ಲಿ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಗಳಿರುವವರೆಗೂ ಒಂದಲ್ಲಾ ಒಂದು ಬಗೆಯ ವಿದೇಶಾಂಗ ನೀತಿ ಇದ್ದೇ ಇರುತ್ತದೆ. ಒಂದು ರಾಷ್ಟ್ರ ಯಾವುದೇ ಬಗೆಯಲ್ಲಿ ಆಂತರಿಕವಾಗಲೀ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎನ್ನಲಾಗಿದೆ.

ಭಾರತವು ಸಹ ಸ್ವಾತಂತ್ರ್ಯಾನಂತರ ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ ಎನ್ನುವುದು ಗಮನಾರ್ಹ ಅಂಶ. ಭಾರತವು ವಿಫುಲ ಜನಸಂಖ್ಯೆ, ಅಪಾರ ಪ್ರಾಕೃತಿಕ ಸಂಪತ್ತು, ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ, ಬಲಾಢ್ಯಸೈನಿಕ ಬಲ ಮುಂತಾದವನ್ನು ಹೊಂದಿದ್ದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ. ಪ್ರಸುತ ಜಗತ್ತಿನ ಕೆಲವೇ ರಾಷ್ಟಗಳು ತಮ್ಮದೇ ಆದ ನಿರ್ದಿಷ್ಟ ಹಾಗೂ ಉತ್ತಮ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದು ಅವುಗಳಲ್ಲಿ ಭಾರತವು ಒಂದಾಗಿದೆ.

**ನಿಮಗಿದು ತಿಳಿದಿರಲಿ**

*"ಯಾವುದೇ ನೀತಿಯನ್ನು ನಿರೂಪಿಸಿದರೂ ವಿದೇಶಾಂಗ ವ್ಯವಹಾರದ ಕಲೆಯ ಇರುವಿಕೆ ಆ ದೇಶಕ್ಕೆ ಯಾವುದು ಅತ್ಯಂತ ಪ್ರಯೋಜನಕಾರಿ ಎಂಬುದನ್ನು ಕಂಡು ಹಿಡಿಯುವುದಲರಲ್ಲೇ ಆಗಿದೆ. ನಾವು ಅಂತಾರಾಷ್ಟ್ರೀಯ ಒಳಿತಿನ ಬಗ್ಗೆ ಮಾತನಾಡಬಹುದು ಹಾಗೂ ಆ ರೀತಿ ಯಥಾವತ್ತಾಗಿ ಯೋಚಿಸಲೂಬಹುದು. ನಾವು ಶಾಂತಿ ಹಾಗೂ ಸ್ವಾತಂತ್ರ್ಯದ ಬಗೆಗೂ ವ್ಯಾಖ್ಯಾನಿಸಬಹುದು ಹಾಗೂ ಪ್ರಾಮಾಣಿಕವಾಗಿ ಆ ಬಗೆಗೆ ಅರ್ಥ ಹೊಂದಿರಲೂ ಬಹುದು. ಆದರೆ ಕಟ್ಟಕಡೆಗೆ ಪ್ರತಿಯೊಂದು ಸರ್ಕಾರವೂ ತಾನು ಆಳುವ ದೇಶದ ಒಳಿತಿಗಾಗಿಯೇ ಕಾರ್ಯ ನಿರ್ವಹಿಸುತ್ತದೆ. ಸರ್ಕಾರವು ದೂರದೃಷ್ಟಿಯಲ್ಲಿ ಹಾಗೂ ಸನಿಹದ ಭವಿಷ್ಯದಲ್ಲೇ ರಾಷ್ಟ್ರದ ಹಿತಾಸಕ್ತಿಗೆ ತೊಂದರೆ ಉಂಟು ಮಾಡುವ ಯಾವುದೇ ಕಾರ್ಯ ಎಸಗಲು ಧೈರ್ಯ ಹೊಂದಲಾರದು."*

**– ಜವಾಹರಲಾಲ ನೆಹರು**

© KTBS Not to be published

ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆದ ಸಾರ್ವಭೌಮ ರಾಷ್ಟ್ರವಾಗಿದ್ದು, ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿ ತನ್ನ ಮೂಲಕ ಜಗತ್ತಿನ ಎಲ್ಲಾ ರಾಷ್ಟ್ರಗಳ ಮೈತ್ರಿಯನ್ನು ಬಯಸುತ್ತದೆ. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೆಂದರೆ

1. ರಾಷ್ಟ್ರದ ಭದ್ರತೆ.
2. ರಾಷ್ಟ್ರದ ಆರ್ಥಿಕ ಸಂವರ್ಧನೆ.
3. ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
4. ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು ಅಥವಾ ಹತ್ತಿಕ್ಕುವುದು.
5. ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**ಚರ್ಚಿಸಿ :**

'ಈ ಜಗತ್ತು ಕ್ರೂರವಾಗಿದೆ. ನಾವು ಶಾಂತಿ ಪ್ರಸರಣದ ಧ್ವಜವನ್ನು ಎಲ್ಲೆಡೆಯೂ ಎತ್ತಿ ಹಿಡಿಯಲು ಬಯಸಿದೆವು; ಆದರೆ ಮುಗ್ಧರಾದ ನಾವು ವಂಚಿತರಾದೆವು'– ಚೈನಾ ದಾಳಿಯ ಬಳಿಕ ಲೋಕಸಭೆಯಲ್ಲಿ ಪ್ರಧಾನಮಂತ್ರಿ ನೆಹರೂರವರ ಉದ್ಗಾರ.

1946ರ ಸೆಪ್ಟೆಂಬರ್ 7 ರಂದು ಜವಾಹರಲಾಲ್ ನೆಹರು ಅವರು ನೀಡಿದ ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳ ಬಗ್ಗೆ ಅರಿವು ಮೂಡಿಸಿದರು. ಅವರ ಈ ಭಾಷಣವು ಅಮೇರಿಕಾ, ರಷ್ಯಾ, ಚೀನಾ ಮುಂತಾದ ರಾಷ್ಟ್ರಗಳೊಡನೆ ಭಾರತವು ರೂಪಿಸಿಕೊಳ್ಳುವ ಸಂಬಂಧಗಳ ಬಗ್ಗೆಯೂ ಸೂಚನೆಗಳನ್ನು ನೀಡಿತು. ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನೂ ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ. ಭಾರತೀಯ ವಿದೇಶಾಂಗ ನೀತಿ ಹಲವಾರು ಅಂಶಗಳ ಪ್ರಭಾವದಿಂದ ರೂಪಿತಗೊಂಡಂತಹುದು. ರಾಷ್ಟ್ರೀಯ ಹಿತಾಸಕ್ತಿಗಳು. ಭೌಗೋಳಿಕ ಅಂಶಗಳು, ರಾಜಕೀಯ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ, ರಕ್ಷಣಾ ಸಾಮರ್ಥ್ಯ, ಜನಾಭಿಪ್ರಾಯ, ಅಂತರರಾಷ್ಟ್ರೀಯ ಪರಿಸರ ಮುಂತಾದ ಹಲವಾರು ಅಂಶಗಳು ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳಾಗಿವೆ.

©KTBS Not to be republished

## ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು

**1. ಪಂಚಶೀಲ ತತ್ವಗಳು :** ವಿಶ್ವದ ರಾಷ್ಟ್ರಗಳು ವಿಭಿನ್ನ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನು ಹೊಂದಿದ್ದರೂ ಸಹ ಪರಸ್ಪರ ಸಹಕಾರ ಸಹಬಾಳ್ವೆಯನ್ನು ಅಳವಡಿಸಿಕೊಂಡಿವೆ. ಇದೇ ಆಧಾರದ ಮೇಲೆ 1954 ಜೂನ್ ತಿಂಗಳಲ್ಲಿ ವಿಶ್ವಶಾಂತಿ ದೃಷ್ಟಿಯಿಂದ ಚೀನಾ ಮತ್ತು ಭಾರತ (ಅಂದಿನ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ) ಪರಸ್ಪರ ಅಂತರರಾಷ್ಟ್ರೀಯ ಸಂಬಂಧ ವೃದ್ಧಿಗಾಗಿ ಐದು ತತ್ವಗಳನ್ನು ಅಳವಡಿಸಿಕೊಂಡವು. ಅವುಗಳೇ ಪಂಚಶೀಲ ತತ್ವಗಳು, ಅವುಗಳೆಂದರೆ,

1. ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
2. ಪರಸ್ಪರ ಆಕ್ರಮಣ ಮಾಡದಿರುವುದು.
3. ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು
4. ಪರಸ್ಪರ ಸಹಕಾರ ಮತ್ತು ಸಮಾನತೆ
5. ಶಾಂತಿಯುತ ಸಹಬಾಳ್ವೆ. ಇವು ನಮ್ಮ ದೇಶದ ವಿದೇಶಾಂಗ ನೀತಿಯ ತಳಹದಿ ಎನ್ನಬಹುದಾಗಿದೆ.

> **ನಿಮಗಿದು ತಿಳಿದಿರಲಿ :**
>
> *SAARC – ಸಾರ್ಕ್ South Asian Association for Regional Co-operation.*
>
> *ಸಾರ್ಕ್ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆಯಾಗಿದೆ. ಡಿಸೆಂಬರ್ 8, 1985ರಲ್ಲಿ ಇದು ಅಸ್ತಿತ್ವಕ್ಕೆ ಬಂದಿದೆ. ಭಾರತ, ಶ್ರೀಲಂಕಾ, ಭೂತಾನ್, ಮಾಲ್ಡೀವ್ಸ್, ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ರಾಷ್ಟ್ರಗಳು ಇದರ ಸದಸ್ಯ ರಾಷ್ಟ್ರಗಳಾಗಿವೆ. 1986ರಲ್ಲಿ ಸಾರ್ಕ್ ಸಮ್ಮೇಳನವು ನಮ್ಮ ರಾಜ್ಯದಲ್ಲಿ ನಡೆದಿದೆ.*

**2. ಅಲಿಪ್ತ ನೀತಿ :** ದ್ವಿತೀಯ ಮಹಾಯುದ್ಧದ ಬಳಿಕ ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು. ಅಮೆರಿಕಾ ಸಂಯುಕ್ತ ಸಂಸ್ಥಾನ ನೇತೃತ್ವದ ಪ್ರಜಾಪ್ರಭುತ್ವ ರಾಷ್ಟ್ರಗಳು ಹಾಗೂ ಸೋವಿಯತ್ ರಷ್ಯಾ ಹಿರಿತನದ ಕಮ್ಯುನಿಸ್ಟ್ ರಾಜ್ಯಗಳು ಎಂಬುದಾಗಿ ಜಗತ್ತಿನ ಧ್ರುವೀಕರಣ ಕಂಡು ಬಂದಿತು. ಅಲ್ಲದೆ ಎರಡೂ ಬಣಗಳ ನಡುವೆ ಶೀತಲ ಸಮರವೂ ಪ್ರಾರಂಭವಾಯಿತು. ಆ ದಿನಗಳಲ್ಲಿ ಭಾರತವು ಈ ಎರಡರಲ್ಲಿ ಯಾವ ಶಕ್ತಿ ಬಣಕ್ಕೂ ಸೇರದೆ ಅಲಿಪ್ತನೀತಿ ಅನುಸರಿಸಿ ತಟಸ್ಥವಾಯಿತು. ಜೊತೆಗೆ ಈ ಎರಡು ಬಣಗಳ ವಿಶ್ವಾಸಗಳಿಸಿಕೊಳ್ಳುವುದರ ಮೂಲಕ ಅಮೆರಿಕಾದಿಂದ ಆರ್ಥಿಕ ನೆರವನ್ನು ಮತ್ತು ಸೋವಿಯತ್ ರಷ್ಯಾದಿಂದ ಭದ್ರತಾ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಅಲ್ಲದೆ ವಿಶ್ವದ ಪ್ರತಿಯೊಂದು ವಿದ್ಯಮಾನವನ್ನು ಅದರ ಗುಣ–ದೋಷಗಳ ಆಧಾರದ ಮೇಲೆ ಸ್ವಾಗತಿಸುವ ಅಥವಾ ವಿರೋಧಿಸುವ ಸ್ವತಂತ್ರ ಕಾರ್ಯಶೈಲಿಯನ್ನು ಭಾರತ ರೂಪಿಸಿತು. ಇಂತಹ ಅಲಿಪ್ತ ನೀತಿಯನ್ನು ರೂಪಿಸಿ ವಿದೇಶಾಂಗ ನೀತಿಯಲ್ಲಿ ಅನುಸರಿಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ನೆಹರೂ ನಂತರದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಇಂದಿರಾಗಾಂಧಿಯವರು ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದರು. 1965ರಲ್ಲಿ ಮತ್ತು 1971ರಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಯುದ್ಧಗಳು ಈ ನೀತಿಯನ್ನು ಅಳವಡಿಸಿಕೊಂಡಿದ್ದವು. ನಂತರದ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ದೇಶದ ವಿದೇಶಾಂಗ ನೀತಿಯನ್ನು ಸುಧಾರಿಸಿ, ಪಾಕಿಸ್ತಾನದ ಜೊತೆ ಮೈತ್ರಿ ಬಾಂಧವ್ಯಕ್ಕೆ ಪ್ರಯತ್ನ ಮಾಡಿದರು.

**3. ವಸಾಹತುಶಾಹಿತ್ವಕ್ಕೆ ವಿರೋಧ :** ಭಾರತದ ವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎಂದು ಕರೆಯುತ್ತಾರೆ. ವಸಾಹತು ಶಾಹಿತ್ವವನ್ನು ವಿರೋಧಿಸಿ ಸ್ವತಂತ್ರಗಳಿಸಿಕೊಂಡ ಭಾರತ ಸ್ವಾಭಾವಿಕವಾಗಿ ಅದನ್ನು ವಿರೋಧಿಸಿ ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತು ಶಾಹಿತ್ವ ಇರಕೂಡದು ಎಂದು ದೆಹಲಿ ಮತ್ತು ಬಾಂಡೂಂಗ್‌ನಲ್ಲಿ ಜರುಗಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ (1949 ಮತ್ತು 1955) ತನ್ನ ನಿಲುವನ್ನು ಪ್ರತಿಪಾದಿಸಿತು.

**4. ವರ್ಣಭೇದ ನೀತಿಗೆ ವಿರೋಧ :** ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎಂದು ಕರೆಯಲಾಗುವುದು. ಈ ವರ್ಣಭೇದ ನೀತಿಯು ಅಮಾನವೀಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ. ಇಂತಹ ವರ್ಣಭೇದ ನೀತಿ ಜಗತ್ತಿನಲ್ಲಿ ಎಲ್ಲಿಯೂ ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತ ಹೊಂದಿದೆ. ಇತ್ತೀಚಿನವರೆಗೂ ದಕ್ಷಿಣ ಆಫ್ರಿಕಾದಲ್ಲಿ ಅಲ್ಪಸಂಖ್ಯಾತ ಬಿಳಿಯರು ಬಹುಸಂಖ್ಯಾತ ಆಫ್ರಿಕನ್ ದೇಶಿಯರನ್ನು ತಮ್ಮ ಹಿಡಿತದಲ್ಲಿಟ್ಟಿದ್ದರು ಎಂಬುದು ವಿಶೇಷವಾಗಿದೆ. ಈ ವರ್ಣಭೇದ ನೀತಿಯನ್ನು ಆಫ್ರಿಕಾಗಾಂಧಿ ಎಂದೇ ಪ್ರಸಿದ್ಧರಾದ ನೆಲ್ಸನ್‌ಮಂಡೇಲ ಅವರ ನೇತೃತ್ವದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಲವಾಗಿ ಖಂಡಿಸಿ ಹಮ್ಮಿಕೊಂಡಿದ್ದ ಚಳುವಳಿಯನ್ನು ಭಾರತವು ಬೆಂಬಲಿಸಿತು ಮತ್ತು ಗುರಿಸಾಧಿಸಿತು.

© KTBS Not to be published

**5. ನಿಶ್ಯಸ್ತ್ರೀಕರಣ :** ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ. ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯಲ್ಲಿ ಭಾರಿ ಪೈಪೋಟಿ ನಡೆದಿದೆ. ಈ ರೀತಿಯ ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಮೂರನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ. ಶಸ್ತ್ರಾಸ್ತ್ರಗಳ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಅಚಾತುರ್ಯದಿಂದಲೋ, ತಪ್ಪುಗ್ರಹಿಕೆಯಿಂದಲೋ ಬೇಕೆಂತಲೇ ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು ಅದರಲ್ಲೂ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ. ಆದುದರಿಂದ ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಶಾಂತಿ ಸೌಹಾರ್ದತೆಗೆ ಒತ್ತು ನೀಡಿದ ಭಾರತ ಪ್ರಧಾನಿ ನೆಹರೂರವರ ಕಾಲದಲ್ಲಿ ಸಹಜವಾಗಿಯೇ ನಿಶ್ಯಸ್ತ್ರೀಕರಣಕ್ಕೆ ಬೆಂಬಲವನ್ನು ಸೂಚಿಸಿತು. ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದೆ, ಏಕೆಂದರೆ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅತ್ಯಗತ್ಯ. ಆದರೂ ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ.

> ***ಚಟುವಟಿಕೆ:***
> ಇತ್ತೀಚಿನ ದಿನಗಳಲ್ಲಿ ಭಾರತವು ವಿದೇಶಾಂಗ ನೀತಿ ರೂಪಿಸುವಲ್ಲಿ ಅಳವಡಿಕೆಯಲ್ಲಿ ನಡೆಸುತ್ತಿರುವ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಂತರ್ಜಾಲದ ನೆರವಿನಿಂದ ಮಾಹಿತಿ ಸಂಗ್ರಹಿಸಿ.

ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದುಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ. ಕೇಂದ್ರ ಸರ್ಕಾರದ ವಿದೇಶಾಂಗ ಖಾತೆ ನಮ್ಮ ದೇಶದ ವಿದೇಶಾಂಗ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ನಮ್ಮ ದೇಶದ ವಿದೇಶಾಂಗ ನೀತಿಯನ್ನು ರೂಪಿಸುವಾಗ ರಾಷ್ಟ್ರೀಯ ಹಿತಾಸಕ್ತಿ ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ವಿದೇಶಾಂಗ ನೀತಿ ವಿಶ್ವಸಂಸ್ಥೆಯನ್ನು ಬಲಪಡಿಸುವ ರೀತಿಯಲ್ಲಿ ರೂಪಿಸಲಾಗಿದೆ. ಭಾರತ ಕಾಮನ್‌ವೆಲ್ತ್ ಆಫ್ ನೇಶನ್ಸ್ ಹಾಗೂ ಸಾರ್ಕ್ (ಸೌತ್ ಏಷಿಯನ್ ಅಸೋಸಿಯೇಶನ್ ಫಾರ್ ರೀಜೆನಲ್ ಕೋ – ಆಪರೇಶನ್) ಈ ಎರಡೂ ಸಂಸ್ಥೆಗಳ ಮೂಲಕ ಹಲವಾರು ದೇಶಗಳೊಂದಿಗೆ ನಿಕಟ ಸಂಬಂಧ ಹೊಂದಲು ಬಯಸಿದೆ. ಮೇಲಾಗಿ, ವಿಶ್ವ ಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರವಾಗಿ ಭಾರತವು ಮಹತ್ವದ ಪಾತ್ರವಹಿಸುತ್ತ ಬಂದಿದೆ.

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ ನಿರೂಪಿಸಿದವರು ____________
2. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ____________ ಎನ್ನಬಹುದು.
3. ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ ____________ ರ ವಸಾಹತು ಶಾಹಿಗೆ ಒಳಗಾಗಿತ್ತು.
4. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದವರು ____________

**II. ಕೆಳಗಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ವಿದೇಶಾಂಗ ನೀತಿ ಎಂದರೇನು?
2. ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ?
3. ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?

4. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?
5. ಪಂಚಶೀಲ ತತ್ವಗಳಾವುವು?
6. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ
7. ವರ್ಣಭೇದ ನೀತಿಯು ಮಾನವತ್ವವಾದಕ್ಕೆ ವಿರೋಧವಾದುದು. ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.

## III. ಚಟುವಟಿಕೆಗಳು :

1. ವೃತ್ತ ಪತ್ರಿಕೆಗಳಲ್ಲಿ ಬರುವ ವಿದೇಶಾಂಗ ನೀತಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.
2. ಅಂತರಾಷ್ಟ್ರೀಯ ಸಮಸ್ಯೆಗಳು ಉಂಟಾದ ಸಮಯದಲ್ಲಿ ಭಾರತವು ನಿರ್ವಹಿಸುವ ಪಾತ್ರದ ಬಗ್ಗೆ ಮಾಹಿತಿ ಸಂಗ್ರಹಿಸಿ ಉದಾ – ಸಿರಿಯಾ ಸಮಸ್ಯೆ, ಶ್ರೀಲಂಕಾ ಸಮಸ್ಯೆ ಇತ್ಯಾದಿ.

## IV. ಯೋಜನೆ :

1. 'ಭಾರತವು ಅಲಿಪ್ತ ನೀತಿಯನ್ನು ಅಳವಡಿಸಿಕೊಂಡಿರುವುದು ದೇಶದ ಅಭಿವೃದ್ಧಿಗೆ ಸಹಕಾರಿ' ಈ ವಿಷಯದ ಮೇಲೆ ಚರ್ಚಾಸ್ಪರ್ಧೆ ನಡೆಸಿ.

© KTBS Not to be published

* * * *

ಅಧ್ಯಾಯ – 3

# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

H3L6S2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಭಾರತ ಮತ್ತು ಚೀನಾದ ಸಂಬಂಧ.*
- *ಭಾರತ ಮತ್ತು ಪಾಕಿಸ್ತಾನದ ಸಂಬಂಧ.*
- *ಭಾರತ ಮತ್ತು ರಷ್ಯಾದ ಸಂಬಂಧ.*
- *ಭಾರತ ಮತ್ತು ಅಮೆರಿಕಾದ ಸಂಬಂಧ.*

ಒಂದು ಕುಟುಂಬವು ಬೇರೆ ಯಾವುದೇ ಕುಟುಂಬದ ಜೊತೆಗೆ ವ್ಯವಹರಿಸದೇ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ. ಹಾಗೆಯೇ ಒಂದು ರಾಷ್ಟ್ರವು ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹರಿಸದೆ, ಉತ್ತಮ ಸಂಬಂಧವನ್ನು ಹೊಂದದೆ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ. ಪ್ರಸ್ತುತದ ಜಾಗತೀಕರಣ ಮತ್ತು ಆಧುನೀಕರಣದ ಯುಗದಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಜೊತೆಗೆ ಉತ್ತಮವಾದ ಸಂಬಂಧವನ್ನು ಹೊಂದುವುದು ಅನಿವಾರ್ಯವೂ, ಅಗತ್ಯವೂ ಆಗಿದೆ. ನಮ್ಮ ಸಂವಿಧಾನದ ನಾಲ್ಕನೇ ಭಾಗದಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳಡಿಯಲ್ಲಿ ವಿಧಿ 51 ರಲ್ಲಿ ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ತಿಳಿಸಲಾಗಿದೆ. ಇದರನ್ವಯ ಭಾರತವು ಅನ್ಯರಾಷ್ಟ್ರಗಳೊಡನೆ ಉತ್ತಮವಾದ ಭಾಂದವ್ಯವನ್ನು ಹೊಂದಿದೆ.

© KTBS Not to be republished

## ಪ್ರಮುಖ ನೆರೆ ರಾಷ್ಟ್ರಗಳ ಸಂಬಂಧ

**ಭಾರತ ಮತ್ತು ಚೀನಾ :** ಚೀನಾ ಭಾರತ ಭೂಪ್ರದೇಶಕ್ಕೆ ಹೊಂದಿಕೊಂಡಿರುವ ದೊಡ್ಡ ನೆರೆಯ ರಾಷ್ಟ್ರವಾಗಿದೆ. ಭಾರತ ಮತ್ತು ಚೀನಾಗಳ ಸಂಬಂಧವನ್ನು ಸಿಂಧೂ ನದಿ ಬಯಲಿನ ನಾಗರೀಕತೆ ಮತ್ತು ಮೆಸಪಟೋಮಿಯ ನಾಗರೀಕತೆಯೊಂದಿಗೆ ಗುರುತಿಸಲಾಗುತ್ತದೆ. ಭಾರತದಲ್ಲಿ ಉದಯಿಸಿದ ಬೌದ್ಧ ಧರ್ಮವು ಪ್ರಸ್ತುತ ಚೀನಾದಲ್ಲಿ ಪ್ರಸಾರಗೊಂಡಿರುವುದು ಭಾರತ ಮತ್ತು ಚೀನಾಗಳ ನಡುವಿನ ಪ್ರಾಚೀನ ಕಾಲದ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಭಾರತದಲ್ಲಿನ ರಾಜರುಗಳು ಚೀನಾದ ಹಲವು ರಾಜ ವಂಶಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕಗಳನ್ನು ಹೊಂದಿರುವ ಹಲವು ಉಲ್ಲೇಖಗಳು ದೊರೆಯುತ್ತವೆ. ಭಾರತ ಮತ್ತು ಚೀನಾಗಳ ನಡುವಿನ ವ್ಯಾಪಾರ ಸಂಬಂಧವನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚೀನಾದ ರೇಷ್ಮೆಯ ಬಗ್ಗೆ ಉಲ್ಲೇಖವಾಗಿರುತ್ತದೆ. ಈ ರೀತಿಯ ಐತಿಹಾಸಿಕ ಸಂಬಂಧವನ್ನು ಹೊಂದಿದ್ದ ಭಾರತ ಮತ್ತು ಚೀನಾ ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸಿದ ನಂತರದಲ್ಲಿ ಪಂಚಶೀಲ ತತ್ವಗಳ ಮೂಲಕ ಎರಡು ರಾಷ್ಟ್ರಗಳ ಸಂಬಂಧಗಳನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು. ಆದರೆ 1962 ರಲ್ಲಿ ಟಿಬೆಟ್ ವಿವಾದ ಉಲ್ಬಣಗೊಂಡು ಎರಡು ರಾಷ್ಟ್ರಗಳ ನಡುವೆ ಯುದ್ಧ ನಡೆದ ನಂತರದಲ್ಲಿ ಗಡಿ ಸಮಸ್ಯೆಯು ಉಲ್ಬಣಗೊಂಡಿತು. ಈ ಗಡೀ ಸಮಸ್ಯೆ ಇಂದಿಗೂ ಕೂಡ ಮುಂದುವರೆದಿದ್ದು, ಚೀನಾವು ಭಾರತದ ಭಾಗವಾಗಿರುವ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಮತ್ತಷ್ಟು ಕಗ್ಗಂಟಾಗಿಸಿದೆ.

ಭಾರತ ಮತ್ತು ಚೀನಾ ನಡುವೆ ಗಡಿ ವಿವಾದ ಇದ್ದರೂ ಕೂಡ ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ರಾಯಭಾರ ಸಂಬಂಧಗಳು ನಿರಂತರವಾಗಿ ಮುಂದುವರೆದಿವೆ. ಭಾರತ ಮತ್ತು ಚೀನಾ ದೇಶಗಳು ಜಗತ್ತಿನಲ್ಲಿಯೇ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದಲ್ಲದೇ ವಿಶ್ವದ ಅಭಿವೃದ್ಧಿ ಮುಂಚೂಣಿಯಲ್ಲಿರುವ ಎರಡು ಪ್ರಮುಖ ರಾಷ್ಟ್ರಗಳಾಗಿ ಗುರುತಿಸಲ್ಪಟ್ಟಿವೆ. 1980 ರ ದಶಕದ ನಂತರದಲ್ಲಿ ಚೀನಾ ಭಾರತದೊಂದಿಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕವನ್ನು ಹೊಂದಿರುವ ರಾಷ್ಟ್ರವಾಗಿ ಬೆಳೆದಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಗಟ್ಟಿಗೊಳಿಸಿದೆ. ಇದಲ್ಲದೆ 2015ರ ನಂತರದಲ್ಲಿ ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿರುವುದು ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಉತ್ತಮಗೊಳಿಸಿದೆ.

**ಭಾರತ ಮತ್ತು ಪಾಕಿಸ್ತಾನ :** ಭಾರತ ಮತ್ತು ಪಾಕಿಸ್ತಾನಗಳೆರಡು ನೆರೆಯ ರಾಷ್ಟ್ರಗಳಾಗಿವೆ. ಪಾಕಿಸ್ತಾನ ಭಾರತಕ್ಕೆ ಕೇವಲ ನೆರೆಯ ರಾಷ್ಟ್ರವಾಗಿರದೆ, ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅವಿಭಾಜ್ಯ ಅಂಗವಾಗಿತ್ತು. ಆದರೆ 1947ರ ಭಾರತ ಸ್ವಾತಂತ್ರ್ಯ ಕಾಯಿದೆಯನ್ವಯ ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿ ರಚಿತವಾದವು. ಸ್ವತಂತ್ರ್ಯಗೊಂಡ ನಂತರ ಭಾರತ ಮತ್ತು ಪಾಕಿಸ್ತಾನಗಳ ನಡುವೆ ವಿದೇಶಾಂಗ ವ್ಯವಹಾರಗಳು ಪ್ರಾರಂಭಗೊಂಡವು. ಆದರೆ ಈ ಎರಡು ರಾಷ್ಟ್ರಗಳ ನಡುವೆ ಜಮ್ಮು-ಕಾಶ್ಮೀರ, ಭಯೋತ್ಪಾದನೆ, ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ. ಹಾಗಾಗಿ ಇಲ್ಲಿಯವರೆಗೆ ಎರಡು ರಾಷ್ಟ್ರಗಳ ನಡುವೆ ಮೂರು ಭಾರಿ ಯುದ್ಧಗಳು ನಡೆದಿವೆ. ಎರಡು ರಾಷ್ಟ್ರಗಳ ನಡುವೆ ಉತ್ತಮ ಭಾಂದವ್ಯ ಹೊಂದಲು ತಾಷ್ಕೆಂಟ್ ಒಪ್ಪಂದ, ಸಿಮ್ಲಾ ಒಪ್ಪಂದ, ಲಾಹೋರ್ ಬಸ್ ಯಾತ್ರೆ, ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷಿಯ ಮಾತುಕತೆಗಳನ್ನು ನಡೆಸಲಾಗಿದೆ. ಆದರೆ ಈ ರೀತಿಯ ಒಪ್ಪಂದಗಳು ನಿರೀಕ್ಷಿತ ಯಶಸ್ಸನ್ನು ಸಾಧಿಸಲು ವಿಫಲವಾಗಿವೆ. ಏಕೆಂದರೆ ಈ ಎರಡು ರಾಷ್ಟ್ರಗಳು ನಿರಂತರವಾಗಿ ದ್ವಿಪಕ್ಷಿಯ ಮಾತುಕತೆಗಳಲ್ಲಿ ನಿರತವಾಗಿದ್ದರೂ ಕೂಡ 2001ರಲ್ಲಿ ಭಾರತ ಸಂಸತ್ತಿನ ಮೇಲಿನ ದಾಳಿ, 2008ರ ಮುಂಬೈನ ದಾಳಿ, 2016ರ ಪಠಾಣ್ ಕೋಟ್ ದಾಳಿಗಳು ಪರಸ್ಪರ ಸಂಬಂಧಗಳ ವೃದ್ದಿಗೆ ಹಿನ್ನಡೆಯನ್ನು ಉಂಟುಮಾಡಿವೆ.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ನಿರಂತರವಾಗಿ ಘರ್ಷಣೆ ಮುಂದುವರೆದಿದ್ದರೂ ಕೂಡ ಕೆಲವು ವಿಷಯಗಳಲ್ಲಿ ಈ ಎರಡು ರಾಷ್ಟ್ರಗಳು ಸಾಮ್ಯತೆಯನ್ನು ಹೊಂದಿರುವುದನ್ನು ಗುರುತಿಸಬಹುದಾಗಿದೆ. ಈ ಎರಡು ರಾಷ್ಟ್ರಗಳ ನಡುವೆ ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ ಕಾರ್ಯಗಳನ್ನು ಮುಂದುವರೆಸಿವೆ. ಏಕೆಂದರೆ ಸ್ವಾತಂತ್ರ್ಯಗೊಂಡ ದಿನದಿಂದ ಪ್ರಸ್ತುತದವರೆಗೆ ವ್ಯಾಪಾರ, ವಾಣಿಜ್ಯ, ಸಂಬಂಧಗಳು ನಿರಂತರವಾಗಿ ಮುಂದುವರೆದಿವೆ. ಹಾಗೆಯೇ ಕ್ರೀಡೆ, ಸಾಂಸ್ಕೃತಿಕ, ವ್ಯವಹಾರಗಳಲ್ಲಿ, ನೈಸರ್ಗಿಕ ವಿಕೋಪಗಳು ಸಂಭವಿಸಿದ ಸಂದರ್ಭಗಳಲ್ಲಿ ಎರಡು ರಾಷ್ಟ್ರಗಳು ಸೌಹಾರ್ಧಯುತವಾದ ಮತ್ತು ಪರಸ್ಪರ ಸಹಕಾರ ಹೊಂದಿವೆ.

© KTBS Not to be republished

## ಪ್ರಬಲ ರಾಷ್ಟ್ರಗಳೊಂದಿಗೆ ಸಂಬಂಧ

**ಭಾರತ ಮತ್ತು ರಷ್ಯಾ :** ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ ಹಾಗೂ ಅದರ ಹಿಂದಿನ ಸೋವಿಯತ್ ರಷ್ಯಾ ಒಕ್ಕೂಟದೊಂದಿಗೂ ಅಂತಹದೇ ಒಳ್ಳೆಯ ಸಂಬಂಧ ಹೊಂದಿತ್ತು. ಭಾರತ ಅಲಿಪ್ತ ನೀತಿ ಹೊಂದಿದ್ದರೂ, ಭಾರತ-ಸೋವಿಯತ್ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು. (1962ರಲ್ಲಿನ ಚೈನಾ ದಾಳಿಯನ್ನು ಸೋವಿಯತ್ ರಷ್ಯಾ ಖಂಡಿಸಿತ್ತು. 1961 ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ಸೋವಿಯತ್ ರಷ್ಯಾ ಭಾರತಕ್ಕೆ ವಿಶ್ವ ಸಂಸ್ಥೆಯಲ್ಲಿ ಸಹಕಾರ ನೀಡಿತ್ತು.) 1966ರ ತಾಷ್ಕೆಂಟಿನಲ್ಲಿ ಭಾರತ-ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು. 1971 ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು. ಭಾರತದ ಭಿಲ್ಲಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸೋವಿಯತ್ ರಷ್ಯಾ ಸಹಕರಿಸಿತ್ತು. ನಮ್ಮ ರಾಷ್ಟ್ರದ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾದಿಂದ ಹೆಚ್ಚಿನ ನೆರವು ಪಡೆದಿದ್ದೇವೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**ಭಾರತ ಮತ್ತು ಅಮೆರಿಕ :** ಭಾರತ ಹಾಗೂ ಅಮೆರಿಕಾ ಸಂಯುಕ್ತ ಸಂಸ್ಥಾನ ಎರಡು ಬೃಹತ್ ರಾಷ್ಟ್ರಗಳು ಹಾಗೂ ಪ್ರಜಾತಂತ್ರ ವ್ಯವಸ್ಥೆ ಹೊಂದಿದವುಗಳು. ಪ್ರಚಲಿತ ಜಾಗತಿಕ ವಿದ್ಯಮಾನದಲ್ಲಿ ಈ ಎರಡು ರಾಷ್ಟ್ರಗಳ ಪರಸ್ಪರ ಮೈತ್ರಿ ತುಂಬಾ ಪ್ರಾಮುಖ್ಯ ಎನಿಸುವಂತಹುದು. 1947 ರ ಬಳಿಕ ಈ ಎರಡು ರಾಷ್ಟ್ರಗಳ

ಸಂಬಂಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿ ಹಲವಾರು ಸ್ಥಿತ್ಯಂತರಗಳನ್ನು ಕಂಡಿದೆ. ಜಗತ್ತು ರಾಜಕೀಯ ಧ್ರುವೀಕರಣವನ್ನು ಕಂಡಾಗ, ಭಾರತ ಅಲಿಪ್ತ ನೀತಿ ಅನುಸರಿಸಿತು. ಹಾಗೂ ಅಮೆರಿಕಾ ನಾಯಕತ್ವದ ಪ್ರಜಾಪ್ರಭುತ್ವ ಗುಂಪಿನಿಂದ ಅಂತೆಯೇ ಸೋವಿಯತ್ ರಷ್ಯಾದ ಹಿರಿತನದ ಕಮ್ಯುನಿಸ್ಟ್ ಬಣದಿಂದ ಸಮಾನ ದೂರದಲ್ಲಿರುವ ನೀತಿ ಅನುಸರಿಸಿತು. ಭಾರತದ ಪಂಚವಾರ್ಷಿಕ ಯೋಜನೆಗೆ ಅಮೆರಿಕಾ ತುಂಬಾ ಸಹಾಯ ನೀಡಿತು. 1962ರ ಚೀನಾ ಆಕ್ರಮಣ ಸಂದರ್ಭದಲ್ಲಿಯೂ ಅಮೆರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು. ಆದರೆ ಆ ಬಳಿಕ ಅಲ್ಲಿನ ರಾಜಕೀಯ ಮುಖಂಡರು ಭಾರತ–ಪಾಕಿಸ್ತಾನ ಯುದ್ಧಗಳ ವೇಳೆ ಪಾಕಿಸ್ತಾನಕ್ಕೆ ಸಹಾಯ ನೀಡಿದರು. ಅನೇಕ ಬಾರಿ ಅಮೆರಿಕಾದ ವಿದೇಶಾಂಗ ನೀತಿ ಭಾರತದ ವಿರುದ್ಧವಿದ್ದು ಪಾಕಿಸ್ತಾನದ ಪರವಾಗಿತ್ತು. ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ. ಭಾರತ ವಿದೇಶೀ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೆರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ. ಅಮೆರಿಕಾದ ರಿಪಬ್ಲಿಕನ್ ಹಾಗೂ ಡೆಮಾಕ್ರೆಟಿಕ್ ಪಕ್ಷಗಳಿಗೆ ಸೇರಿದ ರಾಷ್ಟ್ರಾಧ್ಯಕ್ಷರ ಧೋರಣೆಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು ಹಾಗೂ ಅದಕ್ಕನುಗುಣವಾಗಿ ಭಾರತವೂ ತನ್ನ ವಿದೇಶಾಂಗ ನೀತಿಯನ್ನು ಸಿದ್ಧಪಡಿಸುತ್ತದೆ.

ಭಾರತವು ತನ್ನ ಸಮೀಪದ ದೇಶಗಳಾದ ಭೂತಾನ್, ಆಫ್ಘಾನಿಸ್ತಾನ, ಮಾಲ್ಡೀವ್ಸ್, ಇಂಡೋನೇಶಿಯಾ ಹಾಗೂ ವಿಶ್ವದ ವಿವಿಧ ಖಂಡಗಳ ರಾಷ್ಟ್ರಗಳೊಂದಿಗೆ ತನ್ನ ನಿಕಟ ಸಂಬಂಧ ಹೊಂದಿದೆ.

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಪಂಚಶೀಲ ತತ್ವಗಳ ಮೂಲಕ ____________ ರಾಷ್ಟ್ರದೊಂದಿಗೆ ಸಂಬಂಧ ವೃದ್ಧಿಸಲಾಯಿತು.
2. ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ನಮ್ಮ ಸಂವಿಧಾನದ ________ ವಿಧಿಯಲ್ಲಿ ತಿಳಿಸಲಾಗಿದೆ.
3. 1962ರಲ್ಲಿ ____________ ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?
2. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?
3. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?
4. ಭಾರತ ಮತ್ತು ಅಮೆರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು. ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.
5. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

**III. ಚಟುವಟಿಕೆಗಳು :**

1. ಭಾರತದ ನೆರೆಯ ಇತರ ರಾಷ್ಟ್ರಗಳ ಸಂಬಂಧಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ.
2. ಭಾರತದ ಭೂಪಟ ಬಿಡಿಸಿ, ನೆರೆ ರಾಷ್ಟ್ರಗಳನ್ನು ಗುರುತಿಸಿ.

* * * *

# ಸಮಾಜಶಾಸ್ತ್ರ

## ಅಧ್ಯಾಯ–01

## ಸಾಮಾಜಿಕ ಸ್ತರವಿನ್ಯಾಸ

V3S9H1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ :**

- ಸಾಮಾಜಿಕ ಅಸಮಾನತೆ (ಶಿಕ್ಷಣ, ಲಿಂಗ, ವೃತ್ತಿ, ಆದಾಯ, ಅವಕಾಶ, ಇತ್ಯಾದಿ)
- ಸಾಮಾಜಿಕ ಸ್ತರವಿನ್ಯಾಸ
- ಅಸ್ಪೃಶ್ಯತೆ–ಒಂದು ಸಾಮಾಜಿಕ ಪಿಡುಗು
- ಅಸ್ಪೃಶ್ಯತೆ ನಿವಾರಣಾ ಕಾನೂನು ಕ್ರಮಗಳು

### ಸಾಮಾಜಿಕ ಅಸಮಾನತೆ

© KTBS
Not to be published

ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ (ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗ, ಇತ್ಯಾದಿ) ಶ್ರೇಣೀಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಸೂಚಿಸುತ್ತದೆ. ಅವೆಂದರೆ, ಆದಾಯದ ಮೂಲಗಳು, ಶಿಕ್ಷಣ ಮತ್ತು ವೃತ್ತಿ ಅವಕಾಶಗಳು, ಆರೋಗ್ಯ ಸೌಲಭ್ಯಗಳು ಮತ್ತು ರಾಜಕೀಯ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ. ಅಂದರೆ ಸಾಮಾಜಿಕ ಅಸಮಾನತೆ ಎನ್ನುವುದು ಈಗಾಗಲೇ ಇರುವ ಅಸಮಾನ ಸಾಮಾಜಿಕ ಅವಕಾಶಗಳ ಪ್ರತಿಫಲ. ಇದು ಸಾಮಾಜಿಕ ರಚನೆಯಲ್ಲಿನ ವಸ್ತುಗಳನ್ನು, ಆದಾಯವನ್ನು, ಅವಕಾಶಗಳನ್ನು, ಪುರಸ್ಕಾರಗಳನ್ನು, ಸ್ಥಾನಗಳನ್ನು ಅಸಮಾನವಾಗಿ ದೊರಕುವಂತೆ ಮಾಡುವ ಮೂಲಕ ಮುಂದುವರಿಯುತ್ತಿರುತ್ತದೆ. ಉದಾಹರಣೆಗೆ ಸಾಮಾಜಿಕ ಸೇವಾ ಕ್ಷೇತ್ರಗಳಾದ ಸಾರ್ವಜನಿಕ ಆರೋಗ್ಯ, ಶಿಕ್ಷಣ, ಸಾಮಾಜಿಕ ರಕ್ಷಣೆ ಮತ್ತು ಸಾಮಾಜಿಕ ನ್ಯಾಯಗಳನ್ನು ಕಡೆಗಣನೆ ಮಾಡುವ ಮೂಲಕ ಬಡವರಿಗೆ ಬದುಕುವ ಅವಕಾಶವೇ ಇಲ್ಲದಂತೆ ಮಾಡಲಾಗುತ್ತಿದೆ. ಈ ಮೂಲಕ ರಾಷ್ಟ್ರದ ಮತ್ತು ಜಗತ್ತಿನ ಕೆಲವೇ ಶ್ರೀಮಂತರ ಬಳಿ ಸಂಪತ್ತು ಕ್ರೋಢೀಕರಣವಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಆರ್ಥಿಕ ಬೆಳವಣಿಗೆ ಆಧಾರಿತ ಅಭಿವೃದ್ಧಿಯ ಪರಿಣಾಮದಿಂದ ರಾಷ್ಟ್ರವು ಕಳೆದ ಒಂದು ದಶಕದಲ್ಲಿ ಐವತ್ತಕ್ಕೂ ಹೆಚ್ಚಿನ ಬಿಲಿಯನಿಯರ್‌ಗಳನ್ನು ಹಾಗೂ ಒಂದು ಲಕ್ಷಕ್ಕೂ ಹೆಚ್ಚಿನ ಮಿಲಿಯನಿಯರ್‌ಗಳನ್ನು ಉತ್ಪಾದಿಸಿದೆ. ಆದರೆ ಸಾಮಾಜಿಕ ಭದ್ರತೆಗಳಾದ ಆಹಾರ ಮತ್ತು ಆರೋಗ್ಯದ ಅವಕಾಶಗಳ, ಜಾತಿಮೂಲ, ವರ್ಗಮೂಲ ಮತ್ತು ಲಿಂಗತ್ವಮೂಲ ನಿರ್ಲಕ್ಷಗಳನ್ನು ಗಮನಿಸಿದರೆ ಸಾಮಾಜಿಕ ಅಸಮಾನತೆಯ ಸ್ವರೂಪ ತಿಳಿಯುತ್ತದೆ.

**ಶಿಕ್ಷಣ ಮತ್ತು ಅಸಮಾನತೆ :** ಶಿಕ್ಷಣವು ಸಮಾನತೆ, ಸಮಾನ ಭಾಗವಹಿಸುವಿಕೆ, ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದಲ್ಲಿ ಮಹತ್ವದ ಬದಲಾವಣೆ ತರುವಲ್ಲಿ ಆಸರೆಯಾಗುವ ಶಕ್ತಿಯನ್ನು ಹೊಂದಿರುತ್ತದೆ. ಈ ಅರ್ಥದಲ್ಲಿ ಶಿಕ್ಷಣವನ್ನು ಸಾರ್ವಜನಿಕ ಒಳತಿಗಾಗಿ ಸರ್ಕಾರಗಳು ಎಲ್ಲಾ ಮಕ್ಕಳಿಗೂ ಸಮಾನವಾಗಿ ನೀಡಬೇಕಿರುತ್ತದೆ. ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಕಾಣಬಹುದು. ಸಂವಿಧಾನದ ವಿಧಿ 39ರಲ್ಲಿ ಸರ್ಕಾರಗಳು ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶಗಳನ್ನು ಕುರಿತು ತಿಳಿಸುತ್ತದೆ. 45ನೇ ವಿಧಿ ನಿರ್ದಿಷ್ಟವಾಗಿ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುತ್ತದೆ. ಆದರೆ ಸಂವಿಧಾನದ 86ನೇ ತಿದ್ದುಪಡಿಯ ನಂತರ 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು ಎಂದು ಸಂವಿಧಾನದ ವಿಧಿ 21ಎ ನಲ್ಲಿ ತಿಳಿಸಲಾಗಿದೆ. ಈ

ಹಿನ್ನಲೆಯಲ್ಲಿ 45ನೇ ವಿಧಿ 6 ವರ್ಷದ ಒಳಗಿನ ಎಲ್ಲ ಮಕ್ಕಳ ಶೈಶಾವಸ್ಥೆಯ ರಕ್ಷಣೆ, ಶೈಕ್ಷಣಿಕ ಅವಕಾಶಗಳನ್ನು ತಿಳಿಸುತ್ತದೆ. ಸಂವಿಧಾನದ ಪರಿಚ್ಛೇದ 19 ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ ಎಂದು ಸಾರುತ್ತದೆ. ಅದೇ ರೀತಿ ಅವಕಾಶ ವಂಚಿತ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಹಿತಾಸಕ್ತಿಗಳನ್ನು ಕಾಯುವುದು ಸಂವಿಧಾನಾತ್ಮಕ ಕರ್ತವ್ಯ. ಈ ಹಿನ್ನೆಲೆಯಲ್ಲಿ 29ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡುತ್ತದೆ. ಹಾಗೆಯೇ 30ನೇ ವಿಧಿ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶಗಳನ್ನು ನೀಡಿದೆ. ಸಂವಿಧಾನದ 46ನೇ ವಿಧಿ ಸರ್ಕಾರಗಳು ಹಿಂದುಳಿದ ಜನರ ಅದರಲ್ಲಿಯೂ ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡಿ ಅಭಿವೃದ್ಧಿಪಡಿಸುವುದು ಸರ್ಕಾರಗಳ ಜವಾಬ್ದಾರಿಯೆಂದು ಹೇಳುತ್ತದೆ.

ಸರ್ವೋಚ್ಚ ನ್ಯಾಯಾಲಯವು ಸಂವಿಧಾನದ ವಿಧಿ 21ರ ಜೀವಿಸುವ ಹಕ್ಕನ್ನು ಶಿಕ್ಷಣದ ನೆಲೆಯಲ್ಲಿ ಅರ್ಥೈಸಿದ್ದು ಅತ್ಯಂತ ಮಹತ್ವದ್ದಾಗಿದೆ. ನಮ್ಮ ಸರ್ವೋಚ್ಚ ನ್ಯಾಯಾಲಯವು ಶಾಲಾ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸುವುದರ ಮೂಲಕ ಈ ಎಲ್ಲಾ ಪ್ರಯತ್ನಗಳಿಗೆ ಒಂದು ಹೊಸ ತಿರುವು ನೀಡಿತು. ಆ ಮೂಲಕ ಶಿಕ್ಷಣ ವಂಚಿತ ಮಕ್ಕಳ ಬದುಕಿನಲ್ಲಿ ಹೊಸ ಆಶಾ ಭಾವನೆಯನ್ನು ಮೂಡಿಸಿತು. 1993ರಲ್ಲಿ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದ ಸುಪ್ರೀಂ ಕೋರ್ಟ್‌ನ ತೀರ್ಪು 21ಎ ವಿಧಿಯಲ್ಲಿ 6 ರಿಂದ 14 ವರ್ಷ ವಯೋಮಿತಿಯೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.

ಈ ತೀರ್ಪಿನಲ್ಲಿ ನ್ಯಾಯಾಲಯವು ಅಂಗನವಾಡಿಯಿಂದ ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣವೂ ಸೇರಿದಂತೆ ಎಲ್ಲವನ್ನು **'ಸಮಗ್ರ–ಸಂಯುಕ್ತ'** ದೃಷ್ಟಿಕೋನದಿಂದ ನೋಡಬೇಕು ಎಂದು ಹೇಳಿದೆ. ಈ ತೀರ್ಪಿನ ಪ್ರಕಾರ ದೇಶದ ಪ್ರತಿಯೊಬ್ಬ ಪ್ರಜೆಯೂ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಹೊಂದಿರುತ್ತಾರೆ. ಇದು ಜೀವಿಸುವ ಹಕ್ಕಿನ ಭಾಗವಾಗಿದೆ.

ಆದರೆ ಈಗ ಶೈಕ್ಷಣಿಕ ವಲಯದಲ್ಲಿ ಇಂದು ಅಸಮಾನತೆಯನ್ನು ಹೆಚ್ಚಿಸುವಂತಹ ಕಾನೂನಾತ್ಮಕ ಅವಕಾಶಗಳು ಇಂದು ಹೆಚ್ಚುತ್ತಿವೆ. ಅಲ್ಲದೆ ಶೈಕ್ಷಣಿಕ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿಯೂ ಸಾಮಾಜಿಕ ಆರ್ಥಿಕ ಗುಂಪುಗಳ ನಡುವೆ ಅಸಮಾನತೆ ಹೆಚ್ಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೂ ಸಂವಿಧಾನಾತ್ಮಕ ಹಕ್ಕು ಅವಕಾಶಗಳನ್ನು ಸೂಕ್ತವಾಗಿ ಬಳಸುವ ಮೂಲಕ ಶೈಕ್ಷಣಿಕ ಅಸಮಾನತೆಯನ್ನು ಹೋಗಲಾಡಿಸುವ ಕೆಲಸವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಿರಂತರವಾಗಿ ನೆಡೆಯುತ್ತಿದೆ.

**ಲಿಂಗತ್ವ ಅಸಮಾನತೆ :** ಸಾಮಾಜಿಕ ಅಸಮಾನತೆಗಳಲ್ಲಿ ಒಂದಾದ ಲಿಂಗತ್ವ ಅಸಮಾನತೆಯು ಹೇಗೆ ರೂಪ ಪಡೆಯುತ್ತದೆ ಎನ್ನುವುದನ್ನು ನಾವು ಗಮನಿಸೋಣ. ವಾಸ್ತವದಲ್ಲಿ ನಮ್ಮ ಮನೋಭಾವನೆಗಳು ಹೆಚ್ಚಾಗಿ (ಇಂಟರ್ ಡಿಪೆಂಡೆಂಟ್) ಒಂದು ಮತ್ತೊಂದನ್ನು ಅವಲಂಬಿಸಿರುತ್ತವೆ. ಉದಾಹರಣೆಗೆ ಶಿಕ್ಷಣದ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾದುದ್ದಾಗಿರಬಹುದು. ಈ ರೀತಿಯ ಪ್ರಭಾವಗಳು ಒಂದೇ ಕುಟುಂಬದಲ್ಲಿ ಅವನ/ಅವಳ ಮೇಲೆ ಬೀರಬಹುದಾದ ಪ್ರಭಾವಗಳು ಸಮುದಾಯದಿಂದಲೇ ಉಂಟಾಗಿರಬಹುದು ಅಥವಾ ನೆರೆ–ಹೊರೆಯವರ ಪ್ರಭಾವಕ್ಕೆ ಒಳಗಾಗಿರಬಹುದು. ಈ ದೃಷ್ಟಿಯಿಂದ ಹೆಣ್ಣು ಮತ್ತು ಗಂಡು ಮಕ್ಕಳ ಶಿಕ್ಷಣಕ್ಕೆ ಇರುವ ಪ್ರೇರಣಾ ಶಕ್ತಿಯು ಪ್ರಮುಖವಾಗಿ ಸಾಮಾಜಿಕ ಆಯಾಮ ಹೊಂದಿದೆ. ಈ ಕಾರಣಗಳಿಂದ ಶಾಲಾ ಭಾಗವಹಿಸುವಿಕೆಯಲ್ಲಿ, ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆಯನ್ನು ನಾವು ಕಾಣಬಹುದು.

2015–16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–4 (ಎಚ್.ಎಫ್.ಎಚ್.ಎಸ್.–4) ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರುವ ಶೇಕಡ 24.3ರಷ್ಟು ಮಹಿಳೆಯರ ಮತ್ತು ನಗರ ಪ್ರದೇಶದ ಶೇಕಡ



© KTBS Not to be published

(16,2) ಮಹಿಳೆಯರ ಬಾಡಿ ಮಾಸ್ ಸೂಚಿ (ಬಿ.ಎಂ.ಐ.) ಕನಿಷ್ಠ ಮಟ್ಟಕ್ಕಿಂತಲೂ ಕಡಿಮೆ ತೂಕ ಹೊಂದಿದ್ದರೆ, 06 ರಿಂದ 56 ತಿಂಗಳ ಮಕ್ಕಳಲ್ಲಿ ಶೇಕಡ 60.9ರಷ್ಟು ಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಗರ್ಭಿಣಿಯರಲ್ಲಿ ಶೇಕಡ 45.2 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಬದುಕುತ್ತಿರುವಾಗ, ಇವರಿಗೆ ಆಹಾರ, ಆರೋಗ್ಯ ಮತ್ತು ಪೌಷ್ಟಿಕತೆಯಲ್ಲಿ ಭದ್ರತೆಯನ್ನು, ಕಲಿಕೆಗೆ ಶೈಕ್ಷಣಿಕ ಬೆಂಬಲವನ್ನು ನೀಡುವ ಮೂಲಕ 'ಅಭಿವೃದ್ಧಿ' ಮಹಿಳೆಯರನ್ನು ಒಳಗೊಳ್ಳಬೇಕು. ಆ ಮೂಲಕ ಲಿಂಗ ಅಸಮಾನತೆಯನ್ನು ಸರಿ ಪಡಿಸಲು ನಾವು ಪ್ರಯತ್ನ ಮಾಡಬೇಕಾಗಿದೆ.

## ಸಾಮಾಜಿಕ ಸ್ತರವಿನ್ಯಾಸ

ಸಮಾಜದಲ್ಲಿರುವ ಸದಸ್ಯರುಗಳನ್ನು ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂದು ವರ್ಗೀಕರಿಸಿ ಅವರಿಗೆ ಬೇರೆ ಬೇರೆ ಸಾಮಾಜಿಕ ಸ್ಥಾನಮಾನ ಮತ್ತು ಪಾತ್ರಗಳನ್ನು ನೀಡುವ ಕ್ರಮ ಮಾನವ ಸಮಾಜದ ಲಕ್ಷಣವಾಗಿ ಮುಂದುವರಿದಿದೆ. ಸಮಾಜದಲ್ಲಿ ಇರುವ "ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ "ಸಾಮಾಜಿಕ ಸ್ತರವಿನ್ಯಾಸ". ಎಂದು ಸರಳವಾಗಿ ಹೇಳಬಹುದು.

### ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳು

**1. ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು :** ಸ್ತರವಿನ್ಯಾಸವನ್ನು ವ್ಯಕ್ತಿಗಳ ದೈಹಿಕ ಗುಣಗಳನ್ನಾಧರಿಸಿ ನಿರ್ಧರಿಸದೆ ಸಾಮಾಜಿಕ ಮಾನ್ಯತೆ ಮತ್ತು ಪ್ರಾಮುಖ್ಯತೆಗಳ ಆಧಾರದಿಂದ ನಿರ್ಧರಿಸಲಾಗುತ್ತದೆ. ಉದಾಹರಣೆಗೆ ವ್ಯಕ್ತಿಯು ದೈಹಿಕವಾಗಿ ಎತ್ತರವಾಗಿ, ಸುಂದರನಾಗಿ, ಬಲಿಷ್ಠನಾಗಿದ್ದ ಮಾತ್ರಕ್ಕೆ ಸಾಮಾಜಿಕ ಸ್ಥಾನ ನಿಗದಿ ಆಗದೆ, ಶಿಕ್ಷಣ, ಬುದ್ಧಿಮತ್ತೆ, ಆದಾಯ, ವೃತ್ತಿ, ಕೌಶಲ್ಯತೆ ಇನ್ನೂ ಮುಂತಾದ ಅಂಶಗಳ ಆಧಾರದಲ್ಲಿಯೂ ನಿರ್ಧಾರವಾಗುತ್ತದೆ.

**2. ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು :** ಸಾಮಾಜಿಕ ಸ್ತರವ್ಯವಸ್ಥೆಯು ವಿಶ್ವವ್ಯಾಪಿಯಾಗಿದೆ. ಮಾನವ ಸಮಾಜ ಎಲ್ಲೆಲ್ಲಿದೆಯೋ ಅಲ್ಲೆಲ್ಲ ಇದೆ. ಶ್ರಮ ವಿಭಜನೆ, ವೃತ್ತಿ, ಆದಾಯ, ಇನ್ನೂ ಮುಂತಾದ ಸಾಮಾಜಿಕ ಅಂಶಗಳ ಆಧಾರದಲ್ಲಿ ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ಮಾನವ ಸಮಾಜದಲ್ಲಿಯೂ ಕಂಡುಬರುತ್ತದೆ.

**3. ಸ್ತರವ್ಯವಸ್ಥೆ ಪುರಾತನವಾದದ್ದು :** ಮಾನವರು ಸಾಮುದಾಯಿಕ ಜೀವನ ಕ್ರಮವನ್ನು ಆರಂಭಿಸಿದಾಗಿನಿಂದಲೂ ಸಾಮಾಜಿಕ ಸ್ತರವಿನ್ಯಾಸ ಇದೆ. ಅಲೆಮಾರಿ ಜೀವನ ಪದ್ಧತಿಯಿಂದ ಹಿಡಿದು ಇಂದಿನ ಸಾಮಾಜಿಕ ಜೀವನದವರೆಗೂ ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆ ವಿವಿಧ ರೂಪಗಳಲ್ಲಿ ರೂಢಿಯಲ್ಲಿದೆ.

**4. ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ :** ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ಸಮಾಜಗಳಲ್ಲಿ ಒಂದೇ ರೀತಿಯ ಹೆಸರಿನಲ್ಲಿರದೆ ಬೇರೆ ಬೇರೆ ರೂಪಗಳಲ್ಲಿ ಅಸ್ತಿತ್ವದಲ್ಲಿದೆ. ಉದಾ:– ಪ್ರಾಚೀನ ರೋಮ್ ಪೆಟ್ರೇಸಿಯನ್ನರು ಮತ್ತು ಪ್ಲೇಬಿಯನ್ನರ ನಡುವೆ ವ್ಯತ್ಯಾಸಗಳಿವೆ. ಭಾರತದಲ್ಲಿ ಕರ್ಮ ಸಿದ್ಧಾಂತದ ಆಧಾರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ಸಾಮಾಜಿಕ ವಿಂಗಡಣೆಗಳಿವೆ.

### ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳು

ಸಾಮಾಜಿಕ ಸ್ತರವಿನ್ಯಾಸವು ಜಗತ್ತಿನಾದ್ಯಂತ ಕಂಡು ಬಂದರೂ ಅದು ಒಂದೇ ರೂಪದಲ್ಲಿ ಇರುವುದಿಲ್ಲ. ಇದು ಹಲವು ಭಿನ್ನತೆಯನ್ನು ಹೊಂದಿದೆ. ಹಾಗೆಯೇ ಪ್ರಾಚೀನ ಸಮಾಜದಿಂದ ಡಿಜಿಟಲ್ ಸಮಾಜದವರೆಗೆ ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಯಲ್ಲಿ ಇರುವ ಪ್ರಮುಖ ರೂಪಗಳನ್ನು ತಿಳಿದುಕೊಳ್ಳೋಣ. ಅವೆಂದರೆ – 1. ಆದಿವಾಸಿ ಸಮಾಜ (Primitive Society); 2. ಗುಲಾಮಗಿರಿ (Slavery); 3. ಎಸ್ಟೇಟ್ಸ್ ಪದ್ಧತಿ (Estates System); 4. ವರ್ಣವ್ಯವಸ್ಥೆ (Varna System) ಮತ್ತು 5. ಜಾತಿವ್ಯವಸ್ಥೆ (Caste System).

© KTBS Not to be published

# ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು

ಭಾರತದಲ್ಲಿ ಮೊದಲು ವರ್ಣವ್ಯವಸ್ಥೆ ರೂಢಿಯಲ್ಲಿತ್ತು. ಇದು ವೇದಗಳ ಕಾಲದ ಸಮಾಜದಲ್ಲಿ ಆರಂಭಗೊಂಡಿತೆಂದು ಅಭಿಪ್ರಾಯಪಡಲಾಗಿದೆ. 'ಚಾತುರ್ವರ್ಣ' ಎಂಬುದು ಸಾಮಾಜಿಕ ವಿಭಜನಾ ವ್ಯವಸ್ಥೆ. ಇದು ಕರ್ಮ ಸಿದ್ಧಾಂತದ ತತ್ವದಡಿಯಲ್ಲಿ ರೂಪಿತವಾಗಿದೆಯೆಂದು ಹೇಳಲಾಗುತ್ತಿದೆ. ಬ್ರಾಹ್ಮಣ–ಅಧ್ಯಯನ, ಅಧ್ಯಾಪನ, ಯಜ್ಞಯಾಗಾದಿಗಳಲ್ಲಿಯೂ, ಕ್ಷತ್ರಿಯನು–ರಾಜ್ಯ ಆಡಳಿತದಲ್ಲಿಯೂ, ವೈಶ್ಯ–ವ್ಯಾಪಾರ, ವ್ಯವಹಾರದಲ್ಲಿಯೂ ಮತ್ತು ಶೂದ್ರ–ಕೃಷಿ–ಕೂಲಿಕಾರರಾಗಿಯೂ ಕಾರ್ಯ ನಿರ್ವಹಿಸಬೇಕು ಎನ್ನುವುದು ಈ ಸಿದ್ಧಾಂತದ ಆಶಯ.

ಶೂದ್ರರಿಗಿಂತ ಕೆಳಗಿನವರಾದ ಐದನೆ ವರ್ಗವಾದ ಅಂತ್ಯಜರ(ಅಸ್ಪೃಶ್ಯರ) ಸ್ಥಿತಿ ಮನುಷ್ಯರೇ ಅಲ್ಲವೇನೊ ಎನಿಸುವಂತಿತ್ತು. ಅಸ್ಪೃಶ್ಯತೆಯ ಆಚರಣೆಯು ವರ್ಣವ್ಯವಸ್ಥೆಯ ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿದೆ. ಸ್ಪೃಶ್ಯ ಮತ್ತು ಅಸ್ಪೃಶ್ಯ ಭಾವನೆ ಮುಖ್ಯವಾಗಿ ಸಾಮಾಜಿಕ, ಆರ್ಥಿಕ, ಅಸಮಾನತೆಯ ಮೂಲದಿಂದ ರೂಪಿತಗೊಂಡದ್ದು. ಅಸ್ಪೃಶ್ಯ ಎಂಬುದು ಮುಟ್ಟಬಾರದ, ಮುಟ್ಟಲಾಗದ ಎಂಬ ಅರ್ಥದಲ್ಲಿ ಬಳಕೆಯಾಗಿದೆ.

ಬ್ರಿಟಿಷ್ ಸರ್ಕಾರವು 1935ರಲ್ಲಿ ಕೇಂದ್ರ ಕಾಯಿದೆ (ಸೆಂಟ್ರಲ್ ಆ್ಯಕ್ಟ್) ಮೂಲಕ ಭಾರತದ ಅಸ್ಪೃಶ್ಯ ವರ್ಗ ಹಾಗೂ ಗುಡ್ಡಗಾಡು ವರ್ಗದ ಜನರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಎಂಬುದಾಗಿ ಹೆಸರಿಸಿತು.

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಹೇಳುವಂತೆ 'ಹೊರಗಿನಿಂದ ಬಂದವರು, ಊರಿನಿಂದ ಹೊರಗಡೆ ನೆಲೆಸಿದರೊ ಅಥವಾ ಊರೊಳಗಡೆ ಇದ್ದವರನ್ನು ಕಾರಣಾಂತರಗಳಿಂದ ಊರ ಹೊರಕ್ಕೆ ತಳ್ಳಲಾಯಿತೊ ಎಂಬುದನ್ನು ವಿಶ್ಲೇಷಣೆ ಮಾಡಿದರೆ ಅಸ್ಪೃಶ್ಯತೆಯ ಉಗಮ ಮತ್ತು ಅಸ್ಪೃಶ್ಯರು ಯಾರೆಂಬುದು ಅರ್ಥವಾಗುತ್ತದೆ'. ಮಹಾತ್ಮಾ ಗಾಂಧೀಜಿಯವರ ಪ್ರಕಾರ 'ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ'. ಅಸ್ಪೃಶ್ಯತೆ ನಿವಾರಣೆಗೆ ಅಂಬೇಡ್ಕರ್‌ರವರು ನಡೆಸಿದ ಹೋರಾಟವನ್ನು ಇಲ್ಲಿ ನೆನೆಯಬೇಕು.

© KTBS Not to be published

## ಅಸ್ಪೃಶ್ಯತೆಯ ಸಮಸ್ಯೆಗಳು

**ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ :** ಅಸ್ಪೃಶ್ಯರಿಗೆ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ಕೆಳ ಸ್ಥಾನ ನೀಡಲಾಗಿದೆ. ಮನುಸ್ಮೃತಿ ಪ್ರಕಾರ ಚಂಡಾಲರನ್ನು ಮುಟ್ಟಿದವರು ಹತ್ತು ಹಲವು ಪ್ರಾಯಶ್ಚಿತ್ತಕ್ಕೊಳಪಡಬೇಕಾಗಿತ್ತು. ವ್ಯಾಘ್ರಪಾದ ಸ್ಮೃತಿಯು ಹೇಳುವಂತೆ ಹಸುವಿನ ಬಾಲದ ಉದ್ದಕ್ಕಿಂತ ಕಡಿಮೆ ಅಂತರದಲ್ಲಿ ಅಂತ್ಯಜರನ್ನು ಭೇಟಿಯಾದರೆ ಆ ಸವರ್ಣೀಯರು ಸ್ನಾನಮಾಡಿ ಮೈಲಿಗೆಯನ್ನು ಹೋಗಲಾಡಿಸಿಕೊಳ್ಳಬೇಕಾಗಿತ್ತು.

ಮಲಬಾರಿನಲ್ಲಿ ತಾವೇ ತಯಾರಿಸಿದ ಚಪ್ಪಲಿಗಳನ್ನು ಅಂತ್ಯಜರು ಧರಿಸುವಂತಿರಲಿಲ್ಲ. ಸವರ್ಣೀಯರ ಕೆರೆ, ಕೊಳ, ಬಾವಿ, ಕಟ್ಟೆ, ಸ್ಮಶಾನವನ್ನು ಬಳಸುವಂತಿರಲಿಲ್ಲ. ಬಿ.ಕುಪ್ಪುಸ್ವಾಮಿಯವರು ದಾಖಲಿಸಿರುವಂತೆ, 'ಮಲ ಹೊರುವ, ಸತ್ತ ಪ್ರಾಣಿಗಳನ್ನು ಸಾಗಿಸುವ, ಬೀದಿ–ಚರಂಡಿ ಗುಡಿಸುವ ಹೀನ ವೃತ್ತಿಗಳನ್ನು ಮಾಡಬೇಕಾಗಿತ್ತು.' ಹೀಗೆ ಸಾಮಾಜಿಕವಾಗಿ ಅತ್ಯಂತ ಕೆಳ ಸ್ಥಾನಗಳನ್ನು ಅಸ್ಪೃಶ್ಯರಿಗೆ ನೀಡಿ, ಅವರು ಹುಟ್ಟಿನ ಕಾರಣಕ್ಕಾಗಿಯೇ ಅವರ ಸಾಮಾಜಿಕ ಚಲನೆಯನ್ನು ನಿಯಂತ್ರಣ ಮಾಡಲಾಗಿತ್ತು.

**ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು :** ಅನೇಕ ಶತಮಾನಗಳಿಂದ ಅಸ್ಪೃಶ್ಯರನ್ನು ಶೈಕ್ಷಣಿಕ ಚಟುವಟಿಕೆಗಳಿಂದ ದೂರವಿಡಲಾಗಿತ್ತು. ವೇದಗಳನ್ನು ಕೇಳುವಂತಿರಲಿಲ್ಲ ಮತ್ತು ಓದುವಂತಿರಲಿಲ್ಲ. ಸಂಸ್ಕೃತ ಭಾಷೆಯನ್ನು ಕಲಿಯುವಂತಿರಲಿಲ್ಲ. ಧರ್ಮ ಗ್ರಂಥಗಳ ಬಗ್ಗೆ ತಿಳುವಳಿಕೆ ಪಡೆಯುವಂತಿರಲಿಲ್ಲ.

ಮಧ್ಯಯುಗದಲ್ಲೂ ಇದೇ ಸ್ಥಿತಿ ಇತ್ತು. ಬ್ರಿಟಿಷರು ಭಾರತಕ್ಕೆ ಬರುವುದಕ್ಕೂ ಮುಂಚೆ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಸವರ್ಣೀಯ ವಿದ್ಯಾರ್ಥಿಗಳ ಜೊತೆ ಬೆರೆಯಲು ಬಿಡುತ್ತಿರಲಿಲ್ಲ. ಒಟ್ಟಿಗೆ ಕುಳಿತು ಪಾಠಗಳನ್ನು ಕಲಿಯುವಂತಿರಲಿಲ್ಲ. ಸವರ್ಣೀಯ ವಿದ್ಯಾರ್ಥಿಗಳಿಂದ ದೂರ ಕೂರಿಸಲಾಗುತ್ತಿತ್ತು. ಮೈಲಿಗೆಯ ಕಾರಣ ನೀಡಿ ಕೆಳಜಾತಿ ಜನರಿಗೆ ಶೈಕ್ಷಣಿಕ ಸೌಲಭ್ಯಗಳಿಂದ ಹೊರಗಿಡಲಾಗಿತ್ತು.

ಶಿಕ್ಷಣವು ಅಂಬೇಡ್ಕರ್ ಅವರಿಗೆ ಸಾಮಾಜಿಕ ನ್ಯಾಯ ಪಡೆಯುವ ಹೋರಾಟಕ್ಕೆ ಪ್ರವೇಶವನ್ನು ನೀಡುತ್ತದೆ. ಇದು ಭಾರತದ ಸಾಮಾಜಿಕ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರು ತಮಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಗಳ ಚರ್ಚೆಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಪ್ರತಿಯೊಬ್ಬರಿಗೂ ಇರಬೇಕು. ಮತ್ತೊಂದು ಕಡೆ ತರ್ಕಸಮ್ಮತವಾಗಿ ವಿಚಾರ ಮಾಡುವ ಸಾಮರ್ಥ್ಯವನ್ನು ಪ್ರತಿಯೊಬ್ಬರು ಹೊಂದಬೇಕು. ಇದು ಸಾಧ್ಯವಾಗುವುದು ಶಿಕ್ಷಣದ ಮೂಲಕ ಮಾತ್ರ. ಆದ್ದರಿಂದ ಅಂಬೇಡ್ಕರ್ ಶಿಕ್ಷಣದ ಮಹತ್ವವನ್ನು ಮನಗಾಣಿಸುವ ಹೋರಾಟಕ್ಕೂ ಆದ್ಯತೆ ನೀಡಿದರು.

ಶಿಕ್ಷಣಕ್ಕಿರುವ ಸಾರ್ವಜನಿಕ ಮಹತ್ವದ ಮೂಲಕವೇ ಬಿ.ಆರ್. ಅಂಬೇಡ್ಕರ್ ಅವರು 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು' ಎಂದು ಪ್ರತಿಪಾದಿಸುತ್ತಾರೆ. ಈ ರೀತಿಯಾದ ಕ್ರಾಂತಿಕಾರಿ ಚಿಂತನೆಗಳಿಂದಲೇ ಡಾ|| ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನೆಯಲ್ಲಿ ನಿರ್ಣಾಯಕವಾದ ಹಾಗೂ ಮಹತ್ವದ ಪಾತ್ರವನ್ನು ನಿರ್ವಹಿಸಿ 'ಸಂವಿಧಾನ ಶಿಲ್ಪಿ' ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

**ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ :** ಸಾಂಪ್ರದಾಯಿಕವಾಗಿ ಅಸ್ಪೃಶ್ಯರು ಪ್ರಮುಖ ಆರ್ಥಿಕ ಚಟುವಟಿಕೆಗಳನ್ನು ಮತ್ತು ಆಸ್ತಿಯ ಒಡೆತನದ ಹಕ್ಕನ್ನು ಹೊಂದದೆ, ಮೇಲು ಜಾತಿಗಳ ಸೇವೆಯನ್ನು ಮಾಡಬೇಕಾಗಿತ್ತು. ಇವರು ಸ್ವಯಂ ಆಸ್ತಿಯ ಭೂಮಿಯನ್ನು ಹೊಂದಿರದಂತೆ ಧರ್ಮ ಗ್ರಂಥಗಳನ್ನು ಉಲ್ಲೇಖಿಸಿ ಅಸ್ಪೃಶ್ಯರಿಗೆ ಆಸ್ತಿಯ ಹಕ್ಕನ್ನು ನಿರಾಕರಣೆ ಮಾಡಲಾಗಿತ್ತು. ಇದು ಮಾನವ ಜೀವ ವಿರೋಧಿ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ.

**ರಾಜಕೀಯ ಭಾಗವಹಿಸುವಿಕೆ ನಿರಾಕರಣೆ :** ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ಅಸ್ಪೃಶ್ಯರಿಗೆ ಕೆಲವು ಮಟ್ಟಿಗೆ ರಾಜಕೀಯವಾದ ಹಕ್ಕುಗಳು ದೊರೆತವು. ಡಾ. ಬಿ.ಆರ್. ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಅಸ್ಪೃಶ್ಯರಿಗೆ ರಾಜಕೀಯ ಕ್ಷೇತ್ರದಲ್ಲಿ ಹಾಗೂ ಆಡಳಿತದಲ್ಲಿ ಅವಕಾಶಗಳು ದೊರೆತವು. ಸ್ವಾತಂತ್ರ್ಯ ನಂತರ ಮುಖ್ಯವಾಗಿ ಅಸ್ಪೃಶ್ಯ ಸಮುದಾಯಗಳನ್ನು ಒಳಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರಲಾಯಿತು.

ಅಸ್ಪೃಶ್ಯತೆ ಎನ್ನುವ ಸಾಮಾಜಿಕ ಪಿಡುಗನ್ನು ಹೋಗಲಾಡಿಸುವ ಸಲುವಾಗಿಯೇ ಇಂಡಿಯಾದ ಸಂವಿಧಾನವು ವಿಶ್ವದಲ್ಲಿಯೆ ವಿಶಿಷ್ಟವಾದ ನ್ಯಾಯ ಮತ್ತು ಸಮಾನತೆಯನ್ನು ನೀಡುವ ದಿಕ್ಕಿನಲ್ಲಿ ಬದ್ಧತೆಯ ವಾಗ್ದಾನ ಮಾಡುತ್ತದೆ. ಎಲ್ಲಾ ಜನರು ಘನತೆ, ಗೌರವ, ಸ್ವಾತಂತ್ರ್ಯ, ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಪಡೆಯಲು ಅವಕಾಶ ಒದಗಿಸಿರುವ ನಮ್ಮ ಸಂವಿಧಾನವು ಅತ್ಯಂತ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿಯೇ ಅಸ್ಪೃಶ್ಯತೆಯ ನಿವಾರಣೆಗೆ ಕಾನೂನು ಕ್ರಮಗಳನ್ನು ಜಾರಿಗೆ ತರಲಾಗಿದೆ.

### ಅಸ್ಪೃಶ್ಯತೆ ನಿವಾರಣೆಗೆ ಕಾನೂನು ಕ್ರಮಗಳು

ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕಲು ಜ್ಯೋತಿಬಾ ಫುಲೆ, ಡಾ.ಬಿ.ಆರ್. ಅಂಬೇಡ್ಕರ್ ಮೊದಲಾದವರು ತೀವ್ರ ಪ್ರಯತ್ನಪಟ್ಟರು. ಇಷ್ಟಾದರೂ ಇದನ್ನು ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಇನ್ನೂ ಸಾಧ್ಯವಾಗಿಲ್ಲ. ಇದನ್ನು ತಡೆಯಲು ಕಾನೂನುಗಳನ್ನು ಜಾರಿ ಮಾಡಲಾಗಿದೆ.

© KTBS Not to be published

ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ. ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲಿ ಜಾರಿಗೊಳಿಸಿದೆ. ಇದರಲ್ಲಿ ಕಂಡುಬಂದ ಕೆಲವು ಲೋಪ ದೋಷಗಳನ್ನು ತಿದ್ದುಪಡಿಮಾಡಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976ರಲ್ಲಿ ಮಾರ್ಪಾಡುಗೊಳಿಸಲಾಯಿತು. ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅಲ್ಲದೆ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ. ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ, ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ. 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ. ಹೀಗೆ, ಸ್ವತಂತ್ರ ಭಾರತವು ಅಸ್ಪೃಶ್ಯತೆಯ ನಿವಾರಣೆಗಾಗಿ ವಿಶೇಷ ಆಸಕ್ತಿ ವಹಿಸಿ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದೆ.

**ನಿಮಗಿದು ತಿಳಿದಿರಲಿ :**

* *ಸಂವಿಧಾನದ 15, 16, 17, 38 ಮತ್ತು 46ನೇ ವಿಧಿಗಳು ಭಾರತೀಯ ಪ್ರಜೆಗಳ ನಡುವೆ ಯಾವುದೇ ಬಗೆಯ ತಾರತಮ್ಯ ಮಾಡಬಾರದು ಎಂದು ತಿಳಿಸುತ್ತವೆ.*
* *16(4) 320(4) ನೇ ವಿಧಿಗಳು ಉದ್ಯೋಗ ವಲಯದಲ್ಲಿ ಪರಿಶಿಷ್ಟ ಜಾತಿ–ಪಂಗಡಗಳಿಗೆ ಮೀಸಲಾತಿ ಘೋಷಿಸಿವೆ.*
* *330, 332, 334 ನೇ ವಿಧಿಗಳು ರಾಜಕೀಯ ಕ್ಷೇತ್ರದಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಘೋಷಿಸಿವೆ.*
* *29 ನೇ ವಿಧಿ ಶೈಕ್ಷಣಿಕ ಸೌಲಭ್ಯ ಘೋಷಿಸಿದೆ.*
* *25 ನೇ ವಿಧಿ ಜನರೆಲ್ಲರಿಗೂ ಸಾರ್ವಜನಿಕ ಧಾರ್ಮಿಕ ಕೇಂದ್ರಗಳಿಗೆ ಪ್ರವೇಶಿಸುವ ಮುಕ್ತ ಅವಕಾಶ ಘೋಷಿಸಿದೆ.*

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಸಂವಿಧಾನದ__________ ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ.
2. ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ ____________ ವಿಧಿಯು ನಿಷೇಧಿಸಿದೆ.
3. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು __________ ರಲ್ಲಿ ಜಾರಿಗೆ ಬಂದಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?
2. ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?
3. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?
4. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ?

**III. ಚಟುವಟಿಕೆ :**

1. ನಿಮ್ಮ ಊರಿನ ಸಾಮಾಜಿಕ ಅಸಮಾನತೆಯ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.

**IV. ಯೋಜನೆ :**

1. ನಿಮ್ಮ ಶಾಲೆಗೆ ಕಾನೂನು ತಜ್ಞರನ್ನು ಕರೆದು, ಅಸ್ಪೃಶ್ಯತೆ ಮತ್ತು ಸಾಮಾಜಿಕ ಅಸಮಾನತೆಯ ಕುರಿತು ಉಪನ್ಯಾಸ ಮತ್ತು ಸಂವಾದ ಏರ್ಪಡಿಸಿ.

* * * *

# ಅಧ್ಯಾಯ-02

# ದುಡಿಮೆ

R9U8A2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ :**

- *ಶ್ರಮ ವಿಭಜನೆ*
- *ಉದ್ಯೋಗ/ದುಡಿಮೆಯಲ್ಲಿ ಅಸಮಾನತೆ ಮತ್ತು ಭೇದ-ಭಾವ*
- *ಸಂಭಾವನೆ ಸಹಿತ ಮತ್ತು ಸಂಭಾವನೆ ರಹಿತ ದುಡಿಮೆ*
- *ಸಂಘಟಿತ ಮತ್ತು ಅಸಂಘಟಿತ ವಲಯಗಳ ದುಡಿಮೆಗಾರರು*
- *ಅಸಂಘಟಿತ ದುಡಿಮೆಗಾರರ ಸವಾಲುಗಳು*


## ಶ್ರಮ ವಿಭಜನೆ

ಶ್ರಮ ವಿಭಜನೆ (ಡಿವಿಜನ್ ಆಫ್ ಲೇಬರ್) ಕುರಿತು ಪ್ಲೇಟೋ ಅವರು ತಮ್ಮ 'ದಿ ರಿಪಬ್ಲಿಕ್' ಎನ್ನುವ ಪುಸ್ತಕದಲ್ಲಿ "ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪಗೊಳ್ಳುತ್ತದೆ, ಈ ಸ್ವಾಭಾವಿಕ ಅಸಮಾನತೆಯು ಶ್ರಮ ವಿಭಜನೆಯಿಂದ ಕೂಡಿರುತ್ತದೆ" ಎಂದು ಹೇಳುತ್ತಾರೆ. ಒಂದು ಸಮಾಜಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಮತ್ತು ವಸ್ತು-ಪದಾರ್ಥಗಳನ್ನು ಬೇರೆ ಬೇರೆ ವರ್ಗಗಳ ದುಡಿಯುವ ಜನರು ಪೂರೈಸುತ್ತಿರುತ್ತಾರೆ ಎಂದು ಪ್ಲೇಟೋ ಹೇಳುತ್ತಾರೆ. ಉದಾಹರಣೆಗೆ ನಮ್ಮ ಸಮಾಜಕ್ಕೆ ಅಗತ್ಯವಾದ ಆಹಾರ ಪದಾರ್ಥಗಳ ಉತ್ಪಾದನೆಗೆ ರೈತರು ಬೇಕು. ಬಟ್ಟೆ ನೇಯಲು ನೇಕಾರ ಬೇಕು. ಅದನ್ನು ಹೊಲೆಯಲು ದರ್ಜಿ ಬೇಕು. ಶ್ರಮ ವಿಭಜನೆಯು ಈ ಎಲ್ಲಾ ದುಡಿಯುವ ವರ್ಗಗಳು ಸಾವಯವ ರೀತಿ ಐಕ್ಯವಾಗುವಂತೆ ಮಾಡುತ್ತದೆ. ಶ್ರಮ ವಿಭಜನೆಯು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಗತ್ಯಗಳಿಗೆ ಬೇಕಾಗುತ್ತದೆ. ಆದರೆ ಶ್ರಮವಿಭಜನೆಯಲ್ಲಿ ಶೋಷಣೆಯ ಆಯಾಮ ಇರಬಾರದು.

© KTBS Not to be published

ಕಾರ್ಲ್‌ಮಾರ್ಕ್ಸ್ ಅವರು ಶ್ರಮ ವಿಭಜನೆ (ಡಿವಿಜನ್ ಆಫ್ ಲೇಬರ್) ಬಗ್ಗೆ ಚರ್ಚಿಸುತ್ತಾ, 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ' ಎಂದು ಹೇಳುತ್ತಾರೆ. ಅವರು ಶ್ರಮ ವಿಭಜನೆಯನ್ನು ಆರ್ಥಿಕ ಶ್ರಮ ವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆ ಎಂದು ಪ್ರತ್ಯೇಕಿಸುತ್ತಾರೆ. ಆರ್ಥಿಕ ಶ್ರಮ ವಿಭಜನೆಯು ತಾಂತ್ರಿಕ ಅಂಶಗಳ ಜೊತೆಗೆ, ಕಾರ್ಮಿಕರ ಸಹಕಾರದಿಂದ ಹೆಚ್ಚಾಗಿ ನಡೆಯುತ್ತದೆ ಎಂದು ಹೇಳುತ್ತಾರೆ. ಸಾಮಾಜಿಕ ಶ್ರಮ ವಿಭಜನೆಯು ವರ್ಗ, ಸ್ಥಾನ ಮತ್ತು ಏಣಿ-ಶ್ರೇಣಿಯ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತಿರುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ.

ಕೈಗಾರಿಕಾ ಸಮಾಜಕ್ಕಿಂತ ವಿಭಿನ್ನವಾದ ಶ್ರಮ ವಿಭಜನೆಯನ್ನು ಕೈಗಾರಿಕಾ ನಂತರದ ಸಮಾಜದಲ್ಲಿ ನಾವು ಕಾಣಬಹುದು. ಇಂದಿನ ಮಾಹಿತಿ ಸಮಾಜ ಅಥವಾ ಡಿಜಿಟಲ್, ಸಮಾಜದಲ್ಲಿ ಶ್ರಮವಿಭಜನೆಯ ಪ್ರಕಾರಗಳು ಗಣಕಯಂತ್ರಗಳ ಮೂಲಕ ರೂಪಾಂತರವಾಗಿವೆ. ಉದಾಹರಣೆಗೆ ಮಾಹಿತಿ ತಂತ್ರಜ್ಞಾನ ಆಧಾರಿತ ನೆಟ್‌ವರ್ಕ್ ಸೊಸೈಟಿಯಲ್ಲಿ ವ್ಯಕ್ತಿಗಳು ಶ್ರಮವಿಭಜನೆ ಆಧಾರದಲ್ಲಿ ವಿಶೇಷ ಪರಿಣಿತಿ ಪಡೆದುಕೊಂಡು ಕೆಲಸ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಉದಾಹರಣೆಗೆ ನಮ್ಮ ದೇಹ ಅನಾರೋಗ್ಯಕ್ಕೆ ತುತ್ತಾದಾಗ ನಮ್ಮ ದೇಹದಲ್ಲಿರುವ ಅಂಗಾಂಗಗಳನ್ನು ಪರೀಕ್ಷಿಸಲು, ಇರಬಹುದಾದ ದೈಹಿಕ ವ್ಯತ್ಯಾಸಗಳನ್ನು ತಿಳಿಯಲು ಇಂದು ನಾವು ಹಲವು ವೈದ್ಯರನ್ನು ಸಂಪರ್ಕಿಸುತ್ತಿದ್ದೇವೆ. ಹಾಗೆಯೇ ವಿವಿಧ ಕ್ಷೇತ್ರಗಳಲ್ಲಿಯೂ ಸಹ ವಿಶೇಷ ಪರಿಣಿತಿಯು ವಿಚಿತ್ರವಾದ ಸ್ವರೂಪ ಪಡೆದು ಆದಾಯಗಳಿಸುವುದೇ ವಿಶೇಷ ಪರಿಣಿತಿಯ ಆದ್ಯತೆಯಾಗಿದೆ.




ಹೀಗೆ ಶ್ರಮ ವಿಭಜನೆಯು 'ವಿಶೇಷ ಪರಿಣತಿಗೆ' ಕಾರಣವಾಗುವುದು. 'ವಿಶೇಷ ಪರಿಣತಿ' ಎಂದರೆ, ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ. ಶ್ರಮವಿಭಜನೆಯು ಇಂದು ಜನರು ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮಿಸಿ ಆರ್ಥಿಕ ಲಾಭ ಪಡೆಯಲು ಸಹಾಯಕವಾಗಿದೆ. ಆರ್ಥಿಕ ಹಿತಾಸಕ್ತಿ ಮತ್ತು ಶ್ರಮವಿಭಜನೆಯಿಂದ ವರ್ಗವ್ಯವಸ್ಥೆಯು ಸೃಷ್ಟಿಗೊಂಡಿತು. ಶ್ರಮ ವಿಭಜನೆ ವಿಶಾಲ ಸ್ವರೂಪವನ್ನು ಪಡೆದಿದ್ದರಿಂದ, ಎಲ್ಲಾ ವಲಯಗಳಲ್ಲಿ ವ್ಯಾಪಾರ ವಾಣಿಜ್ಯೋದ್ಯಮಗಳು ವಿಸ್ತಾರಗೊಂಡವು. ಇದರ ಪರಿಣಾಮವಾಗಿ ಕೆಲವು ವ್ಯಕ್ತಿಗಳು ಬಂಡವಾಳವನ್ನು ತೊಡಗಿಸಿ ಹೆಚ್ಚು ಲಾಭ ಮಾಡತೊಡಗಿದ್ದರು.

## ಉದ್ಯೋಗ/ದುಡಿಮೆಯಲ್ಲಿ ಅಸಮಾನತೆ ಮತ್ತು ಭೇದ ಭಾವ

ದುಡಿಮೆ ಎಂದರೆ ಒಬ್ಬ ವ್ಯಕ್ತಿ ದೈಹಿಕ ಪರಿಶ್ರಮದಿಂದ ಅಥವಾ ಬೌದ್ಧಿಕ ಪರಿಶ್ರಮದಿಂದ ಆದಾಯ ಅಥವಾ ವಸ್ತುರೂಪದ ಪ್ರತಿಫಲವನ್ನು ಪಡೆಯುವುದು ಎಂದರ್ಥ. ಮಾನವ ಸಮಾಜದ ಪ್ರಮುಖ ಭಾಗಗಳಲ್ಲಿ ದುಡಿಮೆ ಅತ್ಯಂತ ಮುಖ್ಯವಾದದ್ದು. ದುಡಿಮೆ ಎಂಬುದು ಉದ್ದೇಶವೊಂದರ ಸಾಧನೆಗಾಗಿ ನಡೆಸಲಾಗುವ ಕಾರ್ಯ. ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು 'ದುಡಿಮೆ' ಎನ್ನಬಹುದು.

ಶ್ರೇಣಿಯಾಧಾರಿತ ವಿಭಜನೆಯ ನಂತರ ಸಮಾಜದ ದುಡಿಮೆಗಳಲ್ಲಿ ಅಸಮಾನತೆ ಪ್ರಾರಂಭಗೊಳ್ಳುತ್ತದೆ. ಹೀಗೆ ದುಡಿಮೆ ಭಾರತದ ಸಂದರ್ಭದಲ್ಲಿ ಕೇವಲ ಆರ್ಥಿಕ ವಿಷಯವಾಗಿ ಉಳಿದಿಲ್ಲ. ಅದು ಸಾಮಾಜಿಕ ಸಂರಚನೆಯೊಳಗಿನ ಅಸಮಾನತೆಗಳಿಂದ ಕೂಡಿದ್ದಾಗಿದೆ. ಭಾರತದಲ್ಲಿ ದುಡಿಮೆಗೆ ಆದಾಯದ ಜೊತೆಗೆ ಜಾತಿ, ಪ್ರದೇಶ, ಲಿಂಗ ಮತ್ತು ಧರ್ಮ ಸೇರಿಕೊಂಡು ದುಡಿಮೆಯೊಳಗೆ ಅನೇಕ ಅಸಮಾನತೆಗಳನ್ನು ಸೃಷ್ಟಿಸಿದೆ. ಭಾರತದ ಸಾಮಾಜಿಕ ವ್ಯವಸ್ಥೆಯೊಳಗೆ ಒಬ್ಬ ವ್ಯಕ್ತಿ ಕೆಳಗಿನಿಂದ ಮೇಲ್ಮುಖವಾಗಿ ಅಧಿಕಾರ ಅಂತಸ್ತು ಪಡೆಯುವತ್ತ ಚಲಿಸಿದರೆ, ಅವರ ಆದಾಯ ಮತ್ತು ಅಧಿಕಾರ ಎರಡೂ ಹೆಚ್ಚುತ್ತ ಹೋಗುತ್ತದೆ.

ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆಯನ್ನು ದುಡಿಮೆಯಲ್ಲಿ ಅಸಮಾನತೆ ಎಂದು ಕರೆಯಬಹುದು. ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ/ಅಸಮಾನತೆ ದುಡಿಮೆಯಲ್ಲಿ ಅಸಮಾನತೆ ಎನ್ನಬಹುದು. ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ. ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ. ಹಾಗೆಯೇ ಹೆಚ್ಚಿನ ಸಂಭಾವನೆಗಳನ್ನು ನೀಡಲಾಗುತ್ತದೆ. ಆದರೆ ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ.

ಸರ್ಕಾರಿ ವಲಯದಲ್ಲಿ ಈ ರೀತಿಯ ಅಸಮಾನತೆ ಕಡಿಮೆ ಎಂದರೂ ಅಲ್ಲಿಯೂ ಶ್ರೇಣಿಕೃತವಾಗಿ ದುಡಿಮೆಯಲ್ಲಿನ ಅಸಮಾನತೆ ಕಾಣಬಹುದು. ಆದರೆ ಸರ್ಕಾರೇತರ ಕಂಪನಿಗಳಲ್ಲಿ ಮತ್ತು ಕಾರ್ಪೋರೇಟ್ ವಲಯಗಳಲ್ಲಿ ಒಬ್ಬ ಉದ್ಯೋಗಿಯ ಸಂಭಾವನೆ ಮತ್ತೊಬ್ಬರಿಗೆ ತಿಳಿದಿರುವುದಿಲ್ಲ. ದುಡಿಮೆಯ ವಲಯದಲ್ಲಿನ

© KTBS Not to be republished

ಅಸಮಾನತೆಯು ಅಸಂಘಟಿತ ವಲಯಗಳಲ್ಲಿ ಕಣ್ಣಿಗೆ ಕಾಣುತ್ತದೆ. ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ. ಇಲ್ಲಿ ಮಹಿಳೆಯರಿಗೆ ದೊರಕಬೇಕಾದ ಸಮಾನ ಸಂಭಾವನೆಯ ಪ್ರಶ್ನೆಗಳು ಗೌಣವಾಗಿರುತ್ತದೆ. ಉದಾಹರಣೆಗೆ ಕೃಷಿ ಕುಟುಂಬಗಳಲ್ಲಿ ಹೆಚ್ಚಿನ ಕೃಷಿ ಚಟುವಟಿಕೆಗಳು ನಡೆಯುತ್ತಿರುವಾಗ ಆ ಕುಟುಂಬದಲ್ಲಿ ಮುಂಜಾನೆ ಬೇಗನೆ ಎದ್ದು ಕೃಷಿ ದುಡಿಮೆಗೆ ಹೋಗುವವರಿಗೆ ಬುತ್ತಿ (ಊಟ, ಉಪಾಹಾರ, ಇತ್ಯಾದಿ) ತಯಾರು ಮಾಡಿಕೊಂಡು ಅಥವಾ ಮಾಡಿಕೊಟ್ಟು ಕೃಷಿಯ ಎಲ್ಲಾ ಚಟುವಟಿಕೆಗಳಲ್ಲಿ ಮಹಿಳೆಯರು ಸಂಪೂರ್ಣವಾಗಿ ತೊಡಗಿಕೊಳ್ಳುತ್ತಾರೆ. ಆದರೆ ಅವರಿಗೆ ಸಂಭಾವನೆ ನೀಡುವಾಗ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ, ಪುರುಷನಿಗಿಂತ ಕಡಿಮೆ ಮಟ್ಟದಲ್ಲಿ ನೋಡಲಾಗುತ್ತದೆ. ಎಲ್ಲಾ ಸಮಾಜಗಳಲ್ಲಿಯೂ ಮಹಿಳೆಯರ ದುಡಿಮೆಯನ್ನು ಮಹತ್ವದ್ದಾಗಿ ಪರಿಗಣಿಸದಿರುವುದು ದುಡಿಮೆಯಲ್ಲಿ ಅಸಮಾನತೆಯ ಸ್ವರೂಪವನ್ನು ಸೂಚಿಸುತ್ತದೆ. ದುಡಿಮೆಯ ಅಸಮಾನತೆಯ ಸ್ವರೂಪಗಳು ನಮ್ಮ ಹಳ್ಳಿಗಳಲ್ಲಿ ಕಣ್ಣಿಗೆ ಎದ್ದು ಕಾಣುವಂತೆ ತಿಳಿಯುತ್ತವೆ.

ಇನ್ನು ಓದಿದವರು ಮತ್ತು ಓದದವರ ನಡುವೆ ಬಹಳ ದೊಡ್ಡ ಅಸಮಾನತೆ ಇದೆ. ನಮ್ಮ ಬೀದಿಗಳ (ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ) ಕಸಗುಡಿಸುವವರ, ಚರಂಡಿ ಬಳಿಯುವ ಸಫಾಯಿ ಕರ್ಮಚಾರಿಗಳಿಗೆ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಸಂಭಾವನೆ ನೀಡಲಾಗುತ್ತದೆ. ಅವರು ನಮ್ಮ ಸಮಾಜವನ್ನು ಸ್ವಚ್ಛಮಾಡಲು ವ್ಯಯಿಸುವ ಶ್ರಮ ಬಹಳ. ಈ ರೀತಿ ದುಡಿಮೆಯಲ್ಲಿನ ಅಸಮಾನತೆಯು ವರ್ಗ, ಆದಾಯ, ಸಂಭಾವನೆ, ಲಿಂಗ, ಪ್ರದೇಶ, ಜಾತಿ ಮತ್ತು ಧರ್ಮ ಆಧಾರಿತವಾಗಿಯೆ ನಡೆಯುತ್ತಿರುತ್ತದೆ. ದುಡಿಮೆಯಲ್ಲಿ ಅಸಮಾನತೆಯು ಸಂಭಾವನೆ ಸಹಿತ ಮತ್ತು ಸಂಭಾವನೆ ರಹಿತ ದುಡಿಮೆ ಎಂದು ಗುರುತಿಸಲಾಗುತ್ತದೆ. ಇಲ್ಲಿ ಅಸಮಾನತೆ ಯಾವ ರೂಪದಲ್ಲಿರುತ್ತದೆ ಎನ್ನುವುದನ್ನು ಮುಂದೆ ಚರ್ಚೆ ಮಾಡೋಣ.

> ***ಚಟುವಟಿಕೆ :*** *ದುಡಿಮೆಯೊಳಗಿನ ಅಸಮಾನತೆ ಕುರಿತು ಮಕ್ಕಳ ನಡುವೆ ಸಮ ಸಮಾಜ ನಿರ್ಮಾಣ ಮಾಡುವ ಆಶಯದ ದಿಕ್ಕಿನಲ್ಲಿ ನಮ್ಮ ಸಂವಿಧಾನದ ಆಶಯವಾದ ಸಮಾನ ದುಡಿಮೆಗೆ ಸಮಾನ ವೇತನ ಕಾಯಿದೆಯ 1976ರ ಆಶಯಗಳನ್ನು ಚರ್ಚಿಸುವುದು.*

© KTBS Not to be published

## ಸಂಭಾವನೆ ರಹಿತ ಮತ್ತು ಸಂಭಾವನೆ ಸಹಿತ ದುಡಿಮೆ

**ಸಂಭಾವನೆ ರಹಿತ ದುಡಿಮೆ :** ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದಲ್ಲಿ, ಯಾವುದೇ ಪ್ರತಿಫಲ ಇಲ್ಲದೇ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

ದುಡಿಮೆಯು ಕೆಲವೊಮ್ಮೆ ಆರ್ಥಿಕ ಲಾಭ ಅಥವಾ ಪ್ರತಿಫಲವಿಲ್ಲದ ಕ್ರಿಯೆಯಾಗಿರುತ್ತದೆ. ಸಂಭಾವನೆ ರಹಿತ ದುಡಿಮೆಯಲ್ಲಿ ದುಡಿಮೆಗಾರರು ಯಾವುದೇ ರೀತಿಯ ಕೂಲಿಯನ್ನು ಅಥವಾ ಸಂಭಾವನೆಯನ್ನು ಪಡೆಯುವುದಿಲ್ಲ ಅಥವಾ ನೀಡಲಾಗುವುದಿಲ್ಲ. ಈ ರೀತಿಯ ದುಡಿಮೆಯು ಕುಟುಂಬದ ಸದಸ್ಯರ ಒಳಗೆ, ಸಹಕಾರದ ಮೂಲಕ, ಕೆಲವು ಸಮಯದಲ್ಲಿ ಒತ್ತಾಯದ ಮೂಲಕ, ಕೆಲವೊಮ್ಮೆ ಸ್ವಯಂ ಪ್ರೇರಣೆಯಿಂದ, ಪ್ರೀತಿಯಿಂದ ಮಾಡುವ ದುಡಿಮೆಯಾಗಿದೆ. ಉದಾಹರಣೆಗೆ ವಿದ್ಯಾರ್ಥಿಗಳು ಯಾವುದೇ ರೀತಿಯ ಲಾಭ ಅಥವಾ ಪ್ರತಿಫಲವನ್ನು ಬಯಸದೆ ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್ ಆಂಡ್ ಗೈಡ್ಸ್‌ನಲ್ಲಿ, ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಇನ್ನೂ ಮುಂತಾದ ಶ್ರಮ ಆಧಾರಿತ ಚಟುವಟಿಕೆಗಳಲ್ಲಿ ತೊಡಗುವುದು. ಒಂದು ಹಂತದ ಶಿಕ್ಷಣ ಮುಗಿದ ನಂತರ ವಿದ್ಯಾರ್ಥಿಗಳನ್ನು ತರಬೇತಿಯ ಉದ್ದೇಶದಿಂದ ಸಹಾಯಕ ಕೆಲಸಗಳಿಗೆ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಕೋರ್ಸ್‌ನ ಭಾಗವಾಗಿಯೇ ನಿಯೋಜಿಸುತ್ತವೆ. ಆ ಅವಧಿಯಲ್ಲಿ

ಮಾಡುವ ಕೆಲಸಕ್ಕೆ ಯಾವುದೇ ರೀತಿಯ ಸಂಭಾವನೆಯನ್ನು ನೀಡಲಾಗುವುದಿಲ್ಲ. ಉದಾಹರಣೆಗೆ ಐ.ಟಿ.ಐ., ದಾದಿಯರ ಕೋರ್ಸ್ ಇತ್ಯಾದಿ. ಹಾಗೆಯೇ ಕಲಾಕಾರನೊಬ್ಬನು ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಸಂಭಾವನೆ ರಹಿತ ದುಡಿಮೆಯ ಮಾದರಿಯಲ್ಲಿ ಸಾಮಾನ್ಯವಾಗಿ ಕಂಡುಬರುವುದು ಕೌಟುಂಬಿಕ ದುಡಿಮೆ. ಕೌಟುಂಬಿಕ ದುಡಿಮೆಯಲ್ಲಿ ಸಾಮಾನ್ಯವಾಗಿ ಹೆಚ್ಚಿನ ಹೊರೆ ಬೀಳುವುದು ಮಹಿಳೆಯರ ಮೇಲೆ. ಸಂಭಾವನೆ ರಹಿತ ಮಹಿಳಾ ಕೌಟುಂಬಿಕ ದುಡಿಮೆ ಸ್ತ್ರೀವಾದಿ ಅರ್ಥಶಾಸ್ತ್ರದಲ್ಲಿ ಹೆಚ್ಚು ಚರ್ಚೆಗೊಳಗಾಗಿರುವ ವಿಷಯ. ಈ ವಿಷಯವು ಸಾಂಪ್ರದಾಯಿಕ ಕೌಟುಂಬಿಕ ದೃಷ್ಟಿಕೋನವನ್ನು ಪ್ರಭಾವಿಸಿದೆ. ಸಂಭಾವನೆ ರಹಿತ ಕೌಟಂಬಿಕ ದುಡಿಮೆಯು ಮಹಿಳೆಯರನ್ನು ಕುಟುಂಬದ ಹೊರಗೆ ದುಡಿಯುವ ಅವಕಾಶಗಳನ್ನು ಹುಡುಕದಂತೆ ಮಾಡಿದೆ. ಇದು ಮಹಿಳೆಯರು ಕುಟುಂಬದೊಳಗೆ ದುಡಿಮೆಗಾರರಾಗಿರುವಂತೆ ಮಾಡಿದೆ. ಮಹಿಳೆ ತನ್ನ ಕುಟುಂಬದ ಅಥವಾ ತನ್ನ ಜೀವನ ಸಂಗಾತಿಯ ದುಡಿಮೆಯಲ್ಲಿ ಔಪಚಾರಿಕವಾಗಿ ಭಾಗವಹಿಸಿದರೂ ಅಥವಾ ಅವರ ದುಡಿಮೆಗೆ ಬೆಂಬಲವಾಗಿ ನಿಂತರೂ ಅದನ್ನು ಅರೆಕಾಲಿಕ ದುಡಿಮೆ ಎಂದು ಪರಿಗಣಿಸಲಾಗುತ್ತಿದೆ. ಅಲ್ಲದೆ ಇತ್ತೀಚೆಗೆ ಮಹಿಳೆಯರ ಪಾತ್ರ ಕುಟುಂಬದ ಜವಾಬ್ದಾರಿಗಳ ನಿರ್ವಹಣೆ ಅತ್ಯಂತ ಮಹತ್ವದ್ದು ಎಂದು ಹೇಳಲಾಗುತ್ತಿದೆ. ಹೀಗೆ ಹೇಳುವ ಮೂಲಕ ಮಹಿಳೆಯರ ದುಡಿಮೆಯನ್ನು ಕುಟುಂಬದ ಒಳಗಿನ ಸಂಭಾವನೆ ರಹಿತ ದುಡಿಮೆ ಮತ್ತು ಜವಾಬ್ದಾರಿಗಳಿಗೆ ಸೀಮಿತಗೊಳಿಸಲಾಗುತ್ತಿದೆ.

**ಸಂಭಾವನೆ ಸಹಿತ ದುಡಿಮೆ :** ನಿಗದಿತ ವೇತನವನ್ನು ಘಂಟೆಗಳ ಆಧಾರದಲ್ಲಿ, ದಿನಗೂಲಿಯ ಆಧಾರದಲ್ಲಿ, ವಾರದ ಆಧಾರದಲ್ಲಿ ಅಥವಾ ತಿಂಗಳ ಆಧಾರದಲ್ಲಿ ದೈಹಿಕ ಶ್ರಮಕ್ಕೆ, ವ್ಯಕ್ತಿಯ ಅರೆಕುಶಲ ಕೆಲಸಕ್ಕೆ ಅಥವಾ ಕುಶಲ ಕೆಲಸಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನಲಾಗುತ್ತಿದೆ. ಕೂಲಿ ಎಂದರೆ ದುಡಿಮೆಯ ಅವಧಿ ಆಧಾರದಲ್ಲಿ ಒಟ್ಟುಗೂಡಿಸಿ, ನೀಡುವ ಸಂಭಾವನೆಯನ್ನು ಕೂಲಿ ಎಂದು ಕರೆಯಬಹುದು. ಇದನ್ನು ಘಂಟೆ, ವಾರ, ತಿಂಗಳ ಆಧಾರದಲ್ಲಿ ನೀಡಲಾಗುತ್ತದೆ.

© KTBS Not to be published

ಸಣ್ಣ ಪುಟ್ಟ ವ್ಯಾಪಾರದ ದುಡಿಮೆ, ಬೀದಿ ಬದಿಯ ವ್ಯಾಪಾರದಿಂದ ದೊಡ್ಡ ಮಟ್ಟದ ವ್ಯವಹಾರಗಳವರೆಗಿನ ದುಡಿಮೆ, ಹೊಲ-ಗದ್ದೆಗಳಲ್ಲಿನ ದುಡಿಮೆ, ಕೈಗಾರಿಕೆಗಳ ದುಡಿಮೆ, ಶಾಲೆಯಲ್ಲಿ ಶಿಕ್ಷಕರಾಗಿ ದುಡಿಮೆ, ಕಟ್ಟಡ ಕಟ್ಟುವುದು, ಇಟ್ಟಿಗೆ ಬಟ್ಟಿಗಳಲ್ಲಿ ದುಡಿಯುವುದು, ವಾಹನಗಳ ದುರಸ್ಥಿ ಅಥವಾ ರಿಪೇರಿ ಮಾಡುವ ಗ್ಯಾರೇಜ್‌ಗಳಲ್ಲಿನ ದುಡಿಮೆ, ಇನ್ನೂ ಮುಂತಾದ ದುಡಿಮೆಯ ಚಟುವಟಿಕೆಗಳಲ್ಲಿ ಸಂಭಾವನೆಗಾಗಿ ಅಥವಾ ಬದುಕಿನ ನಿರ್ವಹಣೆಗಾಗಿ ದುಡಿಯುವುದನ್ನು ಸಂಭಾವನೆ ಸಹಿತ ದುಡಿಮೆ ಎಂದು ಹೇಳಬಹುದು. ಈ ದುಡಿಮೆಗಳು ಇಂದಿನ ಸಂಕೀರ್ಣ ಸಮಾಜದಲ್ಲಿ ಬದುಕಿಗೆ ಅನಿವಾರ್ಯವಾಗಿವೆ. ಈ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರು ಕೆಲವು ಸಂದರ್ಭಗಳಲ್ಲಿ ನಿರೀಕ್ಷಿತ ಪ್ರತಿಫಲವನ್ನು ಪಡೆದಿರುವ ಸಾಧ್ಯತೆಗಳಿವೆ.

ಸಂಭಾವನೆ ನೀಡಿಕೆಯು ಕೆಲಸ ನೀಡುವವರು ಮತ್ತು ದುಡಿಮೆದಾರರ ನಡುವಿನ ಒಪ್ಪಂದದಂತೆ ನಡೆಯುತ್ತದೆ. ಕೆಲವು ಸಮಯದಲ್ಲಿ ವಸ್ತುಗಳನ್ನು ಸಂಭಾವನೆಯಾಗಿ ಪಡೆಯುವುದು ದುಡಿಮೆ ಪ್ರಕ್ರಿಯೆಯಲ್ಲಿ ನಡೆಯುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಪ್ರತಿ ವ್ಯಕ್ತಿಗೂ ಪಾರಂಪರಿಕ ಕಸುಬುಗಳಿದ್ದವು. ಹೀಗಾಗಿ ಒಂದು ಪರಿಸರದಲ್ಲಿ ವಾಸಿಸುವ ಜನರು ಪರಸ್ಪರ ಅವಲಂಬಿತರಾಗಿದ್ದರು. ಅದರಲ್ಲಿಯೂ ಸಾಂಪ್ರದಾಯಿಕ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಹಣದ ಬಳಕೆ ಬಹಳ ಕನಿಷ್ಠ ಪ್ರಮಾಣದಲ್ಲಿತ್ತು. ವಿವಿಧ ಜಾತಿ ಮತ್ತು ವರ್ಗಗಳ ನಡುವೆ ಅನ್ಯೋನ್ಯ ಅವಲಂಬನೆಗೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಗ್ರಾಮದ ಆಂತರಿಕ, ಆರ್ಥಿಕ ಸಂಬಂಧಗಳಲ್ಲಿ ಒಂದು ವಸ್ತುವನ್ನು ಕೊಟ್ಟು ಇನ್ನೊಂದು ವಸ್ತುವನ್ನು ಪಡೆಯುವ ವಿನಿಮಯ ವ್ಯವಸ್ಥೆ ಜನಪ್ರಿಯವಾಗಿತ್ತು. ಬಹುತೇಕ ಸಮಯದಲ್ಲಿ ದೈಹಿಕ ಶ್ರಮ ಆಧಾರಿತ ದುಡಿಮೆಗೆ ಹಣದ ಬದಲಾಗಿ ವಸ್ತುಗಳನ್ನು ಮತ್ತು ಆಹಾರ ಪದಾರ್ಥಗಳನ್ನು ದುಡಿಮೆಗಾರರಿಗೆ ಸಂಭಾವನೆಯ ರೂಪದಲ್ಲಿ ನೀಡಲಾಗುತ್ತಿತ್ತು.


ಈ ಪದ್ಧತಿಯನ್ನು 'ಸಾಟಿ ವಿನಿಮಯ ಪದ್ಧತಿ' ಎಂದು ಕರೆಯುತ್ತಾರೆ. ಹಣದ ಬಳಕೆ ಹೆಚ್ಚಳವಾದಂತೆ ದುಡಿಮೆಗೆ ಸಂಭಾವನೆಯನ್ನು ಹಣದ ರೂಪದಲ್ಲಿಯೇ ನೀಡುವ ಪದ್ಧತಿ ಹೆಚ್ಚು ಬಳಕೆಯಾಗುತ್ತಿರುವುದನ್ನು ಅನೇಕ ಸಮಾಜವಿಜ್ಞಾನಿಗಳು ಗುರುತಿಸಿದ್ದಾರೆ.

## ಸಂಘಟಿತ ಮತ್ತು ಅಸಂಘಟಿತ ವಲಯಗಳ ದುಡಿಮೆಗಾರರು

**ಸಂಘಟಿತ ವಲಯಗಳ ದುಡಿಮೆಗಾರರು :** ದುಡಿಮೆಯ ವಲಯಗಳನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯವೆಂದು ವರ್ಗೀಕರಿಸಲಾಗಿದೆ. ದುಡಿಮೆಯ ಪರಿಸ್ಥಿತಿಗಳನ್ನು ಆಧರಿಸಿ, ದುಡಿಮೆಯ ವಲಯಗಳಲ್ಲಿ ದೊರೆಯುವ ಸೌಲಭ್ಯಗಳ ಆಧಾರದಲ್ಲಿ ಸಂಘಟಿತ ಮತ್ತು ಅಸಂಘಟಿತ ದುಡಿಮೆಯ ವಲಯವೆಂದು ವರ್ಗೀಕರಿಸಲಾಗಿದೆ. ಯಾವ ವಲಯವು ಸರ್ಕಾರದಲ್ಲಿ ನೋಂದಣಿಯಾಗಿ ಕಾನೂನಿನ ಚೌಕಟ್ಟಿನೊಳಗೆ, ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನವನ್ನು ಕಾನೂನಿನ ಚೌಕಟ್ಟಿನಲ್ಲಿಯೇ ನಿಗದಿಯಾಗಿರುತ್ತದೆಯೋ ಅದನ್ನು ಸಂಘಟಿತ ದುಡಿಮೆಯ ವಲಯವೆಂದು ಕರೆಯಲಾಗುತ್ತದೆ. ಸಂಘಟಿತ ದುಡಿಮೆಯ ವಲಯದಲ್ಲಿ ಉದ್ಯೋಗ ಭದ್ರತೆಯ ಜೊತೆಗೆ, ಅನೇಕ ಕಾನೂನಿನ ಚೌಕಟ್ಟುಗಳಿರುತ್ತವೆ. ಅವುಗಳೆಂದರೆ ಕನಿಷ್ಠ ವೇತನ ಕಾಯಿದೆ, ಕಾರ್ಖಾನೆಗಳ ಕಾಯಿದೆ, ವಿಶೇಷ ಭತ್ಯೆಗಳ ಕಾಯಿದೆ, ಪ್ರಾವಿಡೆಂಟ್ ಫಂಡ್(ಪಿ.ಎಫ್) ಕಾಯಿದೆಗಳು ಇಲ್ಲಿ ಕಡ್ಡಾಯ.

ಸಂಘಟಿತ ವಲಯದಲ್ಲಿ ಪ್ರಮುಖವಾಗಿ ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಸರ್ಕಾರಗಳ ಆಡಳಿತ ಸೇವೆಗಳು, ವಾಣಿಜ್ಯ ಬ್ಯಾಂಕುಗಳು, ಜೀವ ವಿಮಾ ಕಂಪನಿಗಳು, ಸೈನ್ಯ, ಇತ್ಯಾದಿ ಬರುತ್ತವೆ. ಸಂಘಟಿತ ದುಡಿಯುವ ವಲಯವನ್ನು ಪ್ರಾರಂಭಿಸುವಾಗ ಕಾನೂನಿನ ಮತ್ತು ಸರ್ಕಾರಗಳ ಅನುಮತಿ ಕಡ್ಡಾಯ. ಈ ವಲಯವು ಸರ್ಕಾರ ನಿಗದಿಪಡಿಸಿದ ತೆರಿಗೆಯನ್ನು ಪಾವತಿಸುವುದು ಕಡ್ಡಾಯ. ಈ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕ ವರ್ಗಕ್ಕೆ ಉದ್ಯೋಗ ಭದ್ರತೆ ಸೇರಿದಂತೆ ಅನೇಕ ಸಂಚಿತ ಸೌಲಭ್ಯಗಳನ್ನು ನೀಡುವುದು ಆಯಾ ಸಂಸ್ಥೆಗಳ ಜವಾಬ್ದಾರಿ. ನಿಗದಿತ ದುಡಿಮೆಗೆ ನಿಗದಿತ ಸಮಯದಲ್ಲಿ ವೇತನವನ್ನು ಪಡೆಯುವ ಜೊತೆಗೆ ವಾರ್ಷಿಕ ಭತ್ಯೆ ಮತ್ತು ಹೆಚ್ಚಿನ ಅವಧಿಯ ದುಡಿಮೆಗೆ ಹೆಚ್ಚುವರಿ ವೇತನವನ್ನು ನೀಡುವುದು ಕಡ್ಡಾಯ. ಒಟ್ಟಾರೆ ಈ ವಲಯದಲ್ಲಿ ಉದ್ಯೋಗ ನಿಯಮಗಳು ನಿಗದಿಯಾಗಿರುತ್ತವೆ. ಅಲ್ಲದೆ ಕಾರ್ಮಿಕ ಮತ್ತು ಉದ್ಯಮಿಗಳ ನಡುವೆ ಕಾನೂನಾತ್ಮಕವಾಗಿ ನಿಗದಿಪಡಿಸಿದ ಸಂಬಂಧವಿರುತ್ತದೆ.

© KTBS Not to be published



**ಅಸಂಘಟಿತ ವಲಯಗಳ ದುಡಿಮೆಗಾರರು :** ಅಸಂಘಟಿತ ವಲಯವೆಂದರೆ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದು. ಅಂದರೆ ಈ ವಲಯದಲ್ಲಿ ದುಡಿಯುವ ಮತ್ತು ದುಡಿಸಿಕೊಳ್ಳುವವರ ನಡುವೆ ಯಾವುದೇ ರೀತಿಯ ಕಾನೂನಾತ್ಮಕ ಸಂಬಂಧಗಳು ನಿಗದಿಯಾಗಿರುವುದಿಲ್ಲ. ಅಸಂಘಟಿತ ದುಡಿಮೆ ವಲಯಕ್ಕೆ ಸರ್ಕಾರಗಳ ನೋಂದಣಿ ಅಗತ್ಯವಿಲ್ಲ. ಈ ವಲಯದಲ್ಲಿ ಸರ್ಕಾರಗಳ ಯಾವುದೇ ಕಾನೂನು, ನೀತಿ ನಿಯಮಗಳನ್ನು ಅನುಸರಿಸಲಾಗುವುದಿಲ್ಲ. ಕಾನೂನಿನ ಯಾವುದೇ ಚೌಕಟ್ಟಿಗೆ ಅಸಂಘಟಿತ ವಲಯ ಒಳಪಡುವುದಿಲ್ಲ. ಇಲ್ಲಿ ತೆರಿಗೆ ವ್ಯವಸ್ಥೆ ಇಲ್ಲ. ಈ ವಲಯವು ಅತ್ಯಂತ ಸಣ್ಣ ಪ್ರಮಾಣದ ವ್ಯವಹಾರಗಳನ್ನು ಒಳಗೊಂಡಿರುತ್ತದೆ. ಮೋಟಾರ್ ವಾಹನ ರಿಪೇರಿ, ತಲೆಯ ಮೇಲೆ ಮತ್ತು ತಳ್ಳುವ ಗಾಡಿಯ ಮೂಲಕ ತರಕಾರಿ, ಮೀನು ಇತ್ಯಾದಿ ವಸ್ತುಗಳನ್ನು ಮಾರುವುದು, ಟೈಯರ್ ಪಂಚರ್, ಸೈಕಲ್ ರಿಪೇರಿ ಇನ್ನೂ ಮುಂತಾದ ಚಿಕ್ಕ ಪುಟ್ಟ ದುಡಿಮೆ ವಲಯಗಳು ಅಸಂಘಟಿತ ದುಡಿಮೆಯ ವಲಯಕ್ಕೆ ಸೇರುತ್ತವೆ. ಇಲ್ಲಿ ದುಡಿಮೆಯ ಸಮಯ ನಿಗದಿಯಾಗಿರುವುದಿಲ್ಲ. ಇದಕ್ಕಿಂತಲೂ ಮುಖ್ಯವಾಗಿ ಹಗಲು–ರಾತ್ರಿ, ರಜೆ ದಿನಗಳು ಸೇರಿದಂತೆ ಎಲ್ಲಾ ದಿನಗಳಲ್ಲಿಯೂ ಈ ವಲಯದ ದುಡಿಮೆಗಾರರು ದುಡಿಯುತ್ತಿರುತ್ತಾರೆ. ಇಲ್ಲಿ ದುಡಿಯುವ ಕಾರ್ಮಿಕರು ಬಹುತೇಕ ಸಂದರ್ಭಗಳಲ್ಲಿ ದಿನಗೂಲಿ ಆಧಾರದಲ್ಲಿ ದುಡಿಯುತ್ತಿರುತ್ತಾರೆ.

ಅಸಂಘಟಿತ ದುಡಿಮೆಯ ವಲಯದಲ್ಲಿ ಕೂಲಿಯೂ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಕಾಯಿದೆಗಿಂತಲೂ ಕಡಿಮೆ ಇರುತ್ತದೆ. ಅಸಂಘಟಿತ ದುಡಿಮೆಯ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯಗಳಾಗಲಿ, ವಿಶೇಷ ಭತ್ಯೆಗಳಾಗಲಿ ಇರುವುದಿಲ್ಲ. ಇಲ್ಲಿ ದುಡಿಯುವವರು ಬದುಕಿಗೆ ಪ್ರತಿದಿನವೂ ದೈಹಿಕ ಶ್ರಮ ಮಾಡಲೇಬೇಕು. ಇವರ ದುಡಿಮೆಗೆ ರಜೆಯೇ ಇರುವುದಿಲ್ಲ. ಈ ವಲಯಗಳಲ್ಲಿ ದುಡಿಯುತ್ತಿರುವ ಪ್ರಮುಖ ಅಸಂಘಟಿತ ದುಡಿಮೆಗಳೆಂದರೆ, ಕಟ್ಟಡ ಕಟ್ಟುವ ಕಾರ್ಮಿಕರು, ರಸ್ತೆ ಬದಿ ದುಡಿಯುತ್ತಿರುವವರು, ಲಾರಿ ಮತ್ತು ವ್ಯಾಗನ್‌ಗಳಲ್ಲಿ ಸರಕು ಸಾಮಾನುಗಳನ್ನು ತುಂಬಿಸುವ ಮತ್ತು ಇಳಿಸುವ ಕೆಲಸ ಮಾಡಿತ್ತಿರುವವರು, ಇಟ್ಟಿಗೆ ಬಟ್ಟಿಗಳಲ್ಲಿ ದುಡಿಯುತ್ತಿರುವವರು, ಭೂ–ರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ರೈತರು, ಬೆಳೆಹಂಚಿಕೆ ಆಧಾರದಲ್ಲಿ ಕೃಷಿ ಮಾಡುತ್ತಿರುವವರು, ಮೀನುಗಾರರು, ಬೀಡಿ ಕಾರ್ಮಿಕರು, ಗಣಿಗಾರಿಕೆಯಲ್ಲಿ ದುಡಿಯುತ್ತಿರುವವರು, ಎಣ್ಣೆ ಮಿಲ್ಲು, ಸಾಮಿಲು, ಇತ್ಯಾದಿ. ಭಾರತದ ದುಡಿಮೆಯ ವಲಯಗಳಲ್ಲಿ ಹೆಚ್ಚಿನ ಜನರು ದುಡಿಯುತ್ತಿರುವುದೇ ಅಸಂಘಟಿತ ವಲಯದಲ್ಲಿ ಎನ್ನುವುದು ನಮ್ಮ ದುಡಿಮೆಗಾರರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ಇಂದಿಗೂ ಭಾರತದಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ಗರಿಷ್ಠ ಪ್ರಮಾಣ ಕಾರ್ಮಿಕರು ಅಸಂಘಟಿತ ವಲಯಗಳಲ್ಲಿಯೇ ದುಡಿಯುತ್ತಿದ್ದಾರೆ.

© KTBS Not to be republished



**ಅಸಂಘಟಿತ ದುಡಿಮೆಗಾರರ ಸವಾಲುಗಳು :**

ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವವರು ಅನೇಕ ಸಾಮಾಜಿಕ, ಆರ್ಥಿಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ವಲಯದಲ್ಲಿ ದುಡಿಯುತ್ತಿರುವವರಿಗೆ ನಿಗದಿತ ಕೆಲಸವಾಗಲಿ, ನಿಗದಿತ ವೇತನವಾಗಲಿ, ನಿಗದಿತ ಸೌಲಭ್ಯಗಳಾಗಲಿ ಇರುವುದಿಲ್ಲ. ಕನಿಷ್ಠ ವೇತನವೂ ಸಿಗುವುದಿಲ್ಲ.

**ವಲಸೆ :** ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಜನರ ದುಡಿಮೆಯ ಕುರಿತು ಸಂಶೋಧನೆ ಮಾಡಿರುವ 'ಪುಟ್ ಲುಜರ್ಸ್' ಎನ್ನುವ ಪುಸ್ತಕದಲ್ಲಿ Circular Migration ಕುರಿತು ವಿಶ್ಲೇಷಣೆ ಮಾಡಲಾಗಿದೆ, ಜೀವನೋಪಾಯಕ್ಕೆ ಪ್ರತಿದಿನ ದುಡಿಯಲೇ ಬೇಕಾದ ಜನರು ಹೇಗೆ ವಾಸಿಸುವ ಸ್ಥಳದಿಂದ ಕೆಲಸದ ಸ್ಥಳಗಳಿಗೆ ವಲಸೆ ಹೋಗುವುದು ಅನಿವಾರ್ಯವಾಗಿರುತ್ತದೆ. ವಲಸೆಯ ಅಸಂಘಟಿತ ದುಡಿಮೆಯ ಒಂದು ಲಕ್ಷಣವೂ ಆಗಿದೆ. ಅಸಂಘಟಿತ ದುಡಿಮೆಗಾರರು ದುಡಿಮೆಯನ್ನು ಹರಸಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಿರುತ್ತಾರೆ. ಹೀಗೆ ವಲಸೆ ಹೋಗುವ ಜನರಿಗೆ ಸಾಮಾಜಿಕ ಭದ್ರತೆಗಳೇ ಇರುವುದಿಲ್ಲ.

**ಸಾಮಾಜಿಕ ಭದ್ರತೆ :** ಅಸಂಘಟಿತ ವಲಯದ ದುಡಿಮೆಗಾರರು ಸಾಮಾಜಿಕ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಸಾಮಾಜಿಕ ಭದ್ರತೆ ಎಂದರೆ ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳನ್ನು (ವಸತಿ, ಆರೋಗ್ಯ, ಆಹಾರ, ಕುಡಿಯುವ ನೀರು, ದುಡಿಯುವ ಸಮಾನವಕಾಶ, ಸಮಾನತೆ ಇತ್ಯಾದಿ) ಸಾರ್ವಜನಿಕವಾಗಿ ಅಥವಾ ಸಾಮುದಾಯಿಕವಾಗಿ ಒದಗಿಸಿಕೊಡುವುದು ಸಾಮಾಜಿಕ ಭದ್ರತೆ ಎನ್ನಿಸಿಕೊಳ್ಳುತ್ತದೆ. ಆದರೆ ಅಸಂಘಟಿತ ವಲಯದ ದುಡಿಮೆಗಾರರಿಗೆ ಇಷ್ಟು ಕೂಡ ದೊರಕುತ್ತಿಲ್ಲ.

**ಕಾನೂನು ಚೌಕಟ್ಟು :** ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ಅನೇಕ ಕಾನೂನಾತ್ಮಕ ಚೌಕಟ್ಟುಗಳು ಅನ್ವಯಿಸುವುದೇ ಇಲ್ಲ. ಉದಾಹರಣೆಗೆ ನಿಗದಿತ ಸಮಯದ ದುಡಿಮೆಗೆ, ನಿಗದಿತ ಖಾತರಿಯ ಕನಿಷ್ಠ ವೇತನವಿಲ್ಲ. ಇದು ಕನಿಷ್ಠ ವೇತನ ಕಾಯ್ದೆ 1971 ಆಧಾರದಲ್ಲಿ ಕೂಲಿಯು ಅಸಂಘಟಿತ ವಲಯದಲ್ಲಿ ದುಡಿಯುವವರಿಗೆ ದೊರೆಯುತ್ತಿಲ್ಲ. ಅಲ್ಲದೆ ಪ್ರಾವಿಡೆಂಟ್ ಫಂಡ್ ಇತ್ಯಾದಿ ಯಾವುದೇ ಕಾನೂನಾತ್ಮಕ ಆರ್ಥಿಕ ಬೆಂಬಲಗಳು ಅಸಂಘಟಿತ ವಲಯದಲ್ಲಿ ದುಡಿಯುವವರಿಗಿಲ್ಲ.

**ಬಾಲ ಕಾರ್ಮಿಕರು :** ಅಸಂಘಟಿತ ವಲಯದಲ್ಲಿ ಅರೆಕುಶಲ ದೈಹಿಕ ಶ್ರಮ ಆಧಾರಿತ ಕೆಲಸವನ್ನು ಮಕ್ಕಳು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಮಾಡುತ್ತಿರುತ್ತಾರೆ. ಉದಾಹರಣೆಗೆ ಪಟಾಕಿ ಮಾಡುವ ಕಾರ್ಖಾನೆಗಳಲ್ಲಿ ಅಲ್ಲಿ ಬಳಸುವ ರಾಸಾಯನಿಕ ವಸ್ತುಗಳ ಜೊತೆ ಜೀವಕ್ಕೂ ಭದ್ರತೆ ಇಲ್ಲದೆ ದುಡಿಯುತ್ತಿರುವವರಲ್ಲಿ ಹೆಚ್ಚಿನವರು ಮಕ್ಕಳು. ಬಂಡವಾಳಶಾಹಿ ವ್ಯವಸ್ಥೆಯು ಕಡಿಮೆ ಕೂಲಿಗೆ ಹೆಚ್ಚು ಶ್ರಮ ಆಧಾರಿತ ಕೆಲಸ ಮಾಡುವುದನ್ನು ಬಯಸುತ್ತದೆ. ಇದಕ್ಕೆ ಮೊದಲು ಬಲಿಯಾಗುತ್ತಿರುವವರು ಮಕ್ಕಳು. ಒಟ್ಟಿನಲ್ಲಿ ಅಸಂಘಟಿತ ವಲಯವು ಬಾಲಕಾರ್ಮಿಕ ಪದ್ಧತಿಯನ್ನು ಪೋಷಿಸುತ್ತದೆ.

**ದೈಹಿಕ ಮತ್ತು ಮಾನಸಿಕ ದೌರ್ಜನ್ಯ :** ಅಸಂಘಟಿತ ವಲಯಗಳಲ್ಲಿ ಮನೆ ಕೆಲಸಗಾರರಾಗಿ ದುಡಿಯುತ್ತಿರುವ ಬಹುತೇಕರು ಮಹಿಳೆಯರು. ಇವರ ಮೇಲೆ ನಡೆಯುತ್ತಿರುವ ದೈಹಿಕ ಮತ್ತು ಮಾನಸಿಕ ದೌರ್ಜನ್ಯಗಳು ಇತ್ತೀಚೆಗೆ ದುಪ್ಪಟ್ಟುಗೊಂಡಿವೆ. ಭಾರತದ ಗ್ರಾಮೀಣ ಪ್ರದೇಶದಲ್ಲಿ 2014–2015 ರ ಗ್ರಾಮೀಣ ಅಭಿವೃದ್ಧಿ ವರದಿ ಪ್ರಕಾರ ಶೇಕಡಾ 77ರಷ್ಟು ಹೆಣ್ಣು ಮಕ್ಕಳು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಜೀವನೋಪಾಯಕ್ಕೆ ದುಡಿಯಲೇಬೇಕಾದ ಅಸಹಾಯಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ಕಿರುಕುಳದ ಜೊತೆಗೆ ಹಲವು ಬಗೆಯ ಕಿರುಕುಳಗಳನ್ನು ನೀಡುತ್ತಿರುವ ವರದಿಗಳನ್ನು ನಿತ್ಯವೂ ನೋಡುತ್ತಿದ್ದೇವೆ. ಹೀಗೆ ಅಸಂಘಟಿತ ವಲಯದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಕೆಲವು ಸವಾಲುಗಳನ್ನು ಇಲ್ಲಿ ತಿಳಿಸಲಾಗಿದೆ.

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಶ್ರಮ ವಿಭಜನೆಯು ________________ ಗೆ ಕಾರಣವಾಗುವುದು.
2. ಭೂ ರಹಿತ ಕೃಷಿ ಕಾರ್ಮಿಕರನ್ನು ________________ ಕೆಲಸಗಾರರು ಎಂದು ಕರೆಯುತ್ತಾರೆ.
3. ವೈದ್ಯಕೀಯ ಸಂಸ್ಥೆಗಳ ಕಾರ್ಮಿಕರನ್ನು ______________ ಕೆಲಸಗಾರರು ಎಂದು ಕರೆಯುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಶ್ರಮ ವಿಭಜನೆ ಎಂದರೇನು?
2. ಸಂಭಾವನೆ ಸಹಿತ ದುಡಿಮೆ ಎಂದರೇನು?
3. ಸಂಭಾವನೆ ರಹಿತ ದುಡಿಮೆ ಎಂದರೇನು?
4. ಸಂಘಟಿತ ದುಡಿಮೆಯ ವಲಯ ಎಂದರೇನು?
5. ಅಸಂಘಟಿತ ದುಡಿಮೆಯ ವಲಯ ಎಂದರೇನು?
6. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?

**III. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

1. ಸಂಘಟಿತ ದುಡಿಮೆಯ ಪ್ರಕಾರಗಳಾವುವು? ತಿಳಿಸಿ.
2. ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.
3. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.
4. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

**IV. ಚಟುವಟಿಕೆ :**

1. ನೀವು ವಾಸವಿರುವ ಪರಿಸರದಲ್ಲಿನ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಹೆಸರುಗಳನ್ನು ಪಟ್ಟಿ ಮಾಡಿ.

**V. ಯೋಜನೆ :**

1. ನಿಮ್ಮ ಪ್ರದೇಶದಲ್ಲಿರುವ ಅಸಂಘಟಿತ ಕಾರ್ಮಿಕರ ಜೊತೆ ಮಕ್ಕಳು ಮಾತನಾಡುವಂತೆ ಮಾಡಿ ಅವರ ಮೂಲಕವೇ ವರದಿ ಸಿದ್ಧಪಡಿಸಿ.

* * * *

© KTBS Not to be published

# ಭೂಗೋಳ

## ಅಧ್ಯಾಯ–1

## ಭಾರತದ ಸ್ಥಾನ ಮತ್ತು ವಿಸ್ತೀರ್ಣ

S4M2B2


**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- *ಪ್ರಪಂಚ ಹಾಗೂ ಏಷ್ಯಾ ಖಂಡದಲ್ಲಿ ಭಾರತದ ಸ್ಥಾನ.*
- *ಭಾರತದ ವಿಸ್ತೀರ್ಣ ಮತ್ತು ಮೇರೆಗಳು.*
- *ಭಾರತದ ನೆರೆಯ ರಾಷ್ಟ್ರಗಳು.*

**ಭಾರತದ ಸ್ಥಾನ**

ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವ ಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಇದು ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ. ಭಾರತದ ಪ್ರಧಾನ ಭೂಭಾಗವು $8^{o}4'$ ದಿಂದ $37^{o}6'$ ಉತ್ತರ ಅಕ್ಷಾಂಶ ಹಾಗೂ $68^{o}7'$ ರಿಂದ $97^{o}25'$ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇನ್ನೂ ದಕ್ಷಿಣಕ್ಕೆ ವಿಸ್ತರಿಸಿವೆ. ನಿಕೋಬಾರ್ ದ್ವೀಪದ $6^{o}.45'$ ದಕ್ಷಿಣ ಅಕ್ಷಾಂಶದಲ್ಲಿರುವ 'ಇಂದಿರಾ ಪಾಯಿಂಟ್' ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

© KTBS
Not to be published





**ಪ್ರಪಂಚ ಮತ್ತು ಏಷ್ಯಾದಲ್ಲಿ ಭಾರತದ ಸ್ಥಾನ**

ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ($23\frac{1}{2}^{0}$ಉ)ವು ಹಾಯ್ದು ಹೋಗಿದೆ ಮತ್ತು $82\frac{1}{2}^{0}$ ಪೂರ್ವ ರೇಖಾಂಶವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತದ ಮಧ್ಯ ರೇಖಾಂಶವಾಗಿದ್ದು ಭಾರತೀಯ ಆದರ್ಶಕಾಲಮಾನವು *(IST)* ಈ ರೇಖಾಂಶವನ್ನಾಧರಿಸಿದೆ.

**ವಿಸ್ತೀರ್ಣ :** ರಷ್ಯ, ಕೆನಡ, ಚೀನ, ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್ ಮತ್ತು ಆಸ್ಟ್ರೇಲಿಯಗಳ ತರುವಾಯ ಭಾರತವು ಪ್ರಪಂಚದ 7ನೆಯ ದೊಡ್ಡ ರಾಷ್ಟ್ರ. ಇದರ ಒಟ್ಟು ವಿಸ್ತೀರ್ಣ 32, 87, 263 ಚ.ಕಿ.ಮೀ.ಇದು ಪ್ರಪಂಚದ ವಿಸ್ತೀರ್ಣದಲ್ಲಿ ಶೇ. 2.42 ಭಾಗವಾಗಿರುತ್ತದೆ. ಪೂರ್ವ–ಪಶ್ಚಿಮವಾಗಿ 2933 ಕಿ.ಮೀ., ಅಗಲ ಹಾಗೂ ಉತ್ತರ–ದಕ್ಷಿಣವಾಗಿ 3214 ಕಿ.ಮೀ., ಉದ್ದವಾಗಿದೆ.

**ಮೇರೆಗಳು :** ಭಾರತವು ಭೂ ಮತ್ತು ಜಲಮೇರೆಗಳೆರಡನ್ನೂ ಹೊಂದಿದೆ. ಭೂ ಮೇರೆಯ ಉದ್ದ 15,200 ಕಿಮೀ. ಕೆಲವೆಡೆ ಹೊರತುಪಡಿಸಿ ದೇಶದ ಎಲ್ಲಾ ಭಾಗಗಳಲ್ಲೂ ನೈಸರ್ಗಿಕ ಗಡಿಗಳಿವೆ. ಉತ್ತರದಲ್ಲಿರುವ ಹಿಮಾಲಯ ಪರ್ವತಗಳು ಭಾರತ ಮತ್ತು ಚೀನಾಗಳ ನಡುವಣ ನೈಸರ್ಗಿಕ ಗಡಿಯಾಗಿವೆ.





© KTBS Not to be published

ಭಾರತದ ಪ್ರಧಾನ ಭೂ ಭಾಗವು 6100 ಕಿ.ಮೀ. ಉದ್ದವಾದ ಸಮುದ್ರ ತೀರವನ್ನು ಹೊಂದಿದೆ. ಆದರೆ ಅಂಡಮಾನ್–ನಿಕೋಬಾರ್ ಹಾಗೂ ಲಕ್ಷ ದ್ವೀಪಗಳ ತೀರಗಳನ್ನೂ ಒಳಗೊಂಡಂತೆ ದೇಶದ ಒಟ್ಟು ಸಮುದ್ರ ತೀರದ ಉದ್ದ 7516.5 ಕಿ.ಮೀ.ಗಳು ದೇಶದ ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಸಾಗರಗಳಿವೆ. ಅವು ದೇಶದ ನೈಸರ್ಗಿಕ ಗಡಿಗಳಾಗಿವೆ.

**ನೆರೆಯ ರಾಷ್ಟ್ರಗಳು :** ಭಾರತವು 7 ನೆರೆಯ ದೇಶಗಳನ್ನು ಹೊಂದಿದೆ. ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನ ಹಾಗೂ ಪೂರ್ವಭಾಗದಲ್ಲಿ ಬಾಂಗ್ಲಾದೇಶ ಮತ್ತು ಮ್ಯೆಯನ್ಮಾರ್ ದೇಶಗಳಿವೆ. ಆಗ್ನೇಯಕ್ಕೆ ಶ್ರೀಲಂಕ ದೇಶವಿದ್ದು, ಅದು ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಭಾರತದಿಂದ ಪ್ರತ್ಯೇಕಗೊಂಡಿದೆ.

**ಆಡಳಿತ ವಿಭಾಗಗಳು :** ಭಾರತವು ಪ್ರಜಾಪ್ರಭುತ್ವ ಗಣರಾಜ್ಯ. ವಿಶಾಲವಾದ ಭಾರತವನ್ನು ಪ್ರಮುಖವಾಗಿ ಪ್ರಾದೇಶಿಕ ಭಾಷೆ ಮತ್ತು ಆಡಳಿತಾತ್ಮಕ ಅನುಕೂಲಕ್ಕಾಗಿ 28 ರಾಜ್ಯಗಳು ಮತ್ತು ದೆಹಲಿಯೂ ಸೇರಿದಂತೆ 9 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ದೆಹಲಿಯು ರಾಷ್ಟ್ರೀಯ ರಾಜಧಾನಿ ಕೇಂದ್ರ, ತೆಲಂಗಾಣ ಹೊಸರಾಜ್ಯ. ರಾಜ್ಯಗಳಲ್ಲಿ ರಾಜಸ್ತಾನವು ವಿಸ್ತೀರ್ಣದಲ್ಲಿ ದೊಡ್ಡದು ಮತ್ತು ಗೋವಾ ಅತಿ ಚಿಕ್ಕದು.




© KTBS Not to be published

ಇದು ನಿಮಗೆ ತಿಳಿದಿದೆಯೇ?

- **ರ‍್ಯಾಡ್‌ಕ್ಲಿಫ್ ರೇಖೆ:** *ಭಾರತ ಮತ್ತು ಪಾಕಿಸ್ತಾನಗಳ ಗಡಿರೇಖೆ*
- **ಡ್ಯುರ‍್ಯಾಂಡ್ ರೇಖೆ:** *ಭಾರತ ಮತ್ತು ಅಫ್ಘಾನಿಸ್ತಾನಗಳ ಗಡಿರೇಖೆ*
- **ಮ್ಯಾಕ್‌ಮಹೋನ್ ರೇಖೆ:** *ಭಾರತ ಮತ್ತು ಚೀನಾಗಳ ಗಡಿರೇಖೆ*

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಭಾರತದ ಒಟ್ಟು ವಿಸ್ತೀರ್ಣ __________ ಚ.ಕಿ.ಮೀ.,
2. ಭಾರತದ ಆಗ್ನೇಯ ಭಾಗದಲ್ಲಿ __________ ದೇಶವಿದೆ.
3. ಭಾರತದ ಮಧ್ಯ ಭಾಗದಲ್ಲಿ __________ ಅಕ್ಷಾಂಶವು ಹಾಯ್ದು ಹೋಗಿದೆ.
4. ಭಾರತದಲ್ಲಿ __________ ವು ಹೊಸರಾಜ್ಯವಾಗಿದೆ.

**II. ಗುಂಪಿನಲ್ಲಿ ಚರ್ಚಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ಅಕ್ಷಾಂಶ ಮತ್ತು ರೇಖಾಂಶೀಯ ವಿಸ್ತರಣೆಯನ್ನು ತಿಳಿಸಿ.
2. ಭಾರತದ ಅತ್ಯಂತ ದಕ್ಷಿಣದ ತುದಿ ಯಾವುದು?
3. ಭಾರತದ ವಾಯವ್ಯದಲ್ಲಿರುವ ನೆರೆಯ ರಾಷ್ಟ್ರಗಳನ್ನು ಹೆಸರಿಸಿ.
4. ಭಾರತದ ಮೇರೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ,

**III. ಚಟುವಟಿಕೆಗಳು :**

1. ಭಾರತದ ರೇಖಾ ನಕ್ಷೆಯನ್ನು ರಚಿಸಿ, ಅದರಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ,ಅವುಗಳ ರಾಜಧಾನಿಗಳನ್ನು ಗುರುತಿಸಿ ಹಾಗೂ ಹೆಸರಿಸಿ.

**IV. ಯೋಜನಾ ಕಾರ್ಯ :**

1. ನಿಮ್ಮ ಉಪಾಧ್ಯಾಯರ ನೆರವಿನಿಂದ ನಿಮ್ಮ ರಾಜ್ಯದ ಬಾಹ್ಯ ನಕ್ಷೆಯನ್ನು ರಚಿಸಿ, ಅದರಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸಿ ಹಾಗೂ ನೆರೆಯ ರಾಜ್ಯಗಳನ್ನು ಗುರುತಿಸಿ.

* * * *

© KTBS Not to be published

## ಅಧ್ಯಾಯ –2

# ಭಾರತದ ಮೇಲ್ಮೈ ಲಕ್ಷಣಗಳು

S6Q4P8

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯಲಾಗುತ್ತದೆ.**

- ಭಾರತದ ಭೂ ಸ್ವರೂಪಗಳ ಸಾಮಾನ್ಯ ಲಕ್ಷಣಗಳು.
- ಭಾರತದ ಪ್ರಾಕೃತಿಕ ವಿಭಾಗಗಳು.
- ಪ್ರಾಕೃತಿಕ ವಿಭಾಗಗಳ ಪ್ರಾಮುಖ್ಯತೆಗಳು.

ಭಾರತವು ಒಂದು ವಿಶಾಲವಾದ ದೇಶ. ಇದು ವಿವಿಧ ಭೂ ಸ್ವರೂಪಗಳನ್ನು ಹೊಂದಿದೆ. ಅವು ಪರ್ವತ, ಪ್ರಸ್ಥಭೂಮಿ, ಮೈದಾನ ಮತ್ತು ಕರಾವಳಿ ಮೈದಾನಗಳನ್ನೊಳಗೊಂಡಿವೆ. ಇವು ದೇಶದ ನದಿ ವ್ಯವಸ್ಥೆ, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ, ಕೃಷಿ, ಸಾರಿಗೆ, ಜನಸಂಖ್ಯೆಯ ಹಂಚಿಕೆ ಮೊದಲಾದವುಗಳ ಮೇಲೆ ಪ್ರಭಾವ ಬೀರುತ್ತವೆ.

© KTBS
Not to be published

**ಭಾರತದ ಪ್ರಾಕೃತಿಕ ವಿಭಾಗಗಳು**

ಮೇಲ್ಮೈ ಲಕ್ಷಣವನ್ನಾಧರಿಸಿ ಭಾರತವನ್ನು 4 ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ–

1. ಉತ್ತರದ ಪರ್ವತಗಳು.
2. ಉತ್ತರದ ಮೈದಾನಗಳು.
3. ಪರ್ಯಾಯ ಪ್ರಸ್ಥಭೂಮಿ.
4. ಕರಾವಳಿ ಮೈದಾನ ಮತ್ತು ದ್ವೀಪಗಳು.

**1. ಉತ್ತರದ ಪರ್ವತಗಳು**

ಇವು ಇತ್ತೀಚಿನ ಮಡಿಕೆ ಪರ್ವತಗಳ ಗುಂಪಿಗೆ ಸೇರಿದ ಹಿಮಾಲಯ ಶ್ರೇಣಿಗಳನ್ನು ಒಳಗೊಂಡಿವೆ. ಅವು ಭಾರತದ ಉತ್ತರದ ಗಡಿಗೆ ಹೊಂದಿಕೊಂಡಂತೆ ಹಬ್ಬಿರುವ ಅವಿಚ್ಛಿನ್ನ ಪರ್ವತ ಸರಣಿಗಳಾಗಿವೆ. ಪ್ರಪಂಚದಲ್ಲೇ ಎತ್ತರವಾಗಿದ್ದು ಅತ್ಯಂತ ಎತ್ತರವಾದ ಶಿಖರ, ಆಳವಾದ ಕಣಿವೆ ಮತ್ತು ಕಂದರ, ಹಿಮನದಿ, ಪರ್ವತ ಘಾಟಿ ಇತ್ಯಾದಿಗಳನ್ನೊಳಗೊಂಡಿವೆ. ಭಾರತದಲ್ಲಿ ಅವು ಪಶ್ಚಿಮದಲ್ಲಿ ಸಿಂಧೂ ನದಿ ಕಂದರದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿ ಕಂದರದವರೆಗೆ 2400 ಕಿ.ಮೀ. ಉದ್ದವಾಗಿವೆ. ಅವುಗಳ ಅಗಲವು 240 ರಿಂದ 320 ಕಿ.ಮೀ. ಗಳು. ಇವು ಪಶ್ಚಿಮದಲ್ಲಿ ಅಗಲವಾಗಿದ್ದು ಪೂರ್ವದೆಡೆಗೆ ಹೋದಂತೆ ಕಿರಿದಾಗುತ್ತವೆ. ಸುಮಾರು 5 ಲಕ್ಷ ಚ.ಕಿ.ಮೀ. ಗಳಲ್ಲಿ ಹರಡಿವೆ. ಭಾರತದ ಕಡೆಗೆ (ದಕ್ಷಿಣ) ಕಡಿದಾದ ಇಳಿಜಾರು ಮತ್ತು ಟಿಬೆಟ್ ಕಡೆಗೆ (ಉತ್ತರ) ಬಳಿದಾದ ಇಳಿಜಾರಿನಿಂದ ಕೂಡಿವೆ.

ಹಿಮಾಲಯ ಪರ್ವತಗಳಲ್ಲಿ 3 ಸಮಾನಾಂತರ ಸರಣಿಗಳಿವೆ:

i) ಮಹಾ ಹಿಮಾಲಯ. ii) ಒಳ ಹಿಮಾಲಯ ಮತ್ತು iii) ಸಿವಾಲಿಕ್ ಬೆಟ್ಟಗಳು.


**i) ಮಹಾಹಿಮಾಲಯ :** ಇವು ಹಿಮಾಲಯ ಪರ್ವತಗಳ ಮಧ್ಯದಲ್ಲಿರುವ ಅವಿರತ ಮತ್ತು ಅತಿ ಎತ್ತರವಾದ ಸರಣಿ. ಇವುಗಳ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ 6100 ಮೀ. ಇಲ್ಲಿ ಹಲವು ಎತ್ತರವಾದ ಶಿಖರಗಳಿವೆ. ಅವುಗಳಲ್ಲಿ ಮೌಂಟ್ ಎವರೆಸ್ಟ್ (8848 ಮೀ.) ಪ್ರಪಂಚದಲ್ಲೇ

**ಇದು ನಿಮಗೆ ತಿಳಿದಿದೆಯೇ?**

**ಮೌಂಟ್‌ಎವರೆಸ್ಟ್ :** ಇದನ್ನು ನೇಪಾಳಿಯರು 'ಸಾಗರ್ಮಾತ' ಎಂದು ಕರೆಯುತ್ತಾರೆ. 'ಆಕಾಶದ ದೇವತೆ' ಎಂದರ್ಥ. ಟಿಬೆಟಿಯನ್ನರು ಇದನ್ನು 'ಚೊಮೊಲುಂಗ್ಮ' ಎಂದು ಕರೆಯುವರು.


ಎತ್ತರವಾದುದು. ಇತರ ಪ್ರಮುಖ ಶಿಖರಗಳೆಂದರೆ, ಕಾಂಚನಜಂಗ (8586ಮೀ.), ಮಾಕಲು (8481ಮೀ.), ಧವಳಗಿರಿ (8172ಮೀ.), ಮಾನಸ್ಲು (8156ಮೀ.) ನಂದಾದೇವಿ ಇತ್ಯಾದಿ. ಈ ಸರಣಿಯು ವರ್ಷವೆಲ್ಲಾ ಹಿಮಾವೃತವಾಗಿರುವುದರಿಂದ, ಇದನ್ನು 'ಹಿಮಾದ್ರಿ' ಎಂದು ಕರೆಯಲಾಗಿದೆ. ಇದು ಅನೇಕ ಹಿಮನದಿಗಳ ಉಗಮ ಸ್ಥಾನ. ಉದಾ: ಗಂಗೋತ್ರಿ, ಯಮುನೋತ್ರಿ ಹಿಮನದಿಗಳು. ಇಲ್ಲಿ ಅನೇಕ ಪರ್ವತ ಘಾಟಿಗಳಿವೆ. ಉದಾ: ಬುರ್ಜಿಲ್, ಜೋಜಿಲಾ, ಶಿಪ್ಕಿಲಾ ಇತ್ಯಾದಿ.

ಹಿಮಾದ್ರಿ ಸರಣಿಗಳಿಂದ ಉತ್ತರಕ್ಕೆ ಕಂಡುಬರುವ ಪರ್ವತಗಳನ್ನು ಹೊರ-ಹಿಮಾಲಯಗಳೆಂದು ಕರೆಯಲಾಗಿದೆ. ಇವು ಕಾರಾಕೊರಂ ಸರಣಿಗಳನ್ನೊಳಗೊಂಡಿದ್ದು ಇಲ್ಲಿ $k_2$ ಅಥವಾ ಗಾಡ್ವಿನ್ ಆಸ್ಟಿನ್ ಎಂಬ ಎತ್ತರವಾದ ಶಿಖರವಿದೆ. ಇದು ಭಾರತದ ಎತ್ತರವಾದ ಶಿಖರ.




**ii) ಒಳ ಹಿಮಾಲಯ :** ಇದು ಮಹಾಹಿಮಾಲಯದ ದಕ್ಷಿಣದಲ್ಲಿದೆ. ಇದನ್ನು 'ಹಿಮಾಚಲ್' ಸರಣಿ ಎಂತಲೂ ಕರೆಯುತ್ತಾರೆ. ಸುಮಾರು 60 ರಿಂದ 80 ಕಿ.ಮೀ. ಅಗಲ ಮತ್ತು 1500 ರಿಂದ 4500 ಕಿ.ಮೀ. ಎತ್ತರವಾಗಿದೆ. ಇದರ ಪೂರ್ವಭಾಗವು ಅರಣ್ಯಗಳಿಂದಾವರಿಸಿದೆ. ಇಲ್ಲಿ ಅನೇಕ ಸಮಾನಾಂತರ ಸರಣಿಗಳು ಕಂಡುಬರುತ್ತವೆ. ಉದಾ: ಪಿರ್‌ಪಂಜಾಲ್, ದೌಲಧರ್, ನಾಗತಿಬ, ಮುಸ್ಸೋರಿ, ಮಹಾಭಾರತ್ ಮತ್ತು

ಡಾರ್ಜಲಿಂಗ್ ಸರಣಿಗಳು. ಜೊತೆಗೆ ಇಲ್ಲಿ ಅನೇಕ ಆಕರ್ಷಕ ಕಣಿವೆಗಳಿವೆ. ಉದಾ: ಕಾಶ್ಮೀರ ಕಣಿವೆ. ಕಾಂಗ್ರ ಕಣಿವೆ, ಕುಲು ಕಣಿವೆ ಮೊದಲಾದವು. ಅನೇಕ ಆಕರ್ಷಕ ಗಿರಿಧಾಮಗಳೂ ಕಂಡುಬರುತ್ತವೆ. ಉದಾ: ಶಿಮ್ಲಾ, ರಾಣಿಕೇಟ್, ಮುಸ್ಸೋರಿ, ನೈನಿತಾಲ್ ಮತ್ತು ಡಾರ್ಜಲಿಂಗ್.




© KTBS Not to be published


**iii) ಸಿವಾಲಿಕ್ ಬೆಟ್ಟಗಳು :** ಇವು ಹಿಮಾಲಯದ ಹೊರಗಿನ ಅಥವಾ ಪಾದಭಾಗದ ಸರಣಿಗಳಾಗಿದ್ದು, ಪ್ರಧಾನ ಹಿಮಾಲಯದ ದಕ್ಷಿಣ ಭಾಗದಲ್ಲಿವೆ. ಕಡಿಮೆ ಎತ್ತರವುಳ್ಳ ಹಿಮಾಲಯದ ಭಾಗಗಳು. ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.ಗಳು. ಇವು ಜಮ್ಮು-ಕಾಶ್ಮೀರದಿಂದ ಅರುಣಾಚಲಪ್ರದೇಶದವರೆಗೆ ಹಬ್ಬಿವೆ. ಅವು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, ಅವುಗಳನ್ನು 'ಡೂನ್ಸ್' ಎನ್ನುವರು. ಉದಾ: ಡೆಹ್ರಾಡೂನ್.

**ಪ್ರಾಮುಖ್ಯತೆ :**

1. ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಗಳಾಗಿದ್ದು, ಪರಕೀಯರ ದಾಳಿ ಹಾಗೂ ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ನಿಯಂತ್ರಿಸುತ್ತವೆ.
2. ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
3. ಅವುಗಳ ಇಳಿಜಾರುಗಳಲ್ಲಿ ದಟ್ಟ ಕಾಡುಗಳಿವೆ ಮತ್ತು ನೆಡುತೋಟದ ಬೆಳೆಗಳಿಗೆ ಸೂಕ್ತ. ಉದಾ: ಅಸ್ಸಾಂನ ಚಹ ತೋಟಗಳು.
4. ಖನಿಜಗಳ ಉಗ್ರಾಣಗಳಾಗಿವೆ.
5. ಹಲವು ನದಿಗಳ ಉಗಮ ಸ್ಥಾನ, ಇಲ್ಲಿನ ಜಲಪಾತಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತ.

## 2. ಉತ್ತರದ ಮೈದಾನ

ಹಿಮಾಲಯ ಪರ್ವತಗಳು ಮತ್ತು ಪರ್ಯಾಯ ಪ್ರಸ್ಥಭೂಮಿಯ ನಡುವೆ ವಿಸ್ತರಿಸಿದೆ. ಇದು ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ, ಈ ಮೂರು ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡದ್ದು. ಪ್ರಪಂಚದ ಅತಿ ವಿಶಾಲವಾದ ಮೆಕ್ಕಲು ಮಣ್ಣು ಮೈದಾನ. ಪೂರ್ವ–ಪಶ್ಚಿಮವಾಗಿ 2500 ಕಿ.ಮೀ ಉದ್ದಕ್ಕೆ ಹರಡಿದೆ. ಸರಾಸರಿ ಅಗಲ 240 ರಿಂದ 340 ಕಿ.ಮೀಗಳು. ಸುಮಾರು 7 ಲಕ್ಷ ಚ.ಕಿ.ಮೀ, ಪ್ರದೇಶವನ್ನಾವರಿಸಿದೆ. ಸಮತಟ್ಟಾದ ಮೈದಾನ. ಇದರ ಮೇಲ್ಭಾಗದಲ್ಲಿ ಎಲ್ಲಿಯೂ ಕಲ್ಲುಗಳು ಕಂಡುಬರುವುದಿಲ್ಲ.





© KTBS Not to be published

**ಪ್ರಾಮುಖ್ಯತೆ :** ಉತ್ತರ ಮೈದಾನವು ವಿಶಾಲವಾದ ಮೈದಾನ, ಫಲವತ್ತಾಗಿದೆ ಮತ್ತು ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ. ಹೀಗಾಗಿ ಕೃಷಿಗೆ ಉಪಯುಕ್ತ. ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ, ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯ. ಜೊತೆಗೆ ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತದೆ. ಇಲ್ಲಿ ಅನೇಕ ಯಾತ್ರಾಸ್ಥಳಗಳಿವೆ.

## 3. ಪರ್ಯಾಯ ಪ್ರಸ್ಥಭೂಮಿ

ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಅತ್ಯಂತ ವಿಶಾಲವಾದುದು. ಗೊಂಡ್ವಾನ ಭೂಭಾಗಕ್ಕೆ ಸೇರಿದ್ದು, ಪುರಾತನ ಶಿಲೆಗಳಿಂದ ರಚಿತವಾಗಿದೆ. ಉತ್ತರದ ಮೈದಾನದಿಂದ ದಕ್ಷಿಣ ಭಾಗದಲ್ಲಿದೆ ಮತ್ತು ಸುಮಾರು 16 ಲಕ್ಷ ಚ.ಕಿ.ಮೀ. ಪ್ರದೇಶವನ್ನಾವರಿಸಿದೆ. ಇದು ತ್ರಿಕೋನಾಕಾರದಲ್ಲಿದ್ದು, ಇದರ ದಕ್ಷಿಣ ತುದಿಯು ಕನ್ಯಾಕುಮಾರಿ ಭೂಶಿರವಾಗಿದೆ. ಅನೇಕ ಬೆಟ್ಟ ಮತ್ತು ಪ್ರಸ್ಥಭೂಮಿಗಳಿಂದ ಆವರಿಸಿದೆ. ಉದಾ: ಅರಾವಳಿ, ವಿಂದ್ಯಾ, ಸಾತ್ಪುರ, ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು, ಛೋಟನಾಗಪುರ ಸರಣಿ, ದಖಿನ್ ಪ್ರಸ್ಥಭೂಮಿ, ಮಾಳವ ಪ್ರಸ್ಥಭೂಮಿ ಮೊದಲಾದವು.




**ಅರಾವಳಿ** ಸರಣಿ ಪುರಾತನ ಮಡಿಕೆ ಪರ್ವತಗಳಾಗಿದ್ದು, ದೇಶದ ವಾಯವ್ಯ ಭಾಗದಲ್ಲಿದೆ. ಇಲ್ಲಿನ ಅಬು ಪರ್ವತಗಳಲ್ಲಿರುವ 'ಗುರುಶಿಖರ' (1772ಮೀ.) ಅತಿ ಎತ್ತರವಾದುದು. **ವಿಂಧ್ಯಾ** ಸರಣಿಯು ನರ್ಮದಾ ನದಿ ಕಣಿವೆಯ ಉತ್ತರದ ಅಂಚಿಗೆ ಹೊಂದಿಕೊಂಡಂತೆ ಹಬ್ಬಿದೆ. ಇವುಗಳ ದಕ್ಷಿಣಕ್ಕೆ ನರ್ಮದ ಮತ್ತು ತಾಪಿ ನದಿಗಳ ನಡುವೆ ಪೂರ್ವಪಶ್ಚಿಮವಾಗಿ ಸಾತ್ಪುರ ಸರಣಿಗಳಿವೆ.

**ಪಶ್ಚಿಮ ಘಟ್ಟಗಳು** ತಾಪಿ ನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ (ಅರಬ್ಬಿ ಸಮುದ್ರತೀರ) ಸಮಾಂತರವಾಗಿ ಹಬ್ಬಿವೆ. ಇವುಗಳನ್ನು 'ಸಹ್ಯಾದ್ರಿ ಸರಣಿ' ಎಂತಲೂ ಕರೆಯಲಾಗಿದೆ. ಇವು ನಿರಂತರ ಸರಣಿಗಳು. ಇವುಗಳ ಪಶ್ಚಿಮ ಭಾಗ ಕಡಿದಾಗಿದೆ ಮತ್ತು ಪೂರ್ವಭಾಗ ಬಳಿದಾಗಿದೆ. ಬೋರ್ಘಾಟ್, ತಾಲ್ಘಾಟ್ ಮತ್ತು ಪಾಲ್ಘಾಟ್‌ಗಳು ಇಲ್ಲಿನ ಪ್ರಮುಖ ಪರ್ವತ ಘಾಟಿಗಳು. ಪಶ್ಚಿಮ ಘಟ್ಟಗಳು ಪಾಲ್ಘಾಟ್ ಕಣಿವೆಯ ದಕ್ಷಿಣಕ್ಕೆ ಅಣ್ಣಾಮಲೈ, ಪಳನಿ, ಮತ್ತು ಕಾರ್ಡಮಮ್ (ಈಲ್ಯಾಮಲೈ) ಸರಣಿಗಳಾಗಿ ಮುಂದುವರಿಯುತ್ತವೆ. ಅಣ್ಣಾಮಲೈ ಬೆಟ್ಟಗಳಲ್ಲಿರುವ 'ಅಣೈಮುಡಿ' (2695 ಮೀ.) ಯು ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ.

**ಪೂರ್ವಘಟ್ಟಗಳು** ಭಾರತದ ಪೂರ್ವಕರಾವಳಿಗೆ ಹೊಂದಿಕೊಂಡಂತೆ ಹಬ್ಬಿವೆ. ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದ್ದು, ಇಲ್ಲಿ ಪಶ್ಚಿಮ ಘಟ್ಟಗಳನ್ನು ಸಂಧಿಸುತ್ತವೆ. ಪಶ್ಚಿಮ ಘಟ್ಟಗಳಷ್ಟು ಎತ್ತರವಾಗಿಲ್ಲ ಮತ್ತು ನಿರಂತರ ಸರಣಿಗಳೂ ಅಲ್ಲ. ಅಲ್ಲಲ್ಲಿ ಪೂರ್ವಕ್ಕೆ ಹರಿಯುವ ನದಿ ಕಣಿವೆಗಳಿಂದ ಪ್ರತ್ಯೇಕಗೊಂಡಿವೆ. 'ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ.

**ದಖನ್ ಪ್ರಸ್ಥಭೂಮಿ**ಯು ವಾಯವ್ಯ ಭಾಗದಲ್ಲಿ ಸಾತ್ಪುರ ಮತ್ತು ವಿಂದ್ಯಾ, ಪಶ್ಚಿಮದಲ್ಲಿ ಪಶ್ಚಿಮ ಘಟ್ಟ ಮತ್ತು ಪೂರ್ವಭಾಗದಲ್ಲಿ ಪೂರ್ವಘಟ್ಟಗಳು, ಉತ್ತರದಲ್ಲಿ ಮಹದಾದೇವ್ ಮತ್ತು ಮೈಕೇಲ್ ಸರಣಿಗಳ ನಡುವೆ ವಿಸ್ತರಿಸಿದೆ. ಛೋಟನಾಗಪುರ ಸರಣಿಯು ಪರ್ಯಾಯ ಪ್ರಸ್ಥಭೂಮಿಯ ಈಶಾನ್ಯ ಭಾಗದಲ್ಲಿದೆ.

© KTBS
Not to be republished

**ಪ್ರಾಮುಖ್ಯತೆ :**

i. ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯದಿಂದ ಕೂಡಿದೆ.

ii. ನೈಋತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತದೆ. ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕವಾಗಿದೆ.

> **ನಿಮಗಿದು ತಿಳಿದಿರಲಿ!**
>
> **ಸಾತ್ಪುರ** ಎಂಬ ಶಬ್ಧವು **'ಸಾತ್'** ಮತ್ತು **'ಪುರ'** ಎಂಬ ಎರಡು ಸಂಸ್ಕೃತ ಪದಗಳಿಂದ ಸಂಯೋಜನೆಯಾಗಿದೆ. ಸಾತ್ ಎಂದರೆ ಏಳು ಎಂತಲೂ ಮತ್ತು ಪುರ ಎಂದರೆ ಪರ್ವತಗಳು ಎಂದರ್ಥ.
>
> **ಭಾಬರ್ :** ಸಿವಾಲಿಕ್ ಬೆಟ್ಟಗಳ ಪಾದಭಾಗಗಳಲ್ಲಿ ಪೂರ್ವ-ಪಶ್ಚಿಮವಾಗಿ ಹಬ್ಬಿರುವ ಕಿರಿದಾದ ಭಾಗ.
>
> **ಥಾರ್‌ಮರುಭೂಮಿ :** ಭಾರತದ ಒಂದು ಪ್ರಮುಖ ಮರುಭೂಮಿ. ಇದು ದೇಶದ ವಾಯವ್ಯ ಭಾಗದಲ್ಲಿದೆ.

iii. ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನ. ಅವು ಜಲಶಕ್ತಿ ತಯಾರಿಕೆಗೆ ಉಪಯುಕ್ತ.

iv. ಇಲ್ಲಿ ಗಿರಿಧಾಮಗಳೂ ಇವೆ. ಉದಾ : ಊಟಿ (ಉದಕಮಂಡಲ).

### 4. ಕರಾವಳಿ ಮೈದಾನಗಳು

ಭಾರತದ ಪರ್ಯಾಯ ಪ್ರಸ್ಥಭೂಮಿಯ ಎರಡೂ ಬದಿಗಳು ಸಮುದ್ರ ತೀರಗಳನ್ನು ಹೊಂದಿವೆ. ಭಾರತದ ಕರಾವಳಿ(ತೀರ)ಯು ಪಶ್ಚಿಮದಲ್ಲಿ ಕಛ್‌ನಿಂದ ಪೂರ್ವಭಾಗದ ಗಂಗಾನದಿ ಮುಖಜಭೂಮಿಯವರೆಗೆ ಹಬ್ಬಿದೆ.

© KTBS Not to be published

ಭಾರತದ ಕರಾವಳಿ ಮೈದಾನವನ್ನು ಪಶ್ಚಿಮ ಕರಾವಳಿ ಮೈದಾನ ಮತ್ತು ಪೂರ್ವಕರಾವಳಿ ಮೈದಾನಗಳೆಂದು ವಿಂಗಡಿಸಬಹುದು.

i. **ಪಶ್ಚಿಮ ಕರಾವಳಿ** ಮೈದಾನವು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ. ಇದು ಕಛ್‌ನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. ಕಿರಿದಾಗಿದ್ದು ಕಡಿದಾದ ಇಳಿಜಾರು ಮತ್ತು ಶಿಲಾಮಯವಾಗಿದೆ. ಇದನ್ನು 3 ಭಾಗಗಳಾಗಿ ವಿಂಗಡಿಸಬಹುದು :-

ಎ) ಕೊಂಕಣತೀರ: ಇದು ಗುಜರಾತ್ ಮೈದಾನದ ದಕ್ಷಿಣದಲ್ಲಿದ್ದು ದಾಮನ್‌ನಿಂದ ಗೋವಾದವರೆಗೆ ವಿಸ್ತರಿಸಿದೆ.


ಬಿ) ಕರ್ನಾಟಕ ತೀರ: ಇದು ಗೋವಾದಿಂದ ಕರ್ನಾಟಕದ ಮಂಗಳೂರಿನವರೆಗೆ ವಿಸ್ತರಿಸಿದೆ.

ಸಿ) ಮಲಬಾರ್ ತೀರ: ಇದು ಮಂಗಳೂರಿನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ.

ii **ಪೂರ್ವಕರಾವಳಿ** ಮೈದಾನವು ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. ಅದು ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ನೆಲೆಸಿದೆ. ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ. ಪೂರ್ವಕ್ಕೆ ಹರಿಯುವ ಅನೇಕ ದಕ್ಷಿಣ ಭಾರತದ ನದಿಗಳು ಈ ಮೂಲಕ ಹರಿಯುತ್ತವೆ. ಅವು ನದಿ ಮುಖಜ ಭೂಮಿಯನ್ನು ನಿರ್ಮಿಸುತ್ತವೆ. ಉದಾ: ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ.

ಪೂರ್ವಕರಾವಳಿಯನ್ನು ಉತ್ತರ ಸರ್‌ಕಾರ್ ಮತ್ತು ಕೋರಮಂಡಲ ತೀರಗಳೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಕೃಷ್ಣ ನದಿ ಮುಖಜದಿಂದ ಉತ್ತರಕ್ಕಿರುವ ಭಾಗವು ಉತ್ತರ ಸರ್ಕಾರ್ ತೀರವಾಗಿರುತ್ತದೆ. ಇದರಿಂದ ದಕ್ಷಿಣಕ್ಕಿರುವ ಭಾಗವನ್ನು ಕೋರಮಂಡಲ ತೀರವೆಂದು ಕರೆಯಲಾಗಿದೆ. ಪೂರ್ವಕರಾವಳಿಯಲ್ಲಿ ಕೆಲವು ಲಗೂನ್ ಸರೋವರಗಳಿವೆ. ಉದಾ: ಚಿಲ್ಕ, ಪುಲಿಕೇಟ್ ಮತ್ತು ಕೊಲ್ಲೇರು ಸರೋವರಗಳು.

**ಪ್ರಾಮುಖ್ಯತೆ :** ಭಾರತದ ಕರಾವಳಿ ಮೈದಾನಗಳು ಕೆಲವು ನೈಸರ್ಗಿಕ ಬಂದರುಗಳಿಗೆ ಪೂರಕವಾಗಿವೆ. ಇದರಿಂದ ಭಾರತದ ವಿದೇಶ ವ್ಯಾಪಾರಾಭಿವೃದ್ಧಿ ಸಾಧ್ಯ. ಉದಾ: ಕಾಂಡ್ಲ, ಮುಂಬಯಿ, ಮರ್ಮಗೋವ, ಕೊಚ್ಚಿ, ವಿಶಾಖಪಟ್ಟಣ, ಕೊಲ್ಕತ ಇತ್ಯಾದಿ. ಅಲ್ಲದೆ ಕರಾವಳಿಯು ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆ, ಕೃಷಿ ಮತ್ತು ಉಪ್ಪು ಉತ್ಪಾದನೆಗಳಿಗೂ ನೆರವಾಗುತ್ತವೆ. ನೌಕಾಯಾನ ಮತ್ತು ಆಕರ್ಷಕ ಬೀಚ್‌ಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತವೆ.




**ಭಾರತದ ದ್ವೀಪಗಳು :** ಭಾರತದಲ್ಲಿ 247 ದ್ವೀಪಗಳಿವೆ. ಅವುಗಳಲ್ಲಿ 204 ಬಂಗಾಳಕೊಲ್ಲಿಯಲ್ಲಿ ಮತ್ತು 43 ಅರಬ್ಬಿ ಸಮುದ್ರಗಳಲ್ಲಿವೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿದೆ. ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು, ಅವು ಹವಳ ದ್ವೀಪಗಳಾಗಿವೆ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿರಿ.**

1. ಮಹಾ ಹಿಮಾಲಯ ಸರಣಿಗಳನ್ನು ________ ಎಂತಲೂ ಕರೆಯಲಾಗುತ್ತದೆ.
2. ಒಳ ಹಿಮಾಲಯಗಳನ್ನು ________ ಎಂತಲೂ ಕರೆಯುತ್ತಾರೆ.
3. ದಕ್ಷಿಣ ಭಾರತದಲ್ಲಿ ________ ಯು ಅತಿ ಎತ್ತರವಾದ ಶಿಖರ.
4. ಪೂರ್ವಘಟ್ಟಗಳು ಪಶ್ಚಿಮ ಘಟ್ಟಗಳನ್ನು ________ ಬೆಟ್ಟಗಳಲ್ಲಿ ಸಂಧಿಸುತ್ತವೆ.
5. ಉತ್ತರ ಮಹಾ ಮೈದಾನವು ________ ಮಣ್ಣಿನಿಂದ ಆವರಿಸಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?
2. ಉತ್ತರದ ಮೈದಾನಗಳು ಹೇಗೆ ರಚನೆಯಾಗಿವೆ?
3. ಸಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.
4. ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.
5. ಉತ್ತರ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.

**III. ಚಟುವಟಿಕೆಗಳು :**

1. ಭಾರತದ ರೇಖಾ ನಕ್ಷೆಯನ್ನು ರಚಿಸಿ, ಅದರಲ್ಲಿ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ಗುರುತಿಸಿ.
2. ಭಾರತದ ರೇಖಾ ನಕ್ಷೆಯನ್ನು ಬರೆದು, ಅದರಲ್ಲಿ ಪ್ರಮುಖ ಗಿರಿಧಾಮಗಳನ್ನು ಗುರುತಿಸಿ.

**IV. ಯೋಜನಾ ಕಾರ್ಯಗಳು :**

1. ಭಾರತದ ನಕ್ಷೆಯಲ್ಲಿ ಭಾರತದ ಕರಾವಳಿ ಹೊಂದಿರುವ ರಾಜ್ಯಗಳನ್ನು ಗುರುತಿಸಿ ಮತ್ತು ಹೆಸರಿಸಿ.
2. ಪ್ರಸಿದ್ಧ ಬೀಚ್‌ಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಿ.

* * * *

© KTBS
Not to be published

## ಅಧ್ಯಾಯ-3

# ಭಾರತದ ವಾಯುಗುಣ

Q3X1U5

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದ ವಾಯುಗುಣದ ವಿಧ ಮತ್ತು ಅದನ್ನು ನಿಯಂತ್ರಿಸುವ ಅಂಶಗಳು.
- ವಾಯುಗುಣದ ಋತುಗಳು ಮತ್ತು ಅವುಗಳ ಗುಣ ಲಕ್ಷಣಗಳು.
- ಭಾರತದಲ್ಲಿ ಮಳೆಯ ಹಂಚಿಕೆ.

### ವಾಯುಗುಣದ ವಿಧ

ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆಂದರೆ ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ.

> ***ನಿಮಗೆ ತಿಳಿದಿರಲಿ!***
> 'ಮಾನ್ಸೂನ್' ಶಬ್ದವು 'ಮೌಸಿಮ್' *(Mousim)* ಎಂಬ ಅರೇಬಿಕ್ ಶಬ್ಧದಿಂದ ಬಂದದ್ದು, ಮೌಸಿಮ್ ಎಂದರೆ 'ಋತುಕಾಲಗಳು' ಎಂದರ್ಥ

ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳೆಂದರೆ, ಸ್ಥಾನ, ಜಲರಾಶಿಗಳು, ಮೇಲ್ಮೈ ಲಕ್ಷಣ ಮತ್ತು ಮಾನ್ಸೂನ್ ಮಾರುತಗಳು. ಹೀಗಾಗಿ ದೇಶದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.

© KTBS
Not to be published

### ವಾಯುಗುಣದ ಋತುಕಾಲಗಳು

ಭಾರತದಲ್ಲಿ ಒಂದು ವರ್ಷದ ವಾಯುಗುಣವನ್ನು 4 ಋತುಕಾಲಗಳಾಗಿ ವಿಂಗಡಿಸಬಹುದು.

1. ಚಳಿಗಾಲ (ಡಿಸೆಂಬರ್-ಫೆಬ್ರುವರಿ)
2. ಬೇಸಿಗೆ ಕಾಲ (ಮಾರ್ಚ್-ಮೇ)
3. ಮಳೆಗಾಲ (ಜೂನ್-ಸೆಪ್ಟೆಂಬರ್)
4. ಮಾನ್‌ಸೂನ್ ಮಾರುತಗಳ ನಿರ್ಗಮನ ಕಾಲ (ಸೆಪ್ಟೆಂಬರ್ ಮಧ್ಯ-ನವೆಂಬರ್)

**1. ಚಳಿಗಾಲ :** ಈ ಋತುಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ. ಭಾರತದಲ್ಲಿ ಓರೆ ಕಿರಣಗಳಿರುತ್ತವೆ. ಹೀಗಾಗಿ ಭಾರತದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡ ರಹಿತವಾಗಿರುತ್ತದೆ. ದೇಶದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿಯಿರುತ್ತದೆ. ಜನವರಿ ಅತಿ ಶೀತವಾದ ಮಾಹೆಯಾಗಿರುತ್ತದೆ. ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಪರ್ವತಗಳಲ್ಲಿ ಅತಿ ಕಡಿಮೆ ಉಷ್ಣಾಂಶವು ದಾಖಲಾಗಿರುತ್ತದೆ. ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ಎಂಬಲ್ಲಿ ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶವು ($-60^0$ ಸೆ) ದಾಖಲಾಗುತ್ತದೆ. ಇಬ್ಬನಿ ಮತ್ತು ಕಾವಳಗಳು ಸರ್ವೆಸಾಮಾನ್ಯ. ಪರ್ವತ ಭಾಗಗಳಲ್ಲಿ ಹೆಚ್ಚು ಹಿಮವೃಷ್ಟಿಯಾಗುತ್ತದೆ. ಈ ಅವಧಿಯಲ್ಲಿ ಭಾರತವು ತನ್ನ ವಾರ್ಷಿಕ ಮಳೆಯಲ್ಲಿ ಶೇ.2 ಭಾಗವನ್ನು ಮಾತ್ರ ಪಡೆಯುತ್ತದೆ.

**2. ಬೇಸಿಗೆ ಕಾಲ :** ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದು. ಹೀಗಾಗಿ ಭಾರತದಲ್ಲಿ ಉಷ್ಣಾಂಶವು ಹೆಚ್ಚು. ಹವಾಗುಣವು ಅತಿಶಾಖ, ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ. ರಾಜಸ್ತಾನದ ಗಂಗಾನಗರದಲ್ಲಿ ಅತಿ ಹೆಚ್ಚು ಉಷ್ಣಾಂಶವು ದಾಖಲಾಗುತ್ತದೆ (49.4$^{0}$ಸೆ.). ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ. ಅದನ್ನು ಬೇರೆ ಬೇರೆ ಸ್ಥಳೀಯ ಹೆಸರುಗಳಿಂದ ಕರೆಯಲಾಗಿದೆ. ಉದಾ: ಉತ್ತರ ಪ್ರದೇಶದಲ್ಲಿ 'ಆಂಧಿಸ್', ಪಶ್ಚಿಮ ಬಂಗಾಳದಲ್ಲಿ 'ಕಾಲಬೈಸಾಕಿ; ಇದು ಮಾವಿನ ಬೆಳೆಗೆ ನೆರವಾಗುವುದರಿಂದ ಕೇರಳದಲ್ಲಿ 'ಮಾವಿನ ಹೂಯ್ಲು' ಮತ್ತು ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ 'ಕಾಫಿಯ ಹೂಮಳೆ' ಎಂದು ಕರೆಯಲಾಗಿದೆ. ಭಾರತದ ವಾರ್ಷಿಕ ಮಳೆ ಹಂಚಿಕೆಯಲ್ಲಿ ಶೇ. 10 ಭಾಗವು ಬೇಸಿಗೆಯಲ್ಲಿ ಬೀಳುವುದು.

**3. ಮಳೆಗಾಲ :** ಇದನ್ನು 'ನೈಋತ್ಯ ಮಾನ್ಸೂನ್ ಮಾರುತಗಳ ಕಾಲ' ಎಂತಲೂ ಕರೆಯಲಾಗಿದೆ. ಬೇಸಿಗೆಯ ಅಂತ್ಯಾವಧಿಯಿಂದ ಉಷ್ಣಾಂಶವು ಹೆಚ್ಚಾಗುವುದರಿಂದ ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುತ್ತದೆ. ಇದಕ್ಕೆ ಪ್ರತಿಯಾಗಿ ಹಿಂದೂಸಾಗರದಲ್ಲಿ ಅಧಿಕ ಒತ್ತಡವಿರುತ್ತದೆ. ಆದ್ದರಿಂದ ತೇವಾಂಶಭರಿತ ಮಾರುತಗಳು ನೈಋತ್ಯದಿಂದ ಭಾರತದೆಡೆಗೆ ಬೀಸುತ್ತವೆ. ಇವು ದೇಶದ ವಿವಿಧ ಭಾಗಗಳಿಗೆ ಮಳೆಯನ್ನು ತರುತ್ತವೆ. ದೇಶದ ವಾರ್ಷಿಕ ಮಳೆಯ ಹಂಚಿಕೆಯಲ್ಲಿ ಶೇ. 75 ಭಾಗವು ಈ ಋತುವಿನಲ್ಲಿ ಹಂಚಿಕೆಯಾಗುವುದು.

ನೈಋತ್ಯ ಮಾನ್ಸೂನ್ ಮಾರುತಗಳನ್ನು ಅರಬ್ಬಿಸಮುದ್ರದ ಶಾಖೆ ಮತ್ತು ಬಂಗಾಳಕೊಲ್ಲಿಯ ಶಾಖೆಗಳೆಂದು ವಿಂಗಡಿಸಬಹುದು. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಗೆ ಎದುರಾಗಿ ಬೀಸುತ್ತವೆ ಮತ್ತು ಅವು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತವೆ. ಮಳೆಯ ಪ್ರಮಾಣವು ಪಶ್ಚಿಮ ಘಟ್ಟಗಳ ಪೂರ್ವಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ. ಹೀಗಾಗಿ ಆ ಭಾಗವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ.

ಬಂಗಾಳಕೊಲ್ಲಿಯ ಶಾಖೆಯು ಮೇಘಾಲಯ ಮತ್ತು ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಡುವುದರಿಂದ ಅಧಿಕ ಮಳೆ ಬೀಳುವುದು. ಮೇಘಾಲಯದ 'ಮಾಸಿನ್‌ರಾಮ್' ನಲ್ಲಿ ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುತ್ತದೆ. ಪಶ್ಚಿಮದ ಕಡೆಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆಯಾಗುತ್ತದೆ.

**4. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ :** ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗುವುದರಿಂದ ಭೂ ಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ಕ್ರಮೇಣ ಕ್ಷೀಣಗೊಂಡು ಅಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುವುದು. ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುವುದು. ಪರಿಣಾಮವಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ. ಅವು ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುವವು. ಹೀಗಾಗಿ ಈ ಅವಧಿಯನ್ನು "ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ" ಎಂದು ಕರೆಯಲಾಗಿದೆ. ಹವಾಗುಣವು ಅಸ್ಥಿರವಾಗಿರುತ್ತದೆ. ಈ ಅವಧಿಯಲ್ಲಿ ದೇಶದ ಒಟ್ಟು ಮಳೆಯ ಹಂಚಿಕೆಯಲ್ಲಿ ಶೇ. 13 ಭಾಗವು ಬೀಳುವುದು. ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳ ಕರಾವಳಿ ಭಾಗಗಳಿಗೆ ಮಳೆಯಾಗುತ್ತದೆ.


ಈ ಋತುಕಾಲದಲ್ಲಿ ಆಗಾಗ್ಗೆ ಉಷ್ಣವಲಯದ ಆವರ್ತಮಾರುತಗಳು (ಸೈಕ್ಲೋನ್) ಬಂಗಾಳಕೊಲ್ಲಿಯಲ್ಲಿ ಸಂಭವಿಸುತ್ತವೆ. ಇದರಿಂದ ಕೆಲವೊಮ್ಮೆ ದೇಶದ ಪೂರ್ವ ತೀರದಲ್ಲಿ ಹಾನಿ ಸಂಭವಿಸುತ್ತದೆ.

© KTBS Not to be published

## ಮಳೆಯ ಹಂಚಿಕೆ

ಮಳೆಯ ಪ್ರಮಾಣವನ್ನಾಧರಿಸಿ ಭಾರತವನ್ನು 3 ಪ್ರಮುಖ ಭಾಗಗಳಾಗಿ ವಿಂಗಡಿಸಬಹುದು.

**i) ಕಡಿಮೆ ಮಳೆ ಬೀಳುವ ಪ್ರದೇಶ:** ಇದು ವರ್ಷದಲ್ಲಿ 50 ಸೆಂ.ಮೀ.ಗಳಿಗಿಂತ ಕಡಿಮೆ ಮಳೆ ಬೀಳುವ ಭಾಗಗಳನ್ನೊಳಗೊಂಡಿದೆ. ಇದರಲ್ಲಿ ಕಛ್‌ನ ಪಶ್ಚಿಮ ಭಾಗ, ರಾಜಸ್ತಾನದ ಥಾರ್ ಮರುಭೂಮಿ ಹಾಗೂ ಅದರ ಸುತ್ತಮುತ್ತಲಿನ ಭಾಗಗಳಾದ ಪಶ್ಚಿಮದ ಪಂಜಾಬ್, ಹರಿಯಾಣ ಮತ್ತು ಗುಜರಾತ್, ಉತ್ತರ ಜಾಸ್ಕರ್ ಶ್ರೇಣಿ ಮತ್ತು ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು ಸೇರಿವೆ. ರಾಜಸ್ತಾನದ ಜೈಸಲ್ಮಾರ್‌ನಲ್ಲಿರುವ 'ರೂಯ್ಲಿ' ಅತಿ ಕಡಿಮೆ ಮಳೆ ಪಡೆಯುವ (8.3 ಸೆಂ.ಮೀ.) ಹಾಗೂ ಭಾರತದ ಅತ್ಯಂತ ಶುಷ್ಕ ಪ್ರದೇಶವಾಗಿದೆ.



© KTBS Not to be published

**ii) ಸಾಧಾರಣ ಮಳೆ ಬೀಳುವ ಪ್ರದೇಶ** (50–100 ಸೆಂ.ಮೀ.): ಇದೊಂದು ದೀರ್ಘವಲಯವಾಗಿದ್ದು, ಉತ್ತರ ಪಂಜಾಬಿನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. ಇದು ಉತ್ತರದಲ್ಲಿ ಅಗಲವಾಗಿದೆ. ದಕ್ಷಿಣದ ಕಡೆಗೆ ಹೋದಂತೆ ಪಶ್ಚಿಮ ಘಟ್ಟಗಳು ಮತ್ತು ಪೂರ್ವಘಟ್ಟಗಳ ನಡುವೆ ಕಿರಿದಾಗುತ್ತದೆ.

**iii) ಅಧಿಕ ಮಳೆಯಾಗುವ ಪ್ರದೇಶ** (100–250 ಸೆಂ.ಮೀ.): ಇದು 4 ಪ್ರತ್ಯೇಕ ವಲಯಗಳಲ್ಲಿ ಹಂಚಿಕೆಯಾಗಿದೆ: ಎ) ಪಶ್ಚಿಮ ಘಟ್ಟಗಳ ಕಿರಿದಾದ ವಲಯ. ಬಿ) ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಉತ್ತರಭಾಗ, ಬಿಹಾರ ಮತ್ತು ಪಶ್ಚಿಮಬಂಗಾಳ. ಸಿ) ಈಶಾನ್ಯ ಭಾರತ. ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಮಾಸಿನ್‌ರಾಮ್ ಈ ಭಾಗದಲ್ಲಿದೆ. ಹಾಗೂ ಡಿ) ಪಶ್ಚಿಮ ಸಮುದ್ರ ತೀರ ಪ್ರದೇಶ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಭಾರತದಲ್ಲಿ __________ ವಿಧದ ವಾಯುಗುಣ ವಿದೆ.
2. ಭಾರತದ __________ ಸ್ಥಳದಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ.
3. ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶವು __________ ನಲ್ಲಿ ದಾಖಲಾಗುತ್ತದೆ.
4. ಭಾರತದ __________ ತಿಂಗಳು ಅತ್ಯಂತ ಶೀತವಾದುದು.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
2. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು?
3. ನೈಋುತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯೆಗಳನ್ನು ವಿವರಿಸಿ.
4. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿ.
5. ಭಾರತದ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.

**III. ಚಟುವಟಿಕೆ :**

1. ಭಾರತದ ರೇಖಾ ನಕ್ಷೆಯನ್ನು ರಚಿಸಿ, ಅದರಲ್ಲಿ ಮಳೆಯ ಹಂಚಿಕೆಯನ್ನು ಗುರುತಿಸಿ.

**IV. ಯೋಜನಾಕಾರ್ಯ :**

1. ಭಾರತದ ಎರಡು ಪ್ರತ್ಯೇಕ ರೇಖಾ ನಕ್ಷೆಗಳಲ್ಲಿ ನೈಋುತ್ಯ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳನ್ನು ಗುರುತಿಸಿ.

* * * *

© KTBS Not to be published

## ಅಧ್ಯಾಯ-4

# ಭಾರತದ ಮಣ್ಣುಗಳು

J1Y8T5

**ಈ ಅಧ್ಯಾಯದಲ್ಲಿ ಕೆಳಕಂಡ ವಿಷಯಗಳನ್ನು ತಿಳಿಯುತ್ತೇವೆ.**

- ಮಣ್ಣಿನ ಅರ್ಥ ಮತ್ತು ಭಾರತದಲ್ಲಿ ಮಣ್ಣಿನ ಪ್ರಾಮುಖ್ಯತೆ.
- ಮಣ್ಣಿನ ವಿಧಗಳು ಮತ್ತು ಅವುಗಳ ಹಂಚಿಕೆ.
- ಮಣ್ಣಿನ ಸವೆತ, ಕಾರಣ ಮತ್ತು ಪರಿಣಾಮಗಳು ಹಾಗೂ ಮಣ್ಣಿನ ಸಂರಕ್ಷಣೆ.

### ಅರ್ಥ ಮತ್ತು ಪ್ರಾಮುಖ್ಯತೆ

ಖನಿಜ ಮತ್ತು ಜೈವಿಕಾಂಶಗಳ ಸಂಯೋಜನೆಯುಳ್ಳ ಭೂಮೇಲ್ಭಾಗದ ತೆಳು ಪದರವೇ ಮಣ್ಣು. ಕೃಷಿಯು ಭಾರತೀಯರ ಪ್ರಮುಖ ವೃತ್ತಿಯಾಗಿದ್ದು ಮಣ್ಣು ದೇಶದ ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದೆ. ಕೃಷಿ ಉತ್ಪಾದನೆಯು ಮೂಲತಃ ಮಣ್ಣಿನ ಫಲವತ್ತತೆಯನ್ನಾಧರಿಸಿದೆ.

ಭಾರತದ ವಿವಿಧ ಪ್ರಕಾರದ ಮಣ್ಣಿನ ಉತ್ಪತ್ತಿಯು ಮೂಲ ಶಿಲೆಗಳು, ಮೇಲ್ಮೈಲಕ್ಷಣ, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳಿಗೆ ಸಂಬಂಧಿಸಿದೆ. ಹೀಗಾಗಿ ಭಾರತದ ಮಣ್ಣಿನಲ್ಲಿ ವೈವಿಧ್ಯವಿದೆ.

**ಮಣ್ಣಿನ ವಿಧಗಳು :** ಭಾರತದ ಮಣ್ಣುಗಳನ್ನು ಪ್ರಮುಖವಾಗಿ 6 ವಿಧಗಳಾಗಿ ವಿಂಗಡಿಸಬಹುದು :

1) ಮೆಕ್ಕಲು ಮಣ್ಣು. 2) ಕಪ್ಪು ಮಣ್ಣು.
3) ಕೆಂಪು ಮಣ್ಣು. 4) ಲ್ಯಾಟರೈಟ್ ಮಣ್ಣು.
5) ಮರುಭೂಮಿ ಮಣ್ಣು. 6) ಪರ್ವತ ಮಣ್ಣು.

© KTBS Not to be published


**1. ಮೆಕ್ಕಲು ಮಣ್ಣು :** ಪ್ರಧಾನವಾಗಿ ಮೆಕ್ಕಲನ್ನೊಳಗೊಂಡ ಮಣ್ಣನ್ನು 'ಮೆಕ್ಕಲು ಮಣ್ಣು' ಎನ್ನುವರು. ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತ್ತದೆ. ಉದಾಃ ಸಿಂಧೂ-ಗಂಗಾ ನದಿ ಬಯಲು. ಸಮುದ್ರ ಅಲೆಗಳ ಸಂಚಯನದಿಂದ ತೀರ ಪ್ರದೇಶದಲ್ಲಿಯೂ ನಿರ್ಮಾಣವಾಗುತ್ತದೆ. ಭಾರತದಲ್ಲಿ ಮೆಕ್ಕಲು ಮಣ್ಣು ವಿಸ್ತಾರವಾಗಿ ಹಂಚಿಕೆಯಾಗಿದ್ದು, ಅಷ್ಟೇ ಪ್ರಾಮುಖ್ಯತೆಯನ್ನೂ ಹೊಂದಿದೆ. ಅದು ದೇಶದ ಕೃಷಿ ಪ್ರಗತಿಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಸುಮಾರು 15 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ-ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು.

ಭಾರತದಲ್ಲಿ ಮೆಕ್ಕಲು ಮಣ್ಣು ಹೆಚ್ಚಾಗಿ ನದಿ ಬಯಲುಗಳಲ್ಲಿ ಹಂಚಿಕೆಯಾಗಿದೆ. ಉದಾ: ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ ಹಾಗೂ ನರ್ಮದ, ತಾಪಿ, ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಗಳ ಬಯಲು.

**2. ಕಪ್ಪುಮಣ್ಣು :** ಇದನ್ನು 'ರೇಗೂರ್' ಮಣ್ಣು ಎಂತಲೂ ಹಾಗೂ ಹತ್ತಿ ಬೇಸಾಯಕ್ಕೆ ಸೂಕ್ತವಾಗಿರುವುದರಿಂದ **'ಕಪ್ಪು ಹತ್ತಿ ಮಣ್ಣು'** ಎಂತಲೂ ಕರೆಯಲಾಗಿದೆ. ಇದು ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿಯಾದುದು. ಆದ್ದರಿಂದ ಇದು ಕಡು ಬೂದು ಮತ್ತು ಕಪ್ಪು ಬಣ್ಣವುಳ್ಳದ್ದು, ಇದರಲ್ಲಿ ಜೇಡಿ ಮಿಶ್ರಣ ಹೆಚ್ಚು. ಒತ್ತೊತ್ತಾದ ಕಣಗಳಿಂದ ರಚನೆಯಾಗಿದ್ದು ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಹತ್ತಿ, ಕಬ್ಬು, ಜೋಳ, ಮೆಕ್ಕೆಜೋಳ, ದ್ವಿದಳಧಾನ್ಯ, ಗೋಧಿ ಮತ್ತು ಮೆಣಸಿನಕಾಯಿ ಬೆಳೆಗಳ ಸಾಗುವಳಿಗೆ ಸೂಕ್ತ.

ಭಾರತದಲ್ಲಿ ಕಪ್ಪು ಮಣ್ಣು ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ

ಹಂಚಿಕೆಯಾಗಿದೆ. ಈ ವಲಯಕ್ಕೆ ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣದ ಕೆಲಭಾಗಗಳು, ಉತ್ತರ ಕರ್ನಾಟಕ, ಗುಜರಾತ್ ಮತ್ತು ತಮಿಳುನಾಡಿನ ಕೆಲಭಾಗಗಳು ಸೇರುತ್ತವೆ. ಸುಮಾರು 5.46 ಲಕ್ಷ ಚ.ಕಿ.ಮೀ ವಿಸ್ತೀರ್ಣದಲ್ಲಿ ಕಪ್ಪು ಮಣ್ಣು ಹಂಚಿಕೆಯಾಗಿದೆ.




© KTBS
Not to be published

**3. ಕೆಂಪು ಮಣ್ಣು :** ಇದು ಗ್ರ್ಯಾನೈಟ್, ನೀಸ್ ಮತ್ತು ಇತರೆ ಸ್ಫಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾದುದು. ಸಾಮಾನ್ಯವಾಗಿ ಕೆಂಪು ಮತ್ತು ಕೆಂಪುಕಂದು ಬಣ್ಣವುಳ್ಳದ್ದು. ಇದರಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ. ಹೀಗಾಗಿ ಇದಕ್ಕೆ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ. ಈ ವಿಧದ ಮಣ್ಣು ಸುಮಾರು 5.2 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ. ತಮಿಳುನಾಡಿನಲ್ಲಿ ಕೆಂಪುಮಣ್ಣು ವಿಶಾಲವಾದ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಜೊತೆಗೆ ಅದು ದಕ್ಷಿಣ ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಒಡಿಶಾ, ಕೇರಳ, ಗೋವ, ಬಿಹಾರ, ಉತ್ತರಪ್ರದೇಶ, ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಕೆಲವು ಭಾಗಗಳಲ್ಲಿಯೂ ಕಂಡುಬರುತ್ತದೆ.

ಕೆಂಪುಮಣ್ಣು ರಾಗಿ, ತೃಣಧಾನ್ಯ, ಶೇಂಗ, ತಂಬಾಕು ಮತ್ತು ಆಲೂಗೆಡ್ಡೆಗಳ ಬೇಸಾಯಕ್ಕೆ ಸೂಕ್ತವಾದುದು. ಆದರೆ ನೀರಾವರಿ ಸೌಲಭ್ಯದಿಂದ ಈ ಮಣ್ಣಿನಲ್ಲಿ ವಿವಿಧ ಬೆಳೆಗಳನ್ನು ಬೆಳೆಯಬಹುದು.

**4 ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ) :** ಈ ವಿಧದ ಮಣ್ಣು ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಉತ್ಪತ್ತಿಯಾಗುತ್ತದೆ. ಅದು ಹೆಚ್ಚಾಗಿ ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು, ಛೋಟನಾಗಪುರ ಪ್ರಸ್ಥಭೂಮಿ, ಮೇಘಾಲಯ ಪ್ರಸ್ಥಭೂಮಿ, ರಾಜಮಹಲ್ ಬೆಟ್ಟಗಳು, ವಿಂಧ್ಯಾ ಮತ್ತು ಸಾತ್ಪುರ ಸರಣಿಗಳಲ್ಲಿ ಹಂಚಿಕೆಯಾಗಿದೆ. ಸುಮಾರು 2.48 ಲಕ್ಷ ಚ.ಕಿ.ಮೀ. ಪ್ರದೇಶವನ್ನಾವರಿಸಿದೆ.

ಇದು ಜಲವಿಲೀನೀಕರಣಕ್ಕೊಳಪಡುವುದರಿಂದ ಫಲವತ್ತಾದುದಲ್ಲ. ಕೃಷಿಗೆ ಅಷ್ಟೊಂದು ಉಪಯುಕ್ತವಲ್ಲ. ಈ ಮಣ್ಣಿನಲ್ಲಿ ಗೋಡಂಬಿ, ರಬ್ಬರ್, ಚಹ, ಕಾಫಿ ಮತ್ತು ಭತ್ತಗಳನ್ನು ಬೆಳೆಯಬಹುದು.

**5. ಮರುಭೂಮಿ ಮಣ್ಣು :** ಮರುಭೂಮಿ ಮತ್ತು ಅರೆಮರುಭೂಮಿಯ ಪರಿಸ್ಥಿತಿಯುಳ್ಳ ಭಾಗಗಳಲ್ಲಿ ಈ ವಿಧದ ಮಣ್ಣು ಉತ್ಪತ್ತಿಯಾಗಿರುತ್ತದೆ. ಭಾರತದಲ್ಲಿ ಅದು ಹೆಚ್ಚಾಗಿ ವಾಯವ್ಯ ಭಾಗದಲ್ಲಿ ಕಂಡುಬರುತ್ತದೆ. ಉದಾ: ರಾಜಸ್ತಾನದ ಬಹುಭಾಗ, ದಕ್ಷಿಣ ಹರಿಯಾಣ, ಪಂಜಾಬ್ ಮತ್ತು ಗುಜರಾತಿನ ಉತ್ತರ ಭಾಗಗಳು. ಈ ವಿಧದ ಮಣ್ಣು ಸುಲಭವಾಗಿ ಪುಡಿಯಾಗುವ ಗುಣವುಳ್ಳದ್ದು ಮತ್ತು ಇದರಲ್ಲಿ ಉಪ್ಪಿನ ಅಂಶವು ಹೆಚ್ಚಿರುತ್ತದೆ. ಇದರಲ್ಲಿ ಮರಳಿನ ಪ್ರಮಾಣ ಹೆಚ್ಚು, ತೇವಾಂಶ ಮತ್ತು ಸಸ್ಯಾಂಶಗಳು ಕಡಿಮೆ. ವಿವಿಧ ಬೆಳೆ ಬೆಳೆಯಲು ಉಪಯುಕ್ತವಲ್ಲ. ನೀರಾವರಿ ಸೌಲಭ್ಯವಿರುವಲ್ಲಿ ಕೆಲವು ಬೆಳೆಗಳನ್ನು ಬೆಳೆಯಬಹುದು. ಸುಮಾರು 1.42 ಲಕ್ಷ ಚ.ಕಿ.ಮೀ. ಗಳಲ್ಲಿ ಇಂತಹ ಮಣ್ಣು ಹಂಚಿಕೆಯಾಗಿದೆ.

**6. ಪರ್ವತ ಮಣ್ಣು :** ಈ ಪ್ರಕಾರದ ಮಣ್ಣು ಅರಣ್ಯಗಳಿಂದಾವರಿಸಿದ ಪರ್ವತ ಮತ್ತು ಬೆಟ್ಟಗಳ ಇಳಿಜಾರುಗಳಲ್ಲಿ ಕಂಡುಬರುತ್ತದೆ. ಜೈವಿಕ ವಸ್ತುಗಳು ಕೊಳೆಯುವುದರಿಂದ ಇಂತಹ ಮಣ್ಣು ನಿರ್ಮಾಣವಾಗುವುದು. ಹೀಗಾಗಿ ಈ ಮಣ್ಣಿನಲ್ಲಿ ಸಸ್ಯಾಂಶ ಅಧಿಕವಾಗಿದ್ದು ಫಲವತ್ತಾಗಿರುತ್ತದೆ. ನೆಡುತೋಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು. ಉದಾ: ಚಹ, ಕಾಫಿ ಮತ್ತು ಹಣ್ಣುಬೆಳೆಗಳು. ಜಮ್ಮು ಮತ್ತು ಕಾಶ್ಮೀರ, ಹಿಮಾಚಲಪ್ರದೇಶ, ಮಣಿಪುರ ಹಾಗೂ ಪಶ್ಚಿಮ ಘಟ್ಟಗಳಲ್ಲಿ ಪರ್ವತ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಇದು ಸುಮಾರು 2.85 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ.

© KTBS Not to be republished

### ಮಣ್ಣಿನ ಸವೆತ

ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿಹೋಗುವುದನ್ನು ಮಣ್ಣಿನ ಸವೆತವೆನ್ನುವರು. ನದಿ, ಹಿಮನದಿ, ಮಾರುತ, ಸಮುದ್ರ ಅಲೆಗಳು ಮೊದಲಾದವು ಫಲವತ್ತಾದ ಮಣ್ಣಿನ ಮೇಲ್ಪದರವನ್ನು ಸವೆಸುತ್ತವೆ ಮತ್ತು ಫಲವತ್ತತೆಯನ್ನು ಕುಗ್ಗಿಸುತ್ತವೆ. ಭಾರತದಲ್ಲಿ ಮಣ್ಣಿನ ಸವೆತವು ಒಂದು ಪ್ರಮುಖ ಸಮಸ್ಯೆಯಾಗಿದೆ.

**ಮಣ್ಣಿನ ಸವೆತಕ್ಕೆ ಕಾರಣಗಳು :** ಮಣ್ಣಿನ ಸವೆತಕ್ಕೆ ಪ್ರಮುಖವಾದ ಕಾರಣಗಳೆಂದರೆ –

ಎ) ಅರಣ್ಯನಾಶ.
ಬಿ) ಅತಿಯಾಗಿ ಮೇಯಿಸುವುದು.
ಸಿ) ವರ್ಗಾವಣೆ ಬೇಸಾಯ ಪದ್ದತಿ.
ಡಿ) ಅವೈಜ್ಞಾನಿಕ ಬೇಸಾಯ ಪದ್ಧತಿ.
ಇ) ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

**ಮಣ್ಣಿನ ಸವೆತದ ಪರಿಣಾಮಗಳು :** ಮಣ್ಣಿನ ಸವೆತದಿಂದಾಗುವ ಪ್ರಮುಖವಾದ ಪರಿಣಾಮಗಳೆಂದರೆ;

1. ಮಣ್ಣಿನ ಸಾರವು ಕಡಿಮೆಯಾಗಿ, ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ.
2. ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು, ಪ್ರವಾಹ ಉಂಟಾಗುವುದು ಮತ್ತು ನದಿ ಪಾತ್ರದ ಬದಲಾವಣೆ ಹಾಗೂ ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
3. ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುವುದು.
4. ಸಸ್ಯವರ್ಗವು ಒಣಗುತ್ತದೆ ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ.
5. ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ.

**ಮಣ್ಣಿನ ಸಂರಕ್ಷಣೆ :** ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದನ್ನು 'ಮಣ್ಣಿನ ಸಂರಕ್ಷಣೆ' ಎನ್ನುವರು. ಮಣ್ಣಿನ ಸಂರಕ್ಷಣೆಗಾಗಿ ಅನೇಕ ವಿಧಾನಗಳನ್ನು ಅಳವಡಿಸಲಾಗಿದೆ. ಅವುಗಳೆಂದರೆ –

1. ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ.

2. ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
3. ಸಮೋನ್ನತಿ ಬೇಸಾಯ.
4. ಚೆಕ್ ಡ್ಯಾಮ್‌ಗಳ ನಿರ್ಮಾಣ.
5. ಬದುಗಳ ನಿರ್ಮಾಣ ಹಾಗೂ
6. ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ.

ಭಾರತದಲ್ಲಿ ಮಣ್ಣಿನ ಸಂರಕ್ಷಣೆಯೊಂದು ತುರ್ತು ಕಾರ್ಯಕ್ರಮವಾಗಿದೆ. ಇದಕ್ಕಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಆದ್ಯ ಗಮನವನ್ನು ಕೊಡಲಾಗಿದೆ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿರಿ.**

1. ನದಿಗಳ ಸಂಚಯನದಿಂದ ನಿರ್ಮಾಣಗೊಂಡ ಮಣ್ಣಿಗೆ ________ ಎನ್ನುವರು.
2. ಕಪ್ಪು ಮಣ್ಣನ್ನು ________ ಮತ್ತು ________ ಎಂತಲೂ ಕರೆಯಲಾಗಿದೆ.
3. ಅತ್ಯಧಿಕ ಉಷ್ಣಾಂಶ ಮತ್ತು ಮಳೆಯ ಪರಿಸ್ಥಿತಿಯುಳ್ಳ ಉಷ್ಣವಲಯದಲ್ಲಿ ಉತ್ಪತ್ತಿಯಾಗುವ ಮಣ್ಣು ________ ಆಗಿರುತ್ತದೆ.
4. ಪರ್ವತ ಮಣ್ಣು ________ ಬೆಳೆಗಳ ಬೇಸಾಯಕ್ಕೆ ಸೂಕ್ತವಾದುದು.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು?
2. ಭಾರತದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ಕುರಿತು ವಿವರಿಸಿ.
3. ಕೆಂಪು ಮಣ್ಣಿನ ಗುಣಲಕ್ಷಣಗಳಾವುವು?
4. ಮಣ್ಣಿನ ಸವೆತ ಮತ್ತು ಸಂರಕ್ಷಣೆ ಎಂದರೇನು?
5. ಮಣ್ಣಿನ ಸವೆತದ ಪ್ರಮುಖ ಪರಿಣಾಮಗಳು ಯಾವುವು?
6. ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.

**III. ಚಟುವಟಿಕೆ :**

1. ಭಾರತದ ನಕ್ಷೆಯಲ್ಲಿ ವಿವಿಧ ಮಣ್ಣುಗಳ ಹಂಚಿಕೆಯನ್ನು ತೋರಿಸುವುದು.

**IV. ಯೋಜನಾಕಾರ್ಯ :**

ನಿಮಗೆ ಸಮೀಪದಲ್ಲಿರುವ ಕೃಷಿ ಇಲಾಖೆಗೆ ಭೇಟಿ ನೀಡಿ. ನಿಮ್ಮ ಉಪಾಧ್ಯಾಯರ ಸಹಾಯ ಪಡೆದು ನಿಮ್ಮ ತಾಲ್ಲೂಕಿನ ವಿವಿಧ ಮಣ್ಣಿನ ವಿಧಗಳನ್ನು ಪಟ್ಟಿಮಾಡಿ.

* * * *

© KTBS Not to be published

## ಅಧ್ಯಾಯ-5

# ಭಾರತದ ಅರಣ್ಯ ಸಂಪತ್ತು

R2D8J7

**ಈ ಅಧ್ಯಾಯದಲ್ಲಿ ಈ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- ಅರಣ್ಯಗಳ ಅರ್ಥ ಮತ್ತು ಪ್ರಾಮುಖ್ಯತೆ.
- ಅರಣ್ಯಗಳ ವಿಧಗಳು ಮತ್ತು ಹಂಚಿಕೆ.
- ಅರಣ್ಯಗಳ ಸಂರಕ್ಷಣೆ.
- ವನ್ಯ ಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನಗಳು.
- ಭಾರತದ ಜೈವಿಕ ಸಂರಕ್ಷಣಾವಲಯಗಳು.

### ಅರಣ್ಯಗಳ ಅರ್ಥ ಮತ್ತು ಪ್ರಾಮುಖ್ಯತೆ

ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ' (ಕಾಡು) ಎಂದು ಕರೆಯಲಾಗಿದೆ. ಇದು ಸಾಮಾನ್ಯವಾಗಿ ಬೆಲೆ ಬಾಳುವ ವೃಕ್ಷ (ಮರ) ಪ್ರಧಾನ ಪ್ರದೇಶ. ಅರಣ್ಯಗಳು ನೈಸರ್ಗಿಕ ಅಥವಾ ಮಾನವ ಪೋಷಿತ ನೆಡು ತೋಪುಗಳಾಗಿರಬಹುದು.

© KTBS Not to be published

ಅರಣ್ಯಗಳು ಭಾರತದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿವೆ. ಅವು ಪ್ರತ್ಯಕ್ಷವಾಗಿ ಮರದ ವಸ್ತುಗಳನ್ನು ಪೂರೈಸುತ್ತವೆ. ಅವು ಸೌದೆ ಚೌಬೀನೆ ಮತ್ತು ಕೈಗಾರಿಕಾ ಕಚ್ಚಾಪದಾರ್ಥಗಳಾಗಿ ಬಳಕೆಯಾಗುವವು. ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ, ಹರಿಯುವ ನೀರಿನ ರಭಸವನ್ನು ಮಿತಗೊಳಿಸಿ, ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ. ಮರುಭೂಮೀಕರಣವನ್ನು ತಡೆಯುತ್ತವೆ, ಮಣ್ಣಿನ ಫಲವತ್ತತೆಯ ವೃದ್ಧಿಗೆ ನೆರವಾಗುತ್ತವೆ. ವಾಯುಗುಣವನ್ನು ಸಮತೋಲನ ಗೊಳಿಸಲು ಮತ್ತು ಪರಿಯಾವರಣ (ಎಕಾಲಾಜಿಕಲ್) ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ. ಅವು ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.


### ಅರಣ್ಯಗಳ ವಿಧಗಳು

ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳೆಂದರೆ; ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳು. ಇವುಗಳಲ್ಲಿ ವಾಯುಗುಣ ಅತಿ ಪ್ರಮುಖವಾದ ಅಂಶ. ವಿಶಾಲವಾದ ಭಾರತದಲ್ಲಿ ಅನೇಕ ವಿಧದ ಅರಣ್ಯಗಳಿವೆ. ಅವುಗಳನ್ನು 6 ಪ್ರಮುಖ ವಿಧಗಳಾಗಿ ವಿಂಗಡಿಸಬಹುದು.

1. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು.
2. ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
3. ಕುರುಚಲು ಸಸ್ಯ ಮತ್ತು ಹುಲ್ಲುಗಾವಲು.
4. ಮರುಭೂಮಿ ಸಸ್ಯವರ್ಗ.
5. ಪರ್ವತ ಕಾಡುಗಳು.
6. ಮ್ಯಾಂಗ್ರೋವ್ ಕಾಡುಗಳು.

**1. ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳು :** ಈ ವಿಧದ ಅರಣ್ಯಗಳು 250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ. ಅವು ಪ್ರಮುಖವಾಗಿ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಹಾಗೂ ಈಶಾನ್ಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ, ಮಣಿಪುರಗಳ

ಬೆಟ್ಟಗಳು ಮತ್ತು ಅಂಡಮಾನ್-ನಿಕೋಬರ್ ದ್ವೀಪಗಳಲ್ಲಿ ಹಂಚಿಕೆಯಾಗಿವೆ. ಈ ಕಾಡುಗಳು ದಟ್ಟವಾಗಿವೆ ಮತ್ತು ಇಲ್ಲಿ ಮರಗಳು ಎತ್ತರಕ್ಕೆ ಬೆಳೆಯುತ್ತವೆ. ಮರಗಿಡಗಳು ಯಾವುದೇ ಒಂದೇ ಅವಧಿಯಲ್ಲಿ ಎಲೆಗಳನ್ನು ಉದುರಿಸುವುದಿಲ್ಲ. ಹೀಗಾಗಿ ಅವು ಸದಾ ಹಸಿರಾಗಿರುತ್ತವೆ. ತೇಗ, ಬೀಟೆ, ಎಬೋನಿ, ಮಹಾಗನಿ, ಗುರ್ಜಾನ್ ಮತ್ತು ಚಂಪ ಇಲ್ಲಿ ಬೆಳೆಯುವ ಪ್ರಮುಖ ಮರಗಳು.




© KTBS Not to be published

**2. ಉಷ್ಣವಲಯದ ಎಲೆ ಉದುರಿಸುವ ಕಾಡುಗಳು :** ಇವುಗಳನ್ನು "ಪರ್ಣಪಾತಿ ಅರಣ್ಯ" ಎಂತಲೂ ಕರೆಯುವರು. ಇವು ವರ್ಷದಲ್ಲಿ 100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ. ದೇಶದ ವಿಶಾಲವಾದ ಪ್ರದೇಶದಲ್ಲಿ ಹಂಚಿಕೆಯಾಗಿವೆ. ಮುಖ್ಯವಾಗಿ ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರು ಭಾಗಗಳನ್ನೊಳಗೊಂಡ ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಹಾಗೂ ಛೋಟಾನಾಗಪುರ ಪ್ರಸ್ಥಭೂಮಿ, ಹಿಮಾಲಯದ ಪಾದ ಭಾಗಗಳು, ಒಡಿಶಾ ಮತ್ತು ಪಶ್ಚಿಮ ಬಂಗಾಳಗಳ ಕೆಲಭಾಗಗಳಲ್ಲಿ ಹಂಚಿಕೆಯಾಗಿವೆ.

ಈ ಅರಣ್ಯಗಳ ಮರಗಳು ವಸಂತಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು "ಮಾನ್ಸೂನ್ ಕಾಡುಗಳು" ಎಂತಲೂ ಕರೆಯಲಾಗಿದೆ. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ–ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮೊದಲಾದವು

**3. ಕುರುಚಲು ಸಸ್ಯ ಮತ್ತು ಹುಲ್ಲುಗಾವಲು :** ಇಂಥ ಸಸ್ಯವರ್ಗವು 60–100 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ. ಕುರುಚಲು ಗಿಡ ಮರ ಮತ್ತು ಕುಬ್ಜ ಒರಟಾದ ಹುಲ್ಲು, ಮುಳ್ಳಿನ ಮರ–ಗಿಡಗಳು ಅಲ್ಲಲ್ಲಿ ಚದುರಿದಂತೆ ಬೆಳೆಯುತ್ತವೆ. ಅವು ಕಛ್ ಮತ್ತು ಥಾರ್ ಮರುಭೂಮಿಯ ಅಂಚಿನ ಭಾಗಗಳಲ್ಲಿ ಕಂಡುಬರುತ್ತವೆ. ಹುಲ್ಲುಗಾವಲು ಪ್ರಮುಖವಾಗಿ ರಾಜಸ್ಥಾನದ ಪೂರ್ವಭಾಗ, ಪಂಜಾಬ್, ಪಶ್ಚಿಮ ಘಟ್ಟಗಳ ಕೆಲಭಾಗ ಮತ್ತು ಕಾರ್ಡಮಮ್ ಬೆಟ್ಟಗಳಲ್ಲಿ ಕಂಡುಬರುತ್ತದೆ.

**4. ಮರುಭೂಮಿ ಸಸ್ಯವರ್ಗ :** ಇದು 10–50 ಸೆಂ.ಮೀ. ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ. ಉದಾ: ಥಾರ್ ಮರುಭೂಮಿ. ಇದರಲ್ಲಿ ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲ ಭಾಗಗಳು ಮತ್ತು ದಖನ್ ಪ್ರಸ್ಥಭೂಮಿಗಳು ಸೇರುತ್ತವೆ. ಮಳೆಯ ಕೊರತೆಯಿಂದಾಗಿ ಈ ಭಾಗಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮರಗಳು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ. ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು ಇಲ್ಲಿ ಕಂಡುಬರುತ್ತವೆ.

**5. ಪರ್ವತ ಕಾಡುಗಳು :** ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯುವ ಸಸ್ಯ ಮತ್ತು ಮರಗಳನ್ನು 'ಪರ್ವತ ಕಾಡುಗಳು' ಎನ್ನುವರು. ಅವು ಭಾರತದಲ್ಲಿ ಹಿಮಾಲಯ ಪರ್ವತಗಳು ಹಾಗೂ ಸ್ವಲ್ಪಮಟ್ಟಿಗೆ ನೀಲಗಿರಿ ಬೆಟ್ಟಗಳಲ್ಲಿ ಕಂಡುಬರುತ್ತವೆ. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ; ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್.

**6. ಮ್ಯಾಂಗ್ರೋವ್ ಕಾಡುಗಳು :** ಇಂತಹ ಕಾಡುಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಹೆಚ್ಚು ಕಂಡುಬರುತ್ತವೆ. ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಚದುರಿದಂತೆ ಪಶ್ಚಿಮ ಕರಾವಳಿಯಲ್ಲಿ ಕಂಡು ಬರುವವು. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ; ಸುಂದರಿ, ಬೆತ್ತ, ಜರಿಗಿಡ, ತಾಳೆ, ಕೆಂದಾಳೆ, ಕೇದಿಗೆ ಮುಂತಾದವು. ವಿಶೇಷವೆಂದರೆ ಸಮುದ್ರದ ಕಡೆಗೆ ಬಾಗಿರುವ ಕೊಂಬೆಗಳಿಂದ ಬೆಳೆದಿರುವ ಬಿಳಿಲುಗಳು ಮರಗಳಿಗೆ ಆಧಾರವಾಗಿರುತ್ತವೆ. ಬಿಳಿಲುಗಳು ಸಮುದ್ರದ ನೀರಿನಲ್ಲಿ ಮುಳುಗಿರುತ್ತವೆ.

> ***ಇದು ನಿಮಗೆ ತಿಳಿದಿರಲಿ!***
>
> *ಗಂಗಾ ನದಿಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಕವಾಗಿ ಹಂಚಿಕೆಯಾಗಿದೆ. ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ.*

© KTBS Not to be published

### ಅರಣ್ಯಗಳ ಹಂಚಿಕೆ

ಭಾರತದ ಅರಣ್ಯದ ಒಟ್ಟು ವಿಸ್ತೀರ್ಣ 7.74 ಲಕ್ಷ ಚ.ಕಿ.ಮೀ. ಇದು ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 23.6 ಭಾಗದಷ್ಟಾಯಿತು. ಇದು 1952ರ ರಾಷ್ಟ್ರೀಯ ಅರಣ್ಯ ನೀತಿ ನಿರ್ಣಯದ ಮಿತಿ ಶೇ 33.3 ಗಿಂತಲೂ ಕಡಿಮೆಯಾದುದು. ಪ್ರಪಂಚದ ಸರಾಸರಿ (29.5%) ಗಿಂತಲೂ ಕಡಿಮೆ.

ಭಾರತದಾದ್ಯಂತ ಅರಣ್ಯಗಳು ಸಮನಾಗಿ ಹಂಚಿಕೆಯಾಗಿಲ್ಲ. ದೇಶದ ಒಟ್ಟು ಅರಣ್ಯದಲ್ಲಿ ಶೇ.60 ಭಾಗವು ಹಿಮಾಲಯ ಮತ್ತು ಪರ್ಯಾಯ ಪ್ರಸ್ಥಭೂಮಿಯ ಬೆಟ್ಟಗಳಲ್ಲಿಯೂ ಹಾಗೂ ಶೇ.20 ಭಾಗ ಉತ್ತರದ ಮೈದಾನಗಳಲ್ಲಿ ಕಂಡುಬರುತ್ತದೆ. ರಾಜ್ಯಗಳಲ್ಲಿ ಮಧ್ಯಪ್ರದೇಶವು ವಿಶಾಲವಾದ ಅರಣ್ಯ ಪ್ರದೇಶವನ್ನು ಹೊಂದಿದೆ. ಪ್ರತಿಯಾಗಿ ಗೋವಾದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವಿದೆ.

### ಅರಣ್ಯಗಳ ಸಂರಕ್ಷಣೆ

ಅರಣ್ಯಗಳು ಭಾರತದ ರಾಷ್ಟ್ರೀಯ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದುರ್ದೈವದ ಸಂಗತಿ ಎಂದರೆ ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಇದಕ್ಕೆ ಪ್ರಮುಖವಾದ

ಕಾರಣಗಳೆಂದರೆ; ಕೃಷಿ ಕ್ಷೇತ್ರದ ವಿಸ್ತರಣೆ, ರಸ್ತೆ ಮತ್ತು ರೈಲು ಮಾರ್ಗಗಳು ಹಾಗೂ ನೀರಾವರಿ ಯೋಜನೆಗಳ ನಿರ್ಮಾಣ, ಕೈಗಾರಿಕೀಕರಣ, ನಗರೀಕರಣ, ಅತಿಯಾಗಿ ಮೇಯಿಸುವಿಕೆ, ಕಾಡ್ಗಿಚ್ಚು ಮೊದಲಾದವು. ಮುಂದಿನ ಪೀಳಿಗೆಯ ದೃಷ್ಟಿಯಿಂದ ಅರಣ್ಯಗಳ ಸಂರಕ್ಷಣೆ ಅಗತ್ಯ. ಅರಣ್ಯನಾಶ, ಮಿತಿಮೀರಿದ ಅರಣ್ಯ ಸಂಪತ್ತಿನ ಸಮಗ್ರ ನಿಯಂತ್ರಣ ಹಾಗೂ ಅರಣ್ಯ ನಿರ್ವಹಣೆ ಪ್ರಕ್ರಿಯೆಗಳಿಗೆ 'ಅರಣ್ಯ ಸಂರಕ್ಷಣೆ' ಎನ್ನುವರು.

**ಭಾರತದಲ್ಲಿ ಅರಣ್ಯ ಸಂರಕ್ಷಣಾ ಕ್ರಮಗಳು**

1) ಅರಣ್ಯ ನಾಶ ನಿಯಂತ್ರಣ. 2) ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟುವುದು.
3) ಕಾಡ್ಗಿಚ್ಚು ನಿಯಂತ್ರಣ. 4) ಅರಣ್ಯ ಅತಿಕ್ರಮಣದ ತಡೆ.
5) ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ. 6) ಮರಗಳ ಕಳ್ಳಸಾಗಣೆ ತಡೆ.
7) ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.
8) ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು.
9) ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡುವುದು.
10) ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡುವುದು.

**ವನ್ಯ ಜೀವಿಧಾಮಗಳು**

ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮಗಳೆಂದು ಕರೆಯುವರು. ಸಂಬಂಧಪಟ್ಟ ಮೇಲಾಧಿಕಾರಿಗಳ ಆಜ್ಞೆಯನ್ನು ಹೊರತುಪಡಿಸಿ ಈ ಸ್ಥಳಗಳಲ್ಲಿ ಯಾವುದೇ ವಿಧದ ಪ್ರಾಣಿಗಳನ್ನು ಕೊಲ್ಲುವ ಮತ್ತು ಸೆರೆಹಿಡಿಯುವುದನ್ನು ನಿಷೇಧಿಸಲಾಗಿರುತ್ತದೆ. ಭಾರತದಲ್ಲಿ ಸುಮಾರು 523 ವನ್ಯ ಜೀವಿಧಾಮಗಳಿವೆ. ಪ್ರಮುಖ ವನ್ಯಜೀವಿಧಾಮಗಳೆಂದರೆ–ಅಣ್ಣಾಮಲೈ ಮತ್ತು ಮದುಮಲೈ (ತಮಿಳುನಾಡು), ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ (ಕರ್ನಾಟಕ), ಪೆರಿಯಾರ್ (ಕೇರಳ), ನಾಗಾರ್ಜುನ ಸಾಗರ (ತೆಲಂಗಾಣ), ಭರತ್‌ಪುರ ಮತ್ತು ರಣಥಂಬೋರ (ರಾಜಸ್ತಾನ), ಮಾನಸ (ಅಸ್ಸಾಂ), ಜಲ್ದಪಾರ (ಪ.ಬಂಗಾಳ) ಮೊದಲಾದವು.

© KTBS Not to be published

**ರಾಷ್ಟ್ರೀಯ ಉದ್ಯಾನಗಳು :** ಸಾರ್ವಜನಿಕ ವಿಹಾರ ಮತ್ತು ವೈಜ್ಞಾನಿಕ ಹಿತದೃಷ್ಟಿಯಿಂದ ನೈಸರ್ಗಿಕ ಸೌಂದರ್ಯ, ಸಸ್ಯ ಮತ್ತು ಪ್ರಾಣಿಸಂಕುಲಗಳ ಸಂರಕ್ಷಣೆಗಾಗಿ ವಿಶೇಷವಾದ ರಕ್ಷಣೆ ನೀಡುವ ವಿಶಾಲವಾದ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವೆನ್ನುವರು. ಮರ ಗಿಡಗಳನ್ನು ಕಡಿಯುವ ಮತ್ತು ಮೇಯಿಸುವುದು ಅಥವಾ ಕೃಷಿ ಚಟುವಟಿಕೆಗಳು ಇಲ್ಲಿ ನಿಷೇಧ. ಭಾರತದಲ್ಲಿ 99 ರಾಷ್ಟ್ರೀಯ ಉದ್ಯಾನಗಳಿವೆ.

**ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನಗಳು :**

ಕಾಜಿರಂಗ (ಅಸ್ಸಾಂ), ಸುಂದರಬನ (ಪ.ಬಂಗಾಳ), ಕಾರ್ಬೆಟ್ (ಉತ್ತರಾಂಚಲ), ಗಿರ್ (ಗುಜರಾತ್), ಕನ್ಹಾ (ಮಧ್ಯಪ್ರದೇಶ), ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ (ಕರ್ನಾಟಕ), ಸರಿಕ್ಷ (ರಾಜಸ್ತಾನ) ಧುದವ (ಉತ್ತರ ಪ್ರದೇಶ) ತೊಡೋಬ (ಮಹಾರಾಷ್ಟ್ರ) ಇತ್ಯಾದಿ.

**ಇದು ನಿಮಗೆ ತಿಳಿದಿರಲಿ!**

- *ಯೆಲ್ಲೋಸ್ಟೋನ್ ಉದ್ಯಾನ ಯು.ಎಸ್.ಎ (1872): ಪ್ರಪಂಚದಲ್ಲಿ ಮೊಟ್ಟ ಮೊದಲ ರಾಷ್ಟ್ರೀಯ ಉದ್ಯಾನ.*
- *ಜಿಮ್‌ಕಾರ್ಬೆಟ್, ಉತ್ತರಾಂಚಲ (1936): ಭಾರತದ ಪ್ರಥಮ ರಾಷ್ಟ್ರೀಯ ಉದ್ಯಾನ.*

**ಜೀವಿ ಸಂರಕ್ಷಣಾ ವಲಯಗಳು**

ಸಂರಕ್ಷಿಸಲ್ಪಟ್ಟ ಭೂಪ್ರದೇಶಗಳ ವಿಶೇಷವಾದ ಒಂದು ಭಾಗ ಅಥವಾ ಕರಾವಳಿಯ ಪರಿಸರವನ್ನು 'ಜೀವಿ ಸಂರಕ್ಷಣಾವಲಯ' ಎನ್ನುವರು. ಇದು ವೈಶಿಷ್ಟಪೂರ್ಣ ಜೀವಿಸಮುದಾಯಗಳನ್ನು ಒಳಗೊಂಡಿದೆ. ಈ ವ್ಯವಸ್ಥೆಯಲ್ಲಿ ಜನರು ಸಮಗ್ರ ಅಂಗಭಾಗವಾಗಿರುತ್ತಾರೆ. ಜೀವಿಗಳ ಸಂರಕ್ಷಣೆ, ಸಂಶೋಧನೆ, ಶಿಕ್ಷಣ ಮತ್ತು ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳು.

ಭಾರತದಲ್ಲಿ 18 ಜೀವಿ ಸಂರಕ್ಷಣಾ ವಲಯಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ– ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬರ್, ಮನ್ನಾರ್‌ಖಾರಿ, ಸುಂದರಬನ, ಸಿಮಿಲಿಪಾಲ್, ಕಾಂಚನಜಂಗ, ಪಚಮ್ಹಾರಿ, ಅಗಸ್ತ್ಯಮಲೈ, ದಿಬ್ರು, ಸೈಖೋವ, ದಿಬಾಂಗ್ ಇತ್ಯಾದಿ.

**ನಿಮಗೆ ತಿಳಿದಿರಲಿ!**

- *ಜೀವಿ ಸಂರಕ್ಷಣಾ ವಲಯವು 'ಮಾನವ ಮತ್ತು ಜೀವಮಂಡಲ ಯೋಜನೆ (MAB) ಅಡಿಯಲ್ಲಿ 1971 ರಲ್ಲಿ ಯುನೆಸ್ಕೊ (UNESCO) ದಿಂದ ಆರಂಭಗೊಂಡಿತು.*
- *ಭಾರತದಲ್ಲಿ ಮೊಟ್ಟ ಮೊದಲಿಗೆ ಜೀವಿ ಸಂರಕ್ಷಣಾ ವಲಯವು ನೀಲಿಗಿರಿ ಸರಣಿಯಲ್ಲಿ 1986ರಲ್ಲಿ ಅಸ್ಥಿತ್ವಕ್ಕೆ ಬಂದಿತು.*

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳಿಂದ ಭರ್ತಿಮಾಡಿ.**

1. ವರ್ಷದ ಯಾವುದೇ ಕಾಲದಲ್ಲೂ ________ ಅರಣ್ಯಗಳು ಎಲೆ ಉದುರಿಸುವುದಿಲ್ಲ.
2. ಮಾನ್ಸೂನ್ ಕಾಡುಗಳನ್ನು ________ ಅರಣ್ಯಗಳೆಂತಲೂ ಕರೆಯಲಾಗಿದೆ.
3. ಹಿಮಾಲಯ ಪರ್ವತಗಳಲ್ಲಿ ________ ವಿಧದ ಅರಣ್ಯಗಳಿವೆ.
4. ಹೆಚ್ಚಾಗಿ ನದಿಮುಖಜ ಭೂಮಿಗಳಲ್ಲಿ ________ ಅರಣ್ಯಗಳು ಕಂಡುಬರುತ್ತವೆ.
5. ನಾಗಾರ್ಜುನ ಸಾಗರ ವನ್ಯಜೀವಿಧಾಮವು ________ ರಾಜ್ಯದಲ್ಲಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಅರಣ್ಯಗಳೆಂದರೇನು?
2. ಮರುಭೂಮಿ ಸಸ್ಯವರ್ಗವಿರುವ ಪ್ರದೇಶವನ್ನು ಹೆಸರಿಸಿ.
3. ಅರಣ್ಯ ಸಂರಕ್ಷಣೆಗೆ ಬೇಕಾದ ಯಾವುದಾದರೂ ನಾಲ್ಕು ಕ್ರಮಗಳನ್ನು ತಿಳಿಸಿ.
4. ವನ್ಯ ಜೀವಿಧಾಮಗಳೆಂದರೇನು?
5. ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.
6. ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.

**III. ಚಟುವಟಿಕೆ :**

1. ನೀವು ವಾಸಿಸುವ ಸ್ಥಳದಲ್ಲಿ ಕಂಡುಬರುವ ಪ್ರಮುಖ ಮರ, ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಗುರುತಿಸಿ ಮತ್ತು ಪಟ್ಟಿಮಾಡಿ.

**IV. ಯೋಜನಾಕಾರ್ಯಗಳು:**

1. ವನ್ಯ ಜೀವಿಧಾಮಗಳಲ್ಲಿ ಕಂಡು ಬರುವ ವನ್ಯ ಪ್ರಾಣಿಗಳ ಛಾಯಾಚಿತ್ರವುಳ್ಳ ಒಂದು ಆಲ್ಬಮ್ ತಯಾರಿಸಿ.
2. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಜೀವಿ ಸಂರಕ್ಷಣಾ ವಲಯಗಳನ್ನು ಗುರುತಿಸಿ ಮತ್ತು ಹೆಸರಿಸಿ.

* * * *

© KTBS Not to be published

## ಅಧ್ಯಾಯ – 6

# ಭಾರತದ ಜಲಸಂಪನ್ಮೂಲಗಳು

M6C4Y2

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- ಜಲಸಂಪನ್ಮೂಲಗಳ ಪ್ರಾಮುಖ್ಯತೆ.
- ಭಾರತದ ಪ್ರಮುಖ ನದಿಗಳು.
- ನೀರಾವರಿ : ಅರ್ಥ ಮತ್ತು ಭಾರತಕ್ಕೆ ನೀರಾವರಿಯ ಅವಶ್ಯಕತೆ.
- ನೀರಾವರಿ ವಿಧಗಳು ಮತ್ತು ಹಂಚಿಕೆ.
- ವಿವಿಧೋದ್ದೇಶ ನೀರಾವರಿ ಯೋಜನೆಗಳು.

**ಪ್ರಾಮುಖ್ಯತೆ :** ನೀರು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ನೀರಿಲ್ಲದೆ ಸುಸ್ಥಿರ ಜೀವನ ಸಾಧ್ಯವಿಲ್ಲ. ಮಾನವನಿಗೆ ಕುಡಿಯಲು, ಅಡುಗೆ, ಸ್ವಚ್ಛತೆ, ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ಕೈಗಾರಿಕೆ, ನೌಕಾಯಾನ, ಮೀನುಗಾರಿಕೆ ಮೊದಲಾದ ಉದ್ದೇಶಗಳಿಗೆ ನೀರು ಅವಶ್ಯಕ.

ಭಾರತವು ಅಪಾರವಾದ ಜಲಸಂಪತ್ತನ್ನು ಹೊಂದಿದೆ. ದೇಶದಲ್ಲಿ ಅನೇಕ ನದಿಗಳು ಹರಿಯುತ್ತವೆ ಮತ್ತು ಸಾಕಷ್ಟು ಮಳೆಯಾಗುತ್ತದೆ. ಜೊತೆಗೆ ಅಪರಿಮಿತವಾದ ಅಂತರ್ಜಲ ಸಂಪತ್ತನ್ನೂ ಹೊಂದಿದೆ.

© KTBS Not to be published

### ಭಾರತದ ಪ್ರಮುಖ ನದಿಗಳು

ಭಾರತದಲ್ಲಿ ಅನೇಕ ನದಿ ಜಾಲಗಳಿವೆ. ಅವು ದೇಶದ ನೈಸರ್ಗಿಕ ಸಂಪನ್ಮೂಲಗಳು. ಈ ನದಿಗಳ ನೀರನ್ನು ನೀರಾವರಿ, ಜಲವಿದ್ಯುತ್ ತಯಾರಿಕೆ, ಒಳನಾಡಿನ ಜಲಸಾರಿಗೆ, ಮೀನುಗಾರಿಕೆ, ಮನರಂಜನೆ ಮೊದಲಾದ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ. ಭಾರತದ ನದಿ ಜಾಲಗಳನ್ನು ಎರಡು ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ : 1) ಉತ್ತರ ಭಾರತದ ನದಿಗಳು ಮತ್ತು 2) ದಕ್ಷಿಣ ಭಾರತದ ನದಿಗಳು.

**1) ಉತ್ತರ ಭಾರತದ ನದಿಗಳು :** ಇವುಗಳನ್ನು "ಹಿಮಾಲಯದ ನದಿಗಳು" ಎಂತಲೂ ಕರೆಯಲಾಗಿದೆ. ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರಗಳು ಉತ್ತರ ಭಾರತದ ಪ್ರಮುಖ ನದಿಗಳು.


**ಸಿಂಧೂನದಿ :** ಇದು ಕೈಲಾಸ ಪರ್ವತ (ಟಿಬೆಟ್) ದಲ್ಲಿ ಉಗಮವಾಗುತ್ತದೆ. ಆರಂಭದಲ್ಲಿ ವಾಯವ್ಯದ ಕಡೆಗೆ, ಅನಂತರ ನೈಋತ್ಯಕ್ಕೆ ತಿರುಗಿ ಪಾಕಿಸ್ತಾನವನ್ನು ಪ್ರವೇಶಿಸುವುದು. ಅನಂತರ ದಕ್ಷಿಣಕ್ಕೆ ಹರಿದು ಕರಾಚಿಯ ಬಳಿ ಅರಬ್ಬಿ ಸಮುದ್ರ ಸೇರುವುದು. ಸಿಂಧೂ ನದಿಯ ಉದ್ದ 2897 ಕಿ.ಮೀ. ಅದರಲ್ಲಿ 709 ಕಿ.ಮೀ. ಭಾರತದಲ್ಲಿದೆ. ಇದರ ಹೆಚ್ಚಿನ ಭಾಗವು ಪಾಕಿಸ್ತಾನದಲ್ಲಿದೆ. ಅನೇಕ ಉಪನದಿಗಳು ಸಿಂಧೂ ನದಿಯನ್ನು ಸೇರುತ್ತವೆ. ಅವುಗಳಲ್ಲಿ ಝೀಲಂ, ಚೀನಾಬ್, ಬಿಯಾಸ್. ರಾವಿ ಮತ್ತು ಸಟ್ಲೇಜ್ ಎಂಬವು ಮುಖ್ಯವಾದವು.

**ಗಂಗಾನದಿ :** ಭಾರತದ ಉದ್ದವಾದ ನದಿ. ಇದರ ಒಟ್ಟು ಉದ್ದ 2525 ಕಿ.ಮೀ. ಗಂಗೋತ್ರಿ ಎಂಬಲ್ಲಿ ಉಗಮ ಹೊಂದುತ್ತದೆ. ಆರಂಭದಲ್ಲಿ ದಕ್ಷಿಣಕ್ಕೆ ಆನಂತರ ಆಗ್ನೇಯಕ್ಕೆ ಹರಿಯುತ್ತಾ ಬಾಂಗ್ಲಾ ದೇಶವನ್ನು ಪ್ರವೇಶಿಸಿ, ಅಲ್ಲಿ ಬ್ರಹ್ಮಪುತ್ರ ನದಿಯನ್ನು ಸೇರುತ್ತದೆ. ಆನಂತರ ಪದ್ಮ ನದಿಯಾಗಿ ಮುಂದುವರೆಯುತ್ತಾ ಅಂತಿಮವಾಗಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಗಂಗಾ ನದಿಗೆ ಸೇರುವ ಪ್ರಮುಖ ಉಪನದಿಗಳೆಂದರೆ–ಯಮುನ, ಘಾಗ್ರ, ಗಂಡಕ್, ರಾಮಗಂಗ, ಗೋಮತಿ, ಶಾರದ, ಸೋನೆ ಮತ್ತು ಕೋಸಿ. ಇವುಗಳಲ್ಲಿ ಯಮುನ ಉದ್ದವಾದ ಉಪನದಿ.

**ಬ್ರಹ್ಮಪುತ್ರ ನದಿ :** ಇದು ಮಾನಸ ಸರೋವರದ ಸಮೀಪ ಚೆಮಯಂಗ್‌ಡಂಗ್ ಎಂಬಲ್ಲಿ (ಟಿಬೆಟ್) ಉಗಮವಾಗುತ್ತದೆ. ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದು ಅರುಣಾಚಲ ಪ್ರದೇಶದಲ್ಲಿ ಕಿರಿದಾದ ಕಂದರವೊಂದರ ಮೂಲಕ ಭಾರತವನ್ನು ಪ್ರವೇಶಿಸುತ್ತದೆ. ಆನಂತರ ಪಶ್ಚಿಮಕ್ಕೆ ಹರಿಯುತ್ತಾ ಬಾಂಗ್ಲಾದೇಶದಲ್ಲಿ ದಕ್ಷಿಣಕ್ಕೆ ತಿರುಗಿ ಗಂಗಾನದಿಯೊಂದಿಗೆ ಸೇರುವುದು. ಇದರ ಉದ್ದ 2589 ಕಿ.ಮೀ.ಗಳು

**ಇದು ನಿಮಗೆ ತಿಳಿದಿರಲಿ!**

ಬ್ರಹ್ಮಪುತ್ರ ನದಿಯನ್ನು ಟಿಬೆಟ್‌ನಲ್ಲಿ ***'ಸಾಂಗ್‌ಪೊ'*** ಎಂತಲೂ ಮತ್ತು ಬಾಂಗ್ಲಾ ದೇಶದಲ್ಲಿ 'ಯಮುನಾ'ಎಂದು ಕರೆಯುತ್ತಾರೆ. ಈ ನದಿಯು ಪ್ರಪಂಚದಲ್ಲೇ ದೊಡ್ಡದಾದ ನದಿ ನಿರ್ಮಿತ "ಮುಜಲಿ ದ್ವೀಪ"ವನ್ನು ನಿರ್ಮಿಸಿದೆ.




©KTBS
Not to be republished

**2) ದಕ್ಷಿಣ ಭಾರತದ ನದಿಗಳು :** ದಕ್ಷಿಣ ಭಾರತದಲ್ಲಿ ಅನೇಕ ನದಿಗಳು ಹರಿಯುತ್ತವೆ. ಅವುಗಳನ್ನು 'ಪರ್ಯಾಯ ಪ್ರಸ್ಥಭೂಮಿ ನದಿಗಳು'ಎಂತಲೂ ಕರೆಯುತ್ತಾರೆ. ಅವುಗಳಲ್ಲಿ ಬಹಳಷ್ಟು ಪಶ್ಚಿಮ ಘಟ್ಟಗಳಲ್ಲಿ ಉಗಮ ಹೊಂದುವವು. ದಕ್ಷಿಣ ಭಾರತದ ಪ್ರಮುಖ ನದಿಗಳೆಂದರೆ. ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳು. ಇವುಗಳನ್ನು ಪೂರ್ವಕ್ಕೆ ಹರಿಯುವ ಮತ್ತು ಪಶ್ಚಿಮಕ್ಕೆ ಹರಿಯುವ ನದಿಗಳೆಂದು ವಿಂಗಡಿಸಬಹುದು.

**ಎ) ಪೂರ್ವಕ್ಕೆ ಹರಿಯುವ ನದಿಗಳು :** ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿಗಳು ಪೂರ್ವಕ್ಕೆ ಹರಿಯುವ ಮುಖ್ಯ ನದಿಗಳು.

**ಮಹಾನದಿ**ಯು ಸಿವಾಹ ಸರಣಿಯಲ್ಲಿ ಉಗಮಹೊಂದಿ, ಪೂರ್ವಾಭಿಮುಖವಾಗಿ (851 ಕಿ.ಮೀ.) ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. **ಗೋದಾವರಿ**ಯು ದಕ್ಷಿಣಭಾರತದಲ್ಲೇ ಉದ್ದವಾದ ನದಿ. ಇದು ತ್ರಯಂಬಕ ಎಂಬಲ್ಲಿ ಉಗಮ ಹೊಂದಿ ಪೂರ್ವಕ್ಕೆ ಹರಿದು (1465 ಕಿ.ಮೀ) ಬಂಗಾಳಕೊಲ್ಲಿಯನ್ನು ಸೇರುತ್ತದೆ. **ಕೃಷ್ಣ** ನದಿಯು ಮಹಬಲೇಶ್ವರದ ಬಳಿ ಉಗಮ ಹೊಂದಿ, ಆಗ್ನೇಯಕ್ಕೆ ಹರಿದು (1400ಕಿಮೀ) ಬಂಗಾಳಕೊಲ್ಲಿಯನ್ನು ಸೇರುವುದು. ಇದನ್ನು ಕೂಡಿಕೊಳ್ಳುವ ಪ್ರಮುಖ ಉಪ ನದಿಗಳೆಂದರೆ– ಭೀಮ, ತುಂಗಭದ್ರ, ಕೊಯ್ನಾ, ಘಟಪ್ರಭ ಮತ್ತು ಮಲಪ್ರಭ. **ಕಾವೇರಿ** ನದಿಯು ತಲಕಾವೇರಿ (ಕೊಡಗು) ಎಂಬಲ್ಲಿ ಉಗಮಗೊಂಡು ಪೂರ್ವಕ್ಕೆ ಹರಿದು ಅಂತಿಮವಾಗಿ ಬಂಗಾಳಕೊಲ್ಲಿಗೆ ಸೇರುವುದು. ಹೇಮಾವತಿ, ಶಿಂಶಾ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಭವಾನಿಗಳು ಕಾವೇರಿ ನದಿಗೆ ಸೇರುವ ಉಪನದಿಗಳು.

**ಬಿ) ಪಶ್ಚಿಮಕ್ಕೆ ಹರಿಯುವ ನದಿಗಳು :** ನರ್ಮದ ಮತ್ತು ತಾಪಿ ಪಶ್ಚಿಮಕ್ಕೆ ಹರಿಯುವ ಮುಖ್ಯನದಿಗಳು. **ನರ್ಮದಾ** ನದಿಯು ಅಮರಕಂಟಕ ಬೆಟ್ಟಗಳಲ್ಲಿ ಉಗಮಿಸಿ ಕಿರಿದಾದ 'ಅಮೃತಶಿಲಾ ಕಂದರ'ದ ಮೂಲಕ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರವನ್ನು ಸೇರುವುದು. **ತಾಪಿ** ನದಿಯು **'ಮೂಲ್ತಾಯಿ'** ಬಳಿ ಉಗಮಗೊಂಡು ಪಶ್ಚಿಮಕ್ಕೆ ಹರಿದು (724 ಕಿ.ಮೀ) ಅರಬ್ಬಿ ಸಮುದ್ರವನ್ನು ಸೇರುವುದು. ಇತರೆ ಅನೇಕ ಚಿಕ್ಕಪುಟ್ಟ ನದಿಗಳೂ ಸಹ ಪಶ್ಚಿಮಕ್ಕೆ ಹರಿಯುತ್ತವೆ. ಅವುಗಳಲ್ಲಿ ಸಬರ್ಮತಿ, ಮಾಂಡೋವಿ, ಜುವಾರಿ, ಬೆಡ್ತಿ, ಶರಾವತಿ, ಕಾಳಿ, ನೇತ್ರಾವತಿ ಮತ್ತು ಪೆರಿಯಾರ್ ನದಿಗಳು ಮುಖ್ಯವಾದವು.

© KTBS Not to be published

## ನೀರಾವರಿ

**ಅರ್ಥ :** ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎಂದು ಕರೆಯಲಾಗಿದೆ. ಅಂದರೆ ನದಿಗಳು, ಜಲಾಶಯ, ಕೆರೆ ಮತ್ತು ಅಂತರ್ಜಲ ಮೂಲಗಳಿಂದ ಕೃಷಿಭೂಮಿಗೆ ನೀರು ಸರಬರಾಜು ಮಾಡುವುದಾಗಿದೆ.

**ನೀರಾವರಿಯ ಅವಶ್ಯಕತೆ :** ಭಾರತವು ಕೃಷಿ ಪ್ರಧಾನ ದೇಶ. ಆದ್ದರಿಂದ ಕೃಷಿಗೆ ಅವಶ್ಯಕವಾದಷ್ಟು ಹಾಗೂ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ. ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ. ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ: ಭತ್ತ. ಕಬ್ಬು, ಇತ್ಯಾದಿ. ಜೊತೆಗೆ ಬೆಳೆಗಳ ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ. ಇದು ನೀರಾವರಿಯಿಂದ ಮಾತ್ರ ಸಾಧ್ಯ. ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ.

## ನೀರಾವರಿ ವಿಧಗಳು

ಭಾರತದಲ್ಲಿ ಬಾವಿ, ಕಾಲುವೆ ಮತ್ತು ಕೆರೆ ನೀರಾವರಿ ವಿಧಾನಗಳು ರೂಢಿಯಲ್ಲಿವೆ. ಇತ್ತೀಚೆಗೆ ಇತರೆ ವಿಧಾನಗಳಾದ ಹನಿ ನೀರಾವರಿ ಮತ್ತು ಸಿಂಪಡಣೆ ನೀರಾವರಿಗಳೂ ರೂಢಿಗೆ ಬಂದಿವೆ.

**1) ಬಾವಿ ನೀರಾವರಿ :** ಇದು ಭಾರತದ ಅತಿ ಪ್ರಮುಖವಾದ ನೀರಾವರಿ ವಿಧಾನ. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಶೇ. 60.7 ಭಾಗವು ಬಾವಿ ನೀರಾವರಿ ಸೌಕರ್ಯವನ್ನು ಹೊಂದಿದೆ. ಬಾವಿ ನೀರಾವರಿ ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ. ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಬಾವಿ ತೋಡಬಹುದು. ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ. ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.

ಗಂಗಾ ನದಿ ಬಯಲಿನಲ್ಲಿ ಬಾವಿ ನೀರಾವರಿಯು ವ್ಯಾಪಕವಾಗಿ ರೂಢಿಯಲ್ಲಿದೆ. ಅದರಲ್ಲಿ ಪಂಜಾಬ್. ಹರಿಯಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಸೇರುತ್ತವೆ. ದಕ್ಷಿಣ ಭಾರತದಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಬಾವಿ ನೀರಾವರಿ ಹೆಚ್ಚು ರೂಢಿಯಲ್ಲಿದೆ.

ಬಾವಿಗಳಲ್ಲಿ ತೆರೆದ ಬಾವಿ ಮತ್ತು ಕೊಳವೆ ಬಾವಿಗಳೆಂದು ಎರಡು ವಿಧ. ಇಂದು ಭಾರತದಲ್ಲಿ ಕೊಳವೆ ಬಾವಿ ನೀರಾವರಿಯು ಹೆಚ್ಚು ಪ್ರಚಲಿತಗೊಂಡಿದೆ.

**2) ಕಾಲುವೆ ನೀರಾವರಿ :** ಭಾರತದಲ್ಲಿ ಬಾವಿ ನೀರಾವರಿಯ ನಂತರ ಕಾಲುವೆ ನೀರಾವರಿ ಪದ್ಧತಿ ಎರಡನೆಯ ಸ್ಥಾನದಲ್ಲಿದೆ. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಶೇ. 27 ಭಾಗ ಕಾಲುವೆ ನೀರಾವರಿಗೊಳಪಟ್ಟಿದೆ. ಪ್ರಪಂಚದಲ್ಲೇ ವಿಸ್ತಾರವಾದ ಕಾಲುವೆ ನೀರಾವರಿ ವ್ಯವಸ್ಥೆ ಭಾರತದಲ್ಲಿದೆ. ಕಾಲುವೆಗಳ ನಿರ್ಮಾಣ ಮತ್ತು ನಿರ್ವಹಣೆ ಜವಾಬ್ದಾರಿಯು ಸರಕಾರಕ್ಕೆ ಸಂಬಂಧಿಸಿದೆ.

**ಕಾಲುವೆಗಳಲ್ಲಿ ಎರಡು ವಿಧ :** ಪ್ರವಾಹಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆ. ಯಾವುದೇ ಅಣೆಕಟ್ಟುಗಳನ್ನು ನಿರ್ಮಿಸದೇ ನೇರವಾಗಿ ನದಿಯಿಂದ ಕಾಲುವೆ ತೋಡಿ ಕೃಷಿಗೆ ನೀರು ಪೂರೈಸುವುದೇ ಪ್ರವಾಹ ಕಾಲುವೆ. ನದಿಗಳಿಗೆ ಅಣೆಕಟ್ಟೆಗಳನ್ನು ನಿರ್ಮಿಸಿ, ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ಅದನ್ನು ಕಾಲುವೆ ಮೂಲಕ ನೀರು ಪೂರೈಸುವುದೇ ಸಾರ್ವಕಾಲಿಕ ಕಾಲುವೆ.

ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

**3. ಕೆರೆ ನೀರಾವರಿ :** ನೈಸರ್ಗಿಕ ಅಥವಾ ಕೃತಕವಾದ ತಗ್ಗುಗಳಲ್ಲಿ ಮಳೆಯ ನೀರು ಸಂಗ್ರಹಗೊಂಡು ರೂಪುಗೊಂಡ ಜಲಾಶಯಕ್ಕೆ ಕೆರೆ ಎನ್ನುವರು. ಕೆರೆಗಳಲ್ಲಿ ಸಂಗ್ರಹಗೊಂಡ ನೀರನ್ನು ನೀರಾವರಿಗಾಗಿ ಬಳಸಲಾಗುವುದು. ಆದರೆ ಬಹಳಷ್ಟು ಕೆರೆಗಳು ಋತುಕಾಲಿಕವಾದವು. ಹೀಗಾಗಿ ಭಾರತದಲ್ಲಿ ಇತ್ತೀಚೆಗೆ ಕೆರೆ ನೀರಾವರಿಗೊಳಪಟ್ಟ ಕ್ಷೇತ್ರವು ಕಡಿಮೆಯಾಗಿದೆ. ಇಂದು ದೇಶದ ನೀರಾವರಿ ಪ್ರದೇಶದಲ್ಲಿ ಶೇ. 3 ಭಾಗ ಮಾತ್ರ ಕೆರೆ ನೀರಾವರಿಗೊಳಪಟ್ಟಿದೆ. ಇದು ಹೆಚ್ಚಾಗಿ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಒಡಿಶಾ, ಮಧ್ಯಪ್ರದೇಶ, ರಾಜಸ್ತಾನ ಮತ್ತು ಉತ್ತರ ಪ್ರದೇಶಗಳಲ್ಲಿ ಕಂಡುಬರುತ್ತದೆ.

## ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು

ವಿವಿಧ ಉದ್ದೇಶಗಳನ್ನು ಪೂರೈಸುವ ನದಿ ಕಣಿವೆ ಯೋಜನೆಗಳನ್ನು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದು ಕರೆಯಲಾಗಿದೆ. ಇಂತಹ ಯೋಜನೆಗಳ ಪ್ರಮುಖ ಉದ್ದೇಶಗಳೆಂದರೆ –

1) ನೀರಾವರಿ ಪೂರೈಕೆ. 2) ಪ್ರವಾಹಗಳ ನಿಯಂತ್ರಣ.

3) ಜಲ ವಿದ್ಯುತ್ ತಯಾರಿಕೆ. 4) ಮಣ್ಣಿನ ಸವೆತ ನಿಯಂತ್ರಣ.

5) ಒಳನಾಡಿನ ನೌಕಾಯಾನ. 6) ಒಳನಾಡಿನ ಮೀನುಗಾರಿಕೆ.

7) ಮನರಂಜನೆ ಸೌಲಭ್ಯ. 8) ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರು ಪೂರೈಕೆ.

© KTBS Not to be published

9) ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ.

10) ಅರಣ್ಯ ಪೋಷಣೆ ಇತ್ಯಾದಿ.

**ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳು**

**1. ದಾಮೋದರ ನದಿ ಕಣಿವೆ ಯೋಜನೆ :** ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆ. ಅಮೆರಿಕ ಸಂಯುಕ್ತ ಸಂಸ್ಥಾನದ ಟೆನಿಸ್ಸಿ ಕಣಿವೆ ಯೋಜನೆಯ ಮಾದರಿಯನ್ನಾಧರಿಸಿ ಈ ಯೋಜನೆಯನ್ನು ರೂಪಿಸಲಾಗಿದೆ. ದಾಮೋದರ ನದಿಯನ್ನು 'ಬಂಗಾಳದ ದುಃಖಕಾರಿ ನದಿ' ಎಂದು ಕರೆಯಲಾಗಿತ್ತು. ಏಕೆಂದರೆ ಮಳೆಗಾಲದಲ್ಲಿ ಈ ನದಿಯು ಪ್ರವಾಹದಿಂದ ಉಕ್ಕಿ ಹರಿದಾಗ ಬೆಳೆಗಳು ಮತ್ತು ಜನ ವಸತಿಗಳಿಗೆ ಹಾನಿಯಾಗುತ್ತಿತ್ತು. ಇದನ್ನು ನಿಯಂತ್ರಿಸಲು ವಿವಿಧ ಉದ್ದೇಶಗಳಿಗಾಗಿ ಈ ಯೋಜನೆಯನ್ನು ಕೈಗೊಳ್ಳಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶಗಳೆಂದರೆ–ಪ್ರವಾಹ ನಿಯಂತ್ರಣ, ನೀರಾವರಿ ಪೂರೈಕೆ, ನೌಕಾಯಾನ, ಜಲವಿದ್ಯುಚ್ಛಕ್ತಿ ಉತ್ಪಾದನೆ, ಅರಣ್ಯ ಪೋಷಣೆ, ಮಣ್ಣಿನ ಸವೆತ ನಿಯಂತ್ರಣ, ಗಣಿಗಾರಿಕೆ ಮತ್ತು ಕೈಗಾರಿಕೆಗಳ ಅಭಿವೃದ್ಧಿ, ಒಳನಾಡಿನ ಮೀನುಗಾರಿಕೆ ಪ್ರಗತಿ ಇತ್ಯಾದಿ.

ಇದು ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರಕಾರಗಳ ಸಂಯೋಜಿತ ಯೋಜನೆಯಾಗಿದ್ದು ಅದನ್ನು ದಾಮೋದರ ಮತ್ತು ಅದರ ಉಪನದಿಗಳಿಗೆ ನಿರ್ಮಿಸಲಾಗಿದೆ. ಈ ಯೋಜನೆಯು ತಿಲೈಯಾ, ಕೊನಾರ್, ಮೈಥಾನ್ ಮತ್ತು ಪಂಚತ್‌ಹಿಲ್ ಎಂಬಲ್ಲಿ 4 ಅಣೆಕಟ್ಟೆಗಳು, ಒಂದು ದುರ್ಗಾಪುರ ಒಡ್ಡು, ಬೊಕಾರೊ, ದುರ್ಗಾಪುರ ಮತ್ತು ಚಂದ್ರಾಪುರಗಳಲ್ಲಿ 3 ಥರ್ಮಲ್ ವಿದ್ಯುತ್ ಕೇಂದ್ರಗಳ ನಿರ್ಮಾಣಗಳನ್ನೊಳಗೊಂಡಿದೆ.


**2. ಭಾಕ್ರ– ನಂಗಲ್ ನದಿ ಕಣಿವೆ ಯೋಜನೆ :** ಇದು ಪಂಜಾಬ್, ಹರಿಯಾಣ ಮತ್ತು ರಾಜಸ್ತಾನ ರಾಜ್ಯ ಸರಕಾರಗಳ ಸಂಯೋಜಿತ ಯೋಜನೆ. ಈ ಯೋಜನೆಯು ಸಟ್ಲೇಜ್ ನದಿಗೆ (ಹಿಮಾಚಲ ಪ್ರದೇಶ) ಭಾಕ್ರ ಮತ್ತು ನಂಗಲ್ ಎಂಬಲ್ಲಿ ನಿರ್ಮಿಸಿರುವ ಎರಡು ಪ್ರತ್ಯೇಕ ಅಣೆಕಟ್ಟುಗಳು ಮತ್ತು 4 ಜಲ ವಿದ್ಯುತ್ ತಯಾರಿಕಾ ಕೇಂದ್ರಗಳ ನಿರ್ಮಾಣವನ್ನೊಳಗೊಂಡಿದೆ. ಪ್ರವಾಹ ನಿಯಂತ್ರಣ, ನೀರಾವರಿ ಪೂರೈಕೆ. ಜಲವಿದ್ಯುತ್ ತಯಾರಿಕೆ, ಮಣ್ಣು ಸವೆತ ನಿಯಂತ್ರಣ ಮತ್ತು ಅರಣ್ಯ ಪೋಷಣೆಗಳು ಈ ಯೋಜನೆಯ ಮೂಲ ಉದ್ದೇಶಗಳಾಗಿವೆ. ಭಾಕ್ರಾ ಅಣೆಕಟ್ಟೆಯ ಎತ್ತರ 226 ಮೀ.ಗಳು ಮತ್ತು ಭಾರತದಲ್ಲಿ ನೇರವಾದ ಗುರುತ್ವವುಳ್ಳ ಅಣೆಕಟ್ಟೆಯಾಗಿದೆ. ಈ ಅಣೆಕಟ್ಟೆಯಿಂದ ನಿರ್ಮಿತಗೊಂಡ ಜಲಾಶಯಕ್ಕೆ 'ಗೋವಿಂದ ಸಾಗರ'ವೆಂದು ಹೆಸರಿಡಲಾಗಿದೆ.

© KTBS
Not to be published

**3. ಹಿರಾಕುಡ್ ಯೋಜನೆ :** ಒಡಿಶಾದ ಅತ್ಯಂತ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆ. ಈ ಯೋಜನೆಯಲ್ಲಿ ಮಹಾನದಿಗೆ 3 ಅಣೆಕಟ್ಟೆಗಳನ್ನು ನಿರ್ಮಿಸಲಾಗಿದೆ. ಉದಾ: ಹಿರಾಕುಡ್, ತಿಕಾರಪಾರ ಮತ್ತು ನಾರಾಜ್. ಜೊತೆಗೆ ಎರಡು ಜಲ ವಿದ್ಯುತ್ ಕೇಂದ್ರಗಳೂ ಸೇರಿವೆ. ಹಿರಾಕುಡ್ ಅಣೆಕಟ್ಟೆಯು ಭಾರತದಲ್ಲೇ ಉದ್ದವಾದುದು. ಈ ಯೋಜನೆಯ ಮುಖ್ಯ ಉದ್ದೇಶಗಳೆಂದರೆ–ಪ್ರವಾಹ ನಿಯಂತ್ರಣ, ನೀರಾವರಿ ಪೂರೈಕೆ ಮತ್ತು ಜಲವಿದ್ಯುತ್ ತಯಾರಿಕೆ. ಜೊತೆಗೆ ಒಳನಾಡಿನ ಜಲಸಾರಿಗೆ, ಮೀನುಗಾರಿಕೆ ಮತ್ತು ಅರಣ್ಯ ಪೋಷಣೆಗಳಿಗೂ ನೆರವಾಗುವುದು.

**4. ತುಂಗಭದ್ರ ಯೋಜನೆ :** ಇದು ಕರ್ನಾಟಕ ಮತ್ತು ಆಂಧ್ರಪ್ರದೇಶಗಳ (ಇಂದು ತೆಲಂಗಾಣ) ಸಂಯೋಜಿತ ಯೋಜನೆ. ನೀರಾವರಿ ಪೂರೈಕೆ, ಜಲವಿದ್ಯುತ್ ತಯಾರಿಕೆ ಮತ್ತು ಒಳನಾಡಿನ ಮೀನುಗಾರಿಕೆ ಈ ಯೋಜನೆಯ ಮುಖ್ಯ ಉದ್ದೇಶಗಳು. ಈ ಯೋಜನೆಯು ಒಂದು ಅಣೆಕಟ್ಟೆ ಮತ್ತು ಮೂರು ಜಲವಿದ್ಯುತ್ ತಯಾರಿಕಾ ಕೇಂದ್ರಗಳನ್ನೊಗೊಂಡಿದೆ. ಅಣೆಕಟ್ಟೆಯನ್ನು ಕೃಷ್ಣನದಿಯ ಉಪ ನದಿಯಾದ ತುಂಗಭದ್ರ ನದಿಗೆ

ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ಸೇರಿದ ಹೊಸಪೇಟೆಯ ಬಳಿ 'ಮಲ್ಲಾಪುರಂ' ಎಂಬಲ್ಲಿ ನಿರ್ಮಿಸಲಾಗಿದೆ. ಇದರಿಂದ ನಿರ್ಮಾಣಗೊಂಡ ಜಲಾಶಯಕ್ಕೆ "ಪಂಪಸಾಗರ" ಎಂದು ಹೆಸರಿಸಲಾಗಿದೆ.




**5. ಕೃಷ್ಣ ಮೇಲ್ದಂಡೆಯ ಯೋಜನೆ :** ಇದನ್ನು ಕೃಷ್ಣ ನದಿಗೆ ನಿರ್ಮಿಸಲಾಗಿರುವ ಉತ್ತರ ಕರ್ನಾಟಕದ ಅತಿದೊಡ್ಡ ವಿವಿಧೋದ್ದೇಶ ನದಿಕಣಿವೆ ಯೋಜನೆಯಾಗಿದೆ. ಈ ಯೋಜನೆಯು ಆಲಮಟ್ಟಿ ಮತ್ತು ನಾರಾಯಣಪುರ ಎಂಬಲ್ಲಿ ನಿರ್ಮಾಣ ಮಾಡಿರುವ 2 ಅಣೆಕಟ್ಟೆಗಳು ಮತ್ತು 1 ಜಲವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಒಳಗೊಂಡಿದೆ. ನೀರಾವರಿ ಪೂರೈಕೆ, ಕುಡಿಯುವ ನೀರು ಸರಬರಾಜು ಮತ್ತು ಜಲವಿದ್ಯುಚ್ಛಕ್ತಿ ತಯಾರಿಕೆಗಳು ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ.

ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿರುವ 'ಆಲಮಟ್ಟಿ' ಗ್ರಾಮದ ಬಳಿ ಆಲಮಟ್ಟಿ ಅಣೆಕಟ್ಟೆ ಮತ್ತು ಶೊರಪುರ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಸಮೀಪದಲ್ಲಿ ನಾರಾಯಣಪುರ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಬಾಗಲಕೋಟೆ, ವಿಜಯಪುರ, ಕಲ್ಬುರಗಿ, ಯಾದಗಿರಿ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು ಈ ಯೋಜನೆಯ ಲಾಭವನ್ನು ಪಡೆಯುತ್ತವೆ.

**ಇದು ನಿಮಗೆ ತಿಳಿದಿದೆಯೆ?**

- ನಾಗಾರ್ಜುನ ಸಾಗರ ಯೋಜನೆ: ಇದರ ಬಲದಂಡೆ ಕಾಲುವೆಗೆ 'ಜವಾಹರ ಕಾಲುವೆ' ಎಂದೂ ಮತ್ತು ಎಡದಂಡೆ ಕಾಲುವೆಗೆ 'ಲಾಲಬಹದ್ದೂರ್ ಕಾಲುವೆ' ಎಂದೂ ಹೆಸರಿಡಲಾಗಿದೆ.
- ಕೋಸಿ ನದಿಯನ್ನು 'ಬಿಹಾರಿನ ಕಣ್ಣೀರು ನದಿ' ಎಂತಲೂ ಮತ್ತು ಮಹಾನದಿಯನ್ನು 'ಒಡಿಶಾದ ಕಣ್ಣೀರು ನದಿ' ಎಂದು ಕರೆಯಲಾಗಿದೆ.

**6. ಕೋಸಿ ಯೋಜನೆ :** ಇದೊಂದು ಅಂತಾರಾಷ್ಟ್ರೀಯ ಯೋಜನೆಯಾಗಿದ್ದು ಭಾರತ ಮತ್ತು ನೇಪಾಳ ದೇಶಗಳು ಸಂಯುಕ್ತವಾಗಿ ನಿರ್ಮಿಸಿವೆ. ಕೋಸಿ ನದಿಗೆ ಹನುಮಾನ್ ನಗರದ (ನೇಪಾಳ) ಬಳಿ ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ. ಈ ಯೋಜನೆಯ ಪ್ರಮುಖ ಉದ್ದೇಶಗಳೆಂದರೆ; ನೀರಾವರಿ ಪೂರೈಕೆ, ಪ್ರವಾಹ ನಿಯಂತ್ರಣ, ಜಲವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಮೀನುಗಾರಿಕೆ. ಈ ಯೋಜನೆಯು ಭಾರತದಿಂದ ನಿರ್ಮಾಣವಾಗಿದ್ದರೂ ಅದರ ಅನುಕೂಲವನ್ನು ಭಾರತ ಮತ್ತು ನೇಪಾಳ ದೇಶಗಳೆರಡೂ ಪಡೆಯುತ್ತಿವೆ.

**7. ರಿಹಾಂದ್ ಯೋಜನೆ :** ಇದು ಉತ್ತರ ಪ್ರದೇಶದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆಯಾಗಿದೆ. ಇದನ್ನು ರಿಹಾಂದ್ ನದಿಗೆ (ಸೋನೆ ನದಿಯ ಉಪ ನದಿ) ನಿರ್ಮಿಸಲಾಗಿದೆ. ಪ್ರವಾಹ ನಿಯಂತ್ರಣ, ನೀರಾವರಿ ಸೌಲಭ್ಯ, ಮೀನುಗಾರಿಕೆ, ಮಣ್ಣಿನ ಸವೆತದ ನಿಯಂತ್ರಣ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆಗಳು ಈ ಯೋಜನೆಯ ಮುಖ್ಯ ಉದ್ದೇಶಗಳು. ಈ ಯೋಜನೆಯಿಂದ ನಿರ್ಮಾಣವಾಗಿರುವ ಜಲಾಶಯದ ಹೆಸರು 'ಗೋವಿಂದವಲ್ಲಭಪಂತ್ ಸಾಗರ.

**8. ನಾಗಾರ್ಜುನ ಸಾಗರ ಯೋಜನೆ :** ಈ ಯೋಜನೆಗೆ ಸಂಬಂಧಿತ ಅಣೆಕಟ್ಟೆಯನ್ನು ತೆಲಂಗಾಣ ರಾಜ್ಯದ ನಾಗಾರ್ಜುನಕೊಂಡದ ಬಳಿ ಕೃಷ್ಣ ನದಿಗೆ ನಿರ್ಮಿಸಲಾಗಿದೆ. ನೀರಾವರಿ ಪೂರೈಕೆ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆಗಳು ಈ ಯೋಜನೆಯ ಪ್ರಮುಖ ಉದ್ದೇಶಗಳು.

© KTBS Not to be published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಸಿಂಧೂ ನದಿಯು _________ ಬಳಿ ಉಗಮವಾಗುತ್ತದೆ.
2. ದಕ್ಷಿಣ ಭಾರತದಲ್ಲೇ ಉದ್ದವಾದ ನದಿ _________ ಆಗಿರುತ್ತದೆ.
3. ಹಿರಾಕುಡ್ ಅಣೆಕಟ್ಟೆಯನ್ನು _________ ನದಿಗೆ ನಿರ್ಮಿಸಲಾಗಿದೆ.
4. ಗಂಗಾ ನದಿಗೆ ಬಂದು ಸೇರುವ _________ ನದಿಯು ಉದ್ದವಾದ ಉಪನದಿ.
5. ಕೋಸಿ ಯೋಜನೆಯು _________ ಮತ್ತು _________ ದೇಶಗಳ ಸಂಯುಕ್ತ ಯೋಜನೆಯಾಗಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಬ್ರಹ್ಮಪುತ್ರ ನದಿಯನ್ನು ಕುರಿತು ವಿವರಿಸಿ.
2. ನೀರಾವರಿ ಎಂದರೇನು? ಭಾರತದ ಪ್ರಮುಖ ನೀರಾವರಿ ವಿಧಗಳನ್ನು ತಿಳಿಸಿ.
3. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?
4. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದರೇನು?
5. ಆಲಮಟ್ಟಿ ಯೋಜನೆ ಕುರಿತು ಟಿಪ್ಪಣಿ ಬರೆಯಿರಿ.
6. ಬಾವಿ ನೀರಾವರಿಯ ಪ್ರಾಮುಖ್ಯತೆ ಮತ್ತು ಹಂಚಿಕೆ ಕುರಿತು ಬರೆಯಿರಿ.

**III. ಕೆಳಕಂಡವುಗಳನ್ನು ಸರಿ ಹೊಂದಿಸಿ ಬರೆಯಿರಿ.**

| | **'A' ಯೋಜನೆಗಳು** | | **'B' ರಾಜ್ಯಗಳು** |
|---|---|---|---|
| 1) | ನಾಗಾರ್ಜುನಸಾಗರ | ಎ) | ಕರ್ನಾಟಕ |
| 2) | ಭಾಕ್ರ-ನಂಗಲ್ | ಬಿ) | ಹಿಮಾಚಲ ಪ್ರದೇಶ |
| 3) | ಹಿರಾಕುಡ್ | ಸಿ) | ತೆಲಂಗಾಣ |
| 4) | ತುಂಗಭದ್ರ | ಡಿ) | ಒಡಿಶಾ |

© KTBS Not to be published

**IV. ಚಟುವಟಿಕೆಗಳು :**

1. ನಿಮ್ಮ ವಾಸಸ್ಥಳಕ್ಕೆ ಸಮೀಪದಲ್ಲಿರುವ ನೀರಾವರಿ ಯೋಜನೆಗೆ ಭೇಟಿ ನೀಡಿ.
2. ಭಾರತದಲ್ಲಿರುವ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪೂರ್ಣ ಪಟ್ಟಿ ತಯಾರಿಸಿ.

**V. ಯೋಜನಾಕಾರ್ಯ :**

1. ಭಾರತದ ರೇಖಾ ನಕ್ಷೆಯನ್ನು ಬರೆದು ನಿಮ್ಮ ಉಪಾಧ್ಯಾಯರ ನೆರವಿನಿಂದ ಪ್ರಮುಖ ನೀರಾವರಿ ಯೋಜನೆಗಳನ್ನು ಗುರುತಿಸಿ.

* * * *

ಅಧ್ಯಾಯ–7

# ಭಾರತದ ಭೂ ಸಂಪನ್ಮೂಲಗಳು

M8F7C8

**ಈ ಅಧ್ಯಾಯದಲ್ಲಿ ಈ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದ ಭೂ ಬಳಕೆ.
- ಭಾರತದಲ್ಲಿ ಕೃಷಿ ಮತ್ತು ಅದರ ಪ್ರಾಮುಖ್ಯತೆ.
- ಭಾರತದಲ್ಲಿ ಕೃಷಿ ವಿಧಗಳು.
- ಬೆಳೆಗಳ ಋತುಗಳು ಮತ್ತು ಬೆಳೆಯಿಡುವ ಮಾದರಿ.
- ಭಾರತದ ಪ್ರಮುಖ ಬೆಳೆಗಳು.
- ತೋಟಗಾರಿಕೆ ಮತ್ತು ಪುಷ್ಪ ಕೃಷಿಗಳ ಮಹತ್ವ.

## ಭಾರತದಲ್ಲಿ ಭೂ ಬಳಕೆ

**ಅರ್ಥ:** ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು. ಇದು ವಿವಿಧ ಅಂಶಗಳಿಂದ ನಿರ್ಧರಿಸಲ್ಪಡುವುದು. ಉದಾ: ಭೂ ಮೇಲ್ಮೈ ಲಕ್ಷಣ, ವಾಯುಗುಣ, ಮಣ್ಣು, ಜನಸಾಂದ್ರತೆ, ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಅಂಶಗಳು.

ಒಂದು ದೇಶದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂಮಿಯು ಅತಿ ಪ್ರಮುಖವಾದುದು. ಆರ್ಥಿಕಾಭಿವೃದ್ಧಿಯಲ್ಲಿ ಭೂಮಿಯ ಸಮರ್ಪಕವಾದ ಬಳಕೆ ಅತ್ಯಾವಶ್ಯಕ.

**ವಿಂಗಡಣೆ :** ಭಾರತದ ಭೂಬಳಕೆಯ ಮಾದರಿಯನ್ನು 7 ವರ್ಗಗಳಾಗಿ ವಿಂಗಡಿಸಬಹುದು: 1. ನಿವ್ವಳ ಸಾಗುವಳಿ ಪ್ರದೇಶ. 2. ಅರಣ್ಯ ಪ್ರದೇಶ. 3. ಕೃಷಿಗಾಗಿ ದೊರೆಯದ ಭೂಮಿ. 4. ಪಾಳುಭೂಮಿ, 5. ಬಳಕೆಯಾಗದ ಕೃಷಿ ಯೋಗ್ಯಭೂಮಿ. 6. ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ. 7. ಇತರೆ

**1. ನಿವ್ವಳ ಸಾಗುವಳಿ ಭೂಮಿ :** ಇದು ಬೆಳೆಗಳ ಸಾಗುವಳಿಗೆ ಬಳಕೆ ಮಾಡಬಹುದಾದ ಭೂಮಿಯನ್ನೊಳಗೊಂಡಿದೆ. ಭಾರತದಂತಹ ಕೃಷಿ ಪ್ರಧಾನವಾದ ದೇಶಕ್ಕೆ ಇದು ಬಹಳ ಪ್ರಮುಖವಾದುದು. ಭಾರತದಲ್ಲಿ ವರದಿಯಾದ ಒಟ್ಟು ಭೂ ಪ್ರದೇಶದಲ್ಲಿ ಶೇ. 42.2 ಭಾಗವು ನಿವ್ವಳ ಸಾಗುವಳಿ ಭೂಮಿಯಾಗಿರುತ್ತದೆ. ಇದು ದೇಶಾದ್ಯಂತ ಏಕ ರೀತಿಯಾಗಿ ಹಂಚಿಕೆಯಾಗಿಲ್ಲ. ಅದು ಹೆಚ್ಚಾಗಿ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಕಂಡುಬರುತ್ತದೆ. ಪ್ರತಿಯಾಗಿ ಇದು ಈಶಾನ್ಯ ರಾಜ್ಯಗಳಲ್ಲಿ ಅತಿ ಕಡಿಮೆ. ಇತರೆ ರಾಜ್ಯಗಳಲ್ಲಿ ಅದು ಸಾಧಾರಣವಾಗಿ ಕಂಡುಬರುವುದು.

**2. ಅರಣ್ಯ ಪ್ರದೇಶ :** ಭಾರತದ ಒಟ್ಟು ವರದಿ ಪ್ರದೇಶದಲ್ಲಿ ಶೇ. 22.8 ಭಾಗವು ಮಾತ್ರ ಅರಣ್ಯಗಳಿಂದಾವರಿಸಿದೆ. ಅತಿ ಹೆಚ್ಚು ಅರಣ್ಯ ಪ್ರದೇಶವು ಅಂಡಮಾನ್–ನಿಕೋಬಾರ್ ದ್ವೀಪಗಳು ಹಾಗೂ ಈಶಾನ್ಯ ರಾಜ್ಯಗಳಲ್ಲಿ ಕಂಡುಬರುತ್ತದೆ. ಪ್ರತಿಯಾಗಿ ಅದು ಹರಿಯಾಣ, ಪಂಜಾಬ್, ರಾಜಸ್ತಾನ ಮತ್ತು ಗುಜರಾತ್‌ಗಳಲ್ಲಿ ಅತಿ ಕಡಿಮೆ.

**3. ಕೃಷಿಗಾಗಿ ದೊರೆಯದ ಭೂಮಿ :** ಮಾನವನ ವಸತಿಗಳು, ರಸ್ತೆ, ರೈಲುಮಾರ್ಗ, ಕಾಲುವೆ, ಪರ್ವತ, ಮರಳುಮಯ ಭೂಮಿ ಮೊದಲಾದ ಕೃಷಿಯೇತರ ಉದ್ದೇಶಗಳಿಗೆ ಬಳಕೆಯಾಗುವ ಭೂಮಿ ಈ ವರ್ಗಕ್ಕೆ ಸೇರುತ್ತದೆ. ದೇಶದ ಒಟ್ಟು ವರದಿಯಾದ ಪ್ರದೇಶದಲ್ಲಿ ಸುಮಾರು ಶೇ 14.1 ಭಾಗವು ಈ ವರ್ಗಕ್ಕೆ ಸೇರಿದೆ. ಇದು ಹೆಚ್ಚಾಗಿ ಅಸ್ಸಾಂ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಕಂಡುಬರುವುದು. ಆದರೆ ಗೋವಾ, ಕೇರಳ, ಒಡಿಶಾ ಮತ್ತು ಮಹಾರಾಷ್ಟ್ರಗಳಲ್ಲಿ ಅತಿ ಕಡಿಮೆ.

© KTBS Not to be republished

**4. ಪಾಳು ಭೂಮಿ :** ಇದು ಸಾಗುವಳಿಗಾಗಿ ಬಳಕೆ ಮಾಡದ ಭೂಮಿ. ದೇಶದ ವರದಿ ಪ್ರದೇಶದಲ್ಲಿ ಶೇ. 8.2 ಭಾಗವನ್ನಾವರಿಸಿದೆ. ಅದು ಹೆಚ್ಚಾಗಿ ಮಿಜೋರಾಂ, ತಮಿಳುನಾಡು ಮತ್ತು ಮೇಘಾಲಯಗಳಲ್ಲಿದೆ. ಆದರೆ ತ್ರಿಪುರ, ಪುದುಚೆರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅತಿ ಕಡಿಮೆ.

**5. ಬಳಕೆಯಾಗದ ಕೃಷಿಯೋಗ್ಯ ಭೂಮಿ :** ಇದು ನಿಗದಿತ ಮಣ್ಣಿನ ಸಾರದ ಕೊರತೆಯಿಂದಾಗಿ ಕೃಷಿಗೆ ಬಳಕೆ ಮಾಡದೆ ಹಾಗೇ ಬಿಟ್ಟಿರುವುದನ್ನು ಒಳಗೊಂಡಿದೆ. ಇದು ಮೇಘಾಲಯ, ಗೋವ, ನಾಗಾಲ್ಯಾಂಡ್ ಮತ್ತು ರಾಜಸ್ತಾನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**6. ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ :** ಇದು ದೇಶದ ವರದಿ ಪ್ರದೇಶದ ಶೇ. 3.4 ಭಾಗವನ್ನು ಮಾತ್ರ ಆವರಿಸಿದೆ. ಹೆಚ್ಚಾಗಿ ಹಿಮಾಚಲಪ್ರದೇಶ, ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಕಂಡುಬರುತ್ತದೆ.

**7. ಇತರೆ :** ಇದು ತೋಟಗಳು ಮತ್ತು ನೆಡುತೋಪುಗಳನ್ನೊಳಗೊಂಡಿದೆ. ದೇಶದ ವರದಿ ಪ್ರದೇಶದ ಶೇ. 1.1 ಭಾಗವು ಮಾತ್ರ ಈ ವರ್ಗಕ್ಕೆ ಸೇರಿದೆ. ಇಂತಹ ಭೂಮಿಯು ಹೆಚ್ಚಾಗಿ ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ಕೇರಳ, ಕರ್ನಾಟಕ, ಹಿಮಾಚಲಪ್ರದೇಶ ಮೊದಲಾದ ರಾಜ್ಯಗಳಲ್ಲಿ ಕಂಡುಬರುತ್ತದೆ.

© KTBS Not to be published

## ವ್ಯವಸಾಯ

**ಅರ್ಥ :** ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು "ವ್ಯವಸಾಯ ಅಥವಾ ಕೃಷಿ" ಎನ್ನುವರು. ಇಂದು ಕೃಷಿಯು ಪಶುಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕಣೆಗಳನ್ನೂ ಒಳಗೊಂಡಿದೆ.

**ಪ್ರಾಮುಖ್ಯತೆ :** ವ್ಯವಸಾಯವು ಮಾನವನ ಅತ್ಯಂತ ಪ್ರಮುಖ ಹಾಗೂ ಪ್ರಾಚೀನವಾದ ವೃತ್ತಿಗಳಲ್ಲಿ ಒಂದಾಗಿದೆ. ಭಾರತವು ಕೃಷಿ ಪ್ರಧಾನವಾದ ದೇಶ. ದೇಶದ ಒಟ್ಟು ಜನ ಸಂಖ್ಯೆಯಲ್ಲಿ ಸುಮಾರು ಶೇ. 65 ಭಾಗವು ಕೃಷಿ ಆಧರಿಸಿದೆ. ದೇಶದ ಆರ್ಥಿಕಾಭಿವೃದ್ಧಿಯೂ ಕೃಷಿಯ ಪ್ರಗತಿಯನ್ನಾಧರಿಸಿದೆ.

ಭಾರತದಲ್ಲಿ ಕೃಷಿಯು ಜೀವನಾಧಾರಿತ ಪ್ರಮುಖ ಮೂಲವಾಗಿದೆ. ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿ. ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ. ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ. ಇದು ಹಲವು ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು. ಉದಾ: ಹತ್ತಿ ಮತ್ತು ಸೆಣಬು ಜವಳಿ, ಸಕ್ಕರೆ ಕೈಗಾರಿಕೆ ಇತ್ಯಾದಿ. ಜೊತೆಗೆ ದೇಶದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೂ ಪ್ರಭಾವ ಬೀರುತ್ತದೆ.

### ಕೃಷಿಯ ವಿಧಗಳು

ವಿವಿಧ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಂದಾಗಿ ಭಾರತದಲ್ಲಿ ವಿವಿಧ ಕೃಷಿ ವಿಧಾನಗಳು ರೂಢಿಯಲ್ಲಿವೆ. ಅವುಗಳ ಸಂಕ್ಷಿಪ್ತ ವಿವರಣೆಯು ಈ ಕೆಳಕಂಡಂತಿದೆ

**1. ಜೀವನಾಧಾರಿತ ಬೇಸಾಯ :** ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ 'ಜೀವನಾಧಾರಿತ ಬೇಸಾಯ' ಎನ್ನುವರು. ಈ ಪದ್ಧತಿಯಲ್ಲಿ ಅತ್ಯಲ್ಪ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಇದೊಂದು ಪುರಾತನ ಮಾದರಿ ಬೇಸಾಯ. ಇದು ಭಾರತದ ಈಶಾನ್ಯ ರಾಜ್ಯಗಳು, ಒಡಿಶಾ ಮತ್ತು ಮಧ್ಯ ಪ್ರದೇಶಗಳಲ್ಲಿ ಹೆಚ್ಚು ರೂಢಿಯಲ್ಲಿದೆ. ಜೀವನಾಧಾರಿತ ಬೇಸಾಯದಲ್ಲಿ 2 ವಿಧಗಳಿವೆ: i) ವರ್ಗಾವಣೆ ಬೇಸಾಯ ಮತ್ತು ii) ಸ್ಥಿರ ಬೇಸಾಯ.

**i) ವರ್ಗಾವಣೆ ಬೇಸಾಯ :** ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ, ಸುಟ್ಟು ವಿಸ್ತರಿಸಿ ಕೆಲವು ವರ್ಷಗಳ ಕಾಲ ಬೇಸಾಯ ಮಾಡಲಾಗುವುದು. ಅಲ್ಲಿನ ಮಣ್ಣಿನ ಸಾರವು ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಕ್ರಮ ಮುಂದುವರಿಸುವುದನ್ನು 'ವರ್ಗಾವಣೆ ಬೇಸಾಯ' ಎನ್ನುವರು. ಕಾಡುಗಳ ಮಧ್ಯದಲ್ಲಿ ಕೆಲ ಬುಡಕಟ್ಟು ಜನರು ಈ ಪುರಾತನ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಭಾರತದ ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಧ್ಯ ಪ್ರದೇಶ, ಒಡಿಶಾ ಮತ್ತು ಕೇರಳ ರಾಜ್ಯಗಳಲ್ಲಿ ಇಂತಹ ಬೇಸಾಯ ರೂಢಿಯಲ್ಲಿತ್ತು.

**ii) ಸ್ಥಿರ ಜೀವನಾಧಾರಿತ ಬೇಸಾಯ :** ಒಂದೆಡೆಯಿಂದ ಮತ್ತೊಂಡೆಗೆ ಸ್ಥಳ ಬದಲಾವಣೆ ಮಾಡದೆ ಶಾಶ್ವತವಾಗಿ ಒಂದೇ ಕಡೆ ನೆಲೆಸಿ ಸಾಗುವಳಿ ಮಾಡುವುದನ್ನು 'ಸ್ಥಿರ ಅಥವಾ ಸ್ಥಾಯಿ ಬೇಸಾಯ' ಎನ್ನುವರು. ಸಾಗುವಳಿ ಭೂಮಿಯನ್ನು ಬಿಟ್ಟು ಹೋಗದೆ ಪ್ರತಿವರ್ಷ ಅದನ್ನೆ ಕೃಷಿಗಾಗಿ ಬಳಸಲಾಗುವುದು.

**ನಿಮಗೆ ಗೊತ್ತೆ?**

*ವರ್ಗಾವಣೆ ಬೇಸಾಯವನ್ನು ಅಸ್ಸಾಂನಲ್ಲಿ "ಜೂಮಿಂಗ್", ಕೇರಳದಲ್ಲಿ 'ಪೋನಮ್' ಆಂಧ್ರಪ್ರದೇಶ ಮತ್ತು ಒಡಿಶಾಗಳಲ್ಲಿ 'ಪೊಡು' ಎಂತಲೂ ಕರೆಯುತ್ತಾರೆ.*

**2. ಸಾಂದ್ರ ಬೇಸಾಯ :** ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ ಪದ್ಧತಿಗೆ 'ಸಾಂದ್ರ ಬೇಸಾಯ' ಎನ್ನುವರು. ಈ ವಿಧಾನದಲ್ಲಿ ವರ್ಷವಿಡೀ ಸಾಗುವಳಿಗಾಗಿ ಭೂಮಿ ಬಳಕೆ ಮಾಡಿಕೊಳ್ಳಲಾಗುವುದು. ವರ್ಷದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಸಾಗುವಳಿ ಮಾಡಿ ಚಿಕ್ಕ ಭೂ ಹಿಡುವಳಿಯಿಂದಲೇ ಹೆಚ್ಚು ಉತ್ಪಾದನೆಗಾಗಿ ಪ್ರಯತ್ನಿಸಲಾಗುವುದು. ಈ ಕೃಷಿ ವಿಧಾನವು ದೇಶದ ಫಲವತ್ತಾದ ಮತ್ತು ನೀರಾವರಿ ಸೌಲಭ್ಯವಿರುವ ಭಾಗಗಳಲ್ಲಿ ಸರ್ವೆ ಸಾಮಾನ್ಯ.

**3. ವಾಣಿಜ್ಯ ಬೇಸಾಯ :** ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿವಿಧಾನಕ್ಕೆ 'ವಾಣಿಜ್ಯ ಬೇಸಾಯ' ಎನ್ನುವರು. ಈ ವಿಧಾನದಲ್ಲಿ ಹಣಗಳಿಕೆ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಗುವಳಿ ಮಾಡಲಾಗುವುದು. ಕಾರ್ಮಿಕರ ಬಳಕೆ ಕಡಿಮೆ. ಯಂತ್ರಗಳು ಮತ್ತು ವೈಜ್ಞಾನಿಕ ಸಾಗುವಳಿ ಕ್ರಮಗಳನ್ನು ಅನುಸರಿಸಲಾಗುವುದು.

**4. ಮಿಶ್ರಣ ಬೇಸಾಯ :** ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿವಿಧಾನ. ಬೆಳೆ ಮತ್ತು ಪಶುಪಾಲನೆಗಳೆರಡರಿಂದಲೂ ರೈತರಿಗೆ ಆದಾಯ ದೊರೆಯುತ್ತದೆ. ಇದು ಭಾರತದಲ್ಲಿ 1951 ರಿಂದ ರೂಢಿಗೆ ಬಂದಿದೆ. ಇಂದು ಅನೇಕ ರಾಜ್ಯಗಳಲ್ಲಿ ಪ್ರಚಲಿತಗೊಂಡಿದೆ.

**5. ನೆಡುತೋಪು ಬೇಸಾಯ :** ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ 'ನೆಡುತೋಪು ಬೇಸಾಯ' ಎನ್ನುವರು. ಇದಕ್ಕೆ ಸಾಕಷ್ಟು ಕಾರ್ಮಿಕರು ಮತ್ತು ಬಂಡವಾಳ ಬೇಕು. ಚಹ, ಕಾಫಿ, ರಬ್ಬರ್ ಮತ್ತು ತೆಂಗು ಪ್ರಮುಖ ನೆಡುತೋಪು ಬೆಳೆಗಳಾಗಿವೆ.

**6. ಒಣ ಬೇಸಾಯ :** ಅತಿ ಕಡಿಮೆ ಮಳೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿಯನ್ನು 'ಒಣ ಬೇಸಾಯ'ವೆನ್ನುವರು. ಇದು ಹೆಚ್ಚಾಗಿ ಮಳೆ ಆಶ್ರಯದಿಂದ ಸಾಗುವುದು. ಭಾರತದಲ್ಲಿ ಇದು ಹೆಚ್ಚಾಗಿ ಪರ್ಯಾಯ ಪ್ರಸ್ಥಭೂಮಿ ಮತ್ತು ರಾಜಸ್ತಾನದ ಪಶ್ಚಿಮ ಭಾಗದಲ್ಲಿ ರೂಢಿಯಲ್ಲಿದೆ.

**7. ಆರ್ದ್ರ ಬೇಸಾಯ :** ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಗಳನ್ನು ಬೆಳೆಯುವುದನ್ನು 'ಆರ್ದ್ರ ಬೇಸಾಯ' ಎನ್ನುವರು. ಈ ವಿಧದ ಬೇಸಾಯವು ಪಶ್ಚಿಮ ಕರಾವಳಿಯ ಉದ್ದಕ್ಕೂ ಹಾಗೂ ಇತರೆ ಹೆಚ್ಚು ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತದೆ.

© KTBS Not to be republished

**8. ನೀರಾವರಿ ಬೇಸಾಯ :** ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನವನ್ನು 'ನೀರಾವರಿ ಬೇಸಾಯ' ಎನ್ನುವರು. ಇದು ವೆಚ್ಚದಾಯಕ, ಆದರೆ ಭಾರತಕ್ಕೆ ಅತ್ಯಾವಶ್ಯಕವಾದುದು. ಏಕೆಂದರೆ ಭಾರತದಲ್ಲಿ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನವಾದುದು.

## ಬೆಳೆ ಋತುಗಳು ಮತ್ತು ಬೆಳೆಯಿಡುವ ಮಾದರಿ

**ಬೆಳೆ ಋತುಗಳು :** ಕೃಷಿ ಪ್ರದೇಶವೊಂದರಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ನಿರ್ದಿಷ್ಟ ಅವಧಿಗೆ 'ಬೆಳೆ ಋತು' ಎನ್ನುವರು. ಭಾರತದಲ್ಲಿ ಮುಖ್ಯವಾಗಿ ಮೂರು ಬೆಳೆ ಋತುಗಳಿವೆ– i) ಮುಂಗಾರು ಬೆಳೆ ಋತು. ii) ಹಿಂಗಾರು ಬೆಳೆ ಋತು ಮತ್ತು iii) ಜ್ಯಾಡ್ ಬೆಳೆ ಋತು.

**i) ಮುಂಗಾರು ಬೆಳೆ ಋತು :** ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು. ಈ ಋತುವಿನಲ್ಲಿ ನೈಋತ್ಯ ಮಾನ್ಸೂನ್ ಮಳೆಗಾಲದ ಆರಂಭದೊಂದಿಗೆ, ಅಂದರೆ ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡಲಾಗುವುದು. ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುತ್ತದೆ. ಈ ಅವಧಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ–ಭತ್ತ, ರಾಗಿ, ಜೋಳ, ಹತ್ತಿ, ನೆಲಕಡಲೆ, ತಂಬಾಕು ಇತ್ಯಾದಿ.

**ii) ಹಿಂಗಾರು ಬೆಳೆ ಋತು :** ಹಿಂಗಾರು ಮಳೆಗಾಲವೆಂದು ಕರೆಯುವ ಈಶಾನ್ಯ ಮಾನ್ಸೂನ್ ಆರಂಭದಲ್ಲಿ, ಅಂದರೆ ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಲಾಗುವುದು. ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದನ್ನು 'ಹಿಂಗಾರು ಬೆಳೆ ಋತು' ಎನ್ನುವರು. ಈ ಅವಧಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ–ಗೋಧಿ, ಬಾರ್ಲಿ, ಕಡಲೆ, ನಾರಗಸೆ, ಇತ್ಯಾದಿ.

**iii) ಜೇಡ್ ಬೆಳೆ ಋತು :** ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳು. ಆ ಋತುವಿನ ಮುಖ್ಯ ಬೆಳೆಗಳೆಂದರೆ–ಕಲ್ಲಂಗಡಿ, ಸೌತೆಕಾಯಿ, ಎಣ್ಣೆಕಾಳು, ಕೆಲವು ದ್ವಿದಳಧಾನ್ಯ, ತರಕಾರಿ ಇತ್ಯಾದಿ.

**ಬೆಳೆಯಿಡುವ ಮಾದರಿ :** ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಳೆಯಿಡುವ ಮಾದರಿ' ಎನ್ನುವರು. ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಅದಕ್ಕೆ ಪ್ರಮುಖ ಕಾರಣಗಳೆಂದರೆ– ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಭೂಹಿಡುವಳಿಯ ಗಾತ್ರ, ನೀರಿನ ಪೂರೈಕೆ, ರೈತರ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನ ಇತ್ಯಾದಿ.

## ಭಾರತದ ಪ್ರಮುಖ ಬೆಳೆಗಳು


ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡಲಾಗುತ್ತದೆ. ಅವುಗಳನ್ನು ಆಹಾರ ಬೆಳೆ, ವಾಣಿಜ್ಯ ಬೆಳೆ, ಎಣ್ಣೆಕಾಳು ಮತ್ತು ನೆಡುತೋಪು ಬೆಳೆಗಳೆಂದು ವಿಂಗಡಿಸಬಹುದು.

**ಆಹಾರ ಬೆಳೆಗಳು :** ಜನರಿಗೆ ಅಗತ್ಯವಾದ ಆಹಾರ ಪೂರೈಕೆಗಾಗಿ ಬೆಳೆಯುವ ಬೆಳೆಗಳನ್ನು 'ಆಹಾರ ಬೆಳೆಗಳು' ಎನ್ನುವರು. ಉದಾ: ಭತ್ತ, ಗೋಧಿ, ಜೋಳ, ದ್ವಿದಳಧಾನ್ಯ ಇತ್ಯಾದಿ.

**ಭತ್ತ :** ಭತ್ತವು ಭಾರತದ ಅತ್ಯಂತ ಪ್ರಮುಖ ಆಹಾರ ಬೆಳೆ. ಇದು ದೇಶದ ಪೂರ್ವ, ದಕ್ಷಿಣ ಮತ್ತು ನೈಋತ್ಯ ಭಾಗಗಳ ಜನರ ಪ್ರಮುಖ ಆಹಾರ ಧಾನ್ಯವಾಗಿದೆ. ಪ್ರಪಂಚದಲ್ಲೇ ಅತಿ ವಿಶಾಲವಾದ ಭತ್ತ ಬೆಳೆಯುವ ಕ್ಷೇತ್ರವು ಭಾರತದಲ್ಲಿದೆ. ಆದರೆ ಭಾರತವು ಚೀನಾದ ತರುವಾಯ ಪ್ರಪಂಚದ ಎರಡನೇ ಹೆಚ್ಚು ಭತ್ತ ಉತ್ಪಾದಿಸುವ ದೇಶ. ಭತ್ತ ಭಾರತದ ಅತಿ ಪ್ರಮುಖ ಮುಂಗಾರು ಬೆಳೆ.

© KTBS Not to be published


ಭತ್ತವು ಉಷ್ಣವಲಯದ ಬೆಳೆ. ಹೀಗಾಗಿ ಈ ಬೆಳೆಗೆ 18ºರಿಂದ 25ºಸೆ. ಅಧಿಕ ಉಷ್ಣಾಂಶ ಮತ್ತು 100–200 ಸೆಂ.ಮೀ. ಅಧಿಕ ಮಳೆ ಅಗತ್ಯ. ಮೆಕ್ಕಲು, ಜೇಡಿ ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಈ ಬೆಳೆಗೆ ಬಹು ಸೂಕ್ತ. ಭತ್ತದ ಗಿಡದ ತಳದಲ್ಲಿ ನೀರು ನಿಂತಿರಬೇಕು. ಹೀಗಾಗಿ ಭೂಮಿ ಸಮತಟ್ಟಾಗಿರಬೇಕು. ಕಡಿಮೆ ಮಳೆ ಬೀಳುವ ಕಡೆ ನೀರಾವರಿ ಅತ್ಯಾವಶ್ಯಕ.




ಭಾರತದ ಎಲ್ಲಾ ರಾಜ್ಯಗಳಲ್ಲೂ ಭತ್ತದ ಬೇಸಾಯ ಕಂಡುಬರುತ್ತದೆ. ಪಶ್ಚಿಮ ಬಂಗಾಳವು ದೇಶದಲ್ಲೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ. ಇತರೆ ಪ್ರಮುಖ ಭತ್ತ ಉತ್ಪಾದಿಸುವ ರಾಜ್ಯಗಳೆಂದರೆ– ಆಂಧ್ರ ಪ್ರದೇಶ, ಉತ್ತರ ಪ್ರದೇಶ, ಪಂಜಾಬ್, ತಮಿಳುನಾಡು, ಒಡಿಶಾ ಮತ್ತು ಕರ್ನಾಟಕ.

**ಗೋಧಿ :** ಭಾರತದ ಎರಡನೆಯ ಪ್ರಮುಖ ಆಹಾರ ಬೆಳೆ ಮತ್ತು ಪ್ರಮುಖ ಹಿಂಗಾರು ಬೆಳೆ. ಇದು ದೇಶದ ಉತ್ತರ ಮತ್ತು ವಾಯವ್ಯ ಪ್ರದೇಶಗಳ ಜನರ ಅತಿ ಮುಖ್ಯ ಆಹಾರಧಾನ್ಯ ಬೆಳೆ.

© KTBS
Not to be published





ಗೋಧಿ ಸಮಶೀತೋಷ್ಣ ವಲಯದ ಬೆಳೆ. ಇದರ ಬೇಸಾಯಕ್ಕೆ ಸಾಧಾರಣ ಉಷ್ಣಾಂಶ 10º ರಿಂದ 15º ಸೆ. ಮತ್ತು ವಾರ್ಷಿಕ ಮಳೆಯ ಹಂಚಿಕೆ 50ರಿಂದ 70 ಸೆಂ.ಮೀ. ಸಾಕು. ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತವಾದವು. ಭಾರತದಲ್ಲಿ ಗೋಧಿಯನ್ನು ಹೆಚ್ಚಾಗಿ ಉತ್ತರದ ಮೈದಾನಗಳಲ್ಲಿ ಬೆಳೆಯಲಾಗುತ್ತದೆ. ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ ಹಾಗೂ ಕರ್ನಾಟಕದ ಉತ್ತರ ಭಾಗಗಳು ಪ್ರಮುಖ ಗೋಧಿ ಉತ್ಪಾದಿಸುವ ಪ್ರದೇಶಗಳು. ಉತ್ತರ ಪ್ರದೇಶವು ಭಾರತದಲ್ಲೇ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ.

## ವಾಣಿಜ್ಯ ಬೆಳೆಗಳು


ವ್ಯಾಪಾರದ ಉದ್ದೇಶದಿಂದ ಬೆಳೆಯುವ ಬೆಳೆಗಳಿಗೆ ವಾಣಿಜ್ಯ ಬೆಳೆಗಳೆನ್ನುವರು. ಉದಾ: ಕಬ್ಬು, ಹತ್ತಿ, ತಂಬಾಕು, ಎಣ್ಣೆಕಾಳು ಇತ್ಯಾದಿ.

**ಕಬ್ಬು :** ಭಾರತದ ಅತಿ ಪ್ರಮುಖ ವಾಣಿಜ್ಯ ಬೆಳೆ. ಪ್ರಪಂಚದಲ್ಲೇ ಅತಿ ವಿಸ್ತಾರವಾದ ಕಬ್ಬು ಬೆಳೆಯುವ ಕ್ಷೇತ್ರವು ಭಾರತದಲ್ಲಿದೆ. ಆದರೆ ಕಬ್ಬಿನ ಉತ್ಪಾದನೆಯಲ್ಲಿ ಭಾರತವು ಬ್ರೆಜಿಲ್ ತರುವಾಯ ಪ್ರಪಂಚದ ಎರಡನೇ ಸ್ಥಾನದಲ್ಲಿದೆ. ಭಾರತವು ಕಬ್ಬಿನ ಮೂಲಸ್ಥಾನ. ಕಬ್ಬು, ಸಕ್ಕರೆ, ಬೆಲ್ಲ ಮತ್ತು ಖಂಡಸಾರಿಗಳ ತಯಾರಿಕೆಗೆ ಮುಖ್ಯ ಕಚ್ಚಾವಸ್ತು.




ಕಬ್ಬು ವಾರ್ಷಿಕ ಬೆಳೆ. ಹೀಗಾಗಿ ಇದರ ಬೇಸಾಯಕ್ಕೆ ನೀರಾವರಿ ಅಗತ್ಯ. ಇದಕ್ಕೆ ಅಧಿಕ ಉಷ್ಣಾಂಶ 21º ರಿಂದ 26º ಸೆ ಮತ್ತು ಅಧಿಕ ಮಳೆ 100 ರಿಂದ 150 ಸೆಂಮೀ ಅವಶ್ಯಕ. ಕಬ್ಬು ಬೆಳೆಗೆ ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣುಗಳು ಸೂಕ್ತವಾದವು. ಭಾರತದಲ್ಲಿ ಪ್ರಮುಖ ಕಬ್ಬು ಉತ್ಪಾದಿಸುವ ಪ್ರದೇಶಗಳೆಂದರೆ–ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳು.

**ತಂಬಾಕು :** ಭಾರತದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದೆ. ತಂಬಾಕನ್ನು ಧೂಮಪಾನದ ಬೀಡಿ, ಸಿಗರೇಟು, ಸಿಗಾರ್, ಹುಕ್ಕ ಮೊದಲಾದವುಗಳ ತಯಾರಿಕೆಗಾಗಿ ಉಪಯೋಗಿಸಲಾಗುವುದು. ಸ್ವಲ್ಪ ಭಾಗವನ್ನು ಅಗಿಯಲು, ನಶ್ಯ ಮತ್ತು ಕೀಟನಾಶಕವಾಗಿ ಬಳಸಲಾಗುತ್ತದೆ. ಇದೊಂದು ಉಷ್ಣ ವಲಯದ ಬೆಳೆ. ಅದರ ಬೇಸಾಯಕ್ಕೆ ಅಧಿಕ ಉಷ್ಣಾಂಶ (21º ರಿಂದ 23º ಸೆ) ಮತ್ತು ಸಾಧಾರಣ ಮಳೆ (50–100ಸೆಂ.ಮೀ.) ಬೇಕು. ಮರಳುಮಿಶ್ರಿತ ಜೇಡಿ ಮಣ್ಣು ಈ ಬೆಳೆಗೆ ಸೂಕ್ತವಾದುದು. ಸಾಕಷ್ಟು ರಾಸಾಯನಿಕ ಗೊಬ್ಬರ ಕೊಡಬೇಕು.




ಭಾರತದಲ್ಲಿ ಆಂಧ್ರಪ್ರದೇಶ, ಗುಜರಾತ್, ಉತ್ತರ ಪ್ರದೇಶ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ಬಿಹಾರ ರಾಜ್ಯಗಳು ಪ್ರಮುಖ ತಂಬಾಕು ಉತ್ಪಾದಿಸುವ ಭಾಗಗಳು. ಪ್ರಪಂಚದಲ್ಲಿ ಭಾರತವು ಮೂರನೇ ಮುಖ್ಯ ತಂಬಾಕು ಉತ್ಪಾದಿಸುವ ಮತ್ತು ನಾಲ್ಕನೆಯ ಪ್ರಮುಖ ರಫ್ತು ಮಾಡುವ ದೇಶವಾಗಿದೆ.

**ನಾರು ಬೆಳೆಗಳು :** ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥ ಪೂರೈಸುವ ಬೆಳೆಗಳಿಗೆ 'ನಾರು ಬೆಳೆಗಳು' ಎನ್ನುವರು. ಭಾರತದಲ್ಲಿ ಹತ್ತಿ ಮತ್ತು ಸೆಣಬುಗಳು ಅತಿ ಪ್ರಮುಖ ನಾರು ಬೆಳೆಗಳಾಗಿವೆ.

© KTBS Not to be republished

**ಹತ್ತಿ :** ಇದು ಭಾರತದ ಪ್ರಮುಖ ಕೈಗಾರಿಕಾ ನಾರು ಬೆಳೆಯಾಗಿದೆ. ಇದು ದೇಶದ ಹತ್ತಿ ಜವಳಿ ಉದ್ಯಮಕ್ಕೆ ಬೇಕಾದ ಕಚ್ಚಾ ಹತ್ತಿಯನ್ನು ಪೂರೈಸುತ್ತದೆ. ಇದು ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ. ಇದರ ಬೇಸಾಯಕ್ಕೆ 21º ರಿಂದ 24º ಸೆ. ಉಷ್ಣಾಂಶ ಮತ್ತು 50 ರಿಂದ 100 ಸೆಂ. ಮೀ. ವಾರ್ಷಿಕ ಮಳೆ ಬೇಕು. ಕಪ್ಪು ಮಣ್ಣು ಬಹಳ ಸೂಕ್ತವಾದುದು. ಹತ್ತಿಯನ್ನು ಭಾರತದಲ್ಲಿ ಮುಂಗಾರು ಬೆಳೆಯಾಗಿ ಬೆಳೆಯಲಾಗುವುದು.

> **ಇದು ನಿಮಗೆ ತಿಳಿದಿರಲಿ!**
> - ತಂಬಾಕಿನ ವೈಜ್ಞಾನಿಕ ಹೆಸರು: ನಿಕೋಷಿಯನ್ ಟೊಬ್ಯಾಕಮ್.
> - ಸಸ್ಯ ಕುಟುಂಬದ ಹೆಸರು: ಸೋಲಾನೇಸಿಯ.
> - ಮೂಲಸ್ಥಳ: ಆ್ಯಂಡಿಸ್ ಪರ್ವತಗಳು (ದಕ್ಷಿಣ ಅಮೆರಿಕ).
> - ಮೊದಲು ಪರಿಚಯಿಸಿದ್ದು: ಜೀನ್ ನಿಕೋಟ್, ಫ್ರಾನ್ಸ್.
> - ಭಾರತಕ್ಕೆ ಮೊದಲು ಪರಿಚಯಿಸಿದವರು: ಪೋರ್ಚುಗೀಸರು.

ಭಾರತದಲ್ಲಿ ಹತ್ತಿಯನ್ನು ಹೆಚ್ಚಾಗಿ ಗುಜರಾತ್. ಮಹಾರಾಷ್ಟ್ರ, ಆಂಧ್ರಪ್ರದೇಶ, ಹರಿಯಾಣ, ಮಧ್ಯ ಪ್ರದೇಶ, ಪಂಜಾಬ್, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಉತ್ಪಾದಿಸಲಾಗುವುದು. ಭಾರತದಲ್ಲಿ ಪ್ರಪಂಚದ ಅತ್ಯಂತ ವಿಸ್ತಾರವಾದ ಹತ್ತಿ ಬೆಳೆಯುವ ಪ್ರದೇಶವಿದೆ ಮತ್ತು ಪ್ರಪಂಚದಲ್ಲಿ 3ನೆಯ ಮುಖ್ಯ ಹತ್ತಿ ಉತ್ಪಾದಿಸುವ ದೇಶ.

**ಪಾನೀಯ ಬೆಳೆಗಳು :** ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು. ಭಾರತದಲ್ಲಿ ಕಾಫಿ ಮತ್ತು ಚಹಗಳು ಅತಿ ಪ್ರಮುಖ ಪಾನೀಯ ಬೆಳೆಗಳು.

**ಚಹ :** ಚಹವು ಅತ್ಯಂತ ಪ್ರಮುಖ ಹಾಗೂ ಸುಲಭ ದರದಲ್ಲಿ ದೊರೆಯುವ ಪಾನೀಯ. ಪ್ರಪಂಚದಲ್ಲಿ ಚೀನಾದ ತರುವಾಯ ಭಾರತವು ಎರಡನೇ ಪ್ರಮುಖ ಚಹ ಉತ್ಪಾದಿಸುವ ದೇಶ. ಚಹ ಒಂದು ನೆಡುತೋಪು ಬೆಳೆಯಾಗಿದೆ. ಇದು ಉಷ್ಣ ವಲಯದ ಮತ್ತು ಉಪ ಉಷ್ಣವಲಯದ ಬೆಳೆ. ಇದರ ಬೇಸಾಯಕ್ಕೆ 21º –30º ಸೆ. ಉಷ್ಣಾಂಶ ಮತ್ತು 150–250 ಸೆಂ.ಮೀ. ವಾರ್ಷಿಕ ಮಳೆ ಬೇಕು. ಹೆಚ್ಚು ಸಸ್ಯಾಂಶವುಳ್ಳ ಆಳವಾದ ಫಲವತ್ತಾದ ಮಣ್ಣು ಈ ಬೆಳೆಗೆ ಬಹು ಸೂಕ್ತ. ಸಮುದ್ರ ಮಟ್ಟಕ್ಕೆ 1200 ರಿಂದ 2400 ಮೀ. ಎತ್ತರವುಳ್ಳ ಬೆಟ್ಟಗಳ ಇಳಿಜಾರು ಅವಶ್ಯಕ. ಭಾರತದಲ್ಲಿ ಚಹವನ್ನು ಹೆಚ್ಚಾಗಿ ಅಸ್ಸಾಂ, ಪಶ್ಚಿಮಬಂಗಾಳ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಬೆಳೆಯುತ್ತವೆ.

> **ಇದು ನಿಮಗೆ ತಿಳಿದಿರಲಿ!**
> *ಚಹ ಗಿಡದ ವೈಜ್ಞಾನಿಕ ಹೆಸರು: ಕೆಮಿಲಿಯ ಥೀಯ. ಚಹದಲ್ಲಿ ಥಿಯೆನ್ ಅಂಶವಿದೆ.*

© KTBS Not to be republished

## ತೋಟಗಾರಿಕೆ ಮತ್ತು ಪುಷ್ಪ ಕೃಷಿಗಳ ಮಹತ್ವ

**ತೋಟಗಾರಿಕೆ :** ಹಣ್ಣು, ತರಕಾರಿ, ಹೂವು, ಔಷಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು "ತೋಟಗಾರಿಕೆ ಬೇಸಾಯ" ಎನ್ನುವರು. ಸಮರ್ಪಕ ಭೂಬಳಕೆ, ನೈಸರ್ಗಿಕ ಸಂಪನ್ಮೂಲಗಳ ಆದರ್ಶದಾಯಕ ಬಳಕೆ ಮತ್ತು ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ ಮಾಡುವುದರೊಂದಿಗೆ ತೋಟಗಾರಿಕೆಯು ಭಾರತದ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ. ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ ಮತ್ತು ಆಹಾರ ಭದ್ರತೆಗೆ ನೆರವಾಗುತ್ತದೆ.

ಭಾರತವು ತನ್ನ ವೈವಿಧ್ಯ ವಾಯುಗುಣ ಮತ್ತು ಮಣ್ಣಿನ ಪ್ರಕಾರಗಳಿಂದಾಗಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯ ಹೊಂದಿದೆ. ಇಂದು ಭಾರತವು ಒಂದು ಪ್ರಖ್ಯಾತ ತೋಟಗಾರಿಕಾ ಬೆಳೆ ಬೆಳೆಯುವ ದೇಶವಾಗಿ ಹೊರಹೊಮ್ಮಿದೆ. ಪ್ರಪಂಚದಲ್ಲಿ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತವು ಚೀನಾದ ತರುವಾಯ ಎರಡನೆಯ ಸ್ಥಾನದಲ್ಲಿದೆ. ಅಂದರೆ ಪ್ರಪಂಚದ ಒಟ್ಟು ಹಣ್ಣು ಉತ್ಪಾದನೆಯಲ್ಲಿ ಶೇ. 11 ಮತ್ತು ತರಕಾರಿಯಲ್ಲಿ ಶೇ. 7 ಭಾಗವನ್ನು ಭಾರತವು ಪೂರೈಸುತ್ತದೆ.

ಭಾರತದಲ್ಲಿ ತೋಟಗಾರಿಕೆಯು ಪ್ರಮುಖವಾಗಿ ಆಂಧ್ರ ಪ್ರದೇಶ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಲ್ಲಿ ಅಭಿವೃದ್ಧಿಗೊಂಡಿದೆ.

**ಪುಷ್ಪ ಕೃಷಿ :** ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ 'ಪುಷ್ಪ ಕೃಷಿ' ಎನ್ನುವರು. ಪುರಾತನ ಕಾಲದಿಂದಲೂ ಹೂವುಗಳ ಬೇಸಾಯದ ಕಲೆ ಭಾರತೀಯರಿಗೆ ತಿಳಿದಿದೆ. ದೇಶದ ಕೃಷಿಯ ಮೇಲೆ ಪುಷ್ಪಕೃಷಿಯು ಮಹತ್ವದ ಪಾತ್ರವಹಿಸುತ್ತದೆ. ಇದು ರೈತರ ಆದಾಯ ಗಳಿಕೆ, ಉದ್ಯೋಗ ಅದರಲ್ಲೂ ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ ಹಾಗೂ ದೇಶದ ರಫ್ತು ವ್ಯಾಪಾರದ ವೃದ್ಧಿಗೆ ನೆರವಾಗುತ್ತದೆ.

**ನಿಮಗೆ ತಿಳಿದಿದೆಯೆ?**

- ಆಂಗ್ಲಭಾಷೆಯ *'Horticulture'* ಶಬ್ದವು *Hortus* ಮತ್ತು *Colere* ಪದಗಳಿಂದ ಸಂಯೋಜಿತವಾದುದು. *Hortus* ಎಂದರೆ 'ತೋಟ' *Colere* ಎಂದರೆ 'ಸಾಗುವಳಿ' ಎಂದರ್ಥ
- ತೋಟಗಾರಿಕೆ ಅಭಿವೃದ್ಧಿಯನ್ನು 'ಸ್ವರ್ಣಕ್ರಾಂತಿ' *(Golden Revolution)* ಎಂದು ಕರೆಯಲಾಗಿದೆ.

ವಿವಿಧ ಹೂವುಗಳನ್ನು ಬೆಳೆಯಲು ಭಾರತದ ಕೃಷಿ ವಾಯುಗುಣದ ಪರಿಸ್ಥಿತಿ ಬಹಳ ಸೂಕ್ತವಾಗಿದೆ. ಭಾರತವು ಕೆಲವು ಸಾಂಪ್ರದಾಯಿಕ ಹೂವುಗಳ ಉತ್ಪಾದನೆಗೆ ಪ್ರಸಿದ್ಧವಾಗಿದೆ. ಉದಾ: ಮಲ್ಲಿಗೆ, ಚೆಂಡುಮಲ್ಲಿಗೆ, ಸೇವಂತಿಗೆ, ಕನಕಾಂಬರ, ಸಂಪಿಗೆ ಇತ್ಯಾದಿ. ಬಿಡಿ ಹೂವುಗಳಾದ ಸೀತೆಹೂವು (ಆರ್ಕಿಡ್ಸ್), ಗ್ಲಾಡಿಯೋಲಸ್, ಪಾಟಲ, ಖಾಂದ, ಬಾಳೆಹೂವು (ಆಂತೂರಿಯಂ), ಲಿಲ್ಲಿ, ಸುಗಂಧರಾಜ ಇತ್ಯಾದಿಗಳ ಉತ್ಪಾದನೆಗೂ ಪ್ರಸಿದ್ಧಿ.

ಪುಷ್ಪ ಕೃಷಿಯು ಪ್ರಮುಖವಾಗಿ ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

© KTBS Not to be published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ________ ಎಂದು ಕರೆಯಲಾಗಿದೆ.
2. ಬೆಳೆ ಮತ್ತು ಪಶುಪಾಲನೆಗಳೆರಡನ್ನೂ ಒಳಗೊಂಡ ಕೃಷಿ ಪದ್ಧತಿಗೆ ________ ಎಂದು ಕರೆಯಲಾಗಿದೆ.
3. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವ ಅವಧಿಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳಿಗೆ ________ ಎನ್ನುವರು.
4. ಭಾರತದಲ್ಲಿ ________ ರಾಜ್ಯವು ಅತಿ ಹೆಚ್ಚು ಭತ್ತ ಉತ್ಪಾದಿಸುತ್ತದೆ.

**II. ಗುಂಪುಗಳಲ್ಲಿ ಚರ್ಚಿಸಿದ ನಂತರ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಭೂ ಬಳಕೆ ಎಂದರೇನು?
2. ನೆಡುತೋಪು ಬೇಸಾಯವೆಂದರೇನು? ಉದಾಹರಣೆ ಕೊಡಿ.
3. ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ವ್ಯತ್ಯಾಸ ತಿಳಿಸಿ.
4. ಕಬ್ಬು ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?

5. ಪಾನೀಯ ಬೆಳೆಗಳೆಂದರೇನು? ಉದಾಹರಣೆ ಕೊಡಿ.

6. ಭಾರತದಲ್ಲಿ ತೋಟಗಾರಿಕೆಯ ಮಹತ್ವ ಕುರಿತು ವಿವರಿಸಿ.

**III. ಚಟುವಟಿಕೆಗಳು :**

1. ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ವಿವಿಧ ಆಹಾರ ಧಾನ್ಯಗಳ ನಮೂನೆಗಳನ್ನು ಸಂಗ್ರಹಿಸುವುದು.

2. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಹತ್ತಿ ಮತ್ತು ಚಹ ಬೆಳೆಯುವ ಪ್ರದೇಶಗಳನ್ನು ಗುರುತಿಸುವುದು.

**IV. ಯೋಜನಾ ಕಾರ್ಯಗಳು :**

1. ನೀವು ವಾಸವಾಗಿರುವ ಸುತ್ತಮುತ್ತ ಬೆಳೆಯುವ ಬೆಳೆಗಳಿಗೆ ಸಂಬಂಧಿಸಿದ ಚಿತ್ರ ಮತ್ತು ಮಾಹಿತಿಗಳನ್ನು ಸಂಗ್ರಹಿಸುವುದು.

2. ಪುಷ್ಪ ಕೃಷಿ ಮತ್ತು ಮಹಿಳಾ ಶಕ್ತಿಯ ಬಗ್ಗೆ ಒಂದು ಸಮೂಹ ಚರ್ಚೆಯನ್ನು ನಿಯೋಜಿಸುವುದು.

* * * *

© KTBS
Not to be published

# ಅರ್ಥಶಾಸ್ತ್ರ

## ಅಧ್ಯಾಯ – 1

## ಅಭಿವೃದ್ಧಿ

K5M4H5

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಅಭಿವೃದ್ಧಿ ಮತ್ತು ಅನಾಭಿವೃದ್ಧಿಯ ಅರ್ಥ ಮತ್ತು ಸ್ವರೂಪ.
- ಮಾನವ ಅಭಿವೃದ್ಧಿಯ ಸೂಚಕಗಳು.
- ಲಿಂಗ ಸಂಬಂಧಿ ಅಭಿವೃದ್ಧಿ.

ನಾವು ನಮ್ಮ ಜೀವನದಲ್ಲಿ ನಿರಂತರ ಪ್ರಗತಿ ಸಾಧಿಸಲು ಪ್ರಯತ್ನಿಸುತ್ತಿರುತ್ತೇವೆ. ನಮ್ಮ ಆಶೋತ್ತರಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈಡೇರಿಸಿಕೊಂಡು, ಹಿಂದಿನಕ್ಕಿಂತ ಉತ್ತಮವಾಗಿರಲು ಬಯಸುತ್ತೇವೆ. ಅದೇ ರೀತಿಯಲ್ಲಿ ಪ್ರತಿಯೊಂದು ಅರ್ಥವ್ಯವಸ್ಥೆಯು ಸಹ ಜನರಿಗೆ ಲಭ್ಯವಿರುವ ಸರಕು–ಸೇವೆಗಳ ಪ್ರಮಾಣವನ್ನು ಹೆಚ್ಚಿಸಿ ಅವರ ಕಲ್ಯಾಣವನ್ನು ಉತ್ತಮಪಡಿಸುವ ಪ್ರಯತ್ನ ಮಾಡುತ್ತಿರುತ್ತದೆ. ಒಂದು ದೇಶದ ಎಲ್ಲರ ಆಶೋತ್ತರಗಳನ್ನು ಈಡೇರಿಸುವ ಸಾಮರ್ಥ್ಯವನ್ನು ವಿಸ್ತರಿಸುವ ಈ ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯುತ್ತೇವೆ. ಆದ್ದರಿಂದ, ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸಿ; ಬಡತನ, ನಿರುದ್ಯೋಗ, ಅಸಮಾನತೆ, ಹಣದುಬ್ಬರಗಳಂಥ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು.

© KTBS Not to be published

### 1. ಅಭಿವೃದ್ಧಿ ಮತ್ತು ಅನಾಭಿವೃದ್ಧಿ

**ಅಭಿವೃದ್ಧಿ:** ಅಭಿವೃದ್ಧಿ ಎಂಬ ಪದವನ್ನು ನಾವು ನಿತ್ಯದ ಬದುಕಿನಲ್ಲಿ ಸಾಮಾನ್ಯವಾಗಿ ಬಳಸುತ್ತಿರುತ್ತೇವೆ. ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸಲು ನಾವು ಸಾಮಾನ್ಯವಾಗಿ 'ಅಭಿವೃದ್ಧಿ' ಪದವನ್ನು ಬಳಸುತ್ತೇವೆ. ಉದಾ: ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ, ಶೈಕ್ಷಣಿಕ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇತ್ಯಾದಿ. ಹಾಗೆಯೇ ಒಂದು ದೇಶದ ಆರ್ಥಿಕ ಚಟುವಟಿಕೆಗಳ ವಿಸ್ತರಣೆಯನ್ನು ನಾವು ಆರ್ಥಿಕ ಅಭಿವೃದ್ಧಿ ಎಂದು ಗುರುತಿಸುತ್ತೇವೆ. ಆದರೆ ಆರ್ಥಿಕ ಅಭಿವೃದ್ಧಿಯು ಒಂದು ಸಂಕೀರ್ಣ ವಿದ್ಯಮಾನವಾಗಿದ್ದು ಅದನ್ನು ಸರಳವಾಗಿ ವ್ಯಾಖ್ಯಾನಿಸಲು ಆಗುವುದಿಲ್ಲ.

ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ "ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ. ಈ ವ್ಯಾಖ್ಯಾನವು ಆರ್ಥಿಕ ಅಭಿವೃದ್ಧಿಯ ಮೂರು ಅಂಶಗಳನ್ನು ಒತ್ತಿ ಹೇಳುತ್ತದೆ. ಅವೆಂದರೆ, ಆರ್ಥಿಕ ಅಭಿವೃದ್ಧಿಯು 1. ಒಂದು ಪ್ರಕ್ರಿಯೆ; 2. ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ; ಮತ್ತು 3. ದೀರ್ಘಾವಧಿ ಹೆಚ್ಚಳ. ಇವುಗಳನ್ನು ಸಂಕ್ಷಿಪ್ತವಾಗಿ ಗಮನಿಸೋಣ:

**a) ಒಂದು ಪ್ರಕ್ರಿಯೆ:** ಇಲ್ಲಿ ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ. ಉತ್ಪಾದನಾಂಗಗಳ ಪೂರೈಕೆಯು ಹೊಸ ಸಂಪನ್ಮೂಲಗಳ ಶೋಧ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆಯ ಕಾರಣಗಳಿಂದಾಗಿ ಬದಲಾವಣೆಯಾಗುತ್ತವೆ. ಅದೇ ರೀತಿ ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ, ವರಮಾನದ ಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ,

ಜನರ ಅಭಿರುಚಿಗಳಲ್ಲಿನ ಬದಲಾವಣೆ, ಮುಂತಾದವುಗಳಿಂದಾಗಿ ಸರಕುಗಳ ಬೇಡಿಕೆಯಲ್ಲಿ ಬದಲಾವಣೆ ಉಂಟಾಗುತ್ತದೆ. ಈ ಬದಲಾವಣೆಗಳು ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಪೂರಕವಾಗುತ್ತವೆ.

**b) ನೈಜ ರಾಷ್ಟ್ರೀಯ ವರಮಾನ:** ರಾಷ್ಟ್ರೀಯ ವರಮಾನವು ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು–ಸೇವೆಗಳ ಒಟ್ಟು ಮೌಲ್ಯವಾಗಿದೆ. ಇದು ಆರ್ಥಿಕ ಅಭಿವೃದ್ಧಿಯ ಮಾಪನದ ಪ್ರಮುಖ ಸಾಧನವಾಗಿದೆ. ರಾಷ್ಟ್ರೀಯ ವರಮಾನ ಹೆಚ್ಚಾಗಿದ್ದಷ್ಟೂ ಅಭಿವೃದ್ಧಿ ಹೆಚ್ಚು. ಆದರೆ ಇಲ್ಲಿ 'ನೈಜ' ಎಂಬ ಪದದ ಮೇಲೆ ಒತ್ತು ನೀಡಲಾಗಿದ್ದು, ಅದು ಜನರ ಕೊಳ್ಳುವ ಶಕ್ತಿಯನ್ನು ಬಿಂಬಿಸುತ್ತದೆ. ಸಮಯ ಕಳೆದ ಹಾಗೆ ಬೆಲೆಗಳು ಏರುವುದು ನಮಗೆಲ್ಲ ತಿಳಿದ ವಿಷಯ. ಈ ಏರಿದ ಬೆಲೆಗಳಲ್ಲಿ ನಾವು ಸರಕು ಸೇವೆಗಳ ಮೌಲ್ಯಮಾಪನ ಮಾಡಿದಾಗ, ಆ ಮೌಲ್ಯಗಳು ಮತ್ತು ಅಂತೆಯೇ ವರಮಾನ ಹೆಚ್ಚಿದ ಹಾಗೆ ತೋರುತ್ತವೆ. ಆದ್ದರಿಂದ ಆ ಹೆಚ್ಚಳದಲ್ಲಿ ಬೆಲೆ ಏರಿಕೆಯ ಪರಿಣಾಮವನ್ನು ಕಳೆಯಬೇಕಾಗುತ್ತದೆ. ಹಾಗೆ ಬೆಲೆ ಬದಲಾವಣೆಗೆ ವರಮಾನವನ್ನು ಹೊಂದಾಣಿಕೆ ಮಾಡಿದಾಗ ನೈಜ ವರಮಾನ ಅಥವಾ ಹಣದ ವಾಸ್ತವಿಕ ಖರೀದಿ ಸಾಮರ್ಥ್ಯ ದೊರಕುತ್ತದೆ. ಇದು ಅಭಿವೃದ್ಧಿಯನ್ನು ಪೋಷಿಸುವಲ್ಲಿ ಬೆಲೆಗಳ ಸ್ಥಿರತೆ ಕಾಯ್ದುಕೊಳ್ಳುವ ಅವಶ್ಯಕತೆಯನ್ನು ಸೂಚಿಸುತ್ತದೆ.

**c) ದೀರ್ಘಾವಧಿ ಹೆಚ್ಚಳ:** ಮೇಲೆ ಸೂಚಿಸಿದ ನೈಜ ವರಮಾನವು ದೀರ್ಘಾವಧಿಯವರೆಗೆ ಅಂದರೆ 10 ವರ್ಷಗಳು ಅಥವಾ ಅದಕ್ಕಿಂತ ಅಧಿಕ ಅವಧಿಯವರೆಗೆ ಹೆಚ್ಚಳವಾಗಬೇಕು. ಅಲ್ಪಾವಧಿಯ ಹೆಚ್ಚಳಗಳು ಅಭಿವೃದ್ಧಿಯೆಂದು ಪರಿಗಣಿತವಾಗುವುದಿಲ್ಲ. ಈ ಮೊದಲು ತಿಳಿಸಿದ ಬೇಡಿಕೆಯ ಸಂರಚನೆ ಮತ್ತು ಉತ್ಪಾದನಾಂಗಗಳ ಪೂರೈಕೆಗಳಲ್ಲಿನ ಬದಲಾವಣೆಯು ನಿರಂತರ ಪ್ರಕ್ರಿಯೆಯಾದಾಗ ಮಾತ್ರ ಅಭಿವೃದ್ಧಿಯು ದೀರ್ಘಾವಧಿಯದ್ದಾಗಿರುತ್ತದೆ.

© KTBS Not to be published

ಪ್ರೊ. ಕೋಲಿನ್ ಕ್ಲಾರ್ಕ ಅವರು ಆರ್ಥಿಕ ಅಭಿವೃದ್ಧಿಯು ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ವಿವರಿಸುತ್ತಾರೆ. ಆದರೆ ಆರ್ಥಿಕ ಕಲ್ಯಾಣವು ಜನರು ಬಳಸುವ ಸರಕು – ಸೇವೆಗಳ ಮೊತ್ತವೇ ಆಗಿರುತ್ತದೆ. ಆರ್ಥಿಕ ಕಲ್ಯಾಣದ ಹೆಚ್ಚಳವು ಇನ್ನೊಂದು ಅರ್ಥದಲ್ಲಿ ಬಡತನದಂತಹ ಸಮಸ್ಯೆಗಳು ಕಡಿಮೆಯಾಗುವುದನ್ನು ಸೂಚಿಸುವುದರಿಂದ ಅಭಿವೃದ್ಧಿಯನ್ನು "ದೀರ್ಘಾವಧಿಯವರೆಗೆ ನಿರಂತರವಾಗಿ, ಬಡತನದ ಪ್ರಮಾಣ ಕಡಿಮೆ ಮಾಡಿ, ಒಂದು ರಾಷ್ಟ್ರವನ್ನು ಸ್ವಪೋಷಕ ಬೆಳವಣಿಗೆಯೆಡೆಗೆ ಕೊಂಡೊಯ್ಯುವ ಪ್ರಕ್ರಿಯೆ" ಎಂದು ವ್ಯಾಖ್ಯಾನಿಸಬಹುದು.

ಆದರೆ ಕಾಲಾಂತರದಲ್ಲಿ ಅಭಿವೃದ್ಧಿಯ ಉದ್ದೇಶಗಳು ವಿಸ್ತೃತಗೊಂಡಿದ್ದು, ಈಗ ನಾವು ಪ್ರತಿಯೊಬ್ಬರಿಗೂ ಪ್ರಯೋಜನ ದೊರಕುವಂಥ 'ಒಳಗೊಳ್ಳುವ ಅಭಿವೃದ್ಧಿ'ಯಲ್ಲದೇ, ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಪರಿಸರವನ್ನು ಮುಂದಿನ ಪೀಳಿಗೆಯವರಿಗಾಗಿಯೂ ಸಂರಕ್ಷಿಸಿ ಪ್ರಯೋಜನ ನೀಡುವಂಥ 'ನಿರಂತರ ಅಭಿವೃದ್ಧಿ'ಯ ಕುರಿತಾಗಿ ಮಾತನಾಡುತ್ತಿದ್ದೇವೆ. ಆದ್ದರಿಂದ ಅಭಿವೃದ್ಧಿಯ ಉದ್ದೇಶಗಳು: ವರಮಾನದ ಹೆಚ್ಚಳ; ಬಡತನ, ನಿರುದ್ಯೋಗ ಮತ್ತು ಅಸಮಾನತೆಗಳಲ್ಲಿ ಇಳಿಕೆ; ಪರಿಸರದ ಸಂರಕ್ಷಣೆಯಲ್ಲದೇ; ಎಲ್ಲ ಜನರ ಕಲ್ಯಾಣವನ್ನು ಹೆಚ್ಚಿಸುವುದು, ಎಂದು ಹೇಳಬಹುದು.

ಪ್ರಥಮ ಹಂತದಲ್ಲಿ ಅಮೇರಿಕ, ಕೆನಡಾ, ಜಪಾನ್, ಜರ್ಮನಿ, ಇಂಗ್ಲೆಂಡ್, ಆಸ್ಟ್ರೇಲಿಯ, ಪಶ್ಚಿಮ ಯುರೋಪ್‌ನ ರಾಷ್ಟ್ರಗಳು; 1950ರ ನಂತರದಲ್ಲಿ ಸಿಂಗಪುರ, ಹಾಂಗ್‌ಕಾಂಗ್, ಮಲೇಷ್ಯಾ, ಚೀನ ಹಾಗೂ ಇನ್ನೂ ಹಲವು ರಾಷ್ಟ್ರಗಳ ವರಮಾನವು ದೀರ್ಘಾವಧಿ ಏರಿಕೆ ಕಂಡಿದ್ದರಿಂದ ಅವುಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ವರ್ಗೀಕರಿಸಲಾಗಿದೆ.

**ಅನಾಭಿವೃದ್ಧಿ:** 'ಅನಾಭಿವೃದ್ಧಿ' ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ. ಇಂಥ ದೇಶಗಳಲ್ಲಿ ಒಟ್ಟಾರೆ ಉತ್ಪಾದನೆ ಕಡಿಮೆಯಿದ್ದು, ಜನಸಂಖ್ಯೆ ಅಪಾರವಾಗಿರುವುದರಿಂದ

ತಲಾ ವರಮಾನವು ಬಹಳ ಕಡಿಮೆ ಇರುತ್ತದೆ. ಸಂಯುಕ್ತ ರಾಷ್ಟ್ರದ ಪ್ರಕಾರ "ಅಮೇರಿಕ, ಕೆನಡಾ, ಆಸ್ಟ್ರೇಲಿಯ ಮತ್ತು ಪಶ್ಚಿಮ ಯುರೋಪ್‌ನ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾ ವರಮಾನ ಹೊಂದಿರುವ ರಾಷ್ಟ್ರಗಳೇ ಅನಾಭಿವೃದ್ಧಿ ರಾಷ್ಟ್ರಗಳು". ಇಲ್ಲಿ ಮುಂದುವರೆದ ರಾಷ್ಟ್ರಗಳಿಗೆ ಹೋಲಿಸಿದಂತೆ ತಲಾ ವರಮಾನ ಕಡಿಮೆ ಇರುವುದೇ ಅನಾಭಿವೃದ್ಧಿಯಾಗಿದೆ. ಆದರೆ ಈ ರಾಷ್ಟ್ರಗಳು ಅಭಿವೃದ್ಧಿ ಹೊಂದುವ ಸಾಮರ್ಥ್ಯವನ್ನು ಮತ್ತು ಆ ದೆಸೆಯಲ್ಲಿ ಅವುಗಳ ಪ್ರಯತ್ನಗಳನ್ನು ಗಮನಿಸಿ ಅವುಗಳನ್ನು 'ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು' ಎಂದು ಕರೆಯಲಾಗುತ್ತಿದೆ.

ವಿಶ್ವ ಬ್ಯಾಂಕು ತನ್ನ 'ಜಾಗತಿಕ ಅಭಿವೃದ್ಧಿ ವರದಿ'ಗಳಲ್ಲಿ ರಾಷ್ಟ್ರಗಳನ್ನು ಅಧಿಕ, ಮಧ್ಯಮ ಮತ್ತು ಕಡಿಮೆ ವರಮಾನ ಹೊಂದಿದ ರಾಷ್ಟ್ರಗಳೆಂದು ವರ್ಗೀಕರಿಸಿ, ಮಧ್ಯಮ ಮತ್ತು ಕಡಿಮೆ ವರಮಾನ ಹೊಂದಿದ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದು ಕರೆಯುತ್ತದೆ. ಭಾರತವು ಅಭಿವೃದ್ಧಿ ಹೊಂದುತ್ತಿರುವ ಒಂದು ಮುಂಚೂಣಿ ರಾಷ್ಟ್ರವಾಗಿದ್ದು, 1990ರ ನಂತರದಲ್ಲಿ ವರಮಾನದಲ್ಲಿ ಗಣನೀಯ ಹೆಚ್ಚಳವನ್ನು ಸಾಧಿಸಿದೆ.

## 2. ಅಭಿವೃದ್ಧಿಯ ಸೂಚಿಗಳು

ಆರ್ಥಿಕ ಅಭಿವೃದ್ಧಿಯ ಮಾಪನ ಹೇಗೆ? ಹಲವು ಅರ್ಥಶಾಸ್ತ್ರಜ್ಞರು ವರಮಾನವನ್ನು ಒಂದು ಪ್ರಮುಖ ಮಾನದಂಡವಾಗಿ ಬಳಸಿದ್ದರೆ, ಇನ್ನೂ ಹಲವರು ಆದಾಯೇತರ ಮಾನದಂಡಗಳನ್ನು ಬಳಸುತ್ತಾರೆ.

**ವರಮಾನ ಸೂಚಿಗಳು:** ಇಲ್ಲಿ ಬಳಸುವ ವರಮಾನವು, ರಾಷ್ಟ್ರೀಯ ವರಮಾನವಾಗಿದ್ದು, ಇದು ಈ ಮೊದಲೇ ತಿಳಿಸಿದ ಹಾಗೆ ರಾಷ್ಟ್ರದಲ್ಲಿ ವಾಸವಾಗಿರುವ ಎಲ್ಲ ಜನರ ಒಟ್ಟು ವರಮಾನವಾಗಿದೆ. ವರಮಾನ ಹೆಚ್ಚಾದಂತೆ ಅಭಿವೃದ್ಧಿಯ ಮಟ್ಟ ಕೂಡ ಹೆಚ್ಚಾಗುತ್ತದೆ. ಆದರೆ ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ. ಆದ್ದರಿಂದ ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ತಲಾ ವರಮಾನವನ್ನು ಅಭಿವೃದ್ಧಿಯ ಮಾನದಂಡವಾಗಿ ಸಾಮಾನ್ಯವಾಗಿ ಬಳಸಲಾಗುತ್ತದೆ. ತಲಾ ವರಮಾನವು ಒಂದು ದೇಶದ ಜನರ ಸರಾಸರಿ ವರಮಾನವಾಗಿದ್ದು, ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ದೊರಕುವ ಅಂಕಿಯಾಗಿದೆ.

***ನಿಮಗಿದು ತಿಳಿದಿರಲಿ:***

2016 ರಲ್ಲಿ ಭಾರತದ ತಲಾ ವರಮಾನವನ್ನು ರೂ. 1,21,603 ಎಂದು ಲೆಕ್ಕ ಹಾಕಲಾಗಿದ್ದು, ಅದು ಜಾಗತಿಕ ಸರಾಸರಿ ವರಮಾನದ ಶೇ.15ರಷ್ಟಿದೆ. ಆ ವರ್ಷದ ಒಟ್ಟು ವರಮಾನವಾದ ರೂ. 1,47,86,557 ಕೋಟಿಗಳನ್ನು, 121.6 ಕೋಟಿ ಜನಸಂಖ್ಯೆಯಿಂದ ಭಾಗಿಸಿದಾಗ ಬಂದಂಥ ಸಂಖ್ಯೆ ಇದಾಗಿದೆ. ರಾಷ್ಟ್ರೀಯ ವರಮಾನದಲ್ಲಿ ಏಳನೆಯ ಸ್ಥಾನದಲ್ಲಿರುವ ಭಾರತವು, ತಲಾ ವರಮಾನದಲ್ಲಿ 143ನೆಯ ಸ್ಥಾನದಲ್ಲಿದೆ.

ತಲಾ ವರಮಾನವು ಒಂದು ಬಹು ಜನಪ್ರಿಯ ಮಾನದಂಡವಾಗಿದ್ದರೂ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ. ಅಲ್ಲದೇ ಅದು ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ. ಆದ್ದರಿಂದ ಆರ್ಥಿಕ ಅಭಿವೃದ್ಧಿಯನ್ನು ಸೂಕ್ತವಾಗಿ ಅಳೆಯಬಹುದಾದಂಥ 'ಪರ್ಯಾಯ' ಮಾಪನಗಳ ರಚನೆಗೆ ತಜ್ಞರು ಪ್ರಯತ್ನಿಸಿದ್ದು, ಮಾನವ ಅಭಿವೃದ್ಧಿ ಸೂಚ್ಯಂಕ ಅವುಗಳಲ್ಲಿ ಅತ್ಯಂತ ಮಹತ್ವದ್ದಾಗಿದೆ.

## 3. ಮಾನವ ಅಭಿವೃದ್ಧಿ ಸೂಚಿಗಳು

ಆರ್ಥಿಕ ಪ್ರಗತಿಯ ಮುಖ್ಯ ಉದ್ದೇಶವು ಜನರ ಕಲ್ಯಾಣವನ್ನು ಹೆಚ್ಚಿಸುವುದಾಗಿದೆ ಎಂಬ ವಾಸ್ತವವನ್ನು

© KTBS
Not to be published


ಈಗ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಭಿವೃದ್ಧಿಯು ಜನರಿಗೆ ಘನತೆಯುತ ಜೀವನ ನಡೆಸಲು ಸಹಾಯ ಮಾಡಬೇಕು. ಅದು ಕನಿಷ್ಠ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಶುದ್ಧ ಕುಡಿಯುವ ನೀರು, ಶುದ್ಧ ಗಾಳಿ ಮತ್ತು ಸ್ವಚ್ಛ ಪರಿಸರ ಒದಗಿಸುವಿಕೆಯನ್ನು ಸೂಚಿಸುತ್ತದೆ. ಕೇವಲ ವರಮಾನದ ಹೆಚ್ಚಳದಿಂದ ಮಾತ್ರ ಇವುಗಳೆಲ್ಲವೂ ಸಾಧ್ಯವಾಗದಿರಬಹುದು.

ಅಮರ್ತ್ಯ ಸೆನ್ ಅವರ ಚಿಂತನೆಗಳನ್ನು ಬಳಸಿಕೊಂಡು ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ಅವರು ಮಾನವರು ಘನತೆಯುತ ಜೀವನ ನಡೆಸಲು ಬೇಕಾಗಿರುವ ಅತ್ಯಂತ ಮಹತ್ವದ ಅಂಶಗಳನ್ನು ಸುದೀರ್ಘವಾದ ಆರೋಗ್ಯಯುತ ಜೀವನ ನಡೆಸುವುದು; ಜ್ಞಾನವಂತರಾಗಿರುವುದು; ಮತ್ತು ಜೀವನಕ್ಕೆ ಅವಶ್ಯವಿರುವ ಕನಿಷ್ಠ ಸೌಲಭ್ಯಗಳನ್ನು ಖರೀದಿಸಲು ಅವಶ್ಯವಿರುವ ವರಮಾನದ ಪ್ರಮಾಣ ಹೊಂದುವುದು ಎಂದು ತಿಳಿಸುತ್ತಾರೆ. ಇದನ್ನೇ ಅಮರ್ತ್ಯ ಸೆನ್ ಅವರು ಮಾನವ ಅಭಿವೃದ್ಧಿ ಎಂದು ಕರೆದಿದ್ದಾರೆ. ಅವರ ಪ್ರಕಾರ ಮಾನವನ ಸಾಮರ್ಥ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿಯಾಗಿದೆ. ಮಾನವರು ಬಯಸುವ ಪ್ರಮುಖ ಸಾಮರ್ಥ್ಯಗಳೆಂದರೆ ಆರೋಗ್ಯ, ಶಿಕ್ಷಣ ಮತ್ತು ವರಮಾನ. ಹಾಗಾದರೆ ಮಾನವ ಅಭಿವೃದ್ಧಿಯನ್ನು ಅಳೆಯುವುದು ಹೇಗೆ?

ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP) ವಿಭಾಗವು ಈ ಚಿಂತನೆಗಳನ್ನು ಬಳಸಿಕೊಂಡು 'ಮಾನವ ಅಭಿವೃದ್ಧಿ ಸೂಚ್ಯಂಕ' ಎಂಬ ಹೊಸ ಮಾನದಂಡವನ್ನು ರಚಿಸಿ, ರಾಷ್ಟ್ರಗಳ ಪ್ರಗತಿಯನ್ನು ಮಾಪನ ಮಾಡುತ್ತಿದೆ. ಪ್ರಮುಖ ಸಾಮರ್ಥ್ಯಗಳನ್ನು ಅಳೆಯಬಹುದಾದ ಸೂಚಿಗಳನ್ನು ಬಳಸಿ, ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಚಿಸಲಾಗಿದೆ. ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ, ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಅಳೆಯಲಾಗುತ್ತಿದೆ. ಈ ಸೂಚಿಗಳನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.

© KTBS
Not to be published


**ಚಿತ್ರ 1: ಮಾನವ ಅಭಿವೃದ್ಧಿಯ ಸೂಚಿಗಳು**




ನಿರೀಕ್ಷಿತ ಜೀವಿತಾವಧಿಯು ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯಸ್ಸು ಆಗಿದೆ. ಪೌಷ್ಠಿಕ ಆಹಾರ, ಆರೋಗ್ಯ ಮತ್ತು ನೈರ್ಮಲ್ಯ, ಸ್ವಚ್ಛ ಪರಿಸರ ಮುಂತಾದವುಗಳ ಲಭ್ಯತೆಯು ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುತ್ತವೆ. ಶಿಕ್ಷಣದ ಮಟ್ಟವು ರಾಷ್ಟ್ರದ ಪ್ರಗತಿಗೆ ಪೂರಕವಾಗಿದ್ದು, ರಾಷ್ಟ್ರದ ಶಿಕ್ಷಣದ ಸಾಧನೆಯನ್ನು 25 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು ಪೂರ್ಣಗೊಳಿಸಿದ ಶಿಕ್ಷಣದ ಅವಧಿ ಹಾಗೂ 5 ವರ್ಷದ ಮಕ್ಕಳು ಪಡೆಯಬಹುದಾದ ಶಿಕ್ಷಣದ ಅವಧಿಯನ್ನು ಬಳಸಿ ಮಾಪನ ಮಾಡಲಾಗುತ್ತದೆ.

ಅದೇ ರೀತಿ ತಲಾ ವರಮಾನ ಬಳಸಿ ಜೀವನ ಮಟ್ಟವನ್ನು ಅಳೆಯಲಾಗುತ್ತದೆ. ಈ ಮೂರು ಸೂಚಿಗಳ ಸರಾಸರಿಯೇ ಮಾನವ ಅಭಿವೃದ್ಧಿ ಸೂಚ್ಯಂಕವಾಗಿದೆ.

**ಚಿತ್ರ 2: ಭಾರತದ ಮಾನವ ಅಭಿವೃದ್ಧಿಯ ಪ್ರಗತಿ**




ಹೀಗೆ ಲೆಕ್ಕ ಹಾಕಲಾದ ಸೂಚ್ಯಂಕವನ್ನು ಬಳಸಿಕೊಂಡು, ನೀವು ಪ್ರತಿಯೊಂದು ಸೂಚಿಯ ಪ್ರಗತಿಯನ್ನಲ್ಲದೇ, ಒಟ್ಟಾರೆ ಸೂಚ್ಯಂಕದ ಪ್ರಗತಿಯನ್ನೂ ಅಳೆಯಬಹುದಾಗಿದ್ದು, ರಾಷ್ಟ್ರಗಳ ನಡುವಿನ ಮಾನವ ಅಭಿವೃದ್ಧಿಯ ಪ್ರಗತಿಯ ತುಲನೆ ಮಾಡಬಹುದು. 2014ರಲ್ಲಿ, ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕವು 0.586ರಷ್ಟಿದ್ದಿತು ಹಾಗೂ, ಲೆಕ್ಕ ಹಾಕಲಾದ 187 ರಾಷ್ಟ್ರಗಳ ಪೈಕಿ 135ನೆಯ ಸ್ಥಾನ ಪಡೆದಿತ್ತು. ಭಾರತವು UNDP ಯ ವರ್ಗೀಕರಣದ ಅನುಸಾರ ಮಧ್ಯಮ ಮಟ್ಟದ ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಮೂಹದಲ್ಲಿ ಬರುತ್ತದೆ.

© KTBS Not to be published

ಚಿತ್ರ 2ರಲ್ಲಿ ತೋರಿಸಿದಂತೆ 2012ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕವು 0.554 ಇದ್ದು, 186 ರಾಷ್ಟ್ರಗಳ ಪೈಕಿ 136ನೆಯ ಸ್ಥಾನವನ್ನು ಪಡೆದಿತ್ತು. ಸೂಚ್ಯಂಕದ ಈ 0.554 ಮೌಲ್ಯವು 65.8 ವರ್ಷಗಳ ನಿರೀಕ್ಷಿತ ಜೀವಿತಾವಧಿ; 4.4 ವರ್ಷಗಳ ಸರಾಸರಿ ಶಾಲಾ ಕಲಿಕೆಯ ಅವಧಿ; ಹಾಗೂ $3203 ತಲಾ ವರಮಾನದ ಸರಾಸರಿ ಫಲಿತವಾಗಿದೆ. 1980 ಹಾಗೂ 2012ರ ಅವಧಿಯಲ್ಲಿ, ಮಾನವ ಅಭಿವೃದ್ಧಿಯ ಎಲ್ಲ ಅಂಶಗಳು ಸುಧಾರಣೆ ಹೊಂದಿದ್ದು, ಭಾರತದ ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಂಕವು 0.334ರಿಂದ 0.554ಕ್ಕೆ ಏರಿಕೆಯಾಗಿದೆ. ಆದರೆ, ಮೊದಲ ಹತ್ತು ರಾಷ್ಟ್ರಗಳ ಸಾಧನೆಯನ್ನು ಗಮನಿಸಿದಾಗ ಭಾರತ ಸಾಧಿಸಬೇಕಿರುವುದು ಇನ್ನೂ ಬಹಳಷ್ಟು ಇದೆ.

## 4. ಲಿಂಗ ಸಂಬಂಧಿ ಅಭಿವೃದ್ಧಿ

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರ ಅತ್ಯಂತ ಮಹತ್ವವಾದುದು. ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿ ದುಡಿಯುವ ಸಾಮರ್ಥ್ಯವನ್ನು ಪಡೆದಿದ್ದಾರೆ. ಅವರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸಮಾನತೆಯನ್ನು ಒದಗಿಸಿಕೊಡಬೇಕಾದುದು ನಾಗರಿಕ ಸಮಾಜದ ಕರ್ತವ್ಯವಾಗಿದೆ. ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸ್ವಾತಂತ್ರ್ಯ, ಸಮಾನತೆ ಮತ್ತು ಅವಕಾಶಗಳನ್ನು ನೀಡಿದೆ. ಆದರೆ ಮಹಿಳೆಯರ ವಿರುದ್ಧದ ಇನ್ನೂ ಹಲವಾರು ತಾರತಮ್ಯಗಳನ್ನಲ್ಲದೇ, ಹಿಂಸೆಯ ಘಟನೆಗಳು ಮೇಲಿಂದ ಮೇಲೆ ವರದಿಯಾಗುವುದನ್ನು ಗಮನಿಸಿದ್ದೇವೆ. ಮಹಿಳೆಯರು ಇನ್ನೂ

ಸಂಪೂರ್ಣವಾಗಿ ಅಭಿವೃದ್ಧಿಯಲ್ಲಿ ಸಮಾನ ಪಾಲುದಾರರಾಗಿಲ್ಲ. ಆದ್ದರಿಂದ ಸದ್ಯ ಇರುವ ಲಿಂಗ ತಾರತಮ್ಯತೆಗಳನ್ನು ಕಡಿಮೆ ಮಾಡುವ ಕ್ರಮ ಕೈಗೊಳ್ಳಬೇಕಾಗಿದೆ.

> **ನಿಮಗಿದು ತಿಳಿದಿರಲಿ:**
> 'ಅಭಿವೃದ್ಧಿಯು ಲಿಂಗ ಸಂವೇದಿಯಾಗದಿದ್ದರೆ, ಅದು ನಶಿಸಿ ಹೋಗುತ್ತದೆ' – ಮಾನವ ಅಭಿವೃದ್ಧಿ ವರದಿ, 1994.

ಭಾರತದಲ್ಲಿ ಸದ್ಯ ಇರುವ ಲಿಂಗ ತಾರತಮ್ಯಗಳ ಹಲವು ಆಯಾಮಗಳನ್ನು ನಾವು ಗಮನಿಸಬಹುದು. ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗ ಅನುಪಾತವೆಂದು ಕರೆಯಲಾಗಿದ್ದು, ಅದು ಸ್ಥೂಲವಾಗಿ ಒಂದು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಬಿಂಬಿಸುತ್ತದೆ. ನಮ್ಮ ದೇಶದಲ್ಲಿನ ಒಟ್ಟಾರೆ ಮಹಿಳೆಯರ ವಿರುದ್ಧದ ತಾರತಮ್ಯದ ಕಾರಣವಾಗಿ, 2011ರ ಜನಗಣತಿಯ ಅನುಸಾರ, ಈ ಲಿಂಗ ಅನುಪಾತವು ಕೇವಲ 945 ಇದ್ದದ್ದು ಆಘಾತಕಾರಿ. ಇನ್ನೂ ಹೆಚ್ಚಿನ ಆಘಾತಕಾರಿ ಅಂಶವೆಂದರೆ ಮಕ್ಕಳ (0–6 ವರ್ಷ) ಲಿಂಗ ಅನುಪಾತವು ಇದಕ್ಕಿಂತಲೂ ಕಡಿಮೆ ಇರುವುದು.

> **ಚಟುವಟಿಕೆ:**
> ಭಾರತದಲ್ಲಿನ ಅನಾನುಕೂಲಕರ ಪುರುಷ–ಮಹಿಳಾ ಅನುಪಾತಕ್ಕೆ ಕಾರಣಗಳನ್ನು ಪಟ್ಟಿ ಮಾಡಿರಿ.

ಅದೇ ರೀತಿ 2011ರ ಜನಗಣತಿಯ ಪ್ರಕಾರ ಮಹಿಳೆಯರ ಸಾಕ್ಷರತಾ ದರವು ಶೇ. 65.46 ಇದ್ದರೆ, ಪುರುಷರ ಸಾಕ್ಷರತಾ ದರವು ಶೇ. 82.14 ಇದ್ದಿತು. ಇಂದಿಗೂ ಸಹ ಕೆಲವು ಜನರು ಮಹಿಳೆಗೆ ಶಿಕ್ಷಣ ಅವಶ್ಯವಿಲ್ಲವೆಂದು ನಂಬುವುದರಿಂದ ಹಾಗೂ ಇನ್ನೂ ಹಲವೆಡೆ ಮಹಿಳೆಯರ ಶಿಕ್ಷಣಕ್ಕೆ ಸೂಕ್ತ ಸೌಲಭ್ಯಗಳು ಇರದಿರುವುದರಿಂದ ಈ ತಾರತಮ್ಯವು ಮುಂದುವರೆದಿದೆ. ಇನ್ನು ಮಹಿಳೆಯರ ಉದ್ಯೋಗದ ಪರಿಸ್ಥಿತಿಗಳನ್ನು ಗಮನಿಸಿದರೆ, ಅವರು ಪ್ರಮುಖವಾಗಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದು (ಕೃಷಿ, ಕಟ್ಟಡನಿರ್ಮಾಣ, ಸಣ್ಣ ಉದ್ದಿಮೆಗಳು, ಗೃಹ ಕೈಗಾರಿಕೆಗಳು, ಇತ್ಯಾದಿ) ಅವರಿಗೆ ಪುರುಷರಿಗಿಂತ ಕಡಿಮೆ ಪ್ರಮಾಣದ ಕೂಲಿ ನೀಡಲಾಗುತ್ತದೆ. ಮೇಲಾಗಿ ಅವರು ಸಂಪಾದಿಸಿದ ಹಣವನ್ನು ಖರ್ಚು ಮಾಡುವ ಸ್ವಾತಂತ್ರ್ಯವೂ ಅವರಿಗೆ ಇಲ್ಲ. ಅಲ್ಪ ಶಿಕ್ಷಣದ ಕಾರಣದಿಂದಾಗಿ ಮಹಿಳೆಯರು ಉತ್ತಮ ಹುದ್ದೆಗಳಲ್ಲಿ ಮತ್ತು ಅಧಿಕ ಸಂಬಳವಿರುವ ಉದ್ಯೋಗಗಳಲ್ಲಿ ಇರುವುದು ಅಪರೂಪ.

ಬಹಳಷ್ಟು ಮನೆಗಳಲ್ಲಿ ಮಹಿಳೆಯರ ಊಟದ ಪಾಳಿಯು ಕೊನೆಯದಾಗಿದ್ದು, ಗಂಡ ಹಾಗೂ ಮಕ್ಕಳು ಊಟ ಮಾಡಿದ ನಂತರ ಮಿಕ್ಕಿದ ಅಡುಗೆಯನ್ನು ಅವರು ಊಟ ಮಾಡಬೇಕಾದ ಪರಿಸ್ಥಿತಿ ಇದೆ. ಇದರಿಂದಾಗಿ ಅವಳು ಅಪೌಷ್ಠಿಕತೆಗೆ ತುತ್ತಾಗಿ ಹಲವಾರು ರೋಗಗಳಿಗೂ ಈಡಾಗುತ್ತಾಳೆ. ಒಂದೆಡೆ ಅಪೌಷ್ಠಿಕತೆ, ಮತ್ತೊಂದೆಡೆ ಅಧಿಕ ಕೆಲಸದ ಒತ್ತಡದಿಂದ ಅವಳು ಅನಾರೋಗ್ಯಕ್ಕೆ ಒಳಗಾದರೂ ಪುರುಷರು ಅದನ್ನು ನಿರ್ಲಕ್ಷಿಸುವುದೇ ಹೆಚ್ಚು. ಅದರಲ್ಲೂ ಗರ್ಭಿಣಿಯರ ಆರೋಗ್ಯವು ಕೆಟ್ಟರೆ, ಅದು ಹುಟ್ಟುವ ಮಕ್ಕಳ ಆರೋಗ್ಯವನ್ನೂ ಬಾಧಿಸುತ್ತದೆ. ಈ ಕಾರಣಗಳಿಂದಾಗಿ ಭಾರತದಲ್ಲಿ ತಾಯಂದಿರ ಮರಣ (ಗರ್ಭಿಣಿಯಾಗಿದ್ದಾಗ ಮತ್ತು ಹೆರಿಗೆ ಸಮಯದಲ್ಲಿ), ಶಿಶುಗಳ ಮರಣ (ಒಂದು ವರ್ಷದ ಒಳಗಿನವರು) ಮತ್ತು ಮಕ್ಕಳ ಮರಣ (ಐದು ವರ್ಷ ಒಳಗಿನವರು) ಪ್ರಮಾಣ ಅಧಿಕವಾಗಿರುತ್ತದೆ. ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯೆಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ.

ರಾಜಕೀಯ ಸಂಸ್ಥೆಗಳಲ್ಲಿ (ಪಂಚಾಯತಿಗಳು, ಪೌರಸಂಸ್ಥೆಗಳು) ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಾಗಿರಿಸಿದ್ದರೂ ಅವರ ಇರುವಿಕೆಯು ಹಲವು ಸಾರಿ ಅವಗಣನೆಗೆ ಒಳಗಾದರೆ, ಅವರ ಧ್ವನಿಯನ್ನು ಇನ್ನೂ ಹಲವು ಸಾರಿ ಗಂಭೀರವಾಗಿ ಪರಿಗಣಿಸುವುದಿಲ್ಲ. ಹೀಗಾಗಿ ಲಿಂಗ ತಾರತಮ್ಯ ಮುಂದುವರೆದಿರುವುದನ್ನು ನಾವು ಕಾಣುತ್ತೇವೆ.

© KTBS Not to be republished

ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ. ಒಂದು ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘವಾಗಿದ್ದು, ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಬಾಹ್ಯ ಸಹಾಯವನ್ನು ಪಡೆದು, ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಲೆಕ್ಕ ನಿರ್ವಹಣೆ, ಬ್ಯಾಂಕಿನ ಜೊತೆ ವ್ಯವಹರಿಸುವುದಲ್ಲದೇ ವರಮಾನ ಸೃಷ್ಟಿಸುವಂಥ ಉದ್ಯೋಗಗಳ ಕುರಿತು ಅವರಿಗೆ ತರಬೇತಿಯನ್ನೂ ನೀಡಲಾಗುತ್ತದೆ. ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿವೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ. ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಬಲೀಕರಣವನ್ನು ಈ ಹಿಂದೆ ಅವರಿಗೆ ನಿರಾಕರಿಸಲಾದ ಜೀವನದ ಮಹತ್ವದ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಬಹುದು. ಅದು ಜನರಲ್ಲಿ ಶಕ್ತಿ ತುಂಬುವ ಒಂದು ಪ್ರಕ್ರಿಯೆ ಎಂದು ಸಹ ವ್ಯಾಖ್ಯಾನಿಸಬಹುದು. ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಗಟ್ಟಲು ಹಲವಾರು ಕಾನೂನುಗಳನ್ನು ಜಾರಿಗೊಳಿಸಿ, ಸಮಾನ ವೇತನ, ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿಯಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳು ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವಲ್ಲಿ ಖಂಡಿತವಾಗಿ ಸಹಾಯ ಮಾಡಬಲ್ಲವು.

© KTBS Not to be published

**ನಿಮಗೆ ಇದು ಗೊತ್ತೇ?**

UNDPಯು ಲಿಂಗ ಅಸಮಾನತೆಯ ಸೂಚ್ಯಂಕವನ್ನೂ ರಾಷ್ಟ್ರಗಳ ಮಟ್ಟದಲ್ಲಿ ರಚಿಸುತ್ತದೆ. ಈ ಸೂಚ್ಯಂಕದ ಮೌಲ್ಯವು 0 ಹಾಗೂ 1ರ ಮಧ್ಯದಲ್ಲಿದ್ದು, ಸೊನ್ನೆಯು ಸಂಪೂರ್ಣ ಸಮಾನತೆ ಸೂಚಿಸಿದರೆ, ಒಂದು ಸಂಪೂರ್ಣ ಅಸಮಾನತೆ ಸೂಚಿಸುತ್ತದೆ. 2015ರಲ್ಲಿ ಭಾರತದ ಲಿಂಗ ಅಸಮಾನತಾ ಸೂಚ್ಯಂಕದ ಮೌಲ್ಯವು 0.563 ಇದ್ದು, 188 ರಾಷ್ಟ್ರಗಳ ಪೈಕಿ 130 ನೆಯ ಸ್ಥಾನ ಪಡೆದಿತ್ತು. ಇದರರ್ಥ ಲಿಂಗ ಸಮಾನತೆ ಮತ್ತು ಮಹಿಳಾ ಅಭಿವೃದ್ಧಿ ಕುರಿತಂತೆ ಭಾರತವು ಹೀನ ಸ್ಥಿತಿಯಲ್ಲಿದೆ ಎಂದು.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಆರ್ಥಿಕ ಅಭಿವೃದ್ಧಿಯು ಒಂದು ____________
2. ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು-ಸೇವೆಗಳ ಮೌಲ್ಯವನ್ನು ____________ ಎನ್ನುವರು.
3. ಅನಾಭಿವೃದ್ಧಿ ರಾಷ್ಟ್ರದಲ್ಲಿ ಪ್ರಮುಖವಾಗಿ __________ ಕಡಿಮೆ ಇರುವುದು.
4. ಮಾನವ ಅಭಿವೃದ್ಧಿಯು ___________ ಗಳ ವಿಸ್ತರಣೆಯನ್ನು ಸೂಚಿಸುತ್ತದೆ.
5. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ___________

6. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ______ ನೆಯ ಸ್ಥಾನ ಹೊಂದಿತ್ತು.

7. 2011ನೇ ಸಾಲಿನಲ್ಲಿ ಭಾರತದಲ್ಲಿ ಲಿಂಗ ಅನುಪಾತವು ______ ಇತ್ತು.

**II. ಈ ಕೆಳಗಿನವುಗಳನ್ನು ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.
2. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?
3. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?
4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.
5. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು?
6. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.

**III. ಚಟುವಟಿಕೆ :**

ನಿಮ್ಮ ಹಳ್ಳಿ ಅಥವಾ ನಗರದಲ್ಲಿ ಸರ್ವೇಕ್ಷಣ ಮಾಡಿ, ಅಲ್ಲಿರುವ ಕುಟುಂಬಗಳ ಅಭಿವೃದ್ಧಿಯಲ್ಲಿನ ಭಿನ್ನತೆಗಳನ್ನು ಗುರುತಿಸಿರಿ.

**IV. ಯೋಜಿತ ಕಾರ್ಯ :**

ಇತ್ತೀಚಿನ ದಿನಗಳಲ್ಲಿ ಸರ್ಕಾರ ಕೈಗೊಂಡ ಮಹಿಳಾ ಸಬಲೀಕರಣ ಚಟುವಟಿಕೆಗಳ ಪಟ್ಟಿ ಮಾಡಿರಿ.

© KTBS Not to be published

* * *

## ಅಧ್ಯಾಯ – 2

# ಗ್ರಾಮೀಣ ಅಭಿವೃದ್ಧಿ

G2T1M6

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಗ್ರಾಮೀಣ ಅಭಿವೃದ್ಧಿಯ ಅರ್ಥ ಹಾಗೂ ಮಹತ್ವ*
- *ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ*
- *ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ*
- *ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳೆ*

ಭಾರತ ಹಳ್ಳಿಗಳ ದೇಶ. 2011ರ ಜನಗಣತಿಯ ಪ್ರಕಾರ ಶೇ.68.84ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಬಹು ಹಿಂದೆಯೇ 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ' ಎಂದಿದ್ದರು. ಆದರೆ ಸ್ವಾತಂತ್ರ್ಯ ದೊರಕಿ ಸುಮಾರು 70 ವರ್ಷಗಳ ನಂತರವೂ ಭಾರತದ ಗ್ರಾಮಗಳು ದುಸ್ಥಿತಿಯ ಮತ್ತು ಹಿಂದುಳಿಯುವಿಕೆಯ ಕುರುಹುಗಳಾಗಿದ್ದು, ಮೂರನೆಯ ಒಂದರಷ್ಟು ಗ್ರಾಮೀಣ ಜನರು ಕಡು ಬಡತನದಿಂದ ಬಳಲುತ್ತಿದ್ದಾರೆ. ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಬಡತನ ನಿರ್ಮೂಲನಾ ಯೋಜನೆಗಳು ಜನರನ್ನು ತಲುಪಲು ಸಂಪೂರ್ಣವಾಗಿ ಸಫಲವಾಗಿಲ್ಲ.

ಸ್ವಾತಂತ್ರ್ಯಾ ನಂತರ ಸರ್ಕಾರವು ಅನುಸರಿಸಿದ ಅಭಿವೃದ್ಧಿ ತಂತ್ರಗಳು ನಗರ ಕೇಂದ್ರಿತ ಅಭಿವೃದ್ಧಿಗೆ ಅವಕಾಶ ನೀಡಿದವು ಎಂದು ಬಹಳಷ್ಟು ವಿದ್ವಾಂಸರು ವಾದಿಸುತ್ತಾರೆ. ಬ್ರಿಟಿಷ್ ಆಳ್ವಿಕೆಯಲ್ಲಿ ಗ್ರಾಮೀಣ ಕೈಗಾರಿಕೆಗಳು ಅವಸಾನದತ್ತ ಸಾಗಿದ್ದು, ಸ್ವಾತಂತ್ರ್ಯಾ ನಂತರದಲ್ಲಿ ಆಧುನಿಕ ಉದ್ದಿಮೆಗಳ ಪೈಪೋಟಿಯಿಂದಾಗಿ ಅವು ಮತ್ತಷ್ಟು ಆಘಾತವನ್ನು ಅನುಭವಿಸಿದವು. ಕೃಷಿಯು ನಿಯಮಿತ ಉದ್ಯೋಗ ಮತ್ತು ಸೂಕ್ತ ಕೂಲಿ ಒದಗಿಸಲು ಅಸಮರ್ಥವಾಗಿದ್ದರಿಂದ ಜನರು ನಗರಗಳೆಡೆಗೆ ವಲಸೆ ಬರಲು ಪ್ರಾರಂಭಿಸಿದರು. ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಕೈಗಾರಿಕೆ ಮತ್ತು ಸೇವಾ ವಲಯಗಳು ತೀವ್ರವಾಗಿ ವಿಸ್ತರಣೆಗೊಳ್ಳುವ ಪ್ರಕ್ರಿಯೆಗೆ ಮತ್ತಷ್ಟು ಉತ್ತೇಜನ ದೊರಕಿತು.

ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ. ಸುಮಾರು ಶೇ. 60ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದು, ರಾಷ್ಟ್ರೀಯ ವರಮಾನಕ್ಕೆ ಈ ವಲಯದ ಕೊಡುಗೆ ಬಹಳ ಕಡಿಮೆಯಿದ್ದು, ಅದು ನಿರಂತರವಾಗಿ ಇಳಿಕೆಯಾಗುತ್ತಿದೆ. ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಈ ಅಸಮತೋಲನವನ್ನು ಹೋಗಲಾಡಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯವಶ್ಯವಾಗಿದೆ.

ಈ ಅಧ್ಯಾಯದಲ್ಲಿ ನೀವು ಗ್ರಾಮೀಣ ಅಭಿವೃದ್ಧಿಯ ಅರ್ಥ ತಿಳಿದುಕೊಂಡು ಅದನ್ನು ಸಾಧಿಸಲು ಕೈಗೊಂಡ ಸರ್ಕಾರದ ಕ್ರಮಗಳ ಪರಾಮರ್ಶೆ ಮಾಡಲಿದ್ದೀರಿ.

### 1. ಗ್ರಾಮೀಣ ಅಭಿವೃದ್ಧಿಯ ಅರ್ಥ ಹಾಗೂ ಮಹತ್ವ

ಗ್ರಾಮೀಣ ಅಭಿವೃದ್ಧಿಯು ಗ್ರಾಮಗಳ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ಸಾಧಿಸುವ ಒಂದು ಪ್ರಕ್ರಿಯೆ ಎಂದು ಅರ್ಥೈಸಬಹುದು. ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಗ್ರಾಮ ಪ್ರದೇಶಗಳ ಏಳ್ಗೆಯನ್ನು ಗ್ರಾಮೀಣ ಅಭಿವೃದ್ಧಿಯೆಂದು ಕರೆಯಬಹುದು. ಅದು ಬಡಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಮುನ್ನಡೆಯ ಒಂದು ಸಮಗ್ರ ಪ್ರಕ್ರಿಯೆಯಾಗಿದೆ.

© KTBS Not to be republished

ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಅತ್ಯಂತ ಪ್ರಮುಖ ಕಾರಣವಾಗಿದೆ. ಆದ್ದರಿಂದ ಅಧಿಕ ಪ್ರಮಾಣದ ಕೃಷಿಯೇತರ ಚಟುವಟಿಕೆಗಳನ್ನು ಪೋಷಿಸುವ ಅಗತ್ಯತೆಯಿದ್ದು, ಇದಕ್ಕಾಗಿ ಸಾಕ್ಷರತೆ; ಕೌಶಲಗಳು; ಆರೋಗ್ಯ; ನೈರ್ಮಲ್ಯ; ಸಾರಿಗೆ, ಶಕ್ತಿ, ಸಂಪರ್ಕ, ಮಾರುಕಟ್ಟೆ, ಹಣಕಾಸು, ಮುಂತಾದ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು ಅವಶ್ಯವಿದೆ. ಅಲ್ಲದೇ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಮತ್ತು ಭೂ ಸುಧಾರಣೆಗಳು ಸಹ ಅತ್ಯವಶ್ಯವಾಗುತ್ತವೆ. ಹೀಗೆ, ಗ್ರಾಮೀಣ ಅಭಿವೃದ್ಧಿಯು ಸಾಕ್ಷರತೆ, ಆರೋಗ್ಯ, ಮೂಲಭೂತ ಸೌಲಭ್ಯಗಳು, ಭೂ ಸುಧಾರಣೆಗಳು, ನೀರಾವರಿಗಳಲ್ಲದೇ ಬಡವರ ಜೀವನ ಸ್ಥಿತಿಯನ್ನು ಸುಧಾರಿಸುವ ನಿರ್ದಿಷ್ಟ ಕ್ರಮಗಳನ್ನು ಒಳಗೊಂಡಿದೆ. ಆದ್ದರಿಂದ, ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳೆಂದರೆ:

1. ಮಾನವ ಸಂಪನ್ಮೂಲ ಅಭಿವೃದ್ಧಿ;

i. ಸಾಕ್ಷರತೆ, ಅದರಲ್ಲೂ ಮಹಿಳಾ ಸಾಕ್ಷರತೆ, ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ;

ii. ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಸುಧಾರಣೆ;

2. ಭೂ ಸುಧಾರಣೆ;

3. ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ;

4. ವಿದ್ಯುತ್ ಶಕ್ತಿ, ನೀರಾವರಿ, ಹಣಕಾಸು, ಮಾರುಕಟ್ಟೆಗಳು, ಸಾರಿಗೆ (ಗ್ರಾಮೀಣ ಮತ್ತು ಸಂಪರ್ಕ ರಸ್ತೆಗಳು), ಕೃಷಿ ಸಂಶೋಧನೆ ಮತ್ತು ವಿಸ್ತರಣೆ, ಹಾಗೂ ಮಾಹಿತಿ ಪ್ರಸರಣಗಳನ್ನೊಳಗೊಂಡ ಮೂಲಭೂತ ಸೌಕರ್ಯಗಳ ಅಭಿವೃದ್ಧಿ; ಮತ್ತು

5. ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು.

© KTBS Not to be published

**ಗ್ರಾಮೀಣ ಅಭಿವೃದ್ಧಿಯ ಮಹತ್ವ:** ಗ್ರಾಮೀಣ ಅಭಿವೃದ್ಧಿಯು ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿಯನ್ನು ಒಳಗೊಂಡಿರುವುದರಿಂದ, ಅದರಿಂದಾಗಿ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿಯಾಗುತ್ತದೆ. ಅಧಿಕ ಕೃಷಿ ವರಮಾನದ ಪರಿಣಾಮವಾಗಿ, ಔದ್ಯಮಿಕ ಸರಕು-ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ, ತನ್ಮೂಲಕ ಅಧಿಕ ಉದ್ಯೋಗ ಸೃಷ್ಟಿಯಾಗಿ ಆ ಚಟುವಟಿಕೆಗಳು ಸಹ ವಿಸ್ತಾರ ಹೊಂದುತ್ತವೆ. ಅಧಿಕ ಶಿಕ್ಷಣ ಮತ್ತು ಕೌಶಲಗಳಿಂದಾಗಿ ಹೆಚ್ಚಿನ ಉತ್ಪಾದಕತೆಯನ್ನು ಸಾಧಿಸಬಹುದು. ಉತ್ತಮ ಆರೋಗ್ಯದಿಂದ ಜನರ ಕೆಲಸದ ಸಹಭಾಗಿತ್ವದ ಪ್ರಮಾಣ ಹೆಚ್ಚಾಗಿ, ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುತ್ತದೆ. ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಒಟ್ಟಾರೆ ಗ್ರಾಮೀಣ ಪರಿವರ್ತನೆಗೆ ನಾಂದಿಯಾಗುತ್ತದೆ. ಇವೆಲ್ಲವೂ ಬಡತನದ ಇಳಿಕೆಗೆ ಕಾರಣೀಭೂತವಾಗುತ್ತವೆ.

### 2. ವಿಕೇಂದ್ರೀಕರಣ

ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ. ಇದು ಅಧಿಕಾರ ಹಂಚಿಕೆಯ ಒಂದು ಪ್ರಕ್ರಿಯೆಯಾಗಿದ್ದು ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆಯೂ ಹೆಚ್ಚಳವಾಗುತ್ತದೆ. ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು. ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ, ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆಯಲ್ಲದೇ ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.

ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪುನರುಜ್ಜೀವನ ಮಾಡಲಾಗಿದೆ. ಭಾರತ ಸರ್ಕಾರವು 1993ರ ಸಂವಿಧಾನದ 73ನೆಯ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿತು. ಇದರಿಂದ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ದೊರೆಯಿತು. ಈ ತಿದ್ದುಪಡಿಯ ಪ್ರಕಾರ ಮೂರು ಹಂತದ ಪಂಚಾಯತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳೆಂದರೆ:

i. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳುಳ್ಳ ಮೂರು ಹಂತದ ಪಂಚಾಯತಿ ವ್ಯವಸ್ಥೆ ಇದ್ದು ಗ್ರಾಮಸಭೆಯು ಅದರ ತಳಹದಿಯಾಗಿದೆ;

ii. ನೇರ ಹಾಗೂ ನಿಯಮಿತ ಚುನಾವಣೆಗಳು;

iii. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ;

iv. ಹಣಕಾಸು, ಆಡಳಿತಾತ್ಮಕ, ಮುಂಗಡಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿಗಳ ನೀಡಿಕೆ;

v. ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ; ಮತ್ತು

vi. ಪಂಚಾಯತಿಯನ್ನು ವಿಸರ್ಜಿಸುವಾಗ ಅನುಸರಿಸಬೇಕಾದ ಕಟ್ಟು ನಿಟ್ಟಿನ ಕ್ರಮಗಳು ಮತ್ತು ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೇ ಕಡ್ಡಾಯ ಚುನಾವಣೆ ನಡೆಸುವುದು.

© KTBS Not to be published

ಕರ್ನಾಟಕದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಮತ್ತು 6,022 ಗ್ರಾಮ ಪಂಚಾಯತಿಗಳಿವೆ.

## 3. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು. ಬಡತನ ನಿರ್ಮೂಲನೆ, ಜೀವನೋಪಾಯ ಭದ್ರತೆ ಹಾಗೂ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವ ಯೋಜನೆಗಳ ಅನುಷ್ಠಾನದಲ್ಲಿ ಈ ಸಂಸ್ಥೆಗಳ ಜವಾಬ್ದಾರಿ ಮಹತ್ವದ್ದಾಗಿದೆ. ಇವು ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ, ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಹೊಣೆ ಹೊತ್ತಿವೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿಯೂ ಪಂಚಾಯತ್ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾಗಿದೆ.

ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಯು ಅತ್ಯಂತ ಮಹತ್ವದ ಸಂಸ್ಥೆಯಾಗಿದೆ. ಕನಿಷ್ಠ ಆರು ತಿಂಗಳಿಗೊಮ್ಮೆ ಅದರ ಸಭೆ ನಡೆಸಬೇಕಾಗಿದ್ದು, ಗ್ರಾಮದ ಎಲ್ಲ ಮತದಾರರು ಅದರ ಸದಸ್ಯರಾಗಿರುತ್ತಾರೆ. ಗ್ರಾಮದ ಎಲ್ಲ ಅಭಿವೃದ್ಧಿ ಅವಶ್ಯಕತೆಗಳ ಹಾಗೂ ಯೋಜನೆಗಳ ಕುರಿತಾದ ಚರ್ಚೆಯು ಗ್ರಾಮ ಸಭೆಯಲ್ಲಿಯೇ ಆಗುತ್ತದೆ. ಸ್ಥಳೀಯ ಯೋಜನೆಗಳನ್ನು ಸಿದ್ಧಪಡಿಸುವುದು, ಪಂಚಾಯತ್ ರಾಜ್ ಸಂಸ್ಥೆಗಳ ಒಂದು ಮಹತ್ವದ ಕಾರ್ಯವಾಗಿದೆ. ಗ್ರಾಮ ಸಭೆಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ಯೋಜನೆಗಳನ್ನು ನಿರ್ಣಯಿಸಲಾಗುತ್ತದೆ.

'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯಂಥ ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನ ಯೋಜನೆಗಳನ್ನು ಪಂಚಾಯತ್ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಇದರಿಂದ ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಸಾಧ್ಯವಿದೆ. 'ಪ್ರಧಾನ ಮಂತ್ರಿ ಆವಾಸ್ ಯೋಜನೆ', 'ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ', 'ಆಶ್ರಯ ಯೋಜನೆ' ಮುಂತಾದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಬಹುದು.

ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ, ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡಬಹುದು. ಗ್ರಾಮಗಳಲ್ಲಿನ ವಯೋವೃದ್ಧರು, ಅಂಗವಿಕಲರು, ವಿಧವೆಯರು, ಮಾನಸಿಕ ಅಸ್ವಸ್ಥರು, ಮುಂತಾದವರನ್ನು ಗುರುತಿಸಿ, ಅವರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಸಾಮಾಜಿಕ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ.

ಮಹಿಳಾ ಸ್ವಸಹಾಯ ಸಂಘಗಳನ್ನು ಸಂಘಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು; ಗ್ರಾಮೀಣ ಜಾತ್ರೆಗಳು, ಹಬ್ಬ ಹರಿದಿನಗಳ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು; ಮುಂತಾದ ಚಟುವಟಿಕೆಗಳ ಮೂಲಕ ಗ್ರಾಮೀಣ ಕಲೆಗಳನ್ನು ಬೆಳೆಸಿ ಮತ್ತು ಗ್ರಾಮೀಣ ಸಂಸ್ಕೃತಿಗಳನ್ನು ಶ್ರೀಮಂತವಾಗಿಸಬಹುದು.

ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದುವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ. ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ ಕೃಷಿ ನೀರಾವರಿಯನ್ನು ವಿಸ್ತರಿಸಬಹುದಾಗಿದೆ. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬಹುದು.

ಮೇಲಿನ ಎಲ್ಲ ಚಟುವಟಿಕೆಗಳಲ್ಲಿ ಪಂಚಾಯತಿಗಳು ಅತಿ ಮಹತ್ವದ ಪಾತ್ರ ವಹಿಸಿ ಗ್ರಾಮಗಳ ಒಟ್ಟಾರೆ ಅಭಿವೃದ್ಧಿಯನ್ನು ಸಾಕಾರಗೊಳಿಸಲು ಸಾಧ್ಯವಿದೆ.

## 4. ಅಭಿವೃದ್ಧಿಯಲ್ಲಿ ಮಹಿಳೆ

ಮಾನವನ ಬದುಕಿನಲ್ಲಿ ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ ನಾನಾರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಾಳೆ. ಮಾನವನ ಬದುಕು ರೂಪುಗೊಳ್ಳುವುದೇ ಮಹಿಳೆಯಿಂದ. ಅವಳು ಮನೆಯೊಳಗೆ ದುಡಿಯುವುದಲ್ಲದೇ, ಮನೆಯ ಹೊರಗೆ ಕೃಷಿಕಳಾಗಿ, ಕಾರ್ಮಿಕಳಾಗಿ, ನೌಕರಳಾಗಿ, ಅಧಿಕಾರಿಯಾಗಿ, ಉದ್ಯಮಿಯಾಗಿ, ನೀತಿ ನಿರೂಪಕಳಾಗಿ, ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾಳೆ. ಹಾಗಾಗಿ ದೇಶದ ಅಭಿವೃದ್ಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ನಿರ್ಣಾಯಕವಾದುದು. ಪುಷ್ಪ ಕೃಷಿ, ಕೋಳಿಸಾಕಣೆಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಕೃಷಿ ಕಾರ್ಮಿಕರಲ್ಲಿಯೂ ಮಹಿಳೆಯರೇ ಹೆಚ್ಚಾಗಿದ್ದಾರೆ.

© KTBS Not to be published

ವಿದ್ಯಾವಂತ ಮಹಿಳೆಯರು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳಲ್ಲಿ, ನಾನಾರೀತಿಯ ಉದ್ಯೋಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಚೇರಿಗಳು, ವ್ಯಾಪಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳು ಮುಂತಾದ ಕಡೆಗಳಲ್ಲೆಲ್ಲಾ ಮಹಿಳೆಯರ ಸೇವೆ ಅಸಾಧಾರಣವಾದುದು. ಅಲ್ಲದೆ ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ.

ಮಹಿಳೆಯರು ರಾಜಕೀಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಗ್ರಾಮ ಪಂಚಾಯ್ತಿಯಿಂದ ಮೊದಲ್ಗೊಂಡು ರಾಷ್ಟ್ರಪತಿ ಭವನದವರೆಗೆ ಸರ್ಕಾರದ ವಿವಿಧ ಹಂತಗಳಲ್ಲಿ ರಾಜಕೀಯ ಮುಂದಾಳುಗಳಾಗಿ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ, ಸಾಮಾನ್ಯ ಗ್ರಾಮೀಣ ಮಹಿಳೆಯೂ ಅಧಿಕಾರದ ಚುಕ್ಕಾಣಿ ಹಿಡಿದು ಗ್ರಾಮಗಳ ಅಭಿವೃದ್ಧಿಯಲ್ಲಿ ದುಡಿಯಲು ಅವಕಾಶವಾಗಿದೆ. ಸದ್ಯದಲ್ಲಿ ಕರ್ನಾಟಕದ ಪಂಚಾಯತ್ ಸಂಸ್ಥೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳಾ ಸದಸ್ಯರಿರುವುದು ಮಹತ್ವದ ಅಂಶವಾಗಿದೆ.

ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ' ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಇವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಈ ಸಂಘಗಳ ಸದಸ್ಯರಾಗಿರುವ ಮಹಿಳೆಯರು ಇವುಗಳ ಮೂಲಕ ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘಗಳು ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡುತ್ತಿವೆ. ಹಳ್ಳಿಗಳಲ್ಲಿ ಕುಡಿತ, ಜೂಜು ಮುಂತಾದ ದುಶ್ಚಟಗಳು ವ್ಯಾಪಕವಾಗಿದ್ದು; ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳು ಇನ್ನೂ ಜೀವಂತವಾಗಿವೆ. ಎಚ್ಚೆತ್ತ ಮಹಿಳೆಯರು ಸಂಘಟಿತ ಪ್ರಯತ್ನದ ಮೂಲಕ ಇಂತಹ ಅನಿಷ್ಟಗಳನ್ನು ಹೋಗಲಾಡಿಸಬಹುದಾಗಿದೆ. ಆ ಮೂಲಕ ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ಮಹಿಳೆಯರು ನೆರವಾಗಬಹುದಾಗಿದೆ.

© KTBS Not to be published

**ಚಟುವಟಿಕೆ:**

ನಿಮ್ಮೂರಿನಲ್ಲಿರುವ ಮಹಿಳಾ ಸ್ವ-ಸಹಾಯ ಸಂಘಕ್ಕೆ ಭೇಟಿ ನೀಡಿ ಅದರ ಕಾರ್ಯಗಳನ್ನು ತಿಳಿಯಿರಿ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು__________
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ __________ ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ.
3. ಪಂಚಾಯತ್ ಸಂಸ್ಥೆಗಳು ________ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ________ ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.
2. ವಿಕೇಂದ್ರೀಕರಣ ಎಂದರೇನು?
3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.
4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.
4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?

**IV. ಚಟುವಟಿಕೆಗಳು :**

1. ನಿಮ್ಮ ಹತ್ತಿರದ ಗ್ರಾಮಪಂಚಾಯ್ತಿಗೆ ಭೇಟಿ ನೀಡಿ. ಅದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ನಿರ್ವಹಿಸುತ್ತಿರುವ ಕಾರ್ಯಗಳನ್ನು ಪಟ್ಟಿಮಾಡಿರಿ.
2. ನಿಮ್ಮ ಹತ್ತಿರದಲ್ಲಿರುವ ಮಹಿಳಾ ಸ್ವಸಹಾಯ ಸಂಘಕ್ಕೆ ಭೇಟಿ ನೀಡಿ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಅವುಗಳ ಪಾತ್ರವನ್ನು ಕುರಿತು ಮಾಹಿತಿ ಪಡೆದು ತರಗತಿಯಲ್ಲಿ ಚರ್ಚಿಸಿ.

© KTBS Not to be published

* * *

# ವ್ಯವಹಾರ ಅಧ್ಯಯನ

## ಅಧ್ಯಾಯ – 1

## ಬ್ಯಾಂಕಿನ ವ್ಯವಹಾರಗಳು

B4I4A6

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಬ್ಯಾಂಕಿನ ಅರ್ಥ*
- *ಬ್ಯಾಂಕುಗಳ ಗುಣ ಲಕ್ಷಣಗಳು.*
- *ಹಣಕಾಸಿನ ವ್ಯವಹಾರಗಳಲ್ಲಿ ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳು, ಬ್ಯಾಂಕುಗಳ ವಿಧಗಳು.*
- *ಬ್ಯಾಂಕಿನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು.*
- *ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವ ವಿಧಾನ*
- *ಬ್ಯಾಂಕು ಖಾತೆಗಳಿಂದಾಗುವ ಅನುಕೂಲಗಳು.*

ಬ್ಯಾಂಕುಗಳು ಸುಮಾರು ಎರಡುನೂರು ವರ್ಷಗಳ ಹಿಂದೆ ಅಭಿವೃದ್ಧಿ ಹೊಂದಿದ್ದವು. ಬ್ಯಾಂಕುಗಳ ಸ್ವರೂಪವು ಕಾಲಕ್ಕನುಗುಣವಾಗಿ ಬದಲಾವಣೆ ಹೊಂದುತ್ತಾ ಬಂದಿತು. ಬ್ಯಾಂಕ್ ಎಂಬ ಪದವು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಪಟ್ಟಿದೆ. ಇವು ಹಣಕಾಸಿನ ಸಂಸ್ಥೆಗಳಾಗಿದ್ದು ಗ್ರಾಹಕರು ಭದ್ರತೆಯ ದೃಷ್ಟಿಯಿಂದ ಬ್ಯಾಂಕುಗಳಲ್ಲಿ ತಮ್ಮ ಹಣವನ್ನು ಇಟ್ಟು ತಮಗೆ ಬೇಕಾದಾಗ ಹಿಂದಿರುಗಿ ಪಡೆಯಲು ಸಾಧ್ಯವಾಗಿದೆ. ಬ್ಯಾಂಕುಗಳು ಗ್ರಾಹಕರಿಗೆ ಸಾಲಗಳನ್ನು ಕೊಟ್ಟು ಅವುಗಳಿಗೆ ಬಡ್ಡಿ ವಸೂಲು ಮಾಡುತ್ತವೆ. ವಿವಿಧ ದೇಶಗಳ ವಿವಿಧ ಹಣವನ್ನು ವಿನಿಮಯ ಮಾಡುವ ಕಾರ್ಯ ಮಾಡುತ್ತವೆ. ಯಾವುದೇ ದೇಶದ ಅಭಿವೃದ್ಧಿಯು ಆ ದೇಶದ ಮುಖ್ಯ ಹಣಕಾಸು ಸಂಸ್ಥೆಯಾದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಅವಲಂಬಿಸಿರುತ್ತದೆ. ಬ್ಯಾಂಕುಗಳು ಸಮಾಜದ ಅಭಿವೃದ್ಧಿಯ ಮುಖ್ಯ ಅಂಗಗಳಾದ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮುಂತಾದುವುಗಳಿಗೆ ಅವಶ್ಯಬಿದ್ದಾಗ ಹಣವನ್ನು ಸಾಲ ರೂಪದಲ್ಲಿ ಕೊಡುತ್ತವೆ ಹಾಗೂ ಆರ್ಥಿಕ ಪ್ರಗತಿಯನ್ನು ತ್ವರಿತಗತಿಯಲ್ಲಿ ಬೆಳೆಸುತ್ತವೆ.

© KTBS Not to be published

### ಬ್ಯಾಂಕ್ ಎಂದರೇನು?

ಬ್ಯಾಂಕ್ ಎಂಬ ಪದವು ಇಟಾಲಿಯನ್ ಭಾಷೆಯ "ಬ್ಯಾಂಕೊ" (Banko) ಅಥವಾ ಫ್ರೆಂಚ್ ಭಾಷೆಯ "ಬ್ಯಾಂಕ್" (Banque) ಎಂಬ ಶಬ್ಧಗಳಿಂದ ಬಂದಿದೆ. ಇವುಗಳ ಅರ್ಥ 'ಬೆಂಚು' ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ ಆಗಿದೆ.

ಬ್ಯಾಂಕಿಂಗ್ ಕಂಪನಿಯು ಹಣಕಾಸಿನ ವ್ಯವಹಾರ ಅಂದರೆ ಹಣವನ್ನು ತಮ್ಮಲ್ಲಿ ಇಡುಗಂಟಾಗಿ ಇಟ್ಟುಕೊಂಡದ್ದನ್ನು ಸಾಲಕೊಡುವ ಸಂಸ್ಥೆಯಾಗಿದೆ ಎಂದು ವ್ಯಾಖ್ಯಾನಿಸಬಹುದು. ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಬ್ಯಾಂಕು ಯಾರು ಹಣವನ್ನು ಉಳಿತಾಯ ಮಾಡಬೇಕೆಂದು ಬಯಸುವರೋ ಅವರಿಂದ ಸ್ವೀಕರಿಸಿ ಯಾರಿಗೆ ಅವಶ್ಯವಿದೆಯೋ ಅವರಿಗೆ ಸಾಲದ ರೂಪದಲ್ಲಿ ಕೊಡುತ್ತದೆ. ಬ್ಯಾಂಕಿನಲ್ಲಿನ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ. ಬ್ಯಾಂಕುಗಳು ಸಾರ್ವಜನಿಕರ ಠೇವಣಿಗಳನ್ನು ಅವರಿಗೆ ಅವಶ್ಯಕ ಎನಿಸಿದಾಗ ಚೆಕ್ಕು, ಡ್ರಾಫ್ಟ್ ಮತ್ತಿತರ ರೂಪಗಳಲ್ಲಿ ಮರುಪಾವತಿಮಾಡುತ್ತವೆ.

**ಬ್ಯಾಂಕುಗಳ ಗುಣ ಲಕ್ಷಣಗಳು :**

1. **ಹಣದ ವಹಿವಾಟು :** ಬ್ಯಾಂಕುಗಳು ಹಣಕಾಸಿನ ಸಂಸ್ಥೆಗಳಾಗಿದ್ದು ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
2. **ವ್ಯಕ್ತಿ/ಸಂಸ್ಥೆ/ಕಂಪನಿ :** ಬ್ಯಾಂಕು ಒಬ್ಬ ವ್ಯಕ್ತಿಯಾಗಿರಬಹುದು, ಸಂಸ್ಥೆ ಅಥವಾ ಕಂಪನಿ ಆಗಿರಬಹುದು. ಬ್ಯಾಂಕಿಂಗ್ ಕಂಪನಿ ಎಂದರೆ ಹಣಕಾಸಿನ ವ್ಯವಹಾರ ಮಾಡುವ ಸಂಸ್ಥೆ.
3. **ಠೇವಣಿಗಳನ್ನು ಅಂಗೀಕರಿಸುತ್ತವೆ :** ಬ್ಯಾಂಕು ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ. ಈ ಠೇವಣಿಗಳನ್ನು ಠೇವಣಿದಾರರು ಬೇಡಿಕೆ ಇಟ್ಟಾಗ ಅಥವಾ ಒಂದು ನಿರ್ಧಿಷ್ಟ ಅವಧಿ ಮುಗಿದ ಮೇಲೆ ಹಿಂದಿರುಗಿಸಬೇಕಾಗುತ್ತದೆ. ಈ ಠೇವಣಿಗಳಿಗೆ ಬ್ಯಾಂಕು ಭದ್ರತೆಯನ್ನು ಒದಗಿಸುತ್ತದೆ. ಬ್ಯಾಂಕು ಗ್ರಾಹಕರ ಠೇವಣಿಗಳಿಗೆ ಮೇಲ್ವಿಚಾರಕನಂತೆ ವರ್ತಿಸುತ್ತದೆ.
4. **ಸಾಲಗಳನ್ನು ಕೊಡುವುದು:** ಬ್ಯಾಂಕು ಕೈಗಾರಿಕಾ ಕ್ಷೇತ್ರ, ಕೃಷಿ ಕ್ಷೇತ್ರ, ಶಿಕ್ಷಣ, ಗೃಹನಿರ್ಮಾಣ ಮೊದಲಾದ ಉದ್ದೇಶಗಳಿಗಾಗಿ ಹಣವನ್ನು ಸಾಲರೂಪದಲ್ಲಿ ಕೊಡುತ್ತದೆ.
5. **ಪಾವತಿ ಮತ್ತು ಹಿಂದಕ್ಕೆ ಪಡೆಯುವುದು:** ಬ್ಯಾಂಕು ಸುಲಭ ರೀತಿಯಲ್ಲಿ ಠೇವಣಿದಾರರಿಗೆ ಚೆಕ್ಕು ಅಥವಾ ಹುಂಡಿಗಳ ಮೂಲಕ ಹಣವನ್ನು ಪಾವತಿಮಾಡುತ್ತದೆ ಮತ್ತು ಠೇವಣಿಗಳನ್ನು ಹಿಂದಕ್ಕೆ ಪಡೆಯಲು ಅನುವು ಮಾಡಿಕೊಡುತ್ತದೆ.
6. **ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು:** ಬ್ಯಾಂಕು ತನ್ನ ಗ್ರಾಹಕರಿಗೆ ಏಜೆಂಟರಂತೆ ಅನೇಕ ಉಪಯುಕ್ತ ಸೇವೆಗಳನ್ನು ಒದಗಿಸುತ್ತದೆ.
7. **ಲಾಭ ಮತ್ತು ಸೇವಾ ಭಾವನೆ:** ಬ್ಯಾಂಕು ಸೇವೆಯ ಮನೋಭಾವ ಹೊಂದಿದ್ದು ಲಾಭ ಪಡೆಯುವ ಸಂಸ್ಥೆಯಾಗಿದೆ.
8. **ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು:** ಬ್ಯಾಂಕುಗಳು ತಮ್ಮ ಕಾರ್ಯಗಳನ್ನು ನಿರಂತರವಾಗಿ ಬೇರೆ ಬೇರೆ ದಿಕ್ಕುಗಳತ್ತ ಸೇವೆಗಳನ್ನು ಮತ್ತು ಚಟುವಟಿಕೆಗಳನ್ನು ವಿಸ್ತರಿಸಿಕೊಂಡು ಹೋಗುತ್ತವೆ.
9. **ಸಂಬಂಧ ಕಲ್ಪಿಸುವ ಕೊಂಡಿ :** ಬ್ಯಾಂಕು ಠೇಣಿದಾರರು ಮತ್ತು ಸಾಲ ಪಡೆಯುವವರ ಮಧ್ಯೆ ಸಂಪರ್ಕ ಕಲ್ಪಿಸುವ ಒಂದು ಕೊಂಡಿಯಂತೆ ತಮ್ಮ ಕಾರ್ಯಗಳನ್ನು ನಡೆಸುತ್ತದೆ. ಗ್ರಾಹಕರ ಉಳಿಕೆ ಹಣವನ್ನು ಠೇವಣಿಗಳ ಮೂಲಕ ಸಂಗ್ರಹಿಸಿ ಇದನ್ನು ಯಾರಿಗೆ ಅವಶ್ಯಕವಿದೆಯೋ ಅವರಿಗೆ ಸಾಲ ರೂಪದಲ್ಲಿ ಕೊಡುತ್ತದೆ.
10. **ಬ್ಯಾಂಕಿಂಗ್ ವ್ಯವಹಾರ :** ಬ್ಯಾಂಕಿನ ಮುಖ್ಯ ಚಟುವಟಿಕೆ ಹಣಕಾಸಿನಿಂದ ಕೂಡಿದ ವ್ಯವಹಾರ (ಬ್ಯಾಂಕಿಂಗ್) ವಾಗಿದ್ದು ಇತರೆ ವ್ಯವಹಾರಗಳಿಗೆ ಅಧೀನವಾಗಿರುವುದಿಲ್ಲ.
11. **ಹೆಸರಿನ ಗುರುತು:** ಬ್ಯಾಂಕು ಯಾವಾಗಲೂ ತನ್ನ ಹೆಸರಿನಲ್ಲಿ ಬ್ಯಾಂಕು ಎಂಬ ಪದವನ್ನು ಸೇರಿಸಿರಬೇಕು. ಉದಾ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕು, ಕಾರ್ಪೊರೇಷನ್ ಬ್ಯಾಂಕು ಮುಂತಾದವು ಇದರಿಂದಾಗಿ ಗ್ರಾಹಕರು ಯಾವ ಬ್ಯಾಂಕಿನ ಜೊತೆಯಲ್ಲಿ ವ್ಯವಹಾರ ಇಟ್ಟುಕೊಂಡಿದ್ದಾರೆಂದು ತಿಳಿಯುತ್ತದೆ. (ಈಗ ಎಲ್ಲ ಸ್ಟೇಟ್ ಬ್ಯಾಂಕುಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಜೊತೆ ವಿಲೀನಗೊಂಡಿವೆ.)

**ಬ್ಯಾಂಕಿನ ಕಾರ್ಯಗಳು :**

1. ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
2. ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.

© KTBS Not to be published

3. ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
4. ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
5. ಹುಂಡಿಗಳನ್ನು ಸೋಡಿ ಮಾಡುವುದು.
6. ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
7. ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
8. ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿನಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
9. ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು.
10. ಸರ್ಕಾರದ (ಕೇಂದ್ರ ಹಾಗೂ ರಾಜ್ಯ) ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

**ಬ್ಯಾಂಕರನಿಗೂ ಮತ್ತು ಗ್ರಾಹಕರಿಗೂ ಇರುವ ಸಂಬಂಧ**

ಬ್ಯಾಂಕರನಿಗೂ ಅದರ ಗ್ರಾಹಕರಿಗೂ ಇರುವ ಸಂಬಂಧಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸಬಹುದು.

1. ಸಾಮಾನ್ಯ ಸಂಬಂಧ
2. ವಿಶೇಷ ಸಂಬಂಧ

**1. ಸಾಮಾನ್ಯ ಸಂಬಂಧ :** ಇದು ಮೂರು ಮುಖ್ಯ ವಿಧಗಳಿಂದ ಕೂಡಿದೆ.

- ಪ್ರಾಥಮಿಕ ಸಂಬಂಧ (ಸಾಲಿಗ ಮತ್ತು ಸಾಲಗಾರನ ಸಂಬಂಧದಂತೆ)
- ಸಹಾಯಕ ಅಥವಾ ಉಪಕಾರ ಸಂಬಂಧ (ಧರ್ಮದರ್ಶಿ ಅಥವಾ ನಿಕ್ಷೇಪಧಾರಿ ಮತ್ತು ಪ್ರಯೋಜನಕಾರಿಯ ನಡುವಿನ ಸಂಬಂಧ)
- ಕಾರಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ.

**2. ವಿಶೇಷ ಸಂಬಂಧ :**

- ಚೆಕ್ಕುಗಳನ್ನು ಮನ್ನಣೆ ಮಾಡುವುದು.
- ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

***ಚಟುವಟಿಕೆ :***

*ನಿಮ್ಮ ಹತ್ತಿರದ ಬ್ಯಾಂಕಿಗೆ ಭೇಟಿ ನೀಡಿ ಉನ್ನತ ವ್ಯಾಸಂಗಕ್ಕೆ ಸಾಲ ನೀಡುವ ಕ್ರಮದ ಬಗ್ಗೆ ವ್ಯವಸ್ಥಾಪಕರಿಂದ ಮಾಹಿತಿ ಸಂಗ್ರಹಿಸಿ.*

**ಬ್ಯಾಂಕುಗಳು ಸಲ್ಲಿಸುವ ಸೇವೆಗಳು :**

1. ಖರ್ಚು ಕಾರ್ಡು (Debit Cards) ಮತ್ತು ಜಮಾ ಕಾರ್ಡು (Credit Cards) ಗಳನ್ನು ಕೊಡುವುದು.
2. ಖಾಸಗಿ ಮತ್ತು ವ್ಯಾಪಾರಕ್ಕೆ ಸಾಲ.
3. ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
4. ಪರಸ್ಪರ ನಿಧಿಗಳನ್ನು ನಿರ್ವಹಿಸುವುದು
5. ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
6. ಭರವಸೆ ಸೇವೆಗಳು
7. ಸಹಿಗಳಿಗೆ ಜವಾಬ್ದಾರಿ ಹಾಕುವುದು.
8. 'ಇ' ಬ್ಯಾಂಕಿಂಗ್ ಸೇವೆಗಳು. ('E' ¨Banking Services)

© KTBS Not to be published

# ಬ್ಯಾಂಕಿಂಗ್ ವ್ಯವಹಾರ

## ಬ್ಯಾಂಕುಗಳ ವ್ಯವಹಾರ ಮತ್ತು ಅಂಚೆ ಕಚೇರಿಗಳು

ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳೆನ್ನುತ್ತೇವೆ. ಬ್ಯಾಂಕುಗಳು ಹಣಕಾಸಿನ ಸಂಬಂಧ ವ್ಯವಹಾರಗಳನ್ನು ನಿರ್ವಹಿಸುವ ಸಂಸ್ಥೆಗಳಾಗಿವೆ. ಬ್ಯಾಂಕುಗಳು ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ ಮತ್ತು ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ. ಬ್ಯಾಂಕುಗಳು ತಮ್ಮ ಗಿರಾಕಿಗಳ ಠೇವಣಿಗಳನ್ನು ಬೇಡಿಕೆ ಇರುವ ಗ್ರಾಹಕರಿಗೆ ಸಾಲಗಳ ರೂಪದಲ್ಲಿ ಕೊಟ್ಟು ಇದಕ್ಕೆ ಬಡ್ಡಿ ವಸೂಲು ಮಾಡುತ್ತವೆ. ಈ ಬಡ್ಡಿಯಿಂದ ಬಂದ ಸ್ವಲ್ಪ ಭಾಗದ ಹಣವನ್ನು ತನ್ನ ಠೇವಣಿದಾರರಿಗೆ ಬಡ್ಡಿ ರೂಪದಲ್ಲಿ ಕೊಡುತ್ತವೆ. ಈ ಬಡ್ಡಿಯು ಠೇವಣಿದಾರರ ಆದಾಯವಾಗಿರುತ್ತದೆ. ಬ್ಯಾಂಕುಗಳು ತಮ್ಮ ಗಿರಾಕಿಗಳ ಹಣವನ್ನು ಸ್ಥಳೀಯ ಮತ್ತು ವಿದೇಶ ವ್ಯಾಪಾರಗಳಲ್ಲಿ ತೊಡಗಿಸಿ ಹಣವನ್ನು ವೃದ್ಧಿಮಾಡಿಕೊಳ್ಳುತ್ತವೆ.

ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿರುತ್ತದೆ. ರಿಜರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದೂ ಕರೆಯಬಹುದು. ರಿಜರ್ವ್ ಬ್ಯಾಂಕು ದೇಶದ ಕೇಂದ್ರ ಬ್ಯಾಂಕಾಗಿದೆ. ಇದು ಹಣಕಾಸಿನ ಕಾರ್ಯ ನೀತಿಯನ್ನು ರೂಪಿಸುತ್ತದೆ. ಈ ಕಾರ್ಯ ನೀತಿಯನ್ನು ಎಲ್ಲ ಬ್ಯಾಂಕುಗಳು ಪಾಲಿಸಬೇಕಾಗುತ್ತದೆ. ಈಗ ನಮ್ಮಲ್ಲಿ ಸ್ಟೇಟ್ ಬ್ಯಾಂಕ್ ಸಮೂಹಗಳು, ಇಪ್ಪತ್ತು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇಪ್ಪತ್ತೊಂದು ಖಾಸಗಿ ಬ್ಯಾಂಕುಗಳು ಇವೆ. ನಲವತ್ತೈದು ವಿದೇಶೀ ಬ್ಯಾಂಕುಗಳು ಇದ್ದು ಇದರ ಜಾಲ ಸುಮಾರು 86000 ಉಪಶಾಖೆಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮಾಂತರ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರದ ಹಾಗೂ ಖಾಸಗಿ ಸಹಕಾರಿ ಬ್ಯಾಂಕುಗಳು ಇವೆ.

ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಎಂದರೆ ಅಂಚೆ ಕಚೇರಿಗಳನ್ನು ಬ್ಯಾಂಕು ವ್ಯವಹಾರಗಳ ಅಂಕಿತದೊಳಕ್ಕೆ ತಂದಿರುವುದು. ಭಾರತೀಯ ಅಂಚೆ ಇಲಾಖೆ "ಭಾರತೀಯ ಅಂಚೆ ಬ್ಯಾಂಕ್" ನ ಜಾಲವನ್ನು ಅಂಚೆ ಕಚೇರಿಗಳೊಡನೆ ದೇಶದಾದ್ಯಂತ ಪ್ರಾರಂಭ ಮಾಡಲು ಯೋಜನೆಯನ್ನು ರೂಪಿಸಿದೆ. ಇವುಗಳಲ್ಲಿ ಶೇ 90 ರಷ್ಟು ಗ್ರಾಮಾಂತರ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದೆ. ಅಂಚೆ ಇಲಾಖೆಯು ಈಗಾಗಲೆ ರಾಷ್ಟ್ರೀಯ ಉಳಿತಾಯ ಪತ್ರಗಳು, ಅಂಚೆ ಉಳಿತಾಯ ಖಾತೆಗಳು, ಕಿಸಾನ್ ವಿಕಾಸ ಪತ್ರಗಳು, ಮಹೆಯಾನ ತೀರು ಠೇವಣಿಗಳು, ಅಂಚೆ ವಿಮೆ, ನಿವೃತ್ತಿವೇತನ, ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ. ಅಂಚೆ ಇಲಾಖೆಯು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಬ್ಯಾಂಕು ವ್ಯವಹಾರಕ್ಕೆ ತೊಡಗಿಸಲು ಯೋಜನೆ ಹಾಕಿಕೊಂಡಿದೆ. ಇದು ಅಂಚೆ ಇಲಾಖೆಯ ಸಹಾಯಕ ಕ್ಷೇತ್ರವಾಗುತ್ತದೆ.

> ***ಚಟುವಟಿಕೆ :***
>
> *ಅಂಚೆ ಕಚೇರಿಗೆ ಭೇಟಿ ನೀಡಿ ಅಲ್ಲಿ ಬ್ಯಾಂಕ್ ವ್ಯವಹಾರ ನಿರ್ವಹಣೆಯು ನಡೆಯುವ ಕ್ರಮದ ಬಗ್ಗೆ ಮಾಹಿತಿ ಪಡೆಯಿರಿ.*

## ಬ್ಯಾಂಕುಗಳ ವಿಧಗಳು :

ಬ್ಯಾಂಕುಗಳಲ್ಲಿ ಹಲವಾರು ವಿಧಗಳಿವೆ. ಪ್ರತಿಯೊಂದು ವಿಧದ ಬ್ಯಾಂಕು ತಮ್ಮ ಒಂದು ನಿರ್ದಿಷ್ಟ ವಿಧದ ವ್ಯವಹಾರದಲ್ಲಿ ಪರಿಣಿತಿ ಪಡೆದಿರುತ್ತವೆ.

ಕೆಲವು ಮುಖ್ಯ ಬ್ಯಾಂಕುಗಳ ವಿಧಗಳೆಂದರೆ :

- ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ್ ಬ್ಯಾಂಕು
- ವಾಣಿಜ್ಯ ಬ್ಯಾಂಕುಗಳು

© KTBS Not to be republished

- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು (ಲೇವಾದೇವಿಗಾರರು ಅಥವಾ ಸಾಹುಕಾರರು)
- ಸಹಕಾರಿ ಬ್ಯಾಂಕುಗಳು

(ಈ ವಿವಿಧ ಬ್ಯಾಂಕುಗಳ ವಿವರಣೆ ಬಗ್ಗೆ ಹಿಂದಿನ ತರಗತಿಯ ಅರ್ಥಶಾಸ್ತ್ರ ವಿಭಾಗದಲ್ಲಿ ತಿಳಿದಿದ್ದೀರಿ.)

**ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು (Types of Bank Accounts)**

ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಈ ಕೆಳಗಿನ ನಾಲ್ಕು ವಿಧದ ಖಾತೆಗಳನ್ನು ತೆರೆಯಬಹುದು.

1. ಉಳಿತಾಯ ಖಾತೆ. (Savings Account)
2. ಚಾಲ್ತಿ ಖಾತೆ (Current Account)
3. ಆವರ್ತ ಠೇವಣಿ ಖಾತೆ (Recurring Deposit Account)
4. ನಿಶ್ಚಿತ ಠೇವಣಿ ಖಾತೆ. (Fixed Deposit Account)

**1) ಉಳಿತಾಯ ಖಾತೆ (Savings Account) :** ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ. ಈ ಸೌಲಭ್ಯವನ್ನು ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ತೆರೆಯಲು ಅವಕಾಶವಿದೆ. ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ. ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ. ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

> **ಚಟುವಟಿಕೆ :**
> *ಪ್ರಸ್ತುತ ಕೆಳಕಂಡ ಬ್ಯಾಂಕ್ ಖಾತೆಗಳಿಗೆ ಬ್ಯಾಂಕುಗಳು ನೀಡುವ ವಾರ್ಷಿಕ ಬಡ್ಡಿದರ ತಿಳಿಯಿರಿ.*
> *1. ಉಳಿತಾಯ ಖಾತೆ 2. ಚಾಲ್ತಿ ಖಾತೆ*
> *3. ಆವರ್ತ ಠೇವಣಿ ಖಾತೆ*

© KTBS Not to be published

**2) ಚಾಲ್ತಿ ಖಾತೆ (Current Account) :** ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ (Contra) ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ. ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ. ಆದರೆ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ.

**3) ಆವರ್ತ ಠೇವಣಿ ಖಾತೆ (Recurring Deposit Account) :** ಆವರ್ತ ಠೇವಣಿ ಖಾತೆಗಳನ್ನು ಸಾಮಾನ್ಯವಾಗಿ ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ಧಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುತ್ತದೆ. ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುತ್ತಾರೆ. (ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದುವನ್ನು ಕೊಳ್ಳಲು) ಅವಧಿ ಮುಗಿದ ನಂತರ ಠೇವಣಿ ಮಾಡಿದ ಹಣದ ಜೊತೆಗೆ ಬಡ್ಡಿಯನ್ನು ಸೇರಿಸಿ ಹಣವನ್ನು ಬ್ಯಾಂಕು ಹಿಂದಿರುಗಿಸುತ್ತದೆ.

**4) ನಿಶ್ಚಿತ ಠೇವಣಿ ಖಾತೆ : (Fixed Deposit Account) :** ಈ ಖಾತೆಯಲ್ಲಿ ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ. ಠೇವಣಿ ಹಣವನ್ನು ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ ಮಾಡಲಾಗುತ್ತದೆ. (ನಿಶ್ಚಿತ ಅವಧಿ ತಿಂಗಳಾಗಿರಬಹುದು, ಆರು ತಿಂಗಳಾಗಿರಬಹುದು, ಒಂದು ವರ್ಷವಾಗಿರಬಹುದು, ಐದು ವರ್ಷಗಳಾಗಿರಬಹುದು ಅಥವಾ ಹತ್ತು ವರ್ಷಗಳಾಗಿರಬಹುದು) ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ. ಬಡ್ಡಿದರ ಅವಧಿಗನುಗುಣವಾಗಿ ಹೆಚ್ಚಾಗಿರುತ್ತದೆ.

> ***ಚಟುವಟಿಕೆ :***
> *ವಾರ್ಷಿಕ ಶೇ 8 ರಂತೆ 50000/– ರೂಗಳ ನಿಶ್ಚಿತ ಠೇವಣಿಗೆ ಮಾಸಿಕ ನೀಡಬೇಕಾದ ಬಡ್ಡಿಯ ಮೊತ್ತವನ್ನು ಕಂಡು ಹಿಡಿಯಿರಿ.*

## ಬ್ಯಾಂಕು ಖಾತೆಯನ್ನು ತೆಗೆಯುವ ವಿಧಾನ (Opening of Bank Account)

ಈ ದಿನಗಳಲ್ಲಿ ಬ್ಯಾಂಕುಗಳು ಮುಖ್ಯವಾದ ಹಣಕಾಸಿನ ಸಂಸ್ಥೆಗಳಾಗಿವೆ. ಬ್ಯಾಂಕುಗಳು ಸುರಕ್ಷಿತ ಪದ್ಧತಿಗಳ ಮೂಲಕ ಹಣದ ವ್ಯವಹಾರಗಳನ್ನು ನಿರ್ವಹಿಸಲು ಸಹಾಯ ಮಾಡುತ್ತವೆ. ಬ್ಯಾಂಕುಗಳ ಸೇವೆಗಳನ್ನು ಪಡೆಯಲು ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಬ್ಯಾಂಕುಗಳಲ್ಲಿ ಖಾತೆಗಳನ್ನು ತೆಗೆಯುವುದು ಅವಶ್ಯಕ. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆಗೆಯುವುದು ಅಷ್ಟೇನು ಕಷ್ಟಕರವಾದ ಕೆಲಸವಲ್ಲ. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯಲು ಏಳು ಹಂತಗಳಿವೆ. ಅವುಗಳೆಂದರೆ :

> ***ನಿಮಗಿದು ತಿಳಿದಿರಲಿ :***
> *ಜಂಟಿಖಾತೆ : ಇಬ್ಬರು ಅಥವಾ ಹೆಚ್ಚಿನ ಜನರು ಒಂದೇ ಬ್ಯಾಂಕ್ ಖಾತೆ ತೆರೆದು ವ್ಯವಹರಿಸುವುದನ್ನು ಜಂಟಿಖಾತೆ ಎನ್ನುತ್ತಾರೆ.*

**1. ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು :** ಬ್ಯಾಂಕುಗಳಲ್ಲಿ ಅನೇಕ ರೀತಿಯ ಖಾತೆಗಳಿವೆ. ಉಳಿತಾಯ ಖಾತೆ, ಚಾಲ್ತಿಖಾತೆ, ಆವರ್ತಖಾತೆ ಮತ್ತು ನಿಶ್ಚಿತ ಅವಧಿಯ ಠೇವಣಿಖಾತೆ. ಬ್ಯಾಂಕಿನಲ್ಲಿ ಖಾತೆ ತೆರೆಯುವ ಮುನ್ನ ತಮ್ಮ ಅವಶ್ಯಕತೆಗೆ ಅನುಗುಣವಾಗಿ ಯಾವ ರೀತಿಯ ಖಾತೆ ತೆಗೆದರೆ ಉತ್ತಮವೆಂದು ನಿರ್ಧರಿಸಬೇಕಿದೆ.

**2. ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು :** ಯಾವ ರೀತಿಯ ಖಾತೆಯನ್ನು ತೆಗೆಯ ಬೇಕೆಂದು ನಿರ್ಧರಿಸಿದ ಮೇಲೆ ನಿಮಗೆ ಸೂಕ್ತವೆನಿಸಿದ ಬ್ಯಾಂಕಿಗೆ ಹೋಗಿ ಅಲ್ಲಿನ ಅಧಿಕಾರಿಯನ್ನು ಭೇಟಿಮಾಡಿ ನಿಮ್ಮ ಇರಾದೆಯನ್ನು ತಿಳಿಸಬೇಕು.

**3. ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬಿ :** ಈ ಪ್ರಸ್ತಾವನೆ ಅರ್ಜಿಯನ್ನು ಪೂರ್ಣವಾಗಿ ತುಂಬಿ, ಇದರಲ್ಲಿ ನಿಮ್ಮ ಹೆಸರು, ವಿಳಾಸ, ಉದ್ಯೋಗ, ವಯಸ್ಸು ಮುಂತಾದ ವಿವರಗಳಿದ್ದು ಈ ನಮೂನೆಯನ್ನು ಪೂರ್ಣವಾಗಿ ತುಂಬಬೇಕು. ಅರ್ಜಿಯ ಜೊತೆಗೆ ನಿಮ್ಮ ಎರಡು ಅಥವಾ ಮೂರು ಮಾದರಿ ಸಹಿಗಳನ್ನು ಮಾದರಿ ಸಹಿಗಳ ಕಾರ್ಡಿನಲ್ಲಿ ಮಾಡಬೇಕು. ಈ ಸಹಿಗಳನ್ನು ನೀವು ಯಾವಾಗ ಬ್ಯಾಂಕಿನ ಜೊತೆಯಲ್ಲಿ ವ್ಯವಹಾರ ಮಾಡುತ್ತೀರೋ ಆಗ ಅಲ್ಲಿ ಬದಲಾವಣೆ ಮಾಡದೆ ಮಾಡಬೇಕಾಗುತ್ತದೆ. ಇತ್ತೀಚಿನ ನಿಮ್ಮ ಎರಡು ಅಥವಾ ಮೂರು ಭಾವಚಿತ್ರಗಳನ್ನು ಲಗತ್ತಿಸಬೇಕಾಗುತ್ತದೆ. ಎರಡು ಅಥವಾ ಮೂರು ಜನರು ಕೂಡಿ ಒಟ್ಟಿಗೆ ಖಾತೆಯನ್ನು (Joint Account) ತೆರೆಯಬೇಕಾದರೆ ಎಲ್ಲರ ಸಹಿಗಳು, ಭಾವಚಿತ್ರಗಳು, ವಿವರಗಳು ಬೇಕಾಗುತ್ತದೆ. ಈಗ ಸ್ವಸಹಿ ಮಾಡಿರುವ ಆಧಾರ್ ಕಾರ್ಡಿನ ನಕಲು ಪ್ರತಿಯನ್ನು ಕೊಡಬೇಕಾದುದು ಕಡ್ಡಾಯವಾಗಿದೆ

**4. ಪರಿಚಿತರ ಉಲ್ಲೇಖನವನ್ನು ಕೊಡುವುದು:** ಬ್ಯಾಂಕಿನ ಖಾತೆಯನ್ನು ತೆಗೆಯಲು ಆ ಬ್ಯಾಂಕಿನಲ್ಲಿ ಈಗಾಗಲೇ ಖಾತೆ ಹೊಂದಿರುವವರ ಅಥವಾ ಗೌರವಾನ್ವಿತ ವ್ಯಕ್ತಿಗಳ ಪರಿಚಯವನ್ನು ಅರ್ಜಿ ನಮೂನೆಯಲ್ಲಿ ನಮೂದಿಸಿ ಅವರ ಸಹಿಗಳನ್ನು ಮಾಡಿಸಬೇಕಾಗುತ್ತದೆ. ಈ ಪರಿಚಯವು ಬ್ಯಾಂಕಿನ ರಕ್ಷಣಾದೃಷ್ಟಿಯಿಂದ ಅವಶ್ಯಕವಾಗಿರುತ್ತದೆ.

© KTBS Not to be published

**5. ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು:** ಬ್ಯಾಂಕು ಖಾತೆ ತೆಗೆಯುವ ನಮೂನೆಯನ್ನು ಎಲ್ಲ ರೀತಿಗಳಲ್ಲೂ ಭರ್ತಿ ಮಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟ ಅಡಕಗಳನ್ನು ಲಗತ್ತಿಸಿ ಬ್ಯಾಂಕಿಗೆ ಸಲ್ಲಿಸಿ. ಅಡಕಗಳಲ್ಲಿ ಮುಖ್ಯವಾದುವು ಗುರುತಿನ ಚೀಟಿ, ಇತ್ತೀಚಿನ ವಿಳಾಸ ಗುರುತು, ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್ ಇತ್ಯಾದಿ.

**6. ಅಧಿಕಾರಿಯ ಒಪ್ಪಿಗೆ :** ನೀವು ಸಲ್ಲಿಸಿದ ಮಾಹಿತಿಯು ಅಧಿಕಾರಿಗೆ ಎಲ್ಲ ರೀತಿಯಲ್ಲೂ ಸಮಂಜಸವಾಗಿದೆ ಎಂದು ಮನವರಿಕೆಯಾದರೆ ಖಾತೆ ತೆರೆಯಲು ಅನುಮತಿ ಕೊಡುತ್ತಾರೆ.

**7. ಪ್ರಾರಂಭಿಕ ಠೇವಣಿ :** ಪ್ರಸ್ತಾವನೆ ಅರ್ಜಿಯನ್ನು ಎಲ್ಲ ರೀತಿಯಲ್ಲೂ ಪರಿಶೀಲಿಸಿದ ನಂತರ ಅಧಿಕಾರಿಯು ಪ್ರಾರಂಭಿಕ ಠೇವಣಿಯನ್ನು ಬ್ಯಾಂಕಿನಲ್ಲಿ ಕಟ್ಟಲು ಹೇಳುತ್ತಾನೆ. ಈ ಹಣ ಪಾವತಿಗೆ ಒಂದು ನಮೂನೆ ಇದ್ದು ಇದನ್ನು ಚಲನ್ ಎಂದು ಕರೆಯುತ್ತೇವೆ. ನಿಶ್ಚಿತ ಠೇವಣಿ ಖಾತೆಯಾದರೆ ಮತ್ತೊಂದು ಅರ್ಜಿಯನ್ನು ಭರ್ತಿಮಾಡಬೇಕಾಗುತ್ತದೆ. ನಂತರ ಖಾಯಂ ಠೇವಣಿ ಪತ್ರ (F.D Bank) ಕೊಡುತ್ತಾರೆ. ಆವರ್ತ ಖಾತೆಗೆ ಪಾಸ್ ಪುಸ್ತಕವನ್ನು ಕೊಡಲಾಗುತ್ತದೆ. ಉಳಿತಾಯ ಖಾತೆ ಅಥವಾ ಚಾಲ್ತಿ ಖಾತೆ ಆದಲ್ಲಿ ಹಣ ಹಿಂದಕ್ಕೆ ಪಡೆಯಲು ಅನುಕೂಲವಾಗುವಂತೆ ಚೆಕ್ ಪುಸ್ತಕವನ್ನು ಕೊಡಲಾಗುತ್ತದೆ.

**ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು :**

- ಬ್ಯಾಂಕು ಖಾತೆಯು ಹಣದ ಭದ್ರತೆಯನ್ನು ಕಾಪಾಡುತ್ತದೆ.
- ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
- ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯಮಾಡಿಕೊಡುತ್ತದೆ.
- ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

© KTBS Not to be published

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಬ್ಯಾಂಕ್ ಎಂಬ ಪದವು ಫ್ರೆಂಚಿನ __________ ಶಬ್ದದಿಂದ ಬಂದಿದೆ.
2. ಬ್ಯಾಂಕುಗಳ ಬ್ಯಾಂಕ್ __________ ಆಗಿದೆ.
3. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ __________ .
4. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು __________ ಇಲಾಖೆಯು ನೀಡುತ್ತದೆ.
5. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ __________.
6. ಠೇವಣಿಯನ್ನು ನಿಗದಿತ ಅವಧಿಗೆ __________ ಖಾತೆಯಲ್ಲಿ ಇಡಬಹುದಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಬ್ಯಾಂಕು ಎಂದರೇನು ?
2. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳ ಪಟ್ಟಿ ಮಾಡಿ.
3. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು ?
4. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ತಿಳಿಸಿ.
5. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.
6. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು ?

**III. ಚಟುವಟಿಕೆಗಳು :**

1. ನಿಮಗೆ ತಿಳಿದಿರುವ ಬ್ಯಾಂಕ್‌ಗಳ ಹೆಸರುಗಳ ಪಟ್ಟಿ ತಯಾರಿಸಿ.
2. ಬ್ಯಾಂಕಿಗೆ ಭೇಟಿ ನೀಡಿ ನಿಶ್ಚಿತ ಠೇವಣಿ ಖಾತೆಯಲ್ಲಿ ಠೇವಣಿ ಇಡುವ ಬಗ್ಗೆ, ಬಡ್ಡಿದರ ಹಿಂಪಡೆಯುವ ಕ್ರಮದ ಬಗ್ಗೆ ಮಾಹಿತಿ ಸಂಗ್ರಹಿಸಿ.

**IV. ಯೋಜನೆ :**

1. ಬ್ಯಾಂಕಿನಲ್ಲಿ ಖಾತೆ ತೆರೆಯುವ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರನ್ನು ಭೇಟಿ ಮಾಡಿ ಕ್ರಮವನ್ನು ತಿಳಿದು ಅವಶ್ಯಕವಿದ್ದಲ್ಲಿ ಖಾತೆ ತೆರೆಯಿರಿ.

* * * *

© KTBS Not to be Published

## ಅಧ್ಯಾಯ – 2

# ಉದ್ಯಮಗಾರಿಕೆ (Entrepreneurship)

X9G2V8

**ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಉದ್ಯಮಿ ಮತ್ತು ಉದ್ಯಮಗಾರಿಕೆಯ ಅರ್ಥ.
- ಉದ್ಯಮಗಾರನ ಪಾತ್ರ ಮತ್ತು ಪ್ರಾಮುಖ್ಯತೆ.
- ಸ್ವಯಂ ಉದ್ಯೋಗ ಅವಕಾಶಗಳು.
- ಸ್ವಯಂ ಉದ್ಯೋಗದ ವ್ಯವಸ್ಥೆ.
- ಕೆಲವು ಪ್ರಮುಖ ಉದ್ದಿಮೆದಾರರು.

ಇಂದಿನ ಆರ್ಥಿಕ ಮಾರುಕಟ್ಟೆಯ ಮಂಚೂಣಿಯಲ್ಲಿ ಉದ್ಯಮಗಾರಿಕೆ ಪ್ರಮುಖಪಾತ್ರ ವಹಿಸುತ್ತದೆ. ಇದು ಪ್ರಮುಖ ಆರ್ಥಿಕ ಚಟುವಟಿಕೆಗಳಾದ ಭೂಮಿ, ದುಡಿಮೆ, ಬಂಡವಾಳ ಮತ್ತು ಸಂಘಟನೆಗಳಲ್ಲಿ ಒಂದಾಗಿದೆ. ಒಂದು ದೇಶದ ವ್ಯಾಪಾರ ಪರಿಸ್ಥಿತಿ ಮತ್ತು ಕೈಗಾರಿಕಾ ಕ್ಷೇತ್ರದ ಬದಲಾವಣೆಗಳಲ್ಲಿ ಪ್ರಭಲವಾದ ಅಂಶವಾಗಿದೆ.

© KTBS Not to be published

### ಉದ್ಯಮಿಯ ಅರ್ಥ :

ಉದ್ಯಮಿ, ಎಂಬ ಪದವು ಫ್ರೆಂಚ್ ಪದ "ಎಂಟ್ರಪ್ರೆಂಡೆ"ಯಿಂದ ಬಂದಿದೆ. ಅಂದರೆ ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವ ಎಂದಾಗಿದೆ. ಉದ್ಯಮಿಯು ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನಾಗಿದ್ದು, ಇವನಲ್ಲಿ ವ್ಯವಹಾರ ನಿರ್ವಹಿಸಲು ಆಡಳಿತ ನಿರ್ವಹಣೆಯ ಕೌಶಲ್ಯ ಮತ್ತು ತಂಡವನ್ನು ನಿರ್ಮಿಸುವ ಸಾಮರ್ಥ್ಯ ಮತ್ತು ಮುಂದಾಳತ್ವದ ಗುಣಗಳು ಇರುತ್ತವೆ. (ಉದ್ಯಮಿಯನ್ನು ಉದ್ಯಮ ಶೀಲ ಅಥವಾ ಉದ್ದಿಮೆಗಾರ ಎಂದೂ ಕರೆಯುತ್ತಾರೆ).

ಉದ್ಯಮಿಯು ಯಾವುದಾದರೂ ಒಂದು ಪ್ರತಿಫಲ ಕೊಡುವ ಉದ್ದಿಮೆಯನ್ನು ಸ್ಥಾಪಿಸುವ ಅವಕಾಶಕ್ಕೆ ಕೈಹಾಕುತ್ತಾನೆ. ವ್ಯವಹಾರದ ವಿಧಾನದಲ್ಲಿ ಯಾವುದನ್ನು ಹೇಗೆ ಮತ್ತು ಎಷ್ಟು ಉತ್ತಮ ಎಂಬುದನ್ನು ಗಣನೆಗೆ ತೆಗೆದುಕೊಂಡು ಒಂದು ಉದ್ಯಮವನ್ನು ಪ್ರಾರಂಭಿಸುತ್ತಾನೆ ಹಾಗೂ ಪ್ರತಿಸ್ಪಂದನೆ ನಿರ್ಣಯಿಸುತ್ತಾನೆ. ಉದ್ಯಮಿಗಳು ಹೊಸ ವಸ್ತುಗಳ ಬಗ್ಗೆ ಊಹೆಮಾಡಿಕೊಂಡು ಅವುಗಳ ಮಾರುಕಟ್ಟೆ ಮತ್ತು ತಾಂತ್ರಿಕತೆಗಳ ಮತ್ತು ಬದಲಾವಣೆಗಳ ಬಗ್ಗೆ ಕಲ್ಪನೆ ಮಾಡಿಕೊಳ್ಳುತ್ತಾರೆ. ಒಟ್ಟಾರೆ ಹೇಳುವುದಾದರೆ ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ ಆ ಅವಕಾಶಗಳನ್ನು ಸ್ವಪ್ರಯೋಜನಗಳಿಗಾಗಿ ಉಪಯೋಗಿಸಿಕೊಂಡು ಅವುಗಳನ್ನು ಸದಾವಕಾಶಗಳಿಂದ ಕ್ರಮವಾಗಿ ಸಂಘಟನೆ ಮಾಡುತ್ತಾನೆ. ಉದಾಹರಣೆಗೆ: ಗಣಕಯಂತ್ರಗಳು, ಮೊಬೈಲ್ ದೂರವಾಣಿಗಳು, ಬಟ್ಟೆ ಒಗೆಯುವ ಯಂತ್ರಗಳು. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು, ಕೊರಿಯರ್ ಸೇವೆ ಮತ್ತು ತತ್‌ಕ್ಷಣದಲ್ಲಿ ತಯಾರಿಸಬಹುದಾದ ಆಹಾರ ಪದಾರ್ಥಗಳು ಉದ್ಯಮಿಗಳ ಕಲ್ಪನೆಗಳಲ್ಲಿ ರೂಢಿಗೆ ಬಂದಿರುವುದಕ್ಕೆ ಉದಾಹರಣೆಗಳಾಗಿವೆ.

### ಉದ್ಯಮಗಾರಿಕೆ (Entrepreneurship)

ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ. (ಉದ್ಯಮ ಶೀಲತೆ ಎಂದೂ ಕರೆಯುವುದು ರೂಢಿಯಲ್ಲಿದೆ) ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ

ಸಾಮರ್ಥ್ಯವಾಗಿದೆ. ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ ಮತ್ತು ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಉದ್ಯಮಗಾರಿಕೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸಕಾರ್ಯವನ್ನು ಸ್ಥಾಪಿಸುವುದೇ ಆಗಿದೆ. ಉದ್ಯಮಗಾರಿಕೆ ಒಂದು ಕಾರ್ಯವಿಧಾನವಾಗಿದೆ. ಇದು ಕೆಲವು ಅಪರೂಪದ ಸಂಘಟನೆಗಳ ಸಂಯೋಜನೆಯಲ್ಲಿ ಉದ್ದೇಶ ಹೊಂದಿರುವ ಮತ್ತು ಸಂಘಟಿತವಾದ ಬದಲಾವಣೆಗಳಿಗಾಗಿ ಒಂದು ಅನ್ವೇಷಣೆಯನ್ನು ಕ್ರಮಬದ್ಧವಾದ ಪರಿಸರದಲ್ಲಿ ವಿಶ್ಲೇಷಿಸುವ ಕಾರ್ಯವಾಗಿದೆ. ಇದು ಒಂದು ತತ್ವಜ್ಞಾನವಾಗಿದೆ. ಇದು ಒಬ್ಬ ಮನುಷ್ಯನು ಯೋಜಿಸುವ ಮತ್ತು ಪ್ರವೃತ್ತಿಸುವ ಕಾರ್ಯವಾಗಿದ್ದು, ವ್ಯಾಪಾರ ಸಂಸ್ಥೆಯಲ್ಲಾಗಲಿ, ಸರ್ಕಾರದಲ್ಲಾಗಲಿ, ವಿದ್ಯಾಭ್ಯಾಸ ಕ್ಷೇತ್ರದಲ್ಲಾಗಲಿ ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಾಗಲಿ, ಬಡತನ ನಿವಾರಣೆಯಲ್ಲಾಗಲೀ ಅಥವಾ ಯಾವುದೇ ಇತರೆ ಕೆಲಸಗಳಲ್ಲಾಗಲಿ ಕಂಡು ಬರುತ್ತದೆ.

**ಉದ್ಯಮಗಾರಿಕೆಯ ಗುಣಲಕ್ಷಣಗಳು :**

- ಸೃಜನಾತ್ಮಕ
- ಕ್ರಿಯಾತ್ಮಕ
- ತಂಡವನ್ನು ಕಟ್ಟುವುದು.
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನ ಬದ್ಧತೆ.
- ಹೊಸ ಪದ್ಧತಿಯನ್ನು ರೂಢಿಗೆ ತರುವುದು.
- ನಾಯಕತ್ವ
- ಪ್ರಚೋದನೆಯ ಸಾಧನೆ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.
- ಆತ್ಮವಿಶ್ವಾಸ.

© KTBS Not to be published

**ಉದ್ಯಮಿಯ ಕಾರ್ಯಗಳು (Functions of an entrepreneur) :**

ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ, ಯೋಜನೆ ಮಾಡಿ, ಸಂಪನ್ಮೂಲಗಳನ್ನು ಸಂಘಟಿಸಿ, ಉತ್ಪಾದನೆ, ಮಾರುಕಟ್ಟೆ ಮತ್ತು ಇತರೆ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ. ಅತ್ಯಂತ ಮುಖ್ಯವಾಗಿ ಮಾರ್ಪಾಡುಗಳನ್ನು ಮಾಡಿ ನಷ್ಟಗಳಾದಾಗ ಎದುರಿಸಬೇಕಾಗುತ್ತದೆ. ಉದ್ಯಮಿಯ ಮುಖ್ಯಕಾರ್ಯಗಳಾವುವೆಂದರೆ :

1. ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
2. ಉದ್ಯಮಿಯು ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
3. ಉದ್ಯಮಗಾರನು ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
4. ಉದ್ಯಮಿಯು ಎಲ್ಲ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
5. ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
6. ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
7. ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
8. ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

## ಉದ್ಯಮಿಯ ಪಾತ್ರ

ಉದ್ಯಮಿಗಳು ವ್ಯಾಪಾರದ ಧುರೀಣರಾಗಿದ್ದು ವಿವಿಧ ಅನಿಸಿಕೆಗಳನ್ನು ಗಮನಿಸಿ ಅವುಗಳನ್ನು ಕಾರ್ಯ ರೂಪಕ್ಕೆ ತಂದು ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುತ್ತಾರೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ಬಹುಮುಖ್ಯವಾಗಿದೆ. ಇವರು ಕೈಗಾರಿಕಾ ಕ್ಷೇತ್ರದ ಪರಿವರ್ತನೆಯೇ ಅಲ್ಲದೆ ವ್ಯವಸಾಯ ಮತ್ತು ಸೇವಾಕ್ಷೇತ್ರಗಳ ಅಭಿವೃದ್ಧಿಯಲ್ಲೂ ಮುಖ್ಯ ಪಾತ್ರ ವಹಿಸುತ್ತಾರೆ. ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಈ ಕೆಳಗಿನಂತೆ ಪಾತ್ರವಹಿಸುತ್ತಾರೆ.

1. ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ. ಅವರು ಸಂಪನ್ಮೂಲಗಳನ್ನು ಉದ್ದಿಮೆಗಳನ್ನು ಪ್ರಾರಂಭಿಸಲು ಉಪಯೋಗಿಸುತ್ತಾರೆ.
2. ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
3. ಉದ್ಯಮಿಗಳು ಒಂದು ದೇಶದ ನಿವ್ವಳ ದೇಶಿಯ ಉತ್ಪನ್ನ **(GDP)** ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
4. ಉದ್ಯಮಿಗಳು ಬಂಡವಾಳ ಮತ್ತು ಕೌಶಲ್ಯವನ್ನು ಪ್ರಯೋಜನಕಾರಿಯಾಗಿ ಒಟ್ಟುಗೂಡಿಸಿ ಹೊಸವಸ್ತುಗಳನ್ನು ಮತ್ತು ಸೇವೆಗಳನ್ನು ರೂಢಿಸಿ ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
5. ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
6. ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ. ಅವರು ಪ್ರಾಂತೀಯ ತಾರತಮ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ನಿವಾರಿಸುತ್ತಾರೆ.
7. ಉದ್ಯಮಿಗಳು ಆದಾಯ ಮತ್ತು ಸಂಪತ್ತು ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.
8. ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.
9. ಉದ್ಯಮಿಗಳು ಹೊಸ ಬದಲಾವಣೆಗಳನ್ನು ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.

## ಉದ್ಯಮಿಗಳ ಪ್ರಾಮುಖ್ಯತೆ

ಉದ್ಯಮಿಗಳು ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ಕೇಂದ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಉದ್ಯಮಿಗಳು ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ತನ್ನು ಸಂಚರಿಸಲು ಸಹಕಾರಿಯಾಗುವ ಅಗ್ನಿಬಿರಟೆ (spark plug) ಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿದ್ದಾರೆ.

ಒಂದು ದೇಶದ ಆರ್ಥಿಕ ಯಶಸ್ಸು ವಿಶ್ವದಾದ್ಯಂತ ಹಬ್ಬಲು ಉದ್ಯಮಗಳನ್ನು ಉತ್ತೇಜಿಸಿ ಅವುಗಳಿಗೆ ಸರಿಯಾದ ಬಹುಮಾನ ಕೊಡಬೇಕಾದುದು ಅಗತ್ಯವಾಗಿದೆ. ಏಕೆಂದರೆ ಉದ್ಯಮಿಗಳು ಮತ್ತು ಅವರ ಚಟುವಟಿಕೆಗಳು ದೇಶದ ಯಶಸ್ಸು, ಅಭಿವೃದ್ಧಿ, ಬೆಳವಣಿಗೆ ಮತ್ತು ಸಮಯೋಚಿತ ವಿಮರ್ಶಾತ್ಮಕ ನಿರ್ಣಯಗಳಾಗಿರುತ್ತವೆ. ಜಗತ್ತಿನ ಅತಿ ಕ್ರಿಯಾತ್ಮಕ ಅಥವಾ ಚಲನಾತ್ಮಕ ಸಮಾಜಗಳು ಅತಿ ಹೆಚ್ಚು

© KTBS Not to be published

ಉದ್ಯಮಿಗಳಿಂದ ಕೂಡಿರುವುದಾಗಿವೆ ಹಾಗೂ ಆರ್ಥಿಕ ಮತ್ತು ಕಾನೂನಿನ ರಚನೆಗಳು ಉದ್ಯಮಿಗಳನ್ನು ಇನ್ನೂ ಗಣನೀಯ ಚಟುವಟಿಕೆಗಳನ್ನು ಕೈಗೊಳ್ಳಲು ಉತ್ತೇಜಿಸುತ್ತದೆ. ಉದ್ಯಮಿಗಳು ಜನರ ಪ್ರಯೋಜನಕಾರಿಯಲ್ಲಿರದ ಉಳಿತಾಯಗಳಿಂದ ಬಂಡವಾಳವನ್ನು ಬೆಳೆಸುತ್ತಾರೆ. ಅವರು ತಮ್ಮದೇ ಆದ ಮತ್ತು ಎರವಲು ಪಡೆದ ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸ್ಥಾಪಿಸುತ್ತಾರೆ. ಈ ರೀತಿಯ ಉದ್ಯಮಗಳು ಒಂದು ದೇಶದ ಮೌಲ್ಯಾಧಾರಿತ ಸಂಪತ್ತನ್ನು ಸೃಜಿಸುತ್ತವೆ. ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಿ ಮಾರಾಟಕ್ಕೆ ಸಹಾಯ ಮಾಡುತ್ತಾರೆ.

ಉದ್ಯಮಿಗಳ ಸಾಮರ್ಥ್ಯ ಮತ್ತು ಪ್ರಚೋದನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಉದ್ಯಮಿಯು ತನ್ನ ಉದ್ಯಮದ ನಷ್ಟಭರಿಕೆಯನ್ನು ಹೊರುತ್ತಾನೆ. ಲಾಭವನ್ನು ಹುಡುಕುತ್ತಾ ಹೋಗುತ್ತಾನೆ. ಅವಕಾಶಗಳನ್ನು ಹುಡುಕುತ್ತಾನೆ. ಲಾಭಗಳಿಸಿ ಇನ್ನು ತೃಪ್ತಿಕಾಣದ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಾನೆ.

## ಉದ್ಯಮಿಗಳಿಗೆ ಸ್ವಂತ ಉದ್ಯೋಗ ಅವಕಾಶಗಳು

ಸ್ವಂತ ಉದ್ಯೋಗಿಗಳು ಅಥವಾ ಸ್ವಉದ್ಯೋಗದಾರರು ದೇಶದ ಬೆನ್ನೆಲುಬಾಗಿದ್ದಾರೆ. ಒಂದು ರಸ್ತೆಯ ಮೂಲೆಯಲ್ಲಿನ ಚಹಾ ಅಂಗಡಿಯಿಂದ ಹಿಡಿದು, ಮಾಮ್ ಅಂಡ್ ಪಾಪ್ ಕಿರಾಣಿ ಅಂಗಡಿ, ಗುಜರಿವ್ಯಾಪಾರಿ, ಅಂತರ್ಜಾಲದ ಸೈಬರ್ ಅಂಗಡಿಗಳು ಮುಂತಾದುವೆಲ್ಲ ಸ್ವಉದ್ಯೋಗ ಸಂಸ್ಥೆಗಳಾಗಿವೆ. ಈ ಉದ್ದಿಮೆಗಳಿಗೆ ಉತ್ತೇಜನ ಬೇಕಾಗಿದೆ. ಇದರಿಂದಾಗಿ ಜಾಗತೀಕರಣ ಆರ್ಥಿಕ ವ್ಯವಸ್ಥೆಯೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗುತ್ತದೆ. ಭಾರತ ಸರ್ಕಾರವು ಖಾಸಗಿ ರಂಗದ ಉದ್ಯಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ ಅವುಗಳಿಗೆ ಬೇಕಾದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಮತ್ತು ಪರಿಸರದ ಹೊಸಪದ್ಧತಿಯನ್ನು ಉತ್ತೇಜಿಸುತ್ತಿದೆ. ಒಬ್ಬ ಮನುಷ್ಯನು ಸ್ವಉದ್ಯಮದಿಂದ ಉದ್ಯಮಶೀಲನಾಗಲು ಅನೇಕ ಸೇವಾಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಅತಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳ ಮಂತ್ರಿಮಂಡಲ ಈ ಬದಲಾವಣೆಗೆ ಶ್ರಮಿಸುತ್ತದೆ. ಬಹಳಷ್ಟು ಹೊಸ ವ್ಯವಹಾರ ಸಂಸ್ಥೆಗಳು ಕಡಿಮೆ ಬಂಡವಾಳದಿಂದ ಪರಮಾವಧಿಯ ಪಥಕ್ರಮಣಗೊಳ್ಳಲು ಸಾಧ್ಯವಾಗಿದೆ.

ಯಾರೇ ಒಬ್ಬ ಮನುಷ್ಯನಾಗಲಿ ಸ್ವಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಈ ಕೆಳಗಿನ ಯಾವುದಾದರೂ ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಿಲು ಅನುಕೂಲತೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ :

1. ಜಾಹಿರಾತು ಸೇವಾಸಂಸ್ಥೆಗಳು.
2. ಮಾರುಕಟ್ಟೆ ಸಲಹಾ ಸಂಸ್ಥೆ.
3. ಕೈಗಾರಿಕಾ ಸಲಹಾ ಸಂಸ್ಥೆ.
4. ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು.
5. ಛಾಯಾಪ್ರತಿ ತೆಗೆಯುವ ಕೇಂದ್ರಗಳು (Photo copying center).
6. ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು.
7. ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು.
8. ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು.
9. ದೂರದರ್ಶನ ಜಾಲಬಂದದ ಸೇವಾಕ್ಷೇತ್ರಗಳು.
10. ಕ್ರೇಜ್ ಮತ್ತು ಬ್ಯೂಟಿಪಾರ್ಲರ್‌ಗಳು.

© KTBS Not to be republished

## ಸ್ವಯಂ ಉದ್ಯೋಗಕ್ಕಾಗಿ ಯೋಜನೆಗಳು

ಯಾವುದೇ ಉದ್ಯಮ ಪ್ರಾರಂಭಿಸಲು ಹಣಕಾಸಿನ ಅವಶ್ಯಕತೆ ಮುಖ್ಯವಾಗಿದೆ. ಸಾಕಷ್ಟು ಬಂಡವಾಳ ಇಲ್ಲದೇ ಹೋದಲ್ಲಿ ಯಾವುದೇ ಉದ್ಯಮ ಸ್ಥಾಪಿಸಲು ಮತ್ತು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆಗಳ ಸ್ಥಾಪನೆ ಅಭಿವೃದ್ಧಿ ಮತ್ತು ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಲು ಅನೇಕ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೂ ಕೂಡ ಸಾಲರೂಪದಲ್ಲಿ ಹಣ ಸಹಾಯ ಮಾಡುತ್ತವೆ. ಈ ಸಂಸ್ಥೆಗಳಲ್ಲಿ ಮುಖ್ಯವಾದುವೆಂದರೆ;

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI)
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು (NABARD)
3. ಆಮದು ಮತ್ತು ರಫ್ತು ಬ್ಯಾಂಕು (EXIM BAND)
4. ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)
5. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
6. ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
7. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು (IRBI)
8. ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
9. ರಾಜ್ಯ ಹಣಕಾಸು ನಿಗಮಗಳು (SFC)
10. ಭಾರತೀಯ ಜೀವ ವಿಮಾ ನಿಗಮ (LIC)
11. ಯೂನಿಟ್ ಟ್ರಸ್ಟ್ ಆಫ್ ಇಂಡಿಯ (UTI)

## ಉದ್ಯಮಿಗಳ ಪ್ರವರ್ತಕ (Promotional) ಸಂಸ್ಥೆಗಳು :

© KTBS Not to be published

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವುಗಳ ಮಟ್ಟದಲ್ಲಿ ಉದ್ಯಮಿಗಳನ್ನು ಬೆಂಬಲಿಸಲು, ಬೆಳೆಸಲು ಮತ್ತು ಅಭಿವೃದ್ಧಿಪಡಿಸಲು ಅನೇಕ ಕಾರ್ಯಗಳನ್ನು ಕೈಗೊಂಡಿವೆ. ಸರ್ಕಾರವು ಉದ್ಯಮಗಳನ್ನು ಸ್ಥಾಪಿಸಲು ಅನೇಕ ಸಂಸ್ಥೆಗಳನ್ನು ಮತ್ತು ಕಾರ್ಯಕರ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಸಂಸ್ಥೆಗಳು ಉದ್ದಿಮೆಗಳನ್ನು ಹುಟ್ಟುಹಾಕಲು ಮತ್ತು ಸ್ಥಾಪಿಸಲು ಸಹಾಯಮಾಡುತ್ತವೆ. ಅದರಲ್ಲೂ ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಬೇಕಾದ ಹಣಕಾಸು, ತರಬೇತಿ, ಮಾರುಕಟ್ಟೆ ಮುಂತಾದವುಗಳಿಗೆ ನೆರವು ನೀಡುತ್ತದೆ. ಅವುಗಳಲ್ಲಿ ಮುಖ್ಯವಾದುವೆಂದರೆ;


1. ಜಿಲ್ಲಾ ಕೈಗಾರಿಕೆ ಕೇಂದ್ರಗಳು
2. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
3. ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
4. ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
5. ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
6. ಕೈಗಾರಿಕಾ ಪ್ರದೇಶಗಳು
7. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ
8. ತಾಂತ್ರಿಕ ಸಲಹಾ ಸಂಸ್ಥೆಗಳು

**ಪ್ರಮುಖ ಉದ್ದಿಮೆದಾರರು :**

ಭಾರತದ ಅತ್ಯಂತ ಪ್ರಖ್ಯಾತ ಉದ್ಯಮಿಗಳು ಒಂದೇ ರೀತಿಯ ಉದ್ಯಮಗಾರಿಕೆಯ ಚೈತನ್ಯ ಹೊಂದಿದ್ದಾರೆ. ಇವರು ತಮ್ಮ ವಂಶಪಾರಂಪರ್ಯದಿಂದ ಐಶ್ವರ್ಯವನ್ನು ಗಳಿಸಿದವರಲ್ಲ ಅಥವಾ ಲಕ್ಷಾಂತರ ಡಾಲರುಗಳ ಕ್ರೀಡಾ ಕರಾರುಗಳಿಗೆ ಸಹಿ ಹಾಕಿದವರಲ್ಲಾ ಇವರೆಲ್ಲರು ತಮ್ಮ ದೇಶದ ಉತ್ಪಾದನೆಯ ಬಗ್ಗೆ ಕನಸು ಕಂಡು ಯಶಸ್ವಿಯಾಗಿದ್ದಾರೆ. ಇವರು ತಮ್ಮ ಶ್ರಮ, ಸಾಧನೆ ಮತ್ತು ಸಮರ್ಪಣೆಯಿಂದ ಲಕ್ಷಾಂತರ ರೂಗಳನ್ನು ಗಳಿಸಿದ್ದಾರೆ. ಕೆಲವು ಯಶಸ್ವಿ ಉದ್ದಿಮೆಗಾರರ ಸಂಕ್ಷಿಪ್ತ ವ್ಯಕ್ತಿ ಚಿತ್ರ ಮುಂದೆ ಕೊಡಲಾಗಿದೆ.



**ಡಾ. ಪ್ರತಾಪರೆಡ್ಡಿ :** ಇವರು ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಇವರು ಹುಟ್ಟುಹಾಕಿದ **"ಅಪೋಲೋ"** ವೈದ್ಯಶಾಲೆಗಳ ಗುಂಪು ಸುಮಾರು 750 ಆಧುನಿಕ ರೀತಿಯ ದವಾಖಾನೆಗಳನ್ನು ಹೊಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಇವರಿಗೆ ಆಸ್ಪತ್ರೆಗಳನ್ನು ಪ್ರಾರಂಭಿಸಲು ಪ್ರೇರಣೆಕೊಟ್ಟದ್ದು, ಒಬ್ಬ ರೋಗಿಯು ತನ್ನ ತೆರೆದ ಹೃದಯ ಶಸ್ತ್ರ ಚಿಕಿತ್ಸೆಗಾಗಿ ಅಮೆರಿಕದ ಟೆಕ್ಸಾಸ್‌ಗೆ ಹೋಗಲು ಸಾಧ್ಯವಾಗದೆ ಹೋಗಿ ಮರಣ ಹೊಂದಿದ್ದೆ ಆಗಿದೆ. ಇವರ ವೈದ್ಯಕೀಯ ಕ್ಷೇತ್ರದ ಸಾಧನೆ ಭಾರತದ ಸಾಮಾನ್ಯ ಜನರಿಗೂ ದೊರಕುವಂತಹುದೇ ಆಗಿದೆ.




**ನರೇಶ್ ಗೋಯಲ್ :** ಇವರು ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು ಮತ್ತು ಅದರ ಅಧ್ಯಕ್ಷರಾಗಿದ್ದಾರೆ. ಈ ವಾಯುಮಾರ್ಗವು ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗವಾಗಿದೆ. ವಿಶ್ವವಿದ್ಯಾಲಯದ ಪದವಿ ಪಡೆದ ನಂತರ ಸಂಚಾರ ಉದ್ದಿಮೆಯಲ್ಲಿ ಕೆಲಸ ಮಾಡಿದರು. 1974 ರ ವೇಳೆಗೆ ಗೋಯಲ್‌ರವರು ಜೆಟ್ ವಾಯುಮಾರ್ಗವನ್ನು ವಿದೇಶಿ ವಿಮಾನಮಾರ್ಗಗಳ ಮಾರಾಟ ಮತ್ತು ಮಾರುಕಟ್ಟೆಯನ್ನು ನೋಡಿಕೊಳ್ಳಲು ಪ್ರಾರಂಭಿಸಿದರು. ಗೋಯಲ್‌ರವರು ಭಾರತದ ಸರ್ಕಾರದ 1917 ರ ತೆರೆದ ಅಂತರಿಕ್ಷ ನೀತಿಯ ಸದವಕಾಶವನ್ನು ಉಪಯೋಗಿಸಿಕೊಂಡು ಜೆಟ್ ವಾಯುಮಾರ್ಗವನ್ನು ಆಂತರಿಕ ಸಂಚಾರಕ್ಕಾಗಿ ಭಾರತದಲ್ಲಿ ನಿಶ್ಚಿತ ವೇಳೆಗಳಲ್ಲಿ ಓಡಾಡಲು ಪ್ರಾರಂಭಿಸಿದರು.



**ನಾರಾಯಣ ಮೂರ್ತಿ :** 1999 ರಲ್ಲಿ ಭಾರತದಲ್ಲಿ ಇನ್‌ಪೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ NASDAQ (National Association of Securities Dealers Automated Quotations) ನಲ್ಲಿ ನೋಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು ಇನ್‌ಪೋಸಿಸ್ ಆಗಿದೆ. 2017 ರ ವೇಳೆಗೆ ಈ ಸಂಸ್ಥೆಯು ಎರಡು ಲಕ್ಷಕ್ಕೂ ಮಿಗಿಲಾದ ಕೆಲಸಗಾರರನ್ನು ನೇಮಿಸಿಕೊಂಡು ಹತ್ತು ಬಿಲಿಯನ್ ಡಾಲರ್‌ಗಳಿಗಿಂತ ಮಿಗಿಲಾದ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ. ಮೂರ್ತಿಯವರ ಪ್ರಾಮಾಣಿಕತೆ, ಸತ್ಯಸಂದತೆ, ತೆರೆದ ವಹಿವಾಟು ಮತ್ತು ನೀತಿಪೂರ್ಣ ಸಮಗ್ರತೆಯಂತಹ ಅಂಶಗಳು ಅವರ ವಹಿವಾಟುಗಳ ಸಮಗ್ರ ಯಶಸ್ಸಿಗೆ ಕಾರಣಗಳಾಗಿವೆ.

© KTBS Not to be republished



**ವರ್ಗಿಸ್ ಕುರಿಯನ್ :** ಇವರು ಹೆಸರಾಂತ ಪ್ರಖ್ಯಾತ ಉದ್ಯಮ ಶೀಲರು. "ಬಿಳಿಕ್ರಾಂತಿಯ ಪಿತಾಮಹ" ಎನಿಸಿದ್ದಾರೆ. ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆಯ ಕಲ್ಪನೆ ಹಾಲಿನ ಹೊಳೆ ಹರಿಸುವುದರ ಮೂಲಕ ಬೇಸಾಯದ ಅಭಿವೃದ್ಧಿಯ ಅತ್ಯಂತ ಹಿರಿಯ ವ್ಯಕ್ತಿಗಳಾಗಿದ್ದಾರೆ. ಅಮುಲ್ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆಯಾಗಿದ್ದು ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಎಂಬಲ್ಲಿ ಹೈನುಗಾರಿಕೆಯನ್ನು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ ಬೃಹತ್ತಾಗಿ ಭಾರತದಲ್ಲೇ ಅತ್ಯಂತ ದೊಡ್ಡ ಹೈನುಗಾರಿಕೆಯಾಗಿ ಅಭಿವೃದ್ಧಿ ಸಾಧಿಸಿದರು.



**ಧೀರುಭಾಯಿ ಅಂಬಾನಿ :** ಇವರು ಭಾರತದ ಅತ್ಯಂತ ಸಾಹಸಿ ಉದ್ಯಮಶೀಲರು. ಇವರು ಭಾರತದ ಸಮ್ಮೇಳನ ಸಂಸ್ಥೆಯನ್ನು ಹುಟ್ಟುಹಾಕಿದವರಲ್ಲಿ ಅತ್ಯಂತ ಪ್ರಮುಖರೆಂದು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಧೀರೂಭಾಯಿ ಅಂಬಾನಿಯವರ ತಂದೆ ಶಾಲಾ ಉಪಾಧ್ಯಾಯರಾಗಿದ್ದರು. ಇವರು ಮೌಂಟ್‌ಗಿರ್‌ನಾರ್ ಎಂಬಲ್ಲಿ ವಾರಾಂತ್ಯದಲ್ಲಿ ಭಜನೆಗಳ ಪುಸ್ತಕಗಳನ್ನು ಯಾತ್ರಾರ್ಥಿಗಳಿಗೆ ಮಾರುವುದರ ಮೂಲಕ ಉದ್ಯಮವನ್ನು ಪ್ರಾರಂಭಿಸಿದರು. ತಮ್ಮ ಮೆಟ್ರಿಕ್ಯುಲೇಷನ್ ಪರೀಕ್ಷೆಯ ನಂತರ ಹದಿನಾರನೆಯ ವಯಸ್ಸಿನಲ್ಲಿ ಆಫ್ರಿಕಾದ ಆಡೆನ್ ಪಟ್ಟಣಕ್ಕೆ ಹೋದರು. ಅಲ್ಲಿ ಪೆಟ್ರೋಲ್ ಬಂಕ್ ಒಂದರ ಸೇವೆಗೆ ಸೇರಿ ನಂತರ ತೈಲ ಕಂಪನಿಯೊಂದರಲ್ಲಿ ಗುಮಾಸ್ತರಾದರು. 1958 ರಲ್ಲಿ ಭಾರತಕ್ಕೆ ಐವತ್ತು ಸಾವಿರ ರೂಪಾಯಿಗಳೊಂದಿಗೆ ಹಿಂದಿರುಗಿ ಬಂದರು ಮತ್ತು ಬಟ್ಟೆ ವ್ಯಾಪಾರದ ಕಂಪನಿಯೊಂದನ್ನು ಪ್ರಾರಂಭಿಸಿದರು. ಇಂದು ಇವರು ಸ್ಥಾಪಿಸಿರುವ 'ರಿಲಯನ್ಸ್' ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮಗಳಲ್ಲೊಂದಾಗಿದೆ.

© KTBS not to be published



**ಅಜೀಮ್ ಪ್ರೇಮ್‌ಜಿ :** ಇವರು ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಈ ಸಂಸ್ಥೆಯು ಸಾಫ್ಟ್‌ವೇರ್ ದಿಸೆಯಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆಯಾಗಿದೆ. ಅವರ ತಂದೆಯ ಮರಣದ ಕಾರಣದಿಂದಾಗಿ ವಿದ್ಯಾರ್ಥಿಯಾಗಿದ್ದ ಇವರು ಮನೆಗೆ ಹಿಂದಿರುಗಿದರು. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಒಬ್ಬ ಷೇರುದಾರರು ಅಜೀಮ್ ಪ್ರೇಮ್‌ಜಿಯವರನ್ನು ತಮ್ಮ ಭಾಗದ ಷೇರುಗಳನ್ನು ಮಾರುವಂತೆ ಆದೇಶಮಾಡಿದರು. ಇದು ಇವರನ್ನು ತಮ್ಮ ಸಂಸ್ಥೆಯನ್ನು ಮುನ್ನಡೆಸುವಂತೆ ಪ್ರಚೋದಿಸಿತು. ಈಗ ವಿಪ್ರೋತಾಂತ್ರಿಕ ಸಂಸ್ಥೆಯು ಸಂಶೋಧನೆ ಮತ್ತು ಅಭಿವೃದ್ಧಿ (R&D) ಸೇವೆಯಲ್ಲಿ ಅತ್ಯಂತ ದೊಡ್ಡ ಸ್ವಾಯತ್ತ ಸಂಸ್ಥೆಯಾಗಿದೆ.



**ಏಕ್ತಾಕಪೂರ್ :** ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ" ಯೆಂದೇ ಹೆಸರು ಮಾಡಿದ್ದಾರೆ. ಇವರು ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರಾಗಿದ್ದು 2001ರಲ್ಲಿ ಇವರಿಗೆ ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು (Erust young) ಸಂಸ್ಥೆ ನೀಡಿ ಗೌರವಿಸಿದೆ. ಇವರು ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.



**ಕಿರಣ್ ಮುಜುಮ್‌ದಾರ್ ಷಾ :** ಇವರು 'ಬಯೋಕಾನ್' ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ. ಈ ನಿಗಮವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದ್ದು 1978ರಲ್ಲಿ ಒಂದು ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು. ಹಲವಾರು ಸಮಸ್ಯೆಗಳನ್ನು ಹಾಗೂ ಘಟನೆಗಳನ್ನು ಎದುರಿಸಬೇಕಾಯಿತು. ಏಕೆಂದರೆ ಈ ತಂತ್ರಜ್ಞಾನವು ಹೊಸದಾಗಿದ್ದು ಒಬ್ಬ ಮಹಿಳಾ ಉದ್ಯಮಿಯು ಈ ಉದ್ಯಮಕ್ಕೆ ಕೈಹಾಕಿರುವುದು ವಿರಳವಾಗಿತ್ತು. ಕಿರಣ್ ಷಾ ಅವರು ಎಲ್ಲವನ್ನು ಎದುರಿಸಿ ಜೀವವಿಜ್ಞಾನ ತಂತ್ರಜ್ಞಾನವು ಯಶಸ್ಸನ್ನು ಪಡೆಯಲು ಸಾಧ್ಯಪಡಿಸಿದರು.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಉದ್ಯಮಿ ಎಂಬ ಪದವು ಫ್ರೆಂಚ್ ಪದ __________ ನಿಂದ ಬಂದಿದೆ.
2. ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು __________ ಎನ್ನುತ್ತೇವೆ.
3. ಅಪೋಲೋ ಆಸ್ಪತ್ರೆಯ ರೂವಾರಿಗಳು __________
4. ವಿಪ್ರೋ ಸಂಸ್ಥೆಯ ಅಧ್ಯಕ್ಷರು __________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಉದ್ಯಮಿ ಎಂದರೇನು ?
2. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ ?
3. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು ?
4. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.

**III. ಚಟುವಟಿಕೆಗಳು :**

1. ಹತ್ತಿರದ ಉದ್ಯಮ ಕೇಂದ್ರಕ್ಕೆ ಭೇಟಿ ನೀಡಿ ಉದ್ಯಮ ಸಂಸ್ಥೆಯಲ್ಲಿರುವ ಕಾರ್ಮಿಕರ ವಿವರವನ್ನು ಪಡೆಯಿರಿ.
2. ಅಂತರ್ಜಾಲದ ನೆರವಿನಿಂದ ವಿವಿಧ ಉದ್ಯಮ ಸಂಸ್ಥೆಗಳ ಪಟ್ಟಿ ತಯಾರಿಸಿ.
3. ಭಾರತದಲ್ಲಿರುವ ಪ್ರಖ್ಯಾತ ಉದ್ದಿಮೆದಾರರ ಭಾವಚಿತ್ರಗಳನ್ನು ಸಂಗ್ರಹಿಸಿ.

**IV. ಯೋಜನೆ :**

1. ನಿಮಗೆ ಹತ್ತಿರವಾಗಿರುವ ಉದ್ಯಮದಾರರೊಂದಿಗೆ ಸಂದರ್ಶನ ನಡೆಸಿ ಉದ್ಯಮವನ್ನು ಕಟ್ಟಿದ ವಿವರ ಪಡೆದು ವರದಿ ಸಿದ್ಧಪಡಿಸಿ.

* * *

© KTBS Not to be published